ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

## (ಪರಿಷ್ಕೃತ ಪಠ್ಯಪುಸ್ತಕ)

## ಭಾಗ – 2

© KTBS
Not to be published

## 10

## ಹತ್ತನೆಯ ತರಗತಿ

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು–560 085.

## ಪರಿವಿಡಿ

Z9H2V4


| ಅಧ್ಯಾಯ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| | **ಇತಿಹಾಸ** | |
| 7. | ಸ್ವಾತಂತ್ರ್ಯ ಹೋರಾಟ | 1 |
| 8. | ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ | 7 |
| 9. | ಸ್ವಾತಂತ್ರ್ಯೋತ್ತರ ಭಾರತ | 26 |
| 10. | 20ನೇ ಶತಮಾನದ ರಾಜಕೀಯ ಆಯಾಮಗಳು | 32 |
| | **ರಾಜ್ಯಶಾಸ್ತ್ರ** | |
| 4. | ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ | 41 |
| 5. | ಜಾಗತಿಕ ಸಂಸ್ಥೆಗಳು | 45 |
| | **ಸಮಾಜಶಾಸ್ತ್ರ** | |
| 3. | ಸಾಮಾಜಿಕ ಚಳವಳಿಗಳು | 55 |
| 4. | ಸಾಮಾಜಿಕ ಸಮಸ್ಯೆಗಳು | 64 |
| | **ಭೂಗೋಳ** | |
| 8. | ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು | 79 |
| 9. | ಭಾರತದ ಸಾರಿಗೆ ಮತ್ತು ಸಂಪರ್ಕ | 87 |
| 10. | ಭಾರತದ ಕೈಗಾರಿಕೆಗಳು | 97 |
| 11. | ಭಾರತದ ನೈಸರ್ಗಿಕ ವಿಪತ್ತುಗಳು | 104 |
| 12. | ಭಾರತದ ಜನಸಂಖ್ಯೆ | 110 |
| | **ಅರ್ಥಶಾಸ್ತ್ರ** | |
| 3. | ಹಣ ಮತ್ತು ಸಾಲ | 115 |
| 4. | ಸಾರ್ವಜನಿಕ ಹಣಕಾಸು ಮತ್ತು ಆಯ-ವ್ಯಯ | 123 |
| | **ವ್ಯವಹಾರ ಅಧ್ಯಯನ** | |
| 3. | ವ್ಯವಹಾರದ ಜಾಗತೀಕರಣ | 131 |
| 4. | ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ | 137 |


© KTBS Not to be published

# ಇತಿಹಾಸ

## ಅಧ್ಯಾಯ – 7

## ಸ್ವಾತಂತ್ರ್ಯ ಹೋರಾಟ

X8S2E7

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ರಾಷ್ಟ್ರೀಯತೆಯ ಉದಯ
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್
- ಮಂದಗಾಮಿಗಳು, ತೀವ್ರವಾದಿಗಳು ಮತ್ತು ಕ್ರಾಂತಿಕಾರಿಗಳು

### ರಾಷ್ಟ್ರೀಯತೆಯ ಉದಯ :

ಸ್ವಾತಂತ್ರ್ಯ ಹೋರಾಟವು ಭಾರತದ ಚರಿತ್ರೆಯಲ್ಲಿ ಅತ್ಯಂತ ಮಹತ್ವಪೂರ್ಣ ಮತ್ತು ಚಲನಶೀಲ ಅಧ್ಯಾಯ. ರಾಷ್ಟ್ರೀಯತೆ ಎಂಬ ಪರಿಕಲ್ಪನೆ 19ನೆಯ ಶತಮಾನದ ಕೊನೆಯ ಭಾಗದಲ್ಲಿ ತೀವ್ರವಾಗಿ ಬೆಳೆಯತೊಡಗಿತು. ವಿದೇಶಿಯರ ವಿರುದ್ಧ ಹೋರಾಡುವ ಪ್ರಯತ್ನಗಳನ್ನು ರಾಜ ಪ್ರಭುತ್ವಗಳು ಮಾಡಿದ್ದನ್ನು ಈ ಮೊದಲು ಅನೇಕ ಬಾರಿ ಕಾಣುತ್ತೇವೆ. ಆದರೆ ಅದಕ್ಕಿದ್ದ ಕಾರಣಗಳು ಅವರ ರಾಜಕೀಯ ಸ್ವಹಿತಾಶಕ್ತಿಗಳು ಮಾತ್ರ. ವಿದೇಶಿ ಸಾಮ್ರಾಜ್ಯ ಶಕ್ತಿಗಳ ವಿರುದ್ಧ ಹೋರಾಟ ಮಾಡಿದ ಕಾರಣದಿಂದ ಅವರ ಪ್ರಯತ್ನಗಳನ್ನು ರಾಷ್ಟ್ರೀಯ ಹೋರಾಟದ ಆರಂಭಿಕ ಕುರುಹುಗಳು ಎನ್ನಬಹುದು.

19ನೇ ಶತಮಾನದ ಉತ್ತರಾರ್ಧದಲ್ಲಿ ಸಾರಿಗೆ ಮತ್ತು ಸಂಪರ್ಕ, ಇಂಗ್ಲಿಷ್ ಶಿಕ್ಷಣದ ವಿಸ್ತರಣೆ, ಪತ್ರಿಕೋದ್ಯಮ, ಸಾಂಸ್ಕೃತಿಕ ಸಂಘಟನೆಗಳ ಹುಟ್ಟು ಮುಂತಾದ ಬೆಳವಣಿಗೆಗಳನ್ನು ಕಾಣುತ್ತೇವೆ. ಆದರೆ ಬರಗಾಲಗಳು ಮತ್ತು ಬ್ರಿಟಿಷ್ ಆರ್ಥಿಕ ನೀತಿಗಳು ಸೃಷ್ಟಿಸಿದ ಬಿಕ್ಕಟ್ಟುಗಳಿಂದ ಜನರು ನಲುಗಿದರು. ಈ ಪರಿಣಾಮಗಳಿಂದ ಬ್ರಿಟಿಷ್ ವಿರೋಧಿ ಆಕ್ರೋಶವನ್ನು ಭಾರತೀಯರು ವ್ಯಕ್ತಪಡಿಸಲು ಪ್ರಾರಂಭಿಸಿದರು. ಈ ಕಾಲಘಟ್ಟದಲ್ಲಿ ನಡೆದ ರೈತ ಮತ್ತು ಬುಡಕಟ್ಟು ಹೋರಾಟಗಳೇ ಇದಕ್ಕೆ ಸಾಕ್ಷಿ. ವಿವಿಧ ಬಗೆಯ ಸಂಕಷ್ಟಗಳಿಗೆ ಒಳಗಾದ ಭಾರತೀಯರು 1857ರ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ನಿರ್ಣಾಯಕ ರೀತಿಯಲ್ಲೇ ತಮ್ಮ ಪ್ರತಿರೋಧವನ್ನು ತೋರಿ ಪ್ರಥಮ ಭಾರತೀಯ ಸಂಗ್ರಾಮಕ್ಕೆ ಕಾರಣರಾದರು. ಇದರ ಪರಿಣಾಮ 1858ರಲ್ಲಿ ಬ್ರಿಟನ್ನಿನ ಸರ್ಕಾರವು ಘೋಷಣೆಯೊಂದನ್ನು ಹೊರಡಿಸಿ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತವನ್ನು ಕೊನೆಗೊಳಿಸಿ, ನೇರವಾಗಿ ಬ್ರಿಟಿಷ್ ಸರ್ಕಾರದ ಆಡಳಿತವನ್ನು ಬ್ರಿಟನ್ನಿನ ರಾಣಿಯ ಹೆಸರಿನಲ್ಲಿ ಜಾರಿಗೊಳಿಸಿತು. ಭಾರತೀಯರು ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ತೊಡಗುವ ಕಾನೂನುಗಳನ್ನು 1861ರ ಕಾಯ್ದೆಯ ಮೂಲಕ ಆರಂಭಿಸಿದರು. ಇದೆಲ್ಲದರ ಪರಿಣಾಮವಾಗಿ ಇಂಗ್ಲಿಷನ್ನು ಕಲಿತ ಹೊಸ ವಿದ್ಯಾವಂತ ವರ್ಗ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಸ್ಪಷ್ಟಗೊಳಿಸುವ ಮತ್ತು ಜನರ ಜೊತೆ ಹಂಚಿಕೊಳ್ಳುವ ಪ್ರಯತ್ನವನ್ನು ಮಾಡಿದ್ದರಿಂದ ರಾಷ್ಟ್ರೀಯತೆ ಒಂದು ಆಶಯವಾಗಿ ಸ್ಪಷ್ಟ ರೂಪ ಪಡೆಯಿತು. ಇದರ ಮುಂದುವರಿದ ಸಾಂಸ್ಥಿಕ ರೂಪವೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್.

### ಭಾರತೀಯ ರಾಷ್ಟ್ರೀಯ ಕಾಂಗ್ರೆಸ್

ಭಾರತವು 1857ರ ಪ್ರಥಮ ಸ್ವಾತಂತ್ರ ಸಂಗ್ರಾಮದ ಘಟನೆಯ ನಂತರ ರಾಜಕೀಯ ಪರ್ವವನ್ನು ಕಾಣಲಾರಂಭಿಸಿತು ರಾಷ್ಟ್ರೀಯ ದೃಷ್ಟಿಕೋನವನ್ನು ಹೊಂದಿದ್ದ ಅನೇಕ ಹೊಸ ಸಂಘಟನೆಗಳು ವಿದ್ಯಾವಂತ ಭಾರತೀಯರ ನೇತೃತ್ವದಲ್ಲಿ ಪ್ರಾರಂಭವಾದವು. 'ದ ಹಿಂದೂ ಮೇಳ' 'ದ ಈಸ್ಟ್ ಇಂಡಿಯನ್ ಅಸೋಸಿಯೇಷನ್' 'ಪೂನಾ ಸಾರ್ವಜನಿಕ ಸಭಾ' ಮತ್ತು 'ದ ಇಂಡಿಯನ್ ಅಸೋಸಿಯೇಷನ್' ಮುಂತಾದವು

© KTBS Not to be published

ಪ್ರಮುಖವಾಗಿದ್ದವು. ಪತ್ರಿಕೆಗಳು ಬ್ರಿಟಿಷ್ ಸರಕಾರದ ಧೋರಣೆಗಳನ್ನು ವಿರೋಧಿಸತೊಡಗಿದವು, ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ವರ್ನಾಕ್ಯೂಲರ್ ಪ್ರೆಸ್ ಕಾಯ್ದೆಯನ್ನು ಬ್ರಿಟಿಷ್ ಸರಕಾರ ಲಾರ್ಡ ಲಿಟ್ಟನ್ನರ ಕಾಲದಲ್ಲಿ ಜಾರಿಗೊಳಿಸಲಾಯಿತು ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ಸಿನಂತಹ ರಾಷ್ಟ್ರೀಯ ಸಂಘಟನೆಯ ಹುಟ್ಟು ಅನಿವಾರ್ಯವಾಯಿತು.

ಭಾರತದ ರಾಜಕೀಯ ದಿಕ್ಕನ್ನು ಬದಲಿಸಿದ 'ಭಾರತ ರಾಷ್ಟ್ರೀಯ ಕಾಂಗ್ರೆಸ್' ಡಿಸೆಂಬರ್ 1885ರಲ್ಲಿ ಬಾಂಬೆ ನಗರದಲ್ಲಿ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ಹುಟ್ಟಿಕೊಂಡಿತು. ಅದರ ಮೊದಲ ಅಧ್ಯಕ್ಷರು ಡಬ್ಲ್ಯು.ಸಿ. ಬ್ಯಾನರ್ಜಿ. ಈ ಸಂಘಟನೆಯ ಹುಟ್ಟಿನ ಹಿನ್ನೆಲೆಯಲ್ಲಿ ಅವಿರತ ಪ್ರಯತ್ನ ನಡೆಸಿದವರು ನಿವೃತ್ತ ಬ್ರಿಟಿಷ್ ನಾಗರೀಕ ಸೇವಾಧಿಕಾರಿ ಎ.ಓ.ಹ್ಯೂಂ ಅವರು ಬಾಂಬೆ, ಮದರಾಸು ಮತ್ತು ಕಲ್ಕತ್ತಾ ಕೇಂದ್ರಗಳಲ್ಲಿದ್ದ ರಾಜಕೀಯ ನಾಯಕರನ್ನು ಭೇಟಿಮಾಡಿ, ಅವರುಗಳ ಜೊತೆಗೆ ಸಾರ್ವಜನಿಕ ಹಿತಾಸಕ್ತಿಯುಳ್ಳ ವಿಷಯಗಳನ್ನು ಚರ್ಚಿಸಿದರು, ಇವರ ಫಲವೇ ಕಾಂಗ್ರೆಸ್ ಸಂಸ್ಥೆಯ ಸ್ಥಾಪನೆ. ಆರಂಭಿಕ ಸಭೆಯಲ್ಲಿಯೇ ಕಾಂಗ್ರೆಸ್ ತನ್ನ ಪ್ರಮುಖ ಉದ್ದೇಶ ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಿ ಬೆಳೆಸುವುದು ಎಂದು ಸಾರಿತು, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಹುಮುಖಿ ಧಾರೆಗಳನ್ನು ಹೊಂದಿದ್ದ ಭಾರತೀಯರಲ್ಲಿ ಅವುಗಳಲ್ಲಿ ಐಕ್ಯತೆಯನ್ನು ಸಾಧಿಸಲು ಹಂತಹಂತವಾಗಿ ಪ್ರಯತ್ನಿಸಿತು. ಆ ಕಾಲಘಟ್ಟದ ರಾಷ್ಟ್ರೀಯ ನಾಯಕರಿಗೂ ಈ ಬದ್ಧತೆ ಇತ್ತು.


ದೇಶೀ ಭಾಷೆಗಳಲ್ಲಿ ಪತ್ರಿಕೆಗಳನ್ನು ಪ್ರಕಟಿಸಿ ಆ ಮೂಲಕ ರಾಜಕೀಯ ಸಮಸ್ಯೆಗಳ ಚರ್ಚೆ ಆರಂಭಿಸಿತು. ಇದರಿಂದಾಗಿ ರಾಜಕೀಯ ಸಮಸ್ಯೆಗಳು ಮತ್ತು ವಿಚಾರಗಳು ಜನರ ಮನಮುಟ್ಟಿದವು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬಲವರ್ಧನೆಯನ್ನು ಗಮನಿಸಿದ ಬ್ರಿಟಿಷರು ತಮ್ಮ ಒಡೆದು ಆಳುವ ನೀತಿಯನ್ನು ಜಾರಿಗೆ ತಂದರು. ಹಿಂದೂ-ಮುಸ್ಲಿಮರನ್ನು ಬೇರ್ಪಡಿಸುವ ರಾಜಕೀಯ ತಂತ್ರಗಾರಿಕೆಯನ್ನು ಜಾರಿಯಲ್ಲಿ ತರುವ ಪ್ರಯತ್ನ ಪ್ರಾರಂಭಿಸಿದರು. ಆದರೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ರಾಷ್ಟ್ರೀಯ ವಿಚಾರಗಳಿಗೆ ಸಂಬಂಧಪಟ್ಟಂತೆ ರಚಾನಾತ್ಮಕವಾದ ಕಾರ್ಯತಂತ್ರಗಳನ್ನು ರೂಪಿಸಿತು.

© KTBS
Not to be published

19ನೆಯ ಶತಮಾನದ ಕೊನೆಯ ಭಾಗದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ರಾಜಕೀಯ ಭಿನ್ನಮತ ಕಾಣಿಸಿಕೊಂಡಿತು. ಕಾರ್ಯತಂತ್ರ, ನಂಬಿಕೆಗಳು ಸೈದ್ಧಾಂತಿಕತೆ ಮತ್ತು ಹೋರಾಟದ ಮಾದರಿಗಳಿಂದಾಗಿ ಅವರುಗಳನ್ನು ಮಂದಗಾಮಿಗಳು ಮತ್ತು ತೀವ್ರವಾದಿಗಳೆಂದು ಗುರುತಿಸುತ್ತಾರೆ.

**ಮಂದಗಾಮಿಗಳು**

ಸಾಂಪ್ರದಾಯಿಕವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾರಂಭದ ಇಪ್ಪತ್ತು ವರ್ಷಗಳನ್ನು 'ಮಂದಗಾಮಿ ಯುಗ' ಎನ್ನುತ್ತಾರೆ. ಮಂದಗಾಮಿಗಳಲ್ಲಿ ಡಬ್ಲ್ಯು. ಸಿ ಬ್ಯಾನರ್ಜಿ, ಎಂ.ಜಿ. ರಾನಡೆ, ಸುರೇಂದ್ರನಾಥ ಬ್ಯಾನರ್ಜಿ, ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ ಇವರುಗಳನ್ನು ಪ್ರಮುಖವಾಗಿ ಗುರುತಿಸಬಹುದು. ಮಂದಗಾಮಿಗಳು ಬ್ರಿಟಿಷ್ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ ಇಟ್ಟಿದ್ದರು. ಸಾಂವಿಧಾನಿಕ ಚೌಕಟ್ಟಿನೊಳಗೆ ಪ್ರಾರ್ಥನೆ ಮತ್ತು ಮನವಿಗಳ ಮೂಲಕ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದರು. ಮಂದಗಾಮಿಗಳು ಜನರಲ್ಲಿ ರಾಜಕೀಯ ಎಚ್ಚರವನ್ನು ತರುವ ಪ್ರಯತ್ನ ಮಾಡಿದರು.



**ದಾದಾಬಾಯಿ ನವರೋಜಿ,**



**ಗೋಪಾಲಕೃಷ್ಣ ಗೋಖಲೆ**


ಇವರು ಭಾರತೀಯರಿಗೆ ಸಲ್ಲಬೇಕಾದ ನ್ಯಾಯವನ್ನು ಕುರಿತು ಸಭೆಗಳನ್ನು ನಡೆಸಿ, ಚರ್ಚಿಸಿ, ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದರು. ದೇಶದ ಕೈಗಾರಿಕೆಗಳ ಅಭಿವೃದ್ಧಿ, ಸೈನಿಕ ವೆಚ್ಚ ಕಡಿಮೆ ಮಾಡುವುದು, ಉತ್ತಮ ಶಿಕ್ಷಣ ಕೊಡುವುದು, ಬಡತನದ ಬಗ್ಗೆ ಅಧ್ಯಯನ ಮತ್ತು ಪರಿಹಾರ ಕಾರ್ಯಕ್ರಮಗಳನ್ನು ಬ್ರಿಟಿಷ್ ಸರ್ಕಾರ ಕೈಗೊಳ್ಳಬೇಕೆಂದು ಒತ್ತಾಯಿಸುವುದು ಇವೇ ಮೊದಲಾದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟರು.

ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯಿಂದಾದ ದುಷ್ಪರಿಣಾಮಗಳನ್ನು ಮೊಟ್ಟಮೊದಲನೆಯ ಬಾರಿಗೆ ಮಂದಗಾಮಿಗಳು ಕೂಲಂಕಷವಾಗಿ ಅವಲೋಕಿಸುವ ಪ್ರಯತ್ನ ಮಾಡಿದರು. ಭಾರತದ ಸಂಪತ್ತು ಯಾವ ರೀತಿಯಲ್ಲಿ ಇಂಗ್ಲೆಂಡಿಗೆ ಸೋರಿ ಹೋಗುತ್ತಿದೆ ಎಂಬುದನ್ನು ಅಂಕಿ ಅಂಶಗಳೊಂದಿಗೆ ಅವರು ವಿವರಿಸಿದರು. ದಾದಾಬಾಯಿ ನವರೋಜಿಯವರು ಅವರು ಅದನ್ನು 'ಸಂಪತ್ತಿನ ಸೋರುವಿಕೆ ಸಿದ್ಧಾಂತ' (Drain Theory) ಎಂದು ಕರೆದರು. ಆಮದನ್ನು ಹೆಚ್ಚಿಸಿ ರಫ್ತನ್ನು ಕಡಿಮೆ ಮಾಡಿದ್ದರಿಂದ ಪ್ರತಿಕೂಲ ಸಂದಾಯ ಉಂಟಾಗಿ ದೇಶದ ಸಂಪತ್ತು ಇಂಗ್ಲೆಂಡಿಗೆ ಹರಿಯಲು ಕಾರಣವಾಯಿತೆಂದು ಅವರು ಪ್ರತಿಪಾದಿಸಿದರು. ಬ್ರಿಟಿಷ್ ಅಧಿಕಾರಿಗಳಿಗೆ ನೀಡುತ್ತಿದ್ದ ವೇತನ, ನಿವೃತ್ತಿ ವೇತನ ಮತ್ತು ಆಡಳಿತಾತ್ಮಕ ವೆಚ್ಚವನ್ನು ಭಾರತವೇ ಭರಿಸಬೇಕಾದ ಹಿನ್ನೆಲೆಯಲ್ಲಿ ಅಪಾರವಾದ ಸಂಪತ್ತು ಬ್ರಿಟನ್ನಿಗೆ ಪರೋಕ್ಷವಾಗಿ ಹರಿದು ಹೋಗುತ್ತಿತ್ತು ಎಂಬುದನ್ನು ಅವರು ವಿವರವಾಗಿ ವಿಶ್ಲೇಷಿಸಿ, ಜನರ ಮುಂದಿಟ್ಟರು. ದಾದಾಬಾಯಿ ನವರೋಜಿಯವರಂತೆ ಆರ್. ಸಿ. ದತ್ ಅವರೂ ತಮ್ಮ ಕೃತಿಗಳ ಮೂಲಕ ಭಾರತದ ಸಂಪತ್ತನ್ನು ಬ್ರಿಟಿಷರು ಬರಿದು ಮಾಡಿದ ರೀತಿಯನ್ನು ವಿವರಿಸಿದರು. ಮಂದಗಾಮಿಗಳ ಕಾಲವನ್ನು ಉದಾರ ರಾಷ್ಟ್ರವಾದದ (Libreal Nationalisim) ಕಾಲವೆಂದು ಹೇಳಲಾಗಿದೆ. 1885ರಿಂದ 1905ರ ನಡುವಿನ ಕಾಲಘಟ್ಟವನ್ನು ಮಂದಗಾಮಿಗಳ ಯುಗ ಎಂದು ಚರಿತ್ರೆಕಾರರು ಗುರುತಿಸಿದ್ದಾರೆ.

© KTBS Not to be republished

**ತೀವ್ರವಾದಿಗಳು**

ಮಂದಗಾಮಿಗಳ ಬ್ರಿಟಿಷರ ಬಗೆಗಿನ ಮೃದುಧೋರಣೆಯಿಂದ ಕಾಂಗ್ರೆಸಿಗರಲ್ಲೇ ಅಸಂತೃಪ್ತರಾಗಿದ್ದ ಇನ್ನೊಂದು ಗುಂಪು ಇವರನ್ನು 'ರಾಜಕೀಯ ಭಿಕ್ಷುಕರು' ಎಂದು ಕರೆದರು. ಮಂದಗಾಮಿಗಳ ಮೃದುಧೋರಣೆಯನ್ನು ಟೀಕೆ ಮಾಡುತ್ತಾ, ತೀವ್ರವಾದ ನಿಲುವುಗಳನ್ನು ಪ್ರತಿಪಾದಿಸುತ್ತಾ ಬಂದ ಬಣವನ್ನು ತೀವ್ರವಾದಿಗಳೆಂದು ಗುರುತಿಸಲಾಗಿದೆ. ಅರಬಿಂದೋ ಘೋಷ್, ಬಿಪಿನ್‌ಚಂದ್ರ ಪಾಲ್, ಲಾಲ ಲಜಪತ ರಾಯ್ ಮತ್ತು ಬಾಲಗಂಗಾಧರ್ ತಿಲಕ್ ಮುಂತಾದವರು ಈ ಬಣದ ಪ್ರಮುಖರಾಗಿದ್ದರು. ಸಂವಿಧಾನಾತ್ಮಕ ಕಾಯ್ದೆಗಳ ಮೂಲಕ ಭಾರತೀಯರಿಗೆ ಶಾಸನ ಸಭೆಗಳಿಗೆ ನಾಮನಿರ್ದೇಶನ ಮಾಡುವ ಮೂಲಕ ಮಹದುಪಕಾರ ಮಾಡುತ್ತಿದ್ದೇವೆಂಬ ಬ್ರಿಟಿಷರ ಧೋರಣೆಯನ್ನು ಬಲವಾಗಿ ವಿರೋಧಿಸಿದರು. (ಭಾರತ ಕಾಯ್ದೆ 1861 ಮತ್ತು 1892ರ ಬಗೆಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.)



ಅರಬಿಂದೋ ಘೋಷ್



ಬಾಲಗಂಗಾಧರ ತಿಲಕ



ಲಾಲ ಲಜಪತ್ ರಾಯ್



ಬಿಪಿನ್ ಚಂದ್ರಪಾಲ್

**ಬಂಗಾಳದ ವಿಭಜನೆ :** ಬಂಗಾಳವು ತೀವ್ರ ಸ್ವರೂಪದ ಬ್ರಿಟಿಷ್ ವಿರೋಧಿ ಭಾವನೆ ಮತ್ತು ಚಟುವಟಿಕೆಗಳ ಕೇಂದ್ರವಾಗಿತ್ತು. ಇದನ್ನು ಹತ್ತಿಕ್ಕಲು ವೈಸ್‌ರಾಯ್ ಲಾರ್ಡ್ ಕರ್ಜನ್ನನು ಆಡಳಿತಾತ್ಮಕ ನೆಪವನ್ನು ಮುಂದಿಟ್ಟುಕೊಂಡು ಬಂಗಾಳ ವಿಭಜನೆಯ ಯೋಜನೆಯನ್ನು ರೂಪಿಸಿದನು. ವಾಸ್ತವವಾಗಿ ಬಂಗಾಳ ಪ್ರಾಂತ್ಯವೂ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ಸಾಂದ್ರತೆಯನ್ನು ಹೊಂದಿತ್ತು. ಪೂರ್ವ ಭಾಗದಲ್ಲಿ ಮುಸ್ಲಿಮರು ಹಾಗೂ ಪಶ್ಚಿಮದಲ್ಲಿ ಹಿಂದೂಗಳು ಹೆಚ್ಚಾಗಿದ್ದರು. ಜನಗಣತಿಯ ವರದಿಯಿಂದ ಈ ಅಂಶವನ್ನು ತಿಳಿದ ಬ್ರಿಟಿಷ್ ಸರ್ಕಾರವು ಈ ಪ್ರಾಂತ್ಯದ ಭೌಗೋಳಿಕ ವೈಶಾಲ್ಯತೆಯನ್ನು ನೆಪವಾಗಿಸಿಕೊಂಡು ಬಂಗಾಳವನ್ನು 1905ರಲ್ಲಿ ವಿಭಜಿಸಿದರು. ಹೀಗೆ ಸಮುದಾಯಗಳ ನಡುವೆ ಕಂದಕವನ್ನುಂಟುಮಾಡಿ ಸ್ವಾತಂತ್ರ್ಯ ಹೋರಾಟದ ತೀವ್ರತೆಯನ್ನು ಕುಗ್ಗಿಸುವ ಸಂಚನ್ನು ರೂಪಿಸಿದನು.

ಬ್ರಿಟಿಷರ ಒಡೆದು ಆಳುವ ನೀತಿಯ ಪ್ರತೀಕವಾಗಿದ್ದ 1905ರ ಬಂಗಾಳ ವಿಭಜನೆಯನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ವಿರೋಧಿಸಿತು. ಆದರೆ ಬಂಗಾಳಿ ಭಾಷೆಯು ಮುಸ್ಲಿಂ ಮತ್ತು ಹಿಂದೂ ಸಮುದಾಯಗಳನ್ನು ಒಗ್ಗೂಡಿಸುವ ಶಕ್ತಿಯಾಗಿ ಪರಿಣಮಿಸಿತು. ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಭಾವೈಕ್ಯತೆಯನ್ನು ಸಾಧಿಸಲು ರಕ್ಷಾಬಂಧನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಬಂಗಾಳದ ವಿಭಜನೆಯ ವಿರುದ್ಧ ದೇಶದಾದ್ಯಂತ ಪ್ರತಿರೋಧಗಳು ವ್ಯಕ್ತವಾದವು. ಪ್ರತಿರೋಧದ ಒಂದು ಬಗೆಯಾಗಿ ಸ್ವದೇಶಿ ಚಳವಳಿಯನ್ನು ಪ್ರಾರಂಭಿಸಲಾಯಿತು. ಇದನ್ನು ದೇಶದಾದ್ಯಂತ ಕೊಂಡೊಯ್ದವರು ತೀವ್ರವಾದಿಗಳು. ವಿದೇಶಿ ವಸ್ತುಗಳು ಮತ್ತು ಅದನ್ನು ಪ್ರೋತ್ಸಾಹಿಸುವ ಸಂಸ್ಥೆಗಳನ್ನು ಬಹಿಷ್ಕರಿಸಲು ಸ್ವದೇಶಿ ಆಂದೋಲನಕ್ಕೆ ಕರೆ ನೀಡಿದರು. ಸ್ವದೇಶಿ ವಸ್ತುಗಳನ್ನು ಬಳಸುವಂತೆ ಅವರು ಭಾರತೀಯರನ್ನು ಪ್ರೇರೇಪಿಸಿದರು. ಭಾರತೀಯರ ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಬಂಗಾಳದ ವಿಭಜನೆಯನ್ನು 1911ರಲ್ಲಿ ಬ್ರಿಟಿಷ್ ಸರ್ಕಾರವು ಹಿಂಪಡೆಯಿತು.

ತಿಲಕರು 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ' ಎಂದು ಘೋಷಿಸುವ ಮೂಲಕ ಬಹುಸಂಖ್ಯಾತ ಭಾರತೀಯರ ಮನದಾಳದ ಭಾವನೆಯನ್ನು ಹೊರಹಾಕಿದರು. ಪೂರ್ಣ ಸ್ವರಾಜ್ಯವನ್ನು ಪಡೆಯುವುದು ತೀವ್ರವಾದಿಗಳ ಗುರಿಯಾಗಿತ್ತು. ಇವರು ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸುವ ಪ್ರಯತ್ನ ಮಾಡಿದರು. ಈ ಹಿನ್ನೆಲೆಯಲ್ಲಿ ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಿ ಬ್ರಿಟಿಷ್ ವಿರೋಧಿ ಹೋರಾಟಕ್ಕೆ ಅವರನ್ನು ಸಜ್ಜುಗೊಳಿಸಿದರು. ಗಣೇಶ, ಶಿವಾಜಿ, ದುರ್ಗಾ ಮುಂತಾದ ಉತ್ಸವಗಳ ಮೂಲಕ ಜನರನ್ನು ಹೋರಾಟಕ್ಕೆ ಪ್ರೇರೇಪಿಸಿದರು. ಈ ಎಲ್ಲಾ ಬೆಳೆವಣಿಗೆಗಳ ಹಿನ್ನೆಲೆಯಲ್ಲಿ 1906ರಲ್ಲಿ ಪ್ರತ್ಯೇಕ ಮುಸ್ಲಿಂ ಅಸ್ಮಿತೆಯನ್ನು ರೂಪಿಸಿಕೊಳ್ಳುವ 'ಮುಸ್ಲಿಂ ಲೀಗ್' ಹುಟ್ಟಿಕೊಂಡಿತು. ತಿಲಕರು ಮರಾಠಿ ಭಾಷೆಯಲ್ಲಿ 'ಕೇಸರಿ' ಮತ್ತು ಇಂಗ್ಲಿಷ್ ಭಾಷೆಯಲ್ಲಿ 'ಮರಾಠ' ಪತ್ರಿಕೆಗಳನ್ನು ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಬಳಸಿಕೊಂಡರು. ಈ ಪತ್ರಿಕೆಗಳ ಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಿದರು. ಅವರ ಕ್ರಾಂತಿಕಾರಕ ಬರವಣಿಗೆಗಳು ಜನರನ್ನು ಕೆರಳಿಸಿದವು. ಈ ಹಿನ್ನೆಲೆಯಲ್ಲಿ ಬ್ರಿಟಿಷ್ ಸರ್ಕಾರವು ತಿಲಕರನ್ನು ಬಂಧಿಸಿತು. ಜೈಲಿನಲ್ಲಿಯ ಈ ಸಂದರ್ಭವನ್ನು ಸದುಪಯೋಗಪಡಿಸಿಕೊಂಡ ತಿಲಕರು 'ಗೀತಾರಹಸ್ಯ' ಗ್ರಂಥವನ್ನು ರಚಿಸುವ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಮತ್ತಷ್ಟು ತೀವ್ರತೆಯನ್ನು ತಂದುಕೊಟ್ಟರು.


> **ನಿಮಗಿದು ತಿಳಿದಿರಲಿ :**
> ತಿಲಕರು ಗಣೇಶಹಬ್ಬ ಮತ್ತು ಶಿವಾಜಿ ಉತ್ಸವಗಳ ಮೂಲಕ ಜನರನ್ನು ರಾಷ್ಟ್ರೀಯತೆಗೆ ಪ್ರಚೋದಿಸಿದರು.

**ಕ್ರಾಂತಿಕಾರಿಗಳು**

ಕ್ರಾಂತಿಕಾರಿಗಳು ಪೂರ್ಣ ಸ್ವಾತಂತ್ರ್ಯದ ಕನಸನ್ನು ಕಂಡಿದ್ದರು. ಭಾರತೀಯರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ ಬ್ರಿಟಿಷರನ್ನು ಹಿಂಸಾತ್ಮಕ ಮಾರ್ಗದಿಂದ ಮಾತ್ರ ಭಾರತದಿಂದ ಓಡಿಸಬಹುದೆಂದು ಅವರು ಬಲವಾಗಿ ನಂಬಿದ್ದರು. ಇವರುಗಳು ರಹಸ್ಯಸಂಘಗಳ ಮೂಲಕ ಭಾರತದಲ್ಲಿ ಮತ್ತು ವಿದೇಶಗಳಲ್ಲಿ ತಮ್ಮ ಶಾಖೆಗಳನ್ನು ಸ್ಥಾಪಿಸಿ ಹಣಕಾಸು, ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಕಾರ್ಯದೊಂದಿಗೆ ಕ್ರಾಂತಿಕಾರಿಗಳಿಗೆ ತರಬೇತಿ ನೀಡಿದರು. ಇಂಗ್ಲೆಂಡಿನಲ್ಲಿ 'ಲೋಟಸ್ ಮತ್ತು ಡಾಗರ್' ಎನ್ನುವ ಗುಪ್ತ ಸಂಘಟನೆ ಹುಟ್ಟಿತು.

© KTBS Not to be republished

ಅದರ ಮೂಲಕ ಅಲ್ಲಿದ್ದ ಅರಬಿಂದೋ ಘೋಷ್ ಮುಂತಾದ ಕ್ರಾಂತಿಕಾರಿಗಳು ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಒತ್ತಾಸೆಯನ್ನು ನೀಡಿದರು. ಹಾಗೆಯೇ ಅಮೆರಿಕದಲ್ಲಿ ಪ್ರಾರಂಭವಾದ 'ಗಧರ್' ಕ್ರಾಂತಿಕಾರಿ ಸಂಘಟನೆಯನ್ನು ಹೆಸರಿಸಬಹುದು. ಹಾಗೆಯೇ ಭಾರತದಲ್ಲಿದ್ದ 'ಅನುಶೀಲನ ಸಮಿತಿ' ಮತ್ತು 'ಅಭಿನವ ಭಾರತ' ರಹಸ್ಯ ಸಂಘಟನೆಗಳು ಮುಖ್ಯವಾದವು. ಇವರು ತಮ್ಮ ಗುರಿ ಸಾಧನೆಗಾಗಿ ಬಾಂಬುಗಳು ಮತ್ತು ಬಂದೂಕುಗಳ ಪ್ರಯೋಗ ಮಾಡಿದರು. ಸರ್ಕಾರವು ಇವರನ್ನು ಹತ್ತಿಕ್ಕುವ ಸರ್ವ ಪ್ರಯತ್ನವನ್ನು ಮಾಡಿತು. ಕ್ರಾಂತಿಕಾರಿಗಳನ್ನು ಕೊಲೆ ಸಂಚಿನ ಆರೋಪದ ಮೇಲೆ ಬಂಧಿಸಿ, ಅವರುಗಳನ್ನು ತಪ್ಪಿತಸ್ಥರನ್ನಾಗಿ ಗುರುತಿಸಿ ಜೀವಾವಧಿ ಶಿಕ್ಷೆಯನ್ನು ವಿಧಿಸಿತು. ಈ ಸಂದರ್ಭದಲ್ಲಿ ಅನೇಕರನ್ನು ಗಲ್ಲಿಗೇರಿಸಲಾಯಿತು. ವಿ.ಡಿ. ಸಾವರ್ಕರ್, ಅರಬಿಂದೋ ಘೋಷ್, ಅಶ್ವಿನಿಕುಮಾರದತ್ತ, ರಾಜನಾರಾಯಣ ಬೋಸ್, ರಾಜಗುರು, ಚಾಪೆಕರ್ ಸಹೋದರರು, ವಿಷ್ಣುಶಾಸ್ತ್ರಿ, ಚಂಪೂಕರ್, ಶ್ಯಾಮ್‌ಜಿ ಕೃಷ್ಣವರ್ಮ, ರಾಸ್ ಬಿಹಾರಿ ಬೋಸ್, ಮ್ಯಾಡಮ್ ಕಾಮಾ, ಖುದಿರಾಮ್ ಬೋಸ್, ರಾಮ್‌ಪ್ರಸಾದ ಬಿಸ್ಮಿಲ್, ಅಶ್ವಖಿಲ್ಲಾಖಾನ್, ಭಗತ್ ಸಿಂಗ್, ಚಂದ್ರಶೇಖರ ಅಜಾದ್ ಜತಿನ್ ದಾಸ್–ಇವರುಗಳು ಕ್ರಾಂತಿಕಾರಿಗಳಲ್ಲಿ ಪ್ರಮುಖರಾಗಿದ್ದರು.



ಭಗತ್ ಸಿಂಗ್ | ಚಂದ್ರಶೇಖರ್ ಆಜಾದ್ | ವಿ.ಡಿ.ಸಾವರ್ಕರ್

© KTBS Not to be published

ಕ್ರಾಂತಿಕಾರಿಗಳು ಬ್ರಿಟಿಷ್ ಆಡಳಿತ ವ್ಯವಸ್ಥೆಗೆ ಧಕ್ಕೆ ತರುವ ಮೂಲಕ ತ್ವರಿತವಾಗಿ ಸ್ವಾತಂತ್ರ್ಯವನ್ನು ತಂದು ಕೊಡುವ ಅವರ ತೀವ್ರವಾದ ಕನಸು ನನಸಾಗಲಿಲ್ಲ. ಆದಾಗ್ಯೂ ರಾಷ್ಟ್ರೀಯ ಆಂದೋಲನಕ್ಕೆ ಅವರು ಸ್ಫೂರ್ತಿಯ ಚಿಲುಮೆಯಾಗಿದ್ದರು. ತೀವ್ರವಾದಿಗಳಾಗಿದ್ದ ಹಲವು ನಾಯಕರು ಮುಂದಿನ ದಿನಗಳಲ್ಲಿ ಕ್ರಾಂತಿಕಾರಿಗಳಾಗಿ ತಮ್ಮ ಹೋರಾಟವನ್ನು ಮುಂದುವರಿಸಿದರು. ಅವರುಗಳಲ್ಲಿ ಅರಬಿಂದೋ ಘೋಷರು ಪ್ರಮುಖರಾದರು. ಭಾರತದ ಸ್ವಾತಂತ್ರ್ಯ ಹೋರಾಟದ ವಿವಿಧ ಹಂತಗಳಲ್ಲಿ ಕ್ರಾಂತಿಕಾರಿಗಳ ಹಂತ ಅನೇಕ ಕಾರಣಗಳಿಗಾಗಿ ವಿಶೇಷವಾದದ್ದು.

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸನ್ನು __________ ರಲ್ಲಿ ಸ್ಥಾಪಿಸಲಾಯಿತು.
2. ಸಂಪತ್ತಿನ ಸೋರುವಿಕೆ ಸಿದ್ಧಾಂತವನ್ನು ತಿಳಿಸಿದವರು ______________.
3. ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಎಂದು ______________ ರವರು ಘೋಷಿಸಿದರು.
4. ಬಾಲಗಂಗಾಧರ ತಿಲಕರು ಮರಾಠಿ ಭಾಷೆಯಲ್ಲಿ ___________ ಪತ್ರಿಕೆಯನ್ನು ಪ್ರಕಟಿಸಿದರು.
5. ಅಭಿನವ ಭಾರತ ಎಂಬ ರಹಸ್ಯ ಸಂಘಟನೆಯನ್ನು ___________ ಗಳು ಹೊಂದಿದ್ದರು.

**II. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳವನ್ನು ನೀಡಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ಭರ್ತಿಮಾಡಿ.**

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪಕರು ______________ .

   ಎ) ಮಹಾತ್ಮ ಗಾಂಧೀಜಿ ಬಿ) ಎ.ಓ.ಹ್ಯೂಮ್

   ಸಿ) ಬಾಲಗಂಗಾಧರ ತಿಲಕ್ ಡಿ) ಗೋಪಾಲಕೃಷ್ಣ ಗೋಖಲೆ

2. 'ಮರಾಠ' ಪತ್ರಿಕೆಯನ್ನು ಪ್ರಕಟಿಸಿದವರು ______________ .

   ಎ) ಜವಾಹರಲಾಲ್ ನೆಹರು ಬಿ) ರಾಸ್ ಬಿಹಾರಿ ಬೋಸ್

   ಸಿ) ಬಾಲಗಂಗಾಧರ ತಿಲಕ್ ಡಿ) ವಿ. ಡಿ. ಸಾವರ್ಕರ್

3. ಮುಸ್ಲಿಂ ಲೀಗ್ ___________ ರಲ್ಲಿ ಹುಟ್ಟಿಕೊಂಡಿತು.

   ಎ) 1924 ಬಿ) 1922 ಸಿ) 1929 ಡಿ) 1906

4. ಬಂಗಾಳದ ವಿಭಜನೆಯನ್ನು ರೂಪಿಸಿದ ವೈಸ್‌ರಾಯ್ ___________ .

   ಎ) ಲಾರ್ಡ್ ಕಾರ್ನ್‌ವಾಲೀಸ್ ಬಿ) ಡಾಲ್ ಹೌಸಿ

   ಸಿ) ಲಾರ್ಡ್ ಕರ್ಜನ್ ಡಿ) ರಾಬರ್ಟ್ ಕ್ಲೈವ್

**III. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ. ಉತ್ತರಿಸಿ.**

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಗೆ ಮೊದಲು ಇದ್ದ ಸಂಘಟನೆಗಳು ಯಾವುವು?
2. ಬ್ರಿಟಿಷ್ ಸರ್ಕಾರದ ಮುಂದಿಟ್ಟ ಮಂದಗಾಮಿಗಳ ಬೇಡಿಕೆಗಳಾವುವು?
3. ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ವಿವರಿಸಿ.
4. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿನ ಕ್ರಾಂತಿಕಾರಿಗಳನ್ನು ಹೆಸರಿಸಿ.
5. ಸ್ವಾತಂತ್ರ ಚಳವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.
6. ಬಂಗಾಳ ವಿಭಜನೆ ತೀರ್ಮಾನವನ್ನು ಹಿಂಪಡೆಯಲು ಕಾರಣಗಳೇನು?
7. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖವಾಗಿ ಕಂಡುಬರುವ ತೀವ್ರಗಾಮಿಗಳ ಹೆಸರುಗಳನ್ನು ಬರೆಯಿರಿ.

**IV. ಚಟುವಟಿಕೆಗಳು :**

1. ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.
2. ಮಂದಗಾಮಿ ಹೋರಾಟಗಾರರ ಚಿತ್ರಗಳನ್ನು ಸಂಗ್ರಹಿಸಿ ಮತ್ತು ಅವರ ಜೀವನ ಚರಿತ್ರೆ ಪುಸ್ತಕಗಳನ್ನು ಓದಿರಿ.

**V. ಯೋಜನೆ :**

1. ಶಾಲೆಯಲ್ಲಿ ದೇಶಪ್ರೇಮಕ್ಕೆ ಪೂರಕವಾದ ನಾಟಕಗಳನ್ನು ಆಯೋಜಿಸಿ.

* * * *

© KTBS Not to be published

## ಅಧ್ಯಾಯ – 8

# ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ

R4Q6Z1


**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಗಾಂಧೀಜಿಯವರ ಜೀವನ
- ಭಾರತದಲ್ಲಿ ಗಾಂಧೀಯವರ ಆರಂಭಿಕ ಹೋರಾಟ
- ಗಾಂಧೀಯವರ ಅಂತಃಸತ್ವದ ಸಾಧನೆಗಳು
- ಜಲಿಯನ್‌ವಾಲಾಭಾಗ್ ಹತ್ಯಾಕಾಂಡ,
- ಖಿಲಾಫತ್ ಚಳವಳಿ
- ಅಸಹಕಾರ ಚಳವಳಿ
- ಕಾನೂನುಭಂಗ ಚಳವಳಿ
- ಕ್ವಿಟ್ ಇಂಡಿಯಾ ಚಳವಳಿ
- ದುಂಡುಮೇಜಿನ ಸಮ್ಮೇಳನ
- ಸುಭಾಷ್‌ಚಂದ್ರ ಬೋಸ್ ಮತ್ತು ಇಂಡಿಯನ್ ನ್ಯಾಷನಲ್ ಆರ್ಮಿ
- ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಅವರ ಸುಧಾರಣೆಗಳು
- ಜಯಪ್ರಕಾಶ್ ನಾರಾಯಣ
- ಮಹಮದ್ ಅಲಿ ಜಿನ್ನಾ
- ಜವಾಹರ ಲಾಲ್ ನೆಹರೂ

© KTBS
Not to be published

ಭಾರತೀಯ ರಾಷ್ಟ್ರೀಯ ಹೋರಾಟದಲ್ಲಿ ಮಹಾತ್ಮ ಗಾಂಧಿ ಬಹುಮುಖ್ಯ ಪಾತ್ರವನ್ನು ವಹಿಸಿದ್ದಾರೆ. ಇವರು ರಾಷ್ಟ್ರೀಯ ಹೋರಾಟದಲ್ಲಿ 'ಗಾಂಧಿಯನ್ ಮಾದರಿ' ಅಥವಾ ಗಾಂಧಿ ವಿಧಾನವನ್ನು ರೂಪಿಸಿದವರು. 1920–47ರ ಅವಧಿಯಲ್ಲಿ ಗಾಂಧಿಯ ವಿಚಾರಗಳು ಅವರ ಹೋರಾಟದ ಸೈದ್ಧಾಂತಿಕ ತಳಹದಿಯನ್ನು ರೂಪಿಸಿದ ಕಾರಣ ಹಾಗೂ ಅವರ ಹೋರಾಟದ ಮಾದರಿ ಭಾರತದ ರಾಷ್ಟ್ರೀಯ ಹೋರಾಟದ ದಿಕ್ಕನ್ನು ಗಣನೀಯವಾಗಿ ರೂಪಿಸಿದ್ದರಿಂದ ಈ ಅವಧಿಯನ್ನು ಗಾಂಧೀಯುಗವೆಂದೂ ಕರೆಯುತ್ತೇವೆ.

### ಆರಂಭಿಕ ಜೀವನ ಮತ್ತು ಬೆಳವಣಿಗೆ :



ದಕ್ಷಿಣ ಆಫ್ರಿಕಾದಲ್ಲಿದ್ದಾಗ ಗಾಂಧೀಜಿ

ಬಾಪು ಎಂದು ಪ್ರೀತಿಯಿಂದ ಕರೆಯಲ್ಪಡುವ ಮೋಹನ್‌ದಾಸ್ ಕರಮಚಂದ್ ಗಾಂಧಿ 1869 ಅಕ್ಟೋಬರ್ 2ರಂದು ಈಗಿನ ಗುಜರಾತ್‌ನ ಕಾಥೇವಾಡ್ ಜಿಲ್ಲೆಯ ಪೋರ್‌ಬಂದರ್‌ನಲ್ಲಿ ಜನಿಸಿದರು. ಇವರ ತಂದೆ ಕರಮಚಂದ ಗಾಂಧಿ. ರಾಜಕೋಟ್ ಸಂಸ್ಥಾನದ ದಿವಾನರಾಗಿದ್ದರು. ತಾಯಿ ಪುತಲಿಬಾಯಿ ಇವರು ಗಾಂಧೀಜಿಯವರ ಮೇಲೆ ದಟ್ಟವಾದ ನೈತಿಕ ಪ್ರಭಾವ ಬೀರಿದ್ದರು. ಆರಂಭಿಕ ಶಿಕ್ಷಣವನ್ನು ಪೋರ್‌ಬಂದರ್‌ನಲ್ಲಿಯೇ ಮುಗಿಸಿದ ಗಾಂಧೀಯವರು 1888ರಲ್ಲಿ ಇಂಗ್ಲೆಂಡ್‌ನಲ್ಲಿ ಕಾನೂನು ಅಧ್ಯಯನ ಮಾಡಲು ಹೋಗಿ "ಬಾರ್ ಅಟ್ ಲಾ" ಮುಗಿಸಿ ಮತ್ತೆ ಭಾರತಕ್ಕೆ ವಾಪಸ್ಸಾದರು. 1893ರಲ್ಲಿ ದಾದಾ ಅಬ್ದುಲ್ಲಾ ಮತ್ತು ಕಂಪನಿಯ ವಕಾಲತ್ತು ವಹಿಸಲು ದಕ್ಷಿಣ ಆಫ್ರಿಕಾದ 'ನಟಾಲ್'ಗೆ ಹೋದರು. ಇಲ್ಲಿ ಗಾಂಧಿ ಬರಿ ಮೂರು ತಿಂಗಳು ಇರಬೇಕಾಗಿದ್ದವರು ಸುಮಾರು ಮುಂದಿನ 20 ವರ್ಷಗಳನ್ನು ಕಳೆದರು. ಮುಖ್ಯವಾಗಿ ಅಲ್ಲಿನ ಕರಿಯರ ಮತ್ತು ಭಾರತೀಯರ ಬಗೆಗೆ ಅಲ್ಲಿನ ಬ್ರಿಟಿಷ್ ಸರ್ಕಾರ ತೋರಿದ್ದ ಅಸಹನೀಯ ವರ್ಣಭೇದ ನೀತಿ (Aparthied) ಮತ್ತು ಜನಾಂಗೀಯ ತಾರತಮ್ಯದ ನೀತಿಯನ್ನು ವಿರೋಧಿಸಿದರು. ಈ ಹೋರಾಟದ ಮೂಲಕ ಗಾಂಧೀಜಿಯವರು 'ಸತ್ಯಾಗ್ರಹ' ಎನ್ನುವ ಹೊಸ ಸಾಮಾಜಿಕ ಆವಿಷ್ಕಾರವನ್ನು ಮಾಡಿ ಅದರ ನೀತಿ ನಿರೂಪಣೆಯನ್ನು ಸೃಷ್ಟಿಸಿದರು. ಅನೇಕ ಆಫ್ರಿಕನ್ನರಿಗೆ ಇರುವ ಹೆಮ್ಮೆಯೆಂದರೆ 'ನೀವು ಏನೂ ಆಗಿರದ ಗಾಂಧಿಯನ್ನು ಕಳುಹಿಸಿದಿರಿ, ನಾವು ನಿಮಗೆ ಈ ಗಾಂಧಿಯನ್ನು ಕೊಟ್ಟೆವು' ಎಂಬುದು.

**ನಿಮಗಿದು ತಿಳಿದಿರಲಿ :**

*ಆಫ್ರಿಕಾದಲ್ಲಿ ಗಾಂಧಿ ಮೊತ್ತ ಮೊದಲ ಬಾರಿಗೆ ಸತ್ಯಾಗ್ರಹ, ಅಹಿಂಸೆ ತತ್ವಗಳ ಆಧಾರದಲ್ಲಿ ಹೋರಾಟ ರೂಪಿಸಿದರು. ನತಾಲ್ ಇಂಡಿಯನ್ ಕಾಂಗ್ರೆಸ್ ಎನ್ನುವ ಸಂಸ್ಥೆಯನ್ನು ಕಟ್ಟಿದರು. ಗಾಂಧಿ ಮೊತ್ತ ಮೊದಲ ಬಾರಿಗೆ 'ಇಂಡಿಯನ್ ಒಪಿನೀಯನ್' ಎಂಬ ಪತ್ರಿಕೆಯನ್ನು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಮತ್ತು ಜನರ ಅಭಿಪ್ರಾಯವನ್ನು ರೂಪಿಸಲು ಪ್ರಾರಂಭಿಸಿದರು. ಗಾಂಧಿ ತಮ್ಮ ಹೋರಾಟವನ್ನು ಇನ್ನೂ ತೀವ್ರಗೊಳಿಸಲು 'ಪ್ಯಾಸಿವ್ ರೆಸಿಸ್ಟೆನ್ಸ್ ಆರ್ಗನೈಸೇಶನ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಸತ್ಯಾಗ್ರಹ ಮತ್ತು ಹೋರಾಟದ ತರಬೇತಿಯನ್ನು ರೂಪಿಸಲು ಗಾಂಧಿ ಆಫ್ರಿಕಾದಲ್ಲಿ 'ಫೋನಿಕ್ಸ್' ಮತ್ತು 'ಟಾಲ್‌ಸ್ಟಾಯ್ ಫಾರ್ಮ್ಸ್'ಗಳೆಂಬ ಆಶ್ರಮಗಳನ್ನು ಸ್ಥಾಪಿಸಿದರು. ಗಾಂಧಿಯ ಮಿತ್ರ ಕ್ಯಾಲೆನ್‌ಬಾಕ್, ಪತ್ನಿ ಕಸ್ತೂರ್ ಬಾ, ಮಕ್ಕಳು ಮತ್ತು ಮಿತ್ರರು ಸೇರಿದಂತೆ ಅನೇಕ ಭಾರತೀಯರು ಗಾಂಧಿಗೆ ಹೋರಾಟಗಳಲ್ಲಿ ಹೆಗಲು ನೀಡಿದ್ದರು. ಕೊನೆಗೂ ಈ ರೀತಿಯ ಹೋರಾಟಗಳಿಂದ ಒತ್ತಡವನ್ನು ಅನುಭವಿಸಿ ಬ್ರಿಟಿಷ್ ಸರ್ಕಾರವು ದಕ್ಷಿಣ ಆಫ್ರಿಕಾದ ಕಪ್ಪು ಜನರ ಮತ್ತು ಭಾರತೀಯರ ವಿರುದ್ಧದ ಎಲ್ಲಾ ನಿಷೇಧ ಮತ್ತು ನಿರ್ಬಂಧದ ಕಾನೂನುಗಳನ್ನು ವಾಪಾಸ್ ಪಡೆಯಿತು. ದಕ್ಷಿಣ ಆಫ್ರಿಕಾದಲ್ಲಿದ್ದಾಗ ಒಮ್ಮೆ ದರ್ಬಾನ್‌ನಿಂದ ಪ್ರಿಟೋರಿಯಾ ನಡುವೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಪ್ರಥಮ ದರ್ಜೆ ಟಿಕೆಟ್ ಹೊಂದಿದ್ದರೂ ಬಲವಂತವಾಗಿ ರೈಲಿನ ಬಿಳಿಯ ಅಧಿಕಾರಿಯು ಗಾಂಧೀಜಿಯನ್ನು ಆ ಬೋಗಿಯಿಂದ ಹೊರಹಾಕಿದರು. ದಕ್ಷಿಣ ಆಫ್ರಿಕಾದ ಕಾಲೋನಿಗಳಲ್ಲಿ ವಾಸಿಸುತ್ತಿದ್ದ ಭಾರತೀಯರ ಬವಣೆಯನ್ನು ಅನುಭವದಿಂದ ಕಂಡುಕೊಳ್ಳಲು ಸಾಧ್ಯವಾಯಿತು. ಇಂಗ್ಲೆಂಡಿಗಿಂತಲೂ ತೀವ್ರ ಸ್ವರೂಪದ ಜನಾಂಗೀಯ ಬೇಧ-ಭಾವ ಮತ್ತು ತಿರಸ್ಕಾರಗಳು ದಕ್ಷಿಣ ಆಫ್ರಿಕಾದಲ್ಲಿ ಆಚರಣೆಯಲ್ಲಿವೆ ಎಂದು ಅವರೇ ದಾಖಲಿಸಿದ್ದಾರೆ. ದಕ್ಷಿಣ ಆಫ್ರಿಕಾದ ಸುದೀರ್ಘ ಹೋರಾಟದ ನಂತರ ಗಾಂಧಿ 1915ರಲ್ಲಿ ಭಾರತಕ್ಕೆ ಬಂದರು.*

## ಭಾರತದಲ್ಲಿ ಗಾಂಧಿ-ಆರಂಭದ ಹೋರಾಟಗಳು

© KTBS Not to be published

ಭಾರತಕ್ಕೆ ಬಂದ ಗಾಂಧಿ ತಮ್ಮ ರಾಜಕೀಯ ಗುರು ಗೋಖಲೆಯವರ ಮಾರ್ಗದರ್ಶನದ ಮೇರೆಗೆ ಇಲ್ಲಿಯ ಜನರ ಬದುಕು, ಸಮಾಜ ಮತ್ತು ಆ ಹೊತ್ತಿನ ಸಾಮಾಜಿಕ ವಾಸ್ತವಗಳನ್ನು ತಿಳಿಯುವ ಸಲುವಾಗಿ ರೈಲಿನ ಮೂರನೇ ದರ್ಜೆಯ ಬೋಗಿಯಲ್ಲಿಯೇ ಭಾರತ ದರ್ಶನವನ್ನು ಮಾಡಿದರು. 1916ರಲ್ಲಿ ಅವರು ಅಹಮದಾಬಾದ್‌ನಲ್ಲಿ ಸಬರಮತಿ ಆಶ್ರಮವನ್ನು ಸ್ಥಾಪಿಸುವ ಮೂಲಕ ತಮ್ಮ ಹೋರಾಟಕ್ಕೆ ಒಂದು ಸಾಂಸ್ಥಿಕ ರೂಪವನ್ನು ಕೊಟ್ಟರು. ರೈತರ, ದಲಿತರ, ಬುಡಕಟ್ಟು ಜನರ, ಕಾರ್ಮಿಕರ, ಬಡಜನರ ಸಂಕಷ್ಟ ಮತ್ತು ಸಮಸ್ಯೆಗಳನ್ನು ಆಲಿಸಿದರು. 1917ರಲ್ಲಿ ಗಾಂಧಿ ಬಿಹಾರದ ಚಂಪಾರಣ್ಯದಲ್ಲಿ, ನೀಲಿ ಬೆಳೆಯಿಂದ ಸಂತ್ರಸ್ತರಾದ ರೈತರ ಪರವಾಗಿ 'ಚಂಪಾರಣ್ಯ ಚಳವಳಿ' ಆರಂಭಿಸಿ, ಬ್ರಿಟಿಷ್ ಸರ್ಕಾರ ಮಣಿಯುವಂತೆ ಮಾಡಿದರು. 1918ರಲ್ಲಿ ಅಹಮದಾಬಾದ್‌ನ ಹತ್ತಿ ಗಿರಣಿಯ ಕಾರ್ಮಿಕರ ಸಂಬಳ ಹೆಚ್ಚಿಸುವ ಸಲುವಾಗಿ ಅವರ ಜತೆಗೂಡಿ ಚಳವಳಿ ಆರಂಭಿಸಿ ಯಶಸ್ಸು ಪಡೆದರು. ಇದೇ ವರ್ಷ ಗುಜರಾತ್‌ನ ಖೇಡಾ ಎಂಬಲ್ಲಿ ನಡೆದ ರೈತರ ಮೇಲಿನ ತೆರಿಗೆಸಂಬಂಧಿತ ಹೋರಾಟವೂ ಕೂಡಾ ಯಶಸ್ವಿಯಾಯಿತು. ಈ ಎಲ್ಲಾ ಹೋರಾಟಗಳಲ್ಲೂ ಗಾಂಧಿ ಸತ್ಯ, ಅಹಿಂಸೆ ಮತ್ತು ಸತ್ಯಾಗ್ರಹದ ಮಾರ್ಗವನ್ನು ಪರಿಚಯಿಸಿ ಪ್ರಯೋಗಿಸಿದರು. ಈ ಜೊತೆಗೆ ಭಾರತೀಯ ಜನಸಾಮಾನ್ಯರ ಜೊತೆಗೆ ಸಂವಾದವನ್ನು ಪ್ರಾರಂಭಿಸುವ ಮೂಲಕ ಸ್ವಾತಂತ್ರ್ಯ ಹೋರಾಟದ ಸ್ವರೂಪವನ್ನು ಜನಮುಖಿಯಾಗಿ ಬದಲಿಸುವ ಪ್ರಕ್ರಿಯೆಗೆ ಚಾಲನೆ ನೀಡಿದರು.

ಮಹಾತ್ಮ ಗಾಂಧೀಜಿಯವರ ಪ್ರವೇಶದಿಂದಾಗಿ ಸ್ವಾತಂತ್ರ್ಯ ಚಳವಳಿಯು ಹೊಸ ಆಯಾಮವನ್ನು ಪಡೆಯಿತು. ಗಾಂಧೀಜಿಯವರು ತಮ್ಮ ಹೋರಾಟದಲ್ಲಿ 'ಪರೋಕ್ಷ ಪ್ರತಿರೋಧ', 'ಅಹಿಂಸೆ' ಮತ್ತು 'ಸತ್ಯಾಗ್ರಹವನ್ನು' ಹೋರಾಟದ ಪ್ರಮುಖ ತಂತ್ರಗಳನ್ನಾಗಿ ಬಳಸಿಕೊಂಡರು. ತಮ್ಮ ಸಿದ್ಧಾಂತಗಳನ್ನು ಅವರು 'ಹರಿಜನ್' ಮತ್ತು 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ವ್ಯಕ್ತಪಡಿಸುತ್ತಿದ್ದರು.

**ನಿಮಗಿದು ತಿಳಿದಿರಲಿ :**

ಗಾಂಧೀಜಿಯ ಪ್ರವೇಶದೊಂದಿಗೆ ಹೊಸ ಕಾಂಗ್ರೆಸ್ ತನ್ನ ಸದಸ್ಯತ್ವವನ್ನು ಎಲ್ಲರಿಗೂ ಮುಕ್ತಗೊಳಿಸಿ, ಜನಸಾಮಾನ್ಯರ ಸಂಘಟನೆಯನ್ನಾಗಿಸಿತು. ಸಂಘವು ತೆಗೆದುಕೊಳ್ಳುವ ತೀರ್ಮಾನಗಳನ್ನು ಒತ್ತಾಯಿಸಲು ಅಸಹಕಾರ ಮತ್ತು ಸವಿನಯ ಕಾನೂನುಭಂಗ ಚಳವಳಿಯ ಕಾರ್ಯತಂತ್ರ ರೂಪಿಸಿತು. ಅದು ಸಾಮಾಜಿಕ ಉನ್ನತಿಗಾಗಿ ಅಂಚಿನ ಸಮುದಾಯಗಳನ್ನು ವಾಹಿನಿಗೆ ತರಲು ರಚನಾತ್ಮಕ ಕಾರ್ಯಕ್ರಮಗಳನ್ನು ಸೂಚಿಸಿತು. ತಮ್ಮ ಕಾರ್ಯಾಚರಣೆಯನ್ನು ನೆರವೇರಿಸಲು ಒಂದು ಕೋಟಿ ರೂಪಾಯಿ ಬಂಡವಾಳದ 'ತಿಲಕ್ ಸ್ವರಾಜ್ಯ ಫಂಡ್'ನ್ನು ಪ್ರಾರಂಭಿಸಿತು. ಹೀಗೆ ಮಹಾತ್ಮ ಗಾಂಧೀಜಿಯ ಪ್ರವೇಶದೊಂದಿಗೆ ಕಾಂಗ್ರೆಸ್‌ನಲ್ಲಿ ಸಂಪೂರ್ಣ ಬದಲಾವಣೆಯನ್ನು ಕಾಣಬಹುದು. ಈ ಎಲ್ಲಾ ಕಾರಣಗಳಿಗಾಗಿ ಈ ಕಾಲವನ್ನು ಗಾಂಧೀಯುಗವೆಂದು ಗುರುತಿಸಲಾಗಿದೆ.

## ಗಾಂಧಿ ಹೋರಾಟದ ಅಂತಃಸತ್ವದ ಸಾಧನಗಳು

**ಸತ್ಯಾಗ್ರಹ:** ಗಾಂಧೀಜಿಯವರ ಹೋರಾಟದ ಬಹುಮುಖ್ಯವಾದ ವಿಧಾನವೇ ಸತ್ಯಾಗ್ರಹ. 'ಸತ್ಯಾಗ್ರಹ' ಎನ್ನುವ ಪದದ ಅರ್ಥ, ಸತ್ಯವನ್ನು ಆಗ್ರಹಿಸುವುದು ಅಥವಾ ಒತ್ತಾಯಿಸುವುದೇ ಆಗಿದೆ. ಆಫ್ರಿಕಾದಲ್ಲಿ ಗಾಂಧಿ ಕಂಡುಕೊಂಡು ಬಳಸಿದ ಈ ಅಸ್ತ್ರ ಅವರಿಗೆ ನೈತಿಕ ಶಕ್ತಿಯ ರೂಪವಾಗಿದೆ. ಸತ್ಯಾಗ್ರಹವು ಅಹಿಂಸೆಯನ್ನು ಆಧರಿಸಿದ್ದು, ತಪ್ಪು, ಹಿಂಸೆ ಮತ್ತು ಅಸತ್ಯವನ್ನು ಖಡಾಖಂಡಿತವಾಗಿ ನಿರಾಕರಿಸುವ ಕ್ರಮವೂ ಆಗಿದೆ. ಈ ಅಸ್ತ್ರವನ್ನು ಭಾರತದ ರಾಷ್ಟ್ರೀಯ ಹೋರಾಟದಲ್ಲಿ ನಿರಂತರವಾಗಿ ಬಳಸಿದರು ಇದು ಒಂದು ದೊಡ್ಡ ಸಾಮಾಜಿಕ ಅನ್ವೇಷಣೆಯಾಗಿದೆ.

**ಅಹಿಂಸೆ:** ಗಾಂಧೀಜಿಯ ಹೋರಾಟದ ಮೂಲಭೂತ ಆಶಯ ಅಹಿಂಸೆಯಾಗಿದೆ. ಸಶಸ್ತ್ರ ಬಲಪ್ರಯೋಗದ ವಿರುದ್ಧ ಅಹಿಂಸೆ ಮತ್ತು ಸತ್ಯಾಗ್ರಹದ ಮೂಲಕ ಮುಖಾಮುಖಿಯಾಗಬೇಕೆಂಬುದು ಅವರ ನಿಲುವಾಗಿತ್ತು. ಬ್ರಿಟಿಷ್ ದರ್ಪದ ಆಯುಧಗಳಾದ ಮಿಲಿಟರಿ, ಪೊಲೀಸ್, ಕಾನೂನು ಮುಂತಾದವುಗಳ ವಿರುದ್ಧ ಸತ್ಯ, ಅಹಿಂಸೆ, ಉಪವಾಸವೆಂಬ ಮಾತೃತ್ವದ ಮಾಂತ್ರಿಕತೆಯ ಆಯುಧಗಳನ್ನು ಬಳಸಿ ಅವರನ್ನು ಮಣಿಸಿದ್ದು ಗಾಂಧೀಜಿಯವರ ಹೋರಾಟದ ಚಾರಿತ್ರಿಕ ಸಂದೇಶವಾಗಿದೆ.

**ಹಿಂದೂ–ಮುಸ್ಲಿಂ ಏಕತೆ:** ಭಾರತೀಯ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹಿಂದೂ–ಮುಸ್ಲಿಂ ಏಕತೆಯನ್ನು ಅತ್ಯಂತ ಬಲವಾಗಿ ಪ್ರತಿಪಾದಿಸಿದ ವ್ಯಕ್ತಿಯೆಂದರೆ ಗಾಂಧಿ. ಈ ಸಮುದಾಯಗಳ ನಡುವೆ ಏಕತೆಯಿಲ್ಲದಿದ್ದರೆ ಭಾರತ ಸ್ವಾತಂತ್ರ್ಯ ಸಾಧಿಸುವುದು ಮತ್ತು ಭವಿಷ್ಯದಲ್ಲಿ ರಾಷ್ಟ್ರವಾಗಿ ಬಾಳುವುದು ಕಷ್ಟವೆಂದೇ ಅವರ ನಂಬಿಕೆಯಾಗಿತ್ತು. ಹಿಂದೂ ಮತ್ತು ಮುಸ್ಲಿಮರು ಭಾರತಮಾತೆಯ ಎರಡು ಕಣ್ಣುಗಳೆಂದೂ ಗಾಂಧಿ ಹೇಳಿದ್ದರು. ಈ ಹಿನ್ನೆಲೆಯಲ್ಲಿ ಅವರು 1919ರ ಸಂದರ್ಭದಲ್ಲಿ ಖಿಲಾಫತ್ ಚಳವಳಿಗೆ ಕಾಂಗ್ರೆಸ್ ಸಂಘಟನೆಯಿಂದ ಬೆಂಬಲವನ್ನು ವ್ಯಕ್ತಪಡಿಸಿದರು.

© KTBS Not to be published

ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲದೇ ಹೊರತು ಅವರ ದುರಾಸೆಯನ್ನಲ್ಲ – **ಗಾಂಧೀಜಿ**

## ಅಸಹಕಾರ ಚಳವಳಿಯನ್ನು ಪ್ರೇರೆಪಿಸಿದ ಸನ್ನಿವೇಶಗಳು

**ಜಲಿಯನ್‌ವಾಲಾಭಾಗ್ ಹತ್ಯಾಕಾಂಡ:** ಬ್ರಿಟಿಷ್ ಸರಕಾರ ರೌಲೆತ್ ಕಾಯ್ದೆಯನ್ನು ಮಾರ್ಚ್ 1919ರಲ್ಲಿ ಜಾರಿಗೆ ತಂದಿತು. ಇದರ ಮೂಲಕ ಬ್ರಿಟಿಷರು ಭಾರತೀಯ ರಾಷ್ಟ್ರೀಯವಾದಿಗಳನ್ನು ನಿಯಂತ್ರಿಸಲು ಪ್ರಾರಂಭಿಸಿದರು. ಈ ಕಾಯ್ದೆಯಡಿಯಲ್ಲಿ ಯಾವುದೇ ವ್ಯಕ್ತಿಯನ್ನು ವಿಚಾರಣೆ ಇಲ್ಲದೆ ಬಂಧಿಸಿ, ಕೋರ್ಟ್‌ನ ಮೂಲಕ ಅಪರಾಧಿ ಎಂದು ನಿರ್ಣಯಿಸಿ ಶಿಕ್ಷೆ ವಿಧಿಸಬಹುದಿತ್ತು. ಇದು ಭಾರತೀಯ ಸ್ವಾತಂತ್ರ್ಯ ಹೋರಾಟಗಾರರು ಸಭೆ ಸೇರುವುದನ್ನು, ಸಂಘಟನೆ ಮಾಡುವುದನ್ನು ಮತ್ತು ಮುಕ್ತವಾಗಿ ಅಭಿವ್ಯಕ್ತಿಸುವ ಸ್ವಾತಂತ್ರ್ಯವನ್ನೂ ಕಿತ್ತುಕೊಂಡಿತ್ತು. ಗಾಂಧಿ ಇದನ್ನು ಪ್ರತಿಭಟಿಸುವ ಸಲುವಾಗಿ, 'ಸತ್ಯಾಗ್ರಹ ಸಭಾ' ಎನ್ನುವ ಸಂಸ್ಥೆಯನ್ನು ಸ್ಥಾಪಿಸಿ ಹೋರಾಟವನ್ನು ಆರಂಭಿಸಿದರು. ಬೃಹತ್ ಸಭೆ, ಮೆರವಣಿಗೆ, ಬಹಿಷ್ಕಾರ ಮುಂತಾದ ವೈವಿಧ್ಯಮಯ ರಾಜಕೀಯ ಕಾರ್ಯವಿಧಾನಗಳನ್ನು ಇದರ ಮೂಲಕ ಕೈಗೊಳ್ಳಲಾಯಿತು.

## ಜಲಿಯನ್‌ವಾಲಾಭಾಗ್ ಹತ್ಯಾಕಾಂಡ



ಜಲಿಯನ್‌ವಾಲಾಭಾಗ್ ಹತ್ಯಾಕಾಂಡ

ಬ್ರಿಟಿಷ್ ಸರ್ಕಾರವು ರೌಲೆತ್ ಕಾಯ್ದೆಯ ಅನುಷ್ಠಾನದ ವಿರುದ್ಧದ ಪ್ರತಿಭಟನೆಗಳನ್ನು ದಮನಿಸಲು ನಿರ್ಧರಿಸಿತ್ತು. ಗಾಂಧಿ 1919 ಏಪ್ರಿಲ್ 6ರಂದು ಒಂದು ಬೃಹತ್ ಹರತಾಳಕ್ಕೆ ಕರೆ ನೀಡಿದರು. ಪಂಜಾಬಿನಲ್ಲಿ ಡಾ॥ ಫಕ್ರುದ್ದೀನ್, ಡಾ॥ ಸತ್ಯಪಾಲ ಮುಂತಾದವರನ್ನು ಬಂಧಿಸಲಾಯಿತು. ಇದನ್ನು ವಿರೋಧಿಸಲು 1919 ಏಪ್ರಿಲ್ 13ರಂದು ಪಂಜಾಬ್‌ನ ಅಮೃತ್‌ಸರದ ಜಲಿಯನ್‌ವಾಲಾಬಾಗ್‌ನಲ್ಲಿ ಜನರು ಬೈಸಾಕೀ ಹಬ್ಬದಂದು ಪ್ರತಿಭಟನಾ ಸಭೆ ಸೇರಿದರು. ಅಮೃತಸರದ ಸೈನ್ಯಾಧಿಕಾರಿ ಜನರಲ್ ಡಯರ್ ಅಲ್ಲಿ ನೆರೆದ ಜನರ ಮೇಲೆ ಹತ್ತು ನಿಮಿಷಗಳ ಅವ್ಯಾಹತ ಗುಂಡಿನ ದಾಳಿ ನಡೆಸಿದ ಕಾರಣ ಸುಮಾರು 380 ಜನರು ಸತ್ತು ಸಾವಿರಾರು ಜನರು ಗಾಯಗೊಂಡರು. ಈ ಘಟನೆಯು ಗಾಂಧೀಜಿಯನ್ನು ಸೇರಿದಂತೆ ಅನೇಕ ಭಾರತೀಯರನ್ನು ಶೋಕತಪ್ತರನ್ನಾಗಿಸಿತು. ಈ ಘಟನೆಯ ನಂತರ ಪಂಜಾಬ್‌ನಲ್ಲಿ ಸೈನಿಕ ಆಡಳಿತ ಜಾರಿಗೊಳಿಸಲಾಯಿತು. ಈ ಹತ್ಯಾಕಾಂಡವನ್ನು ವಿರೋಧಿಸಿ ರವೀಂದ್ರನಾಥ ಠಾಗೋರ್ ತಮ್ಮ **'ನೈಟ್‌ಹುಡ್'** ಪದವಿಯನ್ನು ಬ್ರಿಟಿಷ್ ಸರ್ಕಾರಕ್ಕೆ ವಾಪಾಸ್ ಮಾಡಿದರು. ಗಾಂಧಿ, ಅಸಹಕಾರ ಚಳವಳಿಯನ್ನು ಆರಂಭಿಸಲು ಈ ಪ್ರಕರಣವೂ ಕಾರಣವಾಯಿತು. ಮುಗ್ಧ ಭಾರತೀಯ ಹೋರಾಟಗಾರರನ್ನು ಹತ್ಯೆಗೈದ ಮೈಕಲ್–ಒ–ಡಯರ್‌ನನ್ನು ಭಾರತದ ಕ್ರಾಂತಿಕಾರಿ ಉದಮ್‌ಸಿಂಗ್‌ನು ಹತ್ಯೆ ಮಾಡಿದನು.

## ಖಿಲಾಫತ್ ಚಳವಳಿ

ಟರ್ಕಿಯ ಸುಲ್ತಾನರು ಮುಸ್ಲಿಮರ ಧಾರ್ಮಿಕ ಮುಖಂಡರೂ ಆಗಿದ್ದು, ಖಲೀಫರೆಂದು ಕರೆಸಿಕೊಳ್ಳುತ್ತಿದ್ದರು. ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಖಲೀಫರ ಮೇಲೆ ನಡೆಯುತ್ತಿದ್ದ ಬ್ರಿಟಿಷರ ದೌರ್ಜನ್ಯವನ್ನು ಖಂಡಿಸಿ ಮುಸ್ಲಿಮರು ಜಗತ್ತಿನಾದ್ಯಂತ ಪ್ರತಿಭಟಿಸಿದರು. ಅಂತೆಯೇ ಮಹಮದ್ ಅಲಿ ಮತ್ತು ಶೌಕತ್ ಅಲಿ ಸಹೋದರರು ಭಾರತದಲ್ಲಿ ಟರ್ಕರ ಪರವಾದ ಖಿಲಾಫತ್ ಚಳವಳಿಯನ್ನು 1919ರಲ್ಲಿ ಪ್ರಾರಂಭಿಸಿದರು. ಹಿಂದೂ ಮುಸ್ಲಿಮರು ಒಗ್ಗಟ್ಟಾಗಿ ಬ್ರಿಟಿಷರ ವಿರುದ್ಧ ಬಂಡೆದ್ದರೆ ಮಾತ್ರ ಬ್ರಿಟಿಷರು ಹಿಮ್ಮೆಟ್ಟುತ್ತಾರೆ ಎನ್ನುವುದು ಗಾಂಧೀಜಿಯವರ ನಂಬಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಮುಸ್ಲಿಮರ ಸಹಭಾಗಿತ್ವ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಬಹಳ ಮುಖ್ಯ ಎಂದು ಗಾಂಧೀಜಿ ಭಾವಿಸಿದ್ದರು. ಪರಿಣಾಮವಾಗಿ ಗಾಂಧೀಜಿ ಖಿಲಾಫತ್ ಚಳವಳಿಗೆ ತಮ್ಮ ಬೆಂಬಲವನ್ನು ನೀಡಿದರು. ಈ ಚಳವಳಿಯು ಹಿಂದೂ ಮುಸ್ಲಿಮರು ಒಂದುಗೂಡಿ ನಡೆಸಿದ ರಾಷ್ಟ್ರವ್ಯಾಪಿ ಆಂದೋಲನವಾಗಿದೆ. ಅನೇಕ ರಾಷ್ಟ್ರೀಯ ನಾಯಕರು ಮತ್ತು ಕಾಂಗ್ರೆಸ್ ಸಂಘಟನೆಯು ಖಿಲಾಫತ್ ಚಳವಳಿಯ ಬೆಂಬಲಕ್ಕೆ ನಿಂತಿತು.

## ಅಸಹಕಾರ ಚಳವಳಿ

1920 ಸೆಪ್ಟೆಂಬರ್ 4ರಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕಲ್ಕತ್ತಾದ ವಿಶೇಷ ಅಧಿವೇಶನದಲ್ಲಿ ಅಸಹಕಾರ ಚಳವಳಿ ಆರಂಭಿಸಲು ಗೊತ್ತುವಳಿಯೊಂದನ್ನು ಅನುಮೋದಿಸಿತು. ಅಹಿಂಸೆಯ ಮೂಲಕ ಸ್ವರಾಜ್‌ಗಳಿಕೆ, ಬ್ರಿಟಿಷರ ನಿರ್ದಯಿ ಆಡಳಿತದ ವಿಕೃತ ಸ್ವರೂಪನ್ನು ಜನರಿಗೆ ಪರಿಚಯಿಸುವುದು ಹಾಗೂ ಮುಖ್ಯವಾಗಿ ಜಲಿಯನ್‌ವಾಲಾಬಾಗ್ ಹತ್ಯಾಕಾಂಡದಂತಹ ಘಟನೆಗಳು ಭವಿಷತ್ತಿನಲ್ಲಿ ನಡೆಯದಂತೆ ವಿರೋಧಿಸುವುದು, ಬ್ರಿಟಿಷ್ ಆಡಳಿತವನ್ನು ಸಂಪೂರ್ಣ ವಿರೋಧಿಸುವುದು ಪ್ರಮುಖ ಗುರಿಯಾಗಿತ್ತು. ಅದರೊಂದಿಗೆ ರೌಲತ್ ಕಾಯ್ದೆಯನ್ನು ಬ್ರಿಟಿಷ್ ಸರಕಾರ ಹಿಂತೆಗೆದುಕೊಳ್ಳುವುದು ಮತ್ತು ಹೊಸ ರಾಜಕೀಯ ಸುಧಾರಣೆಗಳನ್ನು ಜಾರಿಗೊಳಿಸುವ ಮೂಲಕ ಸ್ವರಾಜ್ಯವನ್ನು ಭಾರತಕ್ಕೆ ನೀಡಬೇಕೆಂಬುದು ಪ್ರಮುಖ ಬೇಡಿಕೆಯಾಗಿತ್ತು.

© KTBS Not to be published

**ಅಸಹಕಾರ ಚಳವಳಿಯ ಪ್ರಮುಖ ಕಾರ್ಯಕ್ರಮಗಳು**

1. ಶಾಲಾ ಕಾಲೇಜುಗಳನ್ನು ಮತ್ತು ನ್ಯಾಯಾಲಯಗಳನ್ನು ಬಹಿಷ್ಕರಿಸುವುದು.
2. 1919ರ ಕಾಯ್ದೆಯನ್ವಯ ಪ್ರಾಂತೀಯ ಶಾಸನ ಸಭೆಗಳಿಗೆ ನಡೆಯುವ ಚುನಾವಣೆಯನ್ನು ಬಹಿಷ್ಕರಿಸುವುದು.
3. ಬ್ರಿಟಿಷರು ನೀಡಿರುವ ಗೌರವ ಪದವಿಗಳನ್ನು ಮತ್ತು ಸ್ಥಾನಗಳನ್ನು ವಾಪಸ್ಸು ಮಾಡುವುದು.
4. ಸ್ಥಳೀಯ ಸಭೆಗಳಿಗೆ ನಾಮನಿರ್ದೇಶನಗೊಂಡ ಸದಸ್ಯರು ರಾಜೀನಾಮೆ ನೀಡುವುದು.
5. ಸರ್ಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸದೆ ಬಹಿಷ್ಕರಿಸುವುದು.
6. ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು.

ಇವುಗಳ ಜೊತೆಗೆ ಅಸಹಕಾರ ಚಳವಳಿಯ ಇತರ ಪ್ರಮುಖ ಕಾರ್ಯ ಯೋಜನೆಗಳೆಂದರೆ; ಕೈಮಗ್ಗದ ನೇಕಾರಿಕೆಯನ್ನು ಉತ್ತೇಜಿಸುವುದು ಮತ್ತು ಖಾದಿಯನ್ನು ತಯಾರಿಸುವುದು, ರಾಷ್ಟ್ರೀಯ ಶಾಲೆಗಳನ್ನು ತೆರೆಯುವುದು, ಹಿಂದೂ ಮತ್ತು ಮುಸ್ಲಿಂರ ನಡುವೆ ಐಕ್ಯತೆಯನ್ನು ಸಾಧಿಸುವುದು, ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು ಮತ್ತು ಮಹಿಳೆಯರನ್ನು ಶೋಚನೀಯ ಸ್ಥಿತಿಯಿಂದ ಪಾರು ಮಾಡಿ ಅವರಲ್ಲಿ ಸಬಲೀಕರಣವನ್ನು ತರುವುದು.


ಅಸಹಕಾರ ಚಳವಳಿ


**ಅಸಹಕಾರ ಚಳವಳಿಯ ಸಂದರ್ಭದಲ್ಲಿ ಆದ ಪ್ರಮುಖ ಬೆಳವಣಿಗೆಗಳು**

1. ದೇಶಬಂಧು ಚಿತ್ತರಂಜನ್‌ದಾಸ್, ಮೋತಿಲಾಲ್ ನೆಹರೂ, ರಾಜೇಂದ್ರ ಪ್ರಸಾದ್ ಮೊದಲಾದ ಹಿರಿಯ ವಕೀಲರು ತಮ್ಮ ವಕೀಲ ವೃತ್ತಿಯನ್ನು ಬಿಟ್ಟರು.
2. ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳನ್ನು ತೊರೆದರು.
3. ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸದೆ ಕಾಂಗ್ರೆಸ್ 1919ರ ಕಾಯ್ದೆಯ ಅಡಿಯಲ್ಲಿ ಪ್ರಾಂತ್ಯಗಳಿಗೆ ನಡೆದ ಚುನಾವಣೆಯನ್ನು ಬಹಿಷ್ಕರಿಸಿತು.
4. ಕಾಶಿ ವಿದ್ಯಾಪೀಠ, ಗುಜರಾತ್ ವಿದ್ಯಾಪೀಠ, ಬಿಹಾರ ವಿದ್ಯಾಪೀಠ ಮತ್ತು ಜಾಮೀಯಾ ಮಿಲಿಯಾ ಇಸ್ಲಾಮಿಯಾ ರಾಷ್ಟ್ರೀಯ ವಿದ್ಯಾಲಯಗಳನ್ನು ಸ್ಥಾಪಿಸಲಾಯಿತು.
5. ರವಿಂದ್ರನಾಥ ಠಾಗೂರರು ತಮ್ಮ 'ನೈಟ್ ವುಡ್' ಪದವಿಯನ್ನು ಬ್ರಿಟಿಷ್ ಸರ್ಕಾರಕ್ಕೆ ಹಿಂದಿರುಗಿಸಿದರು.
6. ಮಹಿಳೆಯರೂ ಸೇರಿದಂತೆ ಜನಸಾಮಾನ್ಯರು ಕಾಂಗ್ರೆಸ್ ಹೋರಾಟಕ್ಕೆ ದೇಣಿಗೆ ನೀಡಿದರು. ವಿದೇಶಿ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗಳ ಮುಂದೆ ಮುಷ್ಕರ ನಡೆಸಲಾಯಿತು ಮತ್ತು ವಿದೇಶಿ ಬಟ್ಟೆಗಳನ್ನು ಸುಡಲಾಯಿತು.
7. 1921ರಲ್ಲಿ 'ಪ್ರಿನ್ಸ್ ಆಫ್ ವೇಲ್ಸ್' ರಾಜಕುಮಾರ ಬರುವ ಕಾರ್ಯಕ್ರಮವನ್ನು ವಿರೋಧಿಸಲಾಯಿತು.

**ಅಸಹಕಾರ ಚಳವಳಿಯ ಪರಿಣಾಮಗಳು:** ಈ ಚಳವಳಿಯ ಪ್ರಮುಖ ಉದ್ದೇಶಗಳು ಕೈಗೂಡದಿದ್ದರೂ ಕೆಲವು ಗಂಭೀರ ಪರಿಣಾಮಗಳನ್ನು ಸೃಷ್ಟಿಸಿತು. ಪ್ರಮುಖವಾಗಿ ರಾಷ್ಟ್ರೀಯ ಹೋರಾಟ ಜನರ ಹೋರಾಟವಾಗಿ ರೂಪಾಂತರವಾಯಿತು. ಕಾಂಗ್ರೆಸ್ ಪ್ರಣೀತ ಚಳವಳಿಯು ಕ್ರಾಂತಿಕಾರಕ ಆಯಾಮಗಳನ್ನು ಪಡೆಯಿತು. ಹಿಂದೂ ಮುಸ್ಲಿಂ ಭ್ರಾತೃತ್ವವನ್ನು ತಾತ್ಕಾಲಿಕವಾಗಿಯಾದರೂ ಸೃಷ್ಟಿಸಿತು. ರಾಷ್ಟ್ರೀಯ ಹೋರಾಟ, ನಗರಗಳನ್ನು ದಾಟಿ ಗ್ರಾಮಾಂತರ ಪ್ರದೇಶಗಳಿಗೂ ಹಬ್ಬಲು ಪ್ರಾರಂಭಿಸಿತು. ಅಸ್ಪೃಶ್ಯತೆ ನಿವಾರಣೆ, ಮಹಿಳೆಯರಿಗೂ ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶ ಮುಂತಾದವು ಗಮನಿಸಲೇಬೇಕಾದ ಪರಿಣಾಮಗಳಾಗಿವೆ.

**ಚೌರಿ ಚೌರ ಘಟನೆ :** ಫೆಬ್ರವರಿ 5, 1922ರಂದು ಉತ್ತರ ಪ್ರದೇಶದ ಗೋರಕ್‌ಪುರ ಜಿಲ್ಲೆಯ ಚೌರಿ ಚೌರ ಎಂಬಲ್ಲಿ ಸುಮಾರು 3000 ರೈತರನ್ನೊಳಗೊಂಡ ದೊಡ್ಡ ಗುಂಪು ಪೊಲೀಸ್ ಸ್ಟೇಷನ್ನಿನ ಮುಂದೆ ಸೇರಿತು. ಅವರ ಪ್ರಮುಖ ಉದ್ದೇಶ ಮದ್ಯದ ಅಂಗಡಿಯ ಮುಂದೆ ಮುಷ್ಕರ ನಡೆಸುತ್ತಿದ್ದ ಕಾಂಗ್ರೆಸ್ ಹೋರಾಟಗಾರರನ್ನು ತಳಿಸಿದ ಪೊಲೀಸ್ ಅಧಿಕಾರಿಯ ವಿರುದ್ಧ ಪ್ರತಿರೋಧವನ್ನು ವ್ಯಕ್ತಪಡಿಸುವುದು. ಇದನ್ನು ಸಹಿಸದ ಪೋಲೀಸರು ಅಲ್ಲಿ ನೆರೆದಿದ್ದವರ ಮೇಲೆ ಗುಂಡು ಹಾರಿಸಲು ಪ್ರಾರಂಭಿಸಿದರು. ಇದು ಜನರನ್ನು ಕೆರಳಿಸಿತು. ಅವರು ಪೊಲೀಸ್ ಸ್ಟೇಷನ್ನಿಗೆ ಬೆಂಕಿ ಇಟ್ಟರು. ಇದರಿಂದಾಗಿ ಒಳಗಡೆ ಇದ್ದ 22 ಪೊಲೀಸರು ಸಜೀವವಾಗಿ ಸುಟ್ಟುಹೋದರು. ಬೇರೆ ಕಡೆಗಳಲ್ಲಿಯೂ ಈ ಬಗೆಯ ಹಿಂಸಾತ್ಮಕ ಘಟನೆಗಳು ನಡೆದವು. ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಗಾಂಧೀಜಿಯವರು ಜನರಿಗೆ ಇನ್ನೂ ಅಹಿಂಸಾತ್ಮಕ ಹೋರಾಟಕ್ಕೆ ಬೇಕಾದ ಸಿದ್ಧತೆ ಮತ್ತು ನೈತಿಕ ಶಕ್ತಿಯ ಕೊರತೆ ಇದೆ ಎಂದು ಭಾವಿಸಿದರು. ಹೀಗಾಗಿ ಫೆಬ್ರವರಿ 12, 1922ರಂದು ಅಸಹಕಾರ ಹೋರಾಟವನ್ನು ಹಿಂತೆಗೆದುಕೊಂಡರು. ಗಾಂಧೀಜಿಯವರು ಜನರನ್ನು ಪ್ರಚೋದಿಸುತ್ತಿದ್ದಾರೆ ಎನ್ನುವ ಆರೋಪದಡಿ ಮಾರ್ಚ್ 10, 1922ರಂದು ಅವರನ್ನು ಬಂಧಿಸಿ 6 ವರ್ಷಗಳ ಕಾರಾಗೃಹ ವಾಸಕ್ಕೆ ಬ್ರಿಟಿಷರು ಕಳುಹಿಸಿದರು. ಆದರೆ ಅವರನ್ನು ಅನಾರೋಗ್ಯದ ಕಾರಣದಿಂದ ಎರಡು ವರ್ಷಗಳ ನಂತರ ಜೈಲಿನಿಂದ ಬಿಡುಗಡೆ ಮಾಡಲಾಯಿತು ಗಾಂಧೀಜಿಯವರ ಈ ತೀರ್ಮಾನದಿಂದ ರಾಜಕೀಯ ಶೂನ್ಯತೆ ಸೃಷ್ಟಿಯಾಯಿತು.

**ಸ್ವರಾಜ್‌ಪಕ್ಷ :** ಅಸಹಕಾರ ಚಳವಳಿಯನ್ನು ಹಿಂತೆಗೆದುಕೊಂಡಿದ್ದರ ಪರಿಣಾಮ ಕಾಂಗ್ರೆಸ್ಸಿಗರಲ್ಲಿ ಉತ್ಸಾಹವನ್ನು ಕುಂದಿಸಿತು. ಸಿ.ಆರ್.ದಾಸ್ ಮತ್ತು ಮೋತಿಲಾಲ್ ನೆಹರೂ ಅವರು ಶಾಸನಸಭೆಗಳನ್ನು ಬಹಿಷ್ಕರಿಸುವುದನ್ನು ಕೊನೆಗೊಳಿಸಿ ಅವುಗಳಿಗೆ ಪ್ರವೇಶ ಮಾಡಬೇಕೆಂದು ವಾದಿಸಿದರು. ಶಾಸನ ಸಭೆಗಳನ್ನು ಪ್ರವೇಶಿಸಿ ಅಲ್ಲಿಯೇ ಕಲಾಪಗಳಿಗೆ ಅಡ್ಡಿಯುಂಟು ಮಾಡಬೇಕು. ಇದರಿಂದ ಸ್ವಾತಂತ್ರ ಚಳವಳಿ ಇನ್ನಷ್ಟು ಗಟ್ಟಿಗೊಳ್ಳುತ್ತದೆ ಎಂದು ವಾದಿಸಿದರು. ಸೆಪ್ಟಂಬರ್ 1923ರಲ್ಲಿ ಸಿ.ಆರ್.ದಾಸ್ ಮತ್ತು ಮೋತಿಲಾಲ್ ನೆಹರೂರಿಂದ ಸ್ವರಾಜ್ ಪಕ್ಷ ಸ್ಥಾಪಿತವಾಯಿತು. ಅದೇ ವರ್ಷ ಅಬ್ದುಲ್ ಕಲಾಂ ಅಜಾದ್ ಅವರ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವರಾಜ್ ಪಕ್ಷದವರು ಚುನಾವಣೆಯಲ್ಲಿ ಸ್ಪರ್ಧಿಸಲು ಒಪ್ಪಿಗೆಯನ್ನು ಪಡೆಯಲಾಯಿತು. ನವೆಂಬರ್ 1923ರಲ್ಲಿ ನಡೆದ ಚುನಾವಣೆಯಲ್ಲಿ ಸ್ವರಾಜ್ ಪಕ್ಷದವರು 101 ಸ್ಥಾನಗಳ ಪೈಕಿ 42 ಸ್ಥಾನಗಳನ್ನು ಗೆದ್ದರು.



**ಮೋತಿಲಾಲ್ ನೆಹರೂ**

### ನಾಗರಿಕ ಕಾಯ್ದೆ ಭಂಗ ಚಳವಳಿಯು ಆರಂಭವಾಗಲು ಕಾರಣವಾದ ಸನ್ನಿವೇಶಗಳು:

1927ರಲ್ಲಿ ಬ್ರಿಟಿಷ್ ಸರ್ಕಾರವು ಸೈಮನ್ ಕಮಿಷನ್ ಅನ್ನು ನೇಮಿಸಿತು. 1919ರಲ್ಲಿ ಜಾರಿಗೊಂಡ ಭಾರತ ಸರ್ಕಾರ ಕಾಯ್ದೆಯ (ಮಾಂಟೆಗ್ಯೂ-ಚೆಮ್ಸ್‌ಫರ್ಡ್ ಕಾಯ್ದೆ) ಅನುಷ್ಠಾನ ಮತ್ತು ಅದರ ಪರಿಣಾಮಗಳನ್ನು ವಿಮರ್ಶಿಸುವ ಸಲುವಾಗಿ ಫೆಬ್ರವರಿ 3, 1928ರಂದು ಸೈಮನ್ ಕಮಿಷನ್ ಭಾರತಕ್ಕೆ ಬಂದಾಗ 'ಸೈಮನ್ ಗೋಬ್ಯಾಕ್' ಎಂಬ ಘೋಷಣೆಯೊಂದಿಗೆ ವ್ಯಾಪಕ ವಿರೋಧ ವ್ಯಕ್ತವಾಯ್ತು. ಮುಂಬೈ, ಲಾಹೋರ್, ಮದ್ರಾಸ್ ಮುಂತಾದ ಕಡೆ ಬಂದ್ ಆಚರಿಸಲಾಯ್ತು. ಲಾಹೋರ್‌ನಲ್ಲಿ ನಡೆದ ಹೋರಾಟದ ಸಂದರ್ಭದಲ್ಲಿ ಲಾಲಾ ಲಜಪತರಾಯ್ ಮೇಲೆ ಲಾಠಿಚಾರ್ಜ್ ಮಾಡಿದ ಕಾರಣ ಅವರು ಮರಣ ಹೊಂದಿದರು. ಇದರಿಂದ ಭಾರತದಲ್ಲಿ ರಾಷ್ಟ್ರೀಯ ಹೋರಾಟ ಇನ್ನೂ ತೀವ್ರವಾಯಿತು.

| |
|---|
| ಲಾಲಾ ಲಜಪತರಾಯ್ ಅವರ ಬಗೆಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ. |

©KTBS Not to be republished

ಬ್ರಿಟಿಷ್ ಸರಕಾರವು ಭಾರತೀಯರಿಗೆ ಪರೋಕ್ಷವಾದ ಸವಾಲೊಂದನ್ನು ಎಸೆಯಿತು. ಎಲ್ಲಾ ರಾಜಕೀಯ ಪಕ್ಷಗಳಿಗೆ ಮತ್ತು ಸಮುದಾಯಗಳಿಗೆ ಒಪ್ಪಿತವಾಗುವ ಸಂವಿಧಾನವೊಂದನ್ನು ರೂಪಿಸುವ ವಿಷಯಕ್ಕೆ ಸಂಬಂಧಿಸಿದ ವರದಿಯೊಂದನ್ನು ಸಿದ್ಧಪಡಿಸುವುದೇ ಆ ಪರೋಕ್ಷ ಸವಾಲು. ಈ ಹಿನ್ನೆಲೆಯಲ್ಲಿ 1928ರಲ್ಲಿ ಮೋತಿಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದು ರಚಿತವಾಗಿ ನೆಹರೂ ವರದಿ ಸಿದ್ಧಗೊಂಡಿತು. ಗಾಂಧಿ ಕೂಡಾ ನೆಹರೂ ಸಮಿತಿಯನ್ನು ಶ್ಲಾಘಿಸಿದರು. ನೆಹರೂ ವರದಿಯು ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ ಜೊತೆಗೆ ಫೆಡರಲ್ ರಾಜ್ಯ ವ್ಯವಸ್ಥೆ, ಅಲ್ಪಸಂಖ್ಯಾತರಿಗೆ ಇದ್ದ ಪ್ರತ್ಯೇಕ ಮತಕ್ಷೇತ್ರಗಳ ಕೊನೆ, ಬ್ರಿಟಿಷ್ ಪ್ರಾಂತ್ಯಗಳನ್ನು ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡನೆ, ಭಾರತೀಯರಿಗೆ ಮೂಲಭೂತ ಹಕ್ಕುಗಳನ್ನು ನೀಡುವುದು, ಭಾರತಕ್ಕೆ ಜನತಾಂತ್ರಿಕ ಪ್ರಜಾಪ್ರಭುತ್ವವನ್ನು ತರುವುದು ಮುಂತಾದವುಗಳನ್ನು ಶಿಫಾರಸ್ಸು ಮಾಡಿತು. ನಂತರ ಬ್ರಿಟಿಷ್ ಲೇಬರ್ ಪಕ್ಷದ ಪ್ರಧಾನಿ ರ್‍ಯಾಮ್‌ಸೇ ಮ್ಯಾಕ್‌ಡೊನಾಲ್ಡ್ ವೈಸ್‌ರಾಯ್ ಲಾರ್ಡ್ ಇರ್ವಿನ್ ಅವರ ಜೊತೆ ಮಾತುಕತೆ ನಡೆಸಿ ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ ನೀಡುವುದನ್ನು ಪರಿಶೀಲಿಸುವುದಾಗಿ ಘೋಷಿಸಿದನು.

ನಂತರದಲ್ಲಿ ಆದ ಮುಖ್ಯ ಬೆಳವಣಿಗೆಯೆಂದರೆ 1929ರ ಲಾಹೋರ್ ಕಾಂಗ್ರೆಸ್ ಅಧಿವೇಶನ ಸಮಾವೇಶಗೊಂಡಿದ್ದು. ಈ ಸಮ್ಮೇಳನವು ಭಾರತೀಯ ರಾಷ್ಟ್ರೀಯ ಹೋರಾಟಕ್ಕೆ ಮತ್ತಷ್ಟು ತೀವ್ರತೆಯನ್ನು ತಂದುಕೊಟ್ಟಿತು. ಜವಾಹರಲಾಲ್ ನೆಹರೂ ಅಧ್ಯಕ್ಷತೆಯಲ್ಲಿ, ನಡೆದ ಅಧಿವೇಶನದಲ್ಲಿ ಕಾಂಗ್ರೆಸ್ ಮತ್ತು ರಾಷ್ಟ್ರೀಯ ಹೋರಾಟದ ಪರಮಗುರಿಯಾದ **'ಪೂರ್ಣ ಸ್ವರಾಜ್'** ಅನ್ನು ಅಂಗೀಕರಿಸಲಾಯಿತು. 1930, ಜನವರಿ 26 ಅನ್ನು ಸ್ವಾತಂತ್ರ್ಯ ದಿನವೆಂದು ಘೋಷಿಸಲಾಯಿತು. ಈ ಅಧಿವೇಶನವು ಬ್ರಿಟಿಷರ ವಿರುದ್ಧ ಹಮ್ಮಿಕೊಳ್ಳಲಾಗುವ ಕಾನೂನುಭಂಗ ಚಳವಳಿಯ ಪೂರ್ಣ ಜವಾಬ್ದಾರಿಯನ್ನು ಗಾಂಧೀಜಿಯವರಿಗೆ ವಹಿಸಿತು. ಆ ಚಾರಿತ್ರಿಕ ದಿನದ ಮಹತ್ವವನ್ನು ಎತ್ತಿ ಹಿಡಿಯಲೆಂದೇ ಸ್ವತಂತ್ರ ಭಾರತದ ಸಂವಿಧಾನವನ್ನು ಜನವರಿ 26, 1950 ರಂದು ಅಂಗೀಕರಿಸಿದ್ದು.

© KTBS
Not to be published

### ಸವಿನಯ ಕಾನೂನುಭಂಗ ಚಳವಳಿ

1930 ಫೆಬ್ರವರಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಬರ್‌ಮತಿಯಲ್ಲಿ ಸಭೆ ಸೇರಿ ಕಾನೂನುಭಂಗ ಚಳವಳಿಯನ್ನು ಹಮ್ಮಿಕೊಳ್ಳಲು ನಿರ್ಣಯಿಸಿತು. ಗಾಂಧಿ ಮಾರ್ಚ್ 2, 1930 ರಂದು ಹನ್ನೊಂದು ಅಂಶಗಳುಳ್ಳ ಬೇಡಿಕೆಗಳ ಪತ್ರವನ್ನು ವೈಸ್‌ರಾಯ್‌ಗೆ ಬರೆದರು. ಒಂದು ವೇಳೆ ಸರ್ಕಾರ ಇದಕ್ಕೆ ತಪ್ಪಿದ್ದಲ್ಲಿ, ತೆರಿಗೆ ನಿರಾಕರಣೆಯ ಜತೆ ನಾಗರಿಕ ಕಾನೂನುಭಂಗ ಚಳವಳಿಯನ್ನು ಆರಂಭಿಸುವುದಾಗಿ ಗಾಂಧಿ ಘೋಷಿಸಿದರು. ವೈಸ್‌ರಾಯ್ ಈ ಪತ್ರದ ಮನವಿಗಳನ್ನು ತಿರಸ್ಕರಿಸಿದ ಕಾರಣದಿಂದ 1930 ಮಾರ್ಚ್ 12ರಂದು ಅನುಯಾಯಿಗಳೊಂದಿಗೆ ಸಬರಮತಿ ಆಶ್ರಮದಿಂದ ಗುಜರಾತ್‌ನ ಕಡಲತೀರ ದಂಡಿಯವರೆಗೆ ಸುಮಾರು 375 ಕಿ.ಮೀ. ದೂರವನ್ನು ಕ್ರಮಿಸಿದರು. ಏಪ್ರಿಲ್ 6ರಂದು ಗಾಂಧಿ ದಂಡಿಯನ್ನು ತಲುಪಿ ಬ್ರಿಟಿಷರು ಹೇರಿದ ದಂಡಿಯಲ್ಲಿ ಉಪ್ಪನ್ನು ತಯಾರಿಸುವ ಮೂಲಕ ಉಪ್ಪಿನ ಕಾನೂನನ್ನು ಮುರಿದರು. ಚರಕ ಈ ಚಳವಳಿಯಲ್ಲಿ ಬಹಳ ಪ್ರಸಿದ್ಧವಾಯಿತು. ಸಾವಿರಾರು ಜನರು ಗಾಂಧೀಜಿಯವರ ಕರೆಗೆ ಸ್ಪಂದಿಸಿ, ಚಳವಳಿಯಲ್ಲಿ ಭಾಗವಹಿಸಿದರು. ಉಪ್ಪಿನ ಸತ್ಯಾಗ್ರಹದ ನಂತರ ಏಪ್ರಿಲ್ 6ರಿಂದ 13ರ ವರೆಗೆ ರಾಷ್ಟ್ರೀಯ ಚಳವಳಿ ಸಪ್ತಾಹವನ್ನು ಆಚರಿಸಿದರು.



**ಉಪ್ಪಿನ ಸತ್ಯಾಗ್ರಹ**

ಕಾನೂನುಭಂಗ ಚಳವಳಿಯಲ್ಲಿ ಗಾಂಧೀಜಿಯವರೊಂದಿಗೆ ಭಾಗವಹಿಸಿದ ವಿಜಯಲಕ್ಷ್ಮಿ ಪಂಡಿತ್, ಕಮಲಾ ನೆಹರೂ, ವಲ್ಲಭಬಾಯಿ ಪಟೇಲ್, ರಾಜಗೋಪಾಲಚಾರಿ, ಬಾಬು ರಾಜೇಂದ್ರಪ್ರಸಾದ್ ಮೊದಲುಗೊಂಡು ಸಾವಿರಾರು ಜನರನ್ನು ಬ್ರಿಟಿಷರು ಬಂಧಿಸಿದರು. ಈ ಚಳವಳಿಯು ದೇಶದ ನಾನಾ ಭಾಗಗಳಲ್ಲಿ ವ್ಯಾಪಿಸಿತು.

**ನಿಮಗಿದು ತಿಳಿದಿರಲಿ :**

- ಸಬರಮತಿಯಿಂದ ದಂಡಿಯವರೆಗೆ ನಡೆದ ತಂಡದಲ್ಲಿ ಕರ್ನಾಟಕದ 18 ವರ್ಷದ ತರುಣ ಮೈಲಾರ ಮಹಾದೇವಪ್ಪ ಸಹ ಇದ್ದದ್ದು ಇದರ ವಿಶೇಷ.
- ಕರ್ನಾಟಕ ಕಾಂಗ್ರೆಸ್ ಕೂಡ ಆರ್. ಆರ್. ದಿವಾಕರ್, ಕೌಜಲಗಿ ಹನುಮಂತರಾಯರು, ಗಂಗಾಧರ ದೇಶಪಾಂಡೆ, ಹರ್ಡೀಕರ್ ಮಂಜಪ್ಪ ಮತ್ತು ಕಾರ್ನಾಡು ಸದಾಶಿವರಾಯರನ್ನೊಳಗೊಂಡ ಸತ್ಯಾಗ್ರಹ ಸಮಿತಿಯನ್ನು ರಚಿಸಿ ಕಾರವಾರ ಜಿಲ್ಲೆಯ ಅಂಕೋಲ ತಾಲ್ಲೂಕಿನಲ್ಲಿ ಉಪ್ಪಿನ ಸತ್ಯಾಗ್ರಹ ಪ್ರಾರಂಭಿಸಿತು.

ಇದರ ನಡುವೆ ಈ ಹಿಂದೆ ಪ್ರಸ್ತಾಪಿಸಿದಂತೆ ಲಂಡನ್ನಿನಲ್ಲಿ ಭಾರತೀಯ ಜನಪ್ರತಿನಿದಿಗಳ ಸಮಾವೇಶವನ್ನು 1930ರಲ್ಲಿ ಕರೆಯಲಾಯಿತು. ಇದು ಮೊದಲನೆಯ ದುಂಡು ಮೇಜಿನ ಪರಿಷತ್ ಸಮಾವೇಶ. ಇದರಿಂದ ಭಾರತೀಯರನ್ನು ಹೊರತುಪಡಿಸಿ ಸರ್ಕಾರ ಏಕಮುಖವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂಬುದು ವ್ಯಕ್ತವಾಯಿತು. ಈ ಸಮಾವೇಶದಲ್ಲಿ ಮೊಟ್ಟಮೊದಲನೆಯ ಬಾರಿಗೆ ಅಸ್ಪೃಶ್ಯ ಸಮುದಾಯವನ್ನು ಪ್ರತ್ಯೇಕವಾಗಿ ಪ್ರತಿನಿಧಿಸುವ ಅವಕಾಶವನ್ನು ಕಲ್ಪಿಸಲಾಗಿತ್ತು. ಈ ಸಮಾವೇಶದಲ್ಲಿ ಭಾಗವಹಿಸಲು ಆ ಸಂದರ್ಭದಲ್ಲಿ ಬಂಧಿತರಾಗಿದ್ದ ಗಾಂಧೀಜಿ ಮತ್ತು ಹಲವು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನಾಯಕರನ್ನು ಬಿಡುಗಡೆಗೊಳಿಸಲಾಯಿತು. ಆದರೆ ಕಾಂಗ್ರೆಸ್ ಮತ್ತು ಗಾಂಧೀಜಿಯವರು ಈ ಸಮಾವೇಶದಲ್ಲಿ ಭಾಗವಹಿಸಲು ನಿರಾಕರಿಸಿದರು. ಈ ಸಮಾವೇಶದಲ್ಲಿ ದೇಶೀಯ ಸಂಸ್ಥಾನದ ಪ್ರತಿನಿಧಿಗಳು, ವಿವಿಧ ಸಮುದಾಯದ ಮುಖಂಡರುಗಳಾಗಿದ್ದ ಡಾ. ಬಿ.ಆರ್.ಅಂಬೇಡ್ಕರ್, ಎಂ.ಆರ್. ಜಯಕರ್, ತೇಜಬಹದ್ದೂರ್ ಸಪ್ರು, ಮಹಮದ್ ಅಲಿ ಜಿನ್ನಾ, ಶ್ರೀನಿವಾಸ ಶಾಸ್ತ್ರಿ ಮೊದಲಾದವರು ಭಾಗವಹಿಸಿದ್ದರು. ಡೊಮಿನಿಯನ್ ಸ್ಟೇಟಸ್, ಜವಾಬ್ದಾರಿಯುತ ಸರ್ಕಾರ ಮತ್ತು ಮತೀಯ ಪ್ರಾತಿನಿಧ್ಯಗಳನ್ನು ಕುರಿತಂತೆ ಈ ಸಮಾವೇಶದಲ್ಲಿ ಸಮ್ಮತಿಸಲಾಯಿತು. ಆದರೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮೊದಲನೆಯ ದುಂಡು ಮೇಜಿನ ಪರಿಷತ್ತಿನ ಸಮಾವೇಶದಲ್ಲಿ ಭಾಗವಹಿಸದ ಹಿನ್ನೆಲೆಯಲ್ಲಿ ಸಮಾವೇಶವು ಪೂರ್ಣಗೊಳ್ಳಲಿಲ್ಲ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮನವೊಲಿಸಿ ದುಂಡು ಮೇಜಿನ ಸಮಾವೇಶದ ಉದ್ದೇಶವನ್ನು ಯಶಸ್ವಿಗೊಳಿಸುವ ದೃಷ್ಟಿಯಿಂದ ಗಾಂಧಿ ಮತ್ತು ವೈಸರಾಯ್ ಇರ್ವಿನ್ ನಡುವೆ ಒಪ್ಪಂದವೊಂದು ಮಾರ್ಚ್ 1931ರಲ್ಲಿ ಜರುಗಿತು. ಇದನ್ನು ಗಾಂಧೀ–ಇರ್ವಿನ್ ಒಪ್ಪಂದ ಎಂದು ಕರೆಯುತ್ತಾರೆ. ಪರಿಣಾಮವಾಗಿ ಕಾಂಗ್ರೆಸ್ ಪಕ್ಷವು ಸವಿನಯ ಕಾನೂನುಭಂಗ ಚಳವಳಿಯನ್ನು ನಿಲ್ಲಿಸಿ ಎರಡನೆಯ ದುಂಡುಮೇಜಿನ ಪರಿಷತ್ತಿನ ಸಮಾವೇಶದಲ್ಲಿ ಭಾಗವಹಿಸಲು ನಿರ್ಧರಿಸಿತು. ಮಹಾತ್ಮ ಗಾಂಧೀಜಿ ಮತ್ತು ಡಾ.ಬಿ.ಆರ್. ಅಂಬೇಡ್ಕರ್‌ರವರು ಈ ಸಭೆಯಲ್ಲಿ ಭಾಗವಹಿಸಿದ್ದರು.

ಎರಡನೆಯ ದುಂಡು ಮೇಜಿನ ಸಮಾವೇಶದಲ್ಲಿ ಅಂಬೇಡ್ಕರ್‌ರವರು ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವ ಪ್ರಸ್ತಾಪ ಮುಂದಿಟ್ಟರು. ಈ ಪ್ರಸ್ತಾಪವನ್ನು ಗಾಂಧೀಜಿಯವರು ಒಪ್ಪಲಿಲ್ಲ. ಇದರಿಂದ ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ನಡುವೆ ತಾತ್ವಿಕ ಭಿನ್ನಾಭಿಪ್ರಾಯ ಉಂಟಾಯಿತು. ಹೀಗಾಗಿ ಎರಡನೆಯ ದುಂಡು ಮೇಜಿನ ಪರಿಷತ್ತು ಸಮಾವೇಶ ಕೂಡ ಯಾವುದೇ ತೀರ್ಮಾನವಿಲ್ಲದೆ ಮುಕ್ತಾಯಗೊಂಡಿತು. ಆದರೆ ಬ್ರಿಟಿಷ್ ಸರ್ಕಾರವು ಅಸ್ಪೃಶ್ಯರನ್ನು ಪ್ರತ್ಯೇಕ ಮತಕ್ಷೇತ್ರವಾಗಿ ಪರಿಗಣಿಸುವುದಾಗಿ ಘೋಷಿಸಿತು. ಇದರಿಂದಾಗಿ ಆ ವರ್ಗಕ್ಕೆ ನೀಡುವ ಪ್ರತ್ಯೇಕ ಮತಕ್ಷೇತ್ರಕ್ಕೆ ಸಂಬಂಧಿಸಿದ 'ಮತೀಯ ಮಸೂದೆ'ಗೆ 1932ರಲ್ಲಿ ಚಾಲ್ತಿ ನೀಡಿದರು. ಇದನ್ನು ವಿರೋಧಿಸಿ ಮಹಾತ್ಮ ಗಾಂಧೀಜಿಯವರು ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಈ ಸಮಯದಲ್ಲಿ ಅಂಬೇಡ್ಕರ್ ಅವರ ಮನವೊಲಿಸುವ ಪ್ರಯತ್ನಗಳು ನಡೆದವು. ಇದರ ಫಲವಾಗಿ ಪೂನಾ ಒಪ್ಪಂದವಾಯಿತು. ಇದರ ಪ್ರಕಾರ ಪ್ರತ್ಯೇಕ ಮತಕ್ಷೇತ್ರದ ಬದಲಾಗಿ ಸಾಮಾನ್ಯ ಮತಕ್ಷೇತ್ರಗಳಲ್ಲಿಯೇ ಕೆಲವು ಕ್ಷೇತ್ರಗಳನ್ನು ಅಸ್ಪೃಶ್ಯರಿಗೆ ಮೀಸಲಿಡಲಾಯಿತು. ಅಂತಹ ಕಡೆಗಳಲ್ಲಿ ಅಸ್ಪೃಶ್ಯ ಪ್ರತಿನಿಧಿ ಎಲ್ಲಾ ಜನರ

© KTBS Not to be republished

ಪ್ರತಿನಿಧಿಯಾಗಿರುತ್ತಿದ್ದರು. ಪ್ರತ್ಯೇಕ ಮತಕ್ಷೇತ್ರಕ್ಕೆ ಬದಲಾಗಿ ಕೆಲವು ಕ್ಷೇತ್ರಗಳು ಅಸ್ಪೃಶ್ಯರಿಗಾಗಿ ನಿಮ್ನ ವರ್ಗಗಳಿಗೆ ಕಾದಿರಿಸಲ್ಪಟ್ಟವು.

ಬ್ರಿಟಿಷ್ ಸರ್ಕಾರವು ಕೇಂದ್ರದಲ್ಲಿ ಒಕ್ಕೂಟ ಸ್ವರೂಪದ ಸರ್ಕಾರ, ರಾಜ್ಯಗಳಲ್ಲಿ ಪ್ರಾಂತೀಯ ಸರ್ಕಾರವನ್ನು ರಚಿಸಲು ಸೂಚಿಸಿತು. ಈ ಹಿನ್ನೆಲೆಯಲ್ಲಿ ಮೂರನೆಯ ದುಂಡು ಮೇಜಿನ ಪರಿಷತ್ತಿನ ಸಮಾವೇಶವನ್ನು 1932ರಲ್ಲಿ ಕರೆಯಿತು. ಸರ್ಕಾರವು ಪ್ರಸ್ತಾಪಿಸಿದ ವ್ಯವಸ್ಥೆಯನ್ನು ಧಿಕ್ಕರಿಸಿ ಕಾಂಗ್ರೆಸ್ ಸಮಾವೇಶದಲ್ಲಿ ಭಾಗವಹಿಸಲಿಲ್ಲ. ದುಂಡು ಮೇಜಿನ ಪರಿಷತ್ತುಗಳ ಪರಿಣಾಮವಾಗಿ ಬ್ರಿಟಿಷ್ ಸರ್ಕಾರವು 1935ರ ಭಾರತ ಸರ್ಕಾರ ಶಾಸನವನ್ನು ಜಾರಿಗೊಳಿಸಿತು. ಈ ಶಾಸನವು ಭಾರತ ಒಕ್ಕೂಟ ರಚನೆ ಮತ್ತು ಪ್ರಾಂತೀಯ ಸ್ವಾಯತ್ತತೆಯ ಅವಕಾಶಗಳನ್ನು ಕಲ್ಪಿಸಿತ್ತು. ಭಾರತೀಯರಿಗೆ ರಾಜಕೀಯ ಹಕ್ಕುಗಳು ದೊರೆತವು. ಇದರಿಂದಾಗಿ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ಚುನಾವಣೆಯಲ್ಲಿ ಸ್ಪರ್ಧಿಸಿದವು. ಕಾಂಗ್ರೆಸ್ ಬಹುಮತ ಪಡೆದು ಒಕ್ಕೂಟ ಸರ್ಕಾರವನ್ನು ರಚಿಸಿತು. ಈ ವೇಳೆಗೆ ಎರಡನೆಯ ಮಹಾಯುದ್ಧ ಆರಂಭಗೊಂಡಾಗ ಯುರೋಪಿನ ರಾಜಕೀಯ ವಿದ್ಯಮಾನಗಳ ಹಿನ್ನೆಲೆಯಲ್ಲಿ ಭಾರತದ ವೈಸ್‌ರಾಯ್ ಏಕಪಕ್ಷೀಯವಾಗಿ ಭಾರತದ ಪರವಾಗಿ ಜರ್ಮನಿಯ ವಿರುದ್ಧ ಯುದ್ಧ ಘೋಷಿಸಿದನು. ಇದನ್ನು ಕಾಂಗ್ರೆಸ್ ಪ್ರತಿಭಟಿಸಿ ಮಂತ್ರಿ ಮಂಡಲದಿಂದ ಹೊರಬಂದಿತು. ವೈಸ್‌ರಾಯನ ತೀರ್ಮಾನವನ್ನು ವಿರೋಧಿಸಿ ಗಾಂಧೀಜಿ ವೈಯಕ್ತಿಕ ಸತ್ಯಾಗ್ರಹ ಸಾರಿದರು. ಆಗ ಭಾರತೀಯರನ್ನು ತೃಪ್ತಿಪಡಿಸಲು ಸ್ಟ್ರಾಫರ್ಡ್ ಕ್ರಿಪ್ಸ್ ಅವರನ್ನು ಸಂಧಾನಕ್ಕಾಗಿ ಕಳುಹಿಸಲಾಯಿತು.


**ಕ್ವಿಟ್ ಇಂಡಿಯಾ ಚಳವಳಿ (1942):**




ಕ್ವಿಟ್ ಇಂಡಿಯಾ ಚಳವಳಿ

ಬ್ರಿಟಿಷ್ ಸರ್ಕಾರವು ಭಾರತೀಯ ನಾಯಕರೊಂದಿಗೆ ಸಂಧಾನಕ್ಕಾಗಿ ಕಳುಹಿಸಿದ್ದ ಸ್ಟ್ರಾಫರ್ಡ್ ಕ್ರಿಪ್ಸ್ ಆಯೋಗವು 1942ರಲ್ಲಿ ಕೆಲವು ಸಲಹೆಗಳನ್ನು ಭಾರತೀಯರ ಮುಂದಿಟ್ಟಿತು. ಈ ಆಯೋಗವು ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ ನೀಡುವುದು, ಅದಕ್ಕಾಗಿ ಸಂವಿಧಾನ ರಚಿಸಲು ಸಭೆ ಕರೆಯುವುದು, ಹೊಸ ಸಂವಿಧಾನದಲ್ಲಿ ಭಾರತ ಒಕ್ಕೂಟವನ್ನು ಸೇರುವ ಅಥವಾ ಬಿಡುವ ಸ್ವಾತಂತ್ರ್ಯವನ್ನು ಸಂಬಂಧಿಸಿದ ರಾಜ್ಯಗಳಿಗೆ ಬಿಡುವಂತಹ ಸಲಹೆಗಳನ್ನು ನೀಡಿತು. ಈ ಸಲಹೆಗಳನ್ನು ಕಾಂಗ್ರೆಸ್ ಒಪ್ಪದೆ ಕ್ವಿಟ್ ಇಂಡಿಯಾ ಚಳವಳಿಗೆ ಕರೆ ನೀಡಿತು. 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎನ್ನುವುದು ಕ್ವಿಟ್ ಇಂಡಿಯಾ ಚಳವಳಿಯ ಆಶಯವಾಗಿತ್ತು.

ಗಾಂಧೀಜಿಯವರು ದೇಶಬಾಂಧವರಿಗೆ 'ಮಾಡು ಇಲ್ಲವೇ ಮಡಿ' ಎನ್ನುವ ಕರೆ ನೀಡಿದರು. ಈ ಕರೆ ನೀಡಿದ ಹಿನ್ನೆಲೆಯಲ್ಲಿ ಗಾಂಧೀಜಿ, ನೆಹರು, ರಾಜೇಂದ್ರಪ್ರಸಾದ್, ಅಬುಲ್ ಕಲಾಂ ಅಜಾದ್, ಸರ್ದಾರ್ ವಲ್ಲಭಭಾಯಿ ಪಟೇಲ್, ಆಚಾರ್ಯ ಕೃಪಲಾನಿ, ಕಸ್ತೂರಬಾ ಗಾಂಧಿ ಮೊದಲಾದ ನಾಯಕರನ್ನು ಬ್ರಿಟಿಷ್ ಸರ್ಕಾರವು ಬಂಧಿಸಿ ಜೈಲಿನಲ್ಲಿಟ್ಟಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬಹುತೇಕ ನಾಯಕರು ಬಂಧನದಲ್ಲಿದ್ದ ಕಾರಣ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸೇತರ ಸಂಘಟನೆಗಳು ಮುಖ್ಯ ಭೂಮಿಕೆಯಲ್ಲಿದ್ದವು. ಹೊಸನಾಯಕರುಗಳ



ವಲ್ಲಭಬಾಯಿ ಪಟೇಲ್



ಮೌಲಾನ ಅಬುಲ್ ಕಲಾಂ ಅಜಾದ್

ಉದಯಕ್ಕೆ ಈ ಹೋರಾಟವು ಎಡೆ ಮಾಡಿಕೊಟ್ಟಿತು. ಈ ಸಂದರ್ಭದಲ್ಲಿ ಚಳವಳಿಯ ನೇತೃತ್ವವನ್ನು ಜಯಪ್ರಕಾಶ್ ನಾರಾಯಣರವರು ವಹಿಸಿಕೊಂಡರು. ಇವರು ಕಾಂಗ್ರೆಸ್‌ನ ಸಮಾಜವಾದಿ ಬಣದ ಪ್ರಮುಖ ನಾಯಕರಾಗಿದ್ದರು. ಇವರು ತಮ್ಮ ಬೆಂಬಲಿಗರೊಡನೆ ದೇಶದ ವಿವಿಧೆಡೆಯಲ್ಲಿ ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ತೊಡಗಿದರು. ಸಮಾಜವಾದಿಗಳು 'ದಿ ಫ್ರೀಡಂ ಸ್ಟ್ರಗಲ್ ಫ್ರಂಟ್' ಎಂಬ ದಾಖಲೆ (Document) ಮೂಲಕ ತಮ್ಮ ಕಾರ್ಯತಂತ್ರವನ್ನು ಅನುಷ್ಠಾನಕ್ಕೆ ತಂದರು. ಈ ಮೂಲಕ ಅವರು ಕಾರ್ಮಿಕರಿಗೆ ತರಬೇತಿಯನ್ನು ನೀಡಿದರು. ಜನತೆಗೆ ಹೋರಾಟದಲ್ಲಿ ಭಾಗವಹಿಸಲು ಕರೆಯನ್ನಿತ್ತರು. ಹಣವನ್ನು ಕ್ರೋಢೀಕರಿಸಿದರು. ಈ ಮೂಲಕವಾಗಿ ದಿಕ್ಕೆಟ್ಟ ಹೋರಾಟಕ್ಕೆ ದಿಕ್ಕು ಕೊಟ್ಟವರು ಇವರೇ. ಕುತೂಹಲದ ಸಂಗತಿಯೆಂದರೆ ಇದೇ ಸಂದರ್ಭದಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟವು ಭಾರತದ ಗಡಿಯ ಹೊರಗೂ ಪ್ರಾರಂಭವಾಯಿತು. ಈ ದಿಸೆಯಲ್ಲಿ ಸುಭಾಷ್‌ಚಂದ್ರ ಬೋಸ್‌ರವರ ಪ್ರಯತ್ನ ಅದ್ವಿತೀಯವಾದದ್ದು. 1937ರ ಚುನಾವಣೆಗಳ ನಂತರ ಸರ್ಕಾರದ ಪಾಲ್ಗೊಳ್ಳುವಿಕೆಯಲ್ಲಿ ಮುಸ್ಲಿಂ ಲೀಗನ್ನು ಸರ್ಕಾರ ರಚನೆಯಿಂದ ಕೈಬಿಡಲಾಗಿತ್ತು. 1939ರಲ್ಲಿ ಭಾರತ ಸರ್ಕಾರವು ಏಕಮುಖವಾಗಿ ಎರಡನೆಯ ಮಹಾಯುದ್ಧಕ್ಕೆ ಭಾರತವನ್ನು ಭಾಗಿ ಮಾಡಿದ ಸಂದರ್ಭದಲ್ಲಿ ಮಂತ್ರಿಮಂಡಲದಲ್ಲಿದ್ದ ಕಾಂಗ್ರೆಸಿಗರೆಲ್ಲರು ಹೊರಬಂದಾಗ ಮುಸ್ಲಿಂ ಲೀಗ್ 'ವಿಮುಕ್ತಿ ದಿವಸ'ವನ್ನು ಆಚರಿಸಿತು. ಹೀಗಾಗಿ ಮುಸ್ಲಿಂ ಲೀಗ್ ಭಾರತ ಬಿಟ್ಟು ತೊಲಗಿ ಆಂದೋಲನದಲ್ಲಿ ಭಾಗವಹಿಸಲಿಲ್ಲ. ಅದು ಭಾರತದ ವಿಭಜನೆಯ ಪ್ರಸ್ತಾಪವನ್ನು ಮುಂದಿಟ್ಟಿತು.

**ನಿಮಗಿದು ತಿಳಿದಿರಲಿ :**

***ಈಸೂರು ಘಟನೆ :*** *ಮೈಸೂರು ಸಂಸ್ಥಾನದ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಹತ್ತಿರದ ಒಂದು ಹಳ್ಳಿ ಈಸೂರು. ಸ್ವಾತಂತ್ರ್ಯ ಚಳವಳಿಯಲ್ಲಿ ಸ್ಥಾನವನ್ನು ಪಡೆದಿರುವ ಈ ಹಳ್ಳಿಗೆ 'ಸ್ವತಂತ್ರ ಹಳ್ಳಿ' ಎಂಬ ಹೆಸರನ್ನೂ ಇಡಲಾಯಿತು. ಇಲ್ಲಿ ಎಲ್ಲರೂ ಗಾಂಧಿ ಟೋಪಿ ಧರಿಸುತ್ತಿದ್ದರು. ಅಧಿಕಾರಿಗಳಿಗೆ ಹಳ್ಳಿಯ ಪ್ರವೇಶಕ್ಕೆ ನಿಷೇಧ ಇತ್ತು. ಆದರೆ 1942ರಲ್ಲಿ ಭೇಟಿ ನೀಡಿದ ಅಧಿಕಾರಿಗಳಿಗೆ ಗಾಂಧಿ ಟೋಪಿ ಧರಿಸಲು ಹಳ್ಳಿಗರು ಒತ್ತಾಯಿಸಿದರು. ಇದನ್ನು ವಿರೋಧಿಸಿದ ಅಧಿಕಾರಿಗಳ ಜೊತೆಯಲ್ಲಿದ್ದ ಪೊಲೀಸನು ಜನರತ್ತ ಗುಂಡು ಹಾರಿಸಿದನು. ಇದರಿಂದ ರೊಚ್ಚಿಗೆದ್ದ ಜನರು ಅವರುಗಳನ್ನು ಹತ್ಯೆ ಮಾಡಿದರು. ಇದನ್ನು ಚರಿತ್ರೆಯಲ್ಲಿ ಈಸೂರು ಘಟನೆ ಎಂದು ಕರೆಯುತ್ತಾರೆ.*

## ರೈತರು ಮತ್ತು ಕಾರ್ಮಿಕರ ಪ್ರತಿಭಟನೆ

ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತ ಕಾರ್ಮಿಕ ಸಂಘಟನೆಗಳ ಪ್ರತಿಭಟನೆಗಳು ಕೂಡಾ ಪ್ರಮುಖವಾಗಿವೆ. ಈ ಸಂಘಟನೆಗಳಲ್ಲಿ ಕೆಲವು ರಾಷ್ಟ್ರೀಯ ಕಾಂಗ್ರೆಸ್‌ನಿಂದ ಪ್ರಭಾವಿತವಾಗಿದ್ದರೆ, ಇನ್ನು ಕೆಲವು ಸಂಘಟನೆಗಳು ಮಾರ್ಕ್ಸ್‌ವಾದದಿಂದ ಪ್ರಭಾವಿತವಾಗಿದ್ದವು. ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಜಮೀನ್ದಾರರು ಮತ್ತು ಯುರೋಪಿಯನ್ ಪ್ಲಾಂಟರ್‌ಗಳ ವಿರುದ್ಧ ರೈತರು ಹಲವಾರು ಕಡೆ ದಂಗೆ ನಡೆಸಿದರು. ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆಯುವುದನ್ನು ವಿರೋಧಿಸಿದರು. ಭೂಕಂದಾಯದ ವಿರುದ್ಧ ಹರತಾಳ ನಡೆಸಿದರು. ಗಾಂಧೀಜಿಯವರು ಸತ್ಯಾಗ್ರಹದ ಮೂಲಕ ಬ್ರಿಟಿಷ್ ಅಧಿಕಾರಿಗಳ ಮನವೊಲಿಸಿ ತೆರಿಗೆ ರದ್ದುಗೊಳಿಸಿದರು.

ರಾಷ್ಟ್ರೀಯ ಹೋರಾಟದ ಭಾಗವಾಗಿ ರೈತರನ್ನು ಸಂಘಟಿಸುವ ಪ್ರಯತ್ನವನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮಾಡಿತು. ಚಂಪಾರಣ್ಯ, ಖೇಡಾ, ಮೊದಲಾದ ಪ್ರದೇಶಗಳ ರೈತರ ಕಾರ್ಯ ಚಟುವಟಿಕೆಗಳಲ್ಲಿ ಗಾಂಧೀಜಿಯವರ ಪ್ರಭಾವವಿತ್ತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪ್ರಭಾವದಿಂದ ತೇಭಾಗ, ಮಲಬಾರ್ ಮೊದಲಾದೆಡೆ ಶೋಷಣೆಗೊಳಗಾಗಿದ್ದ ರೈತರು ತೀವ್ರವಾಗಿ ಜಮೀನ್ದಾರರು ಹಾಗೂ ಬ್ರಿಟಿಷರ ವಿರುದ್ಧ ಬಂಡೆದ್ದರು. ಅಸಹಕಾರ ಆಂದೋಲನ, ಕರ ನಿರಾಕರಣೆ, ಕ್ವಿಟ್ ಇಂಡಿಯಾ ಚಳವಳಿಗಳಲ್ಲಿ ರೈತರ ಸಮಸ್ಯೆಗಳು ಬೆರೆತವು. ಹಲವಾರು ಹೋರಾಟಗಳು ಎಡಪಂಥೀಯ ವಿಚಾರಧಾರೆಗಳಿಂದ ರಚನೆಗೊಂಡ ಕಿಸಾನ್ ಸಭಾದಡಿಯಲ್ಲಿ ಸಂಘಟಿತವಾದವು. ಹೋರಾಟಗಳು ಕೆಲವೊಮ್ಮೆ ಕಾಂಗ್ರೆಸ್‌ನೊಂದಿಗೆ ಮತ್ತು ಕೆಲವೊಮ್ಮೆ

© KTBS Not to be published

ಕಾಂಗ್ರೆಸ್ ವಿರುದ್ಧವಾದ ನಿಲುವನ್ನು ಹೊಂದುತ್ತಿದ್ದವು. ತೆಲಂಗಾಣದ ರೈತ ಹೋರಾಟವು ಜಮೀನ್ದಾರರು ಹಾಗೂ ನಿಜಾಮನ ರಜಾಕರ ವಿರುದ್ಧ ಪ್ರತಿಭಟಿಸಿತು. ಬಂಗಾಳದ ರೈತರು ಜಮೀನ್ದಾರರ ಶೋಷಣೆ ವಿರುದ್ಧ ದಂಗೆ ಎದ್ದರು. ಮಹಾರಾಷ್ಟ್ರದಲ್ಲಿ ರೈತರು ಕಡಿಮೆ ಕೂಲಿ ವಿರುದ್ಧ ಚಳವಳಿ ನಡೆಸಿದರು.

### ಕಾರ್ಮಿಕ ಬಂಡಾಯ

ಕಾರ್ಮಿಕರ ಹೋರಾಟವು 1827ರಲ್ಲಿ ಕಲ್ಕತ್ತದಲ್ಲಿ ಆರಂಭವಾಯಿತು. ಸೆಣಬು, ಬಟ್ಟೆಗಿರಣಿ ಕಾರ್ಮಿಕರು, ರೈಲ್ವೆ ಕೂಲಿಗಳು ತಮ್ಮ ಬೇಡಿಕೆಗಳಿಗಾಗಿ ಸಂಘಟಿತರಾಗತೊಡಗಿದರು. ರೈಲ್ವೆ ಕೂಲಿಗಳು ನಿಲ್ದಾಣದಲ್ಲಿ ಮುಷ್ಕರ ನಡೆಸಿ ಹೆಚ್ಚಿನ ಕೂಲಿಗಾಗಿ ಬ್ರಿಟಿಷ್ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು. ಕಲ್ಕತ್ತದಲ್ಲಿ ಪ್ರಿಂಟರ್ಸ್ ಯೂನಿಯನ್‌ನವರು ಮತ್ತು ಬಾಂಬೆ ಬಟ್ಟೆ ಗಿರಣಿಯ ಕಾರ್ಮಿಕರು ರಾಷ್ಟ್ರೀಯ ಜಾಗೃತಿ ಉಂಟು ಮಾಡಿದರು. ಮದ್ರಾಸ್‌ನಲ್ಲಿ ಲೇಬರ್ ಯೂನಿಯನ್ ಸ್ಥಾಪನೆಗೊಂಡಿತು. ನಂತರದಲ್ಲಿ ಕಾರ್ಮಿಕ ಸಂಘಟನೆಗಳು ಸ್ಥಾಪನೆಗೊಂಡವು. ಕಾಂಗ್ರೆಸ್, ಕಾರ್ಮಿಕ ಸಂಘಟನೆಗಳ ಇಂತಹ ಚಳವಳಿಗೆ ಬೆಂಬಲ ನೀಡಿತು. ಸ್ವಾತಂತ್ರ್ಯ ಚಳವಳಿಯಲ್ಲಿ ಕಾರ್ಮಿಕರ ಪಾತ್ರವು ಅನನ್ಯವಾದದ್ದು.

### ಬುಡಕಟ್ಟು ಬಂಡಾಯಗಳು

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲಿ ಜಾರಿಗೆ ತಂದ ಕಂದಾಯ ಮತ್ತು ಅರಣ್ಯ ನೀತಿಗಳು ಬುಡಕಟ್ಟು ದಂಗೆಗಳಿಗೆ ನೇರವಾಗಿ ಪ್ರೇರಣೆಯಾದವು. ಬುಡಕಟ್ಟು ಬಂಡಾಯಗಳಲ್ಲಿ ಸಂತಾಲರ ದಂಗೆ, ಕೋಲರ ದಂಗೆ ಮತ್ತು ಮುಂಡ ಚಳವಳಿ ಪ್ರಮುಖವಾಗಿವೆ. ಕರ್ನಾಟಕದಲ್ಲಿ ಹಲಗಲಿಯ ಬೇಡರ ಬಂಡಾಯವು ಈ ನಿಟ್ಟಿನಲ್ಲಿ ಗಮನಾರ್ಹವಾಗಿದೆ.

ಸಂತಾಲ ಬುಡಕಟ್ಟು ದಂಗೆಯನ್ನು ಭಾರತದ ಆದ್ಯ ಹೋರಾಟ ಎಂದು ಗುರುತಿಸಲಾಗಿದೆ. ಈ ಬುಡಕಟ್ಟು ಜನರನ್ನು ಬಂಗಾಳಿ ಮತ್ತು ಒರಿಸ್ಸಾದ ಗುಡ್ಡಗಾಡು ಪ್ರದೇಶಗಳಲ್ಲಿ ಗುರುತಿಸಬಹುದು. ಬ್ರಿಟಿಷರು ಜಾರಿಗೆ ತಂದ ಖಾಯಂ ಜಮೀನ್ದಾರಿ ಪದ್ಧತಿಯಿಂದ ಈ ಬುಡಕಟ್ಟು ಜನರು ನಿರ್ಗತಿಕರಾದರು. ತಾವು ಶ್ರಮಪಟ್ಟು ಕೃಷಿಯೋಗ್ಯವನ್ನಾಗಿ ಪರಿವರ್ತಿಸಿದ ಭೂಮಿ ಬುಡಕಟ್ಟು ಜನರಿಂದ ಜಮೀನ್ದಾರರ ಕೈಸೇರಿತು. ಬಂಗಾಳಿ ಜಮೀನ್ದಾರರು, ಲೇವಾದೇವಿಗಾರರು ಮತ್ತು ಕಂಪನಿ ಸರ್ಕಾರವು ಸಂತಾಲರ ನೇರ ಶೋಷಣೆಗೆ ಕಾರಣರಾದರು. ಸಂತಾಲರ ಶಾಂತಿಪ್ರಿಯತೆ ಮತ್ತು ಸಭ್ಯತೆಯನ್ನು ಕಂಪನಿ ಸರ್ಕಾರವು ಶೋಷಣೆಗೆ ಉಪಯೋಗಿಸಿಕೊಂಡಿತು. ಇದರಿಂದ ಅಸಮಾಧಾನಗೊಂಡ ಸಂತಾಲರು ರಹಸ್ಯ ಸಭೆಗಳನ್ನು ನಡೆಸಿ ಜಮೀನ್ದಾರರು ಮತ್ತು ಲೇವಾದೇವಿಗಾರರನ್ನು ಲೂಟಿಮಾಡಲು ನಿರ್ಧರಿಸಿದರು. ದಂಗೆಯು ಬಾರಹತ್, ಬಾಗತಪುರ್ ಮತ್ತು ರಾಜಮಹಲ್‌ಗಳಲ್ಲಿ ತೀವ್ರವಾಯಿತು. ಪರಿಣಾಮವಾಗಿ ಬುಡಕಟ್ಟು ಜನರು ಅವರ ಶತ್ರುಗಳನ್ನು ಹತ್ಯೆ ಮಾಡಿದರು. ಇದರಿಂದಾಗಿ ಅನೇಕ ಜಮೀನ್ದಾರರು ಮತ್ತು ಲೇವಾದೇವಿದಾರರು ಪಲಾಯನ ಮಾಡಿದರು. ಸಂತಾಲರ ದಂಗೆಯನ್ನು ಹತ್ತಿಕ್ಕಲು ಬ್ರಿಟಿಷರು ಸೈನ್ಯವನ್ನು ಬಳಸಿಕೊಂಡರು. ಸಂತಾಲರ ದಂಗೆಯು ಕೊನೆಗೊಂಡರೂ ಅದರ ಸ್ಫೂರ್ತಿಯು ಮುಂದಿನ ಅನೇಕ ಹೋರಾಟಗಳಿಗೆ ಪ್ರೇರಣೆಯಾಯಿತು. ಇದೇ ಬಗೆಯಲ್ಲಿ ಕೋಲರು ಮತ್ತು ಮುಂಡರು ಬ್ರಿಟಿಷರು ಮತ್ತು ಜಮೀನ್ದಾರರ ವಿರುದ್ಧ ಹೋರಾಟಗಳನ್ನು ಮಾಡಿದರು.

© KTBS Not to be published

ಕೋಲರು ಮತ್ತು ಮುಂಡರು ಈ ಬುಡಕಟ್ಟು ಜನಾಂಗಗಳ ಬಗೆಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.

## ಸುಭಾಷ್ ಚಂದ್ರ ಬೋಸ್



ಸುಭಾಷ್‌ಚಂದ್ರ ಬೋಸ್

ಮೂಲತ: ಒರಿಸ್ಸಾದ ಕಟಕ್ಕಿನವರು, ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಪಾತ್ರವು ಒಂದು ದಿಟ್ಟ ಮೈಲಿಗಲ್ಲು. ಭಾರತೀಯ ನಾಗರಿಕ ಸೇವಾ ಪರೀಕ್ಷೆಯಲ್ಲಿ (ICS) ನಾಲ್ಕನೇ ರ‍್ಯಾಂಕ್ ಗಳಿಸಿದ್ದರೂ, ದೇಶಾಭಿಮಾನದಿಂದಾಗಿ ಬ್ರಿಟಿಷ್ ಸರ್ಕಾರದ ಪ್ರತಿಷ್ಠಿತ ಹುದ್ದೆಯನ್ನು ತ್ಯಜಿಸಿ ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು. ಇವರು 'ನೇತಾಜಿ' ಎಂದು ಜನಪ್ರಿಯರಾದರು.

ಗಾಂಧೀಜಿಯವರ ಸೌಮ್ಯ ಹೋರಾಟಕ್ಕೆ ಪರ್ಯಾಯವಾಗಿ 30ರ ದಶಕದ ಪ್ರಾರಂಭದಲ್ಲಿ ವಿದೇಶದಲ್ಲಿ ನೆಲೆಗೊಂಡ ಭಾರತೀಯರನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಡುವ ಪ್ರಯತ್ನದಲ್ಲಿದ್ದರು. ಇವರು ವಿವಿಧ ದೇಶಗಳ ನಗರಗಳಾದ ವಿಯನ್ನಾ, ಬರ್ಲಿನ್, ರೋಮ್, ಇಸ್ತಾಂಬುಲ್ ಮುಂತಾದ ಕಡೆಗಳಲ್ಲಿ ಪ್ರವಾಸ ಬೆಳೆಸಿ ತಾಯ್ನಾಡಿಗೆ ತಮ್ಮ ಬೆಂಬಲವನ್ನು ನೀಡಲು ಪ್ರೇರೇಪಿಸಿದರು. ಯುರೋಪಿನಲ್ಲಿ ಉದಯಿಸಿದ ಕಮ್ಯೂನಿಸ್ಟ್ ಮತ್ತು ಸಮಾಜವಾದಿ ಅಲೆಯು ಭಾರತದಲ್ಲಿ ಕಾಂಗ್ರೆಸ್ ಸಂಘಟನೆಯನ್ನೂ ಕೂಡಾ ಬದಲಾವಣೆಗೆ ಒಳಪಡಿಸಿತು. ಕಾಂಗ್ರೆಸ್‌ನ ಒಳಗೂ ಸಹ ಸ್ಪಷ್ಟವಾಗಿ ಸಮಾಜವಾದಿ ಎಡಪಂಥೀಯತೆ ಗೋಚರಿಸತೊಡಗಿತು. ಈ ಹಿನ್ನೆಲೆಯಲ್ಲಿ ಭಾರತದಲ್ಲಿ 1934ರ ವೇಳೆಗೆ ಜವಾಹರಲಾಲ್ ನೆಹರು ಮತ್ತು ಸುಭಾಷ್ ಚಂದ್ರ ಬೋಸರು ಕಾಂಗ್ರೆಸ್ ಪಕ್ಷದ ಒಳಗಡೆಯೆ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದಲ್ಲಿ ಗಾಂಧೀಜಿ ಬೆಂಬಲದೊಂದಿಗೆ ಬೋಸರು ಅಧ್ಯಕ್ಷರಾದರು. ಬ್ರಿಟಿಷರ ಯುದ್ಧನೀತಿ ತಯಾರಿಗೆ ಸಂಬಂಧಿಸಿದಂತೆ ಮೃದು ಧೋರಣೆಯನ್ನು ಹೊಂದಿದ್ದ ಗಾಂಧೀಜಿ ಮತ್ತು ಬ್ರಿಟಿಷರ ವಿರುದ್ಧ ಕಠಿಣ ಧೋರಣೆ ಹೊಂದಿದ್ದ ಸುಭಾಷರ ನಡುವೆ ಬಾಂಧವ್ಯದಲ್ಲಿ ಬಿರುಕು ಮೂಡಿತು. ಗಾಂಧೀಜಿಯವರು ಅಂತಾರಾಷ್ಟ್ರೀಯ ನೆರವನ್ನು ಈ ಸಂದರ್ಭದಲ್ಲಿ ಕೋರದೇ ಇದ್ದದ್ದನ್ನು ಆಕ್ಷೇಪಿಸಿದರು. 1938ರ ಕಾಂಗ್ರೆಸ್‌ನ ಹರಿಪುರ ಅಧಿವೇಶನದಲ್ಲಿ ಸುಭಾಷ್ ಚಂದ್ರ ಬೋಸರು ಗಾಂಧೀಜಿಯವರ ವಿರೋಧದ ನಡುವೆಯೂ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಆಯ್ಕೆಗೊಂಡರು. ನಂತರದ ದಿನಗಳಲ್ಲಿ ಗಾಂಧೀಜಿ ಮತ್ತು ಬೋಸರ ಭಿನ್ನಾಭಿಪ್ರಾಯಗಳು ತೀವ್ರಗೊಂಡವು. ಕಾಂಗ್ರೆಸ್‌ನ ಒಳಗಿದ್ದು ಬ್ರಿಟಿಷರನ್ನು ತೀವ್ರವಾಗಿ ಹಿಮ್ಮೆಟ್ಟಿಸಬೇಕೆನ್ನುವ ಸುಭಾಷ್ ಚಂದ್ರ ಬೋಸ್‌ರವರ ಕಾರ್ಯ ಚಟುವಟಿಕೆಗೆ ಹಿನ್ನಡೆಯುಂಟಾಯಿತು. ಸುಭಾಷ್ ಚಂದ್ರ ಬೋಸರು ಕಾಂಗ್ರೆಸ್‌ನ ಚಟುವಟಿಕೆಗಳು ಮತ್ತು ಗಾಂಧೀಜಿಯವರ ಕಾರ್ಯವಿಧಾನದಿಂದ ಬೇಸರಗೊಂಡು ಕಾಂಗ್ರೆಸ್‌ನಿಂದ ಹೊರಬಂದು 'ಫಾರ್ವರ್ಡ್ ಬ್ಲಾಕ್' ಎಂಬ ಹೊಸ ಪಕ್ಷವನ್ನು ಕಟ್ಟಿದರು. ಇದು ಕಾಂಗ್ರೆಸ್‌ನ ಒಳಗೆ ಇದ್ದು, ಪ್ರಗತಿಪರ ಮತ್ತು ತೀವ್ರತರ ಆಶಯಗಳನ್ನು ಹೊಂದಿತ್ತು. ಬ್ರಿಟಿಷರ ಯುದ್ಧ ತಯಾರಿಯನ್ನು ಹಾಗೂ ಜಾಗತಿಕ ಯುದ್ಧದಲ್ಲಿ ಭಾರತದ ಪಾಲ್ಗೊಳ್ಳುವಿಕೆಯನ್ನು ಸುಭಾಷರು ವಿರೋಧಿಸಿದರು. ಪರಿಣಾಮವಾಗಿ ಬ್ರಿಟಿಷ್ ಸರ್ಕಾರವು ಸುಭಾಷ್ ಚಂದ್ರ ಬೋಸರನ್ನು ಬಂಧಿಸಿತು.

> ***ನಿಮಗಿದು ತಿಳಿದಿರಲಿ :***
>
> *"ಜರ್ಮನ್ನರು ಬರುವ ಮೊದಲೇ ಭಾರತ ಬಿಡುಗಡೆಗೊಳ್ಳಬೇಕು. ಯುರೋಪಿನಲ್ಲಿ ಇಂಗ್ಲೆಂಡ್ ಪಡೆದುಕೊಂಡ ಪ್ರತಿ ಹೊಡೆತದೊಂದಿಗೆ ಭಾರತದ ಮೇಲಿನ ಬ್ರಿಟಿಷ್ ಸಾಮ್ರಾಜ್ಯಶಾಹಿ ಹಿಡಿತವು ಖಂಡಿತವಾಗಿಯೂ ಕುಗ್ಗುತ್ತದೆ."*
>
> *– ಸುಭಾಷ್ ಚಂದ್ರ ಬೋಸ್*

ಬ್ರಿಟಿಷ್ ವಿರೋಧಿ ಶಕ್ತಿಗಳೊಡಗೂಡಿ ಬ್ರಿಟಿಷರ ವಿರುದ್ಧ ಹೋರಾಡಲು ಬಯಸಿ ಅವರು ಗೃಹಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿದರು. ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಇವರಿಗೆ ಎಲ್ಲಾ ಸಹಾಯವನ್ನು ನೀಡುವ ಭರವಸೆಯನ್ನು ವ್ಯಕ್ತಪಡಿಸಿದನು. ಬೋಸರು ಜರ್ಮನಿಯಲ್ಲಿ ಭಾರತೀಯ

© KTBS Not to be published

ಯುದ್ಧ ಕೈದಿಗಳನ್ನು ಸಂಘಟಿಸಿದರು. 'ಅಜಾದ್ ಹಿಂದ್ ರೇಡಿಯೋ' ಮೂಲಕ ತಮ್ಮ ಭಾಷಣಗಳನ್ನು ಭಾರತೀಯರಿಗೆ ಪ್ರಸಾರ ಮಾಡಿದರು. ಯುದ್ಧದಲ್ಲಿ ಜಪಾನಿನ ಯಶಸ್ಸನ್ನು ತಿಳಿದು ಅದರ ಸಹಾಯದಿಂದ ಭಾರತದ ಬಿಡುಗಡೆಯ ಸಾಧ್ಯತೆಗೆ ಸಂಬಂಧಿಸಿದಂತೆ ಭಾರತೀಯರನ್ನು ಸಂಘಟಿಸಿದ್ದ ರಾಸ್ ಬಿಹಾರಿ ಬೋಸ್‌ರ ಜೊತೆಗೆ ಸುಭಾಷರು ಕೈಜೋಡಿಸಿದರು. ರಾಸ್ ಬಿಹಾರಿ ಬೋಸ್‌ರವರು ಟೋಕಿಯೋದಲ್ಲಿ ಸ್ಥಾಪಿಸಿದ 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್'ನ ಸೇನಾವಿಭಾಗವನ್ನು 'ಭಾರತೀಯ ರಾಷ್ಟ್ರೀಯ ಸೇನೆ' (INA) ಎಂದು ಕರೆಯುತ್ತಿದ್ದರು. ನಂತರದ ದಿನಗಳಲ್ಲಿ ಐ.ಎನ್.ಎ ಯ ಮುಖಂಡತ್ವವನ್ನು ಸುಭಾಷ್ ಚಂದ್ರ ಬೋಸ್‌ರವರಿಗೆ ವಹಿಸಿದರು. ಸುಭಾಷ್ ಚಂದ್ರ ಬೋಸರು ಈ ಸಂದರ್ಭದಲ್ಲಿ 'ದೆಹಲಿ ಚಲೋ'ಗೆ ಕರೆಯನ್ನು ನೀಡಿದರು. 'ನನಗೆ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ' ಎಂಬ ಕರೆಯನ್ನಿತ್ತರು. ಭಾರತೀಯ ರಾಷ್ಟ್ರೀಯ ಸೇನೆಯಲ್ಲಿ ಝಾನ್ಸಿ ರೆಜಿಮೆಂಟ್ ಎಂಬ ವಿಭಾಗವೂ ಇತ್ತು. ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಈ ರೆಜಿಮೆಂಟಿನ ನೇತೃತ್ವವನ್ನು ವಹಿಸಿದ್ದರು.

> **ನಿಮಗಿದು ತಿಳಿದಿರಲಿ :**
>
> "ಭಾರತ ಮತ್ತು *38* ಕೋಟಿ ನನ್ನ ದೇಶಿಯರನ್ನು ವಿಮುಕ್ತಗೊಳಿಸುತ್ತೇನೆ ಎಂದು ದೇವರ ಹೆಸರಿನಲ್ಲಿ ಪ್ರಮಾಣಿಸುತ್ತೇನೆ.... ಸ್ವಾತಂತ್ರ್ಯ ಗಳಿಸಿದ ನಂತರವೂ ಸ್ವತಂತ್ರ ಭಾರತದ ಉಳಿವಿಗಾಗಿ ನನ್ನ ಕಟ್ಟಕಡೆಯ ರಕ್ತದ ತೊಟ್ಟನ್ನು ಹರಿಸಲು ಸದಾ ಸಿದ್ಧನಿರುವೆನು."
>
> **– ಸುಭಾಷ್ ಚಂದ್ರ ಬೋಸ್**

ಸುಭಾಷರು ರಂಗೂನಿನ ಮೂಲಕ ಬ್ರಿಟಿಷರ ಕೈಯಲ್ಲಿದ್ದ ದೆಹಲಿಯನ್ನು ವಶಪಡಿಸಿಕೊಳ್ಳಲು ಯುದ್ಧ ತಂತ್ರವನ್ನು ರೂಪಿಸಿದ್ದರು. ಆ ಹೊತ್ತಿಗೆ ಭಾರತದಿಂದ ಐ.ಎನ್.ಎ ಗೆ ಸೇರ್ಪಡೆಯಾದ ಸಾವಿರಾರು ಯೋಧರು ದೆಹಲಿಯನ್ನು ಆಕ್ರಮಿಸಲು ತಯಾರಿ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಸುಭಾಷರ ಆದೇಶದಂತೆ ಸಶಸ್ತ್ರ ಹೋರಾಟವನ್ನು ಅವರು ಬರ್ಮಾದ ಗಡಿಯಲ್ಲಿ ಆರಂಭಿಸಿದರು. ಬ್ರಿಟಿಷರು ಮತ್ತು ಐ.ಎನ್.ಎ ನಡುವೆ ತೀವ್ರವಾದಂತಹ ಯುದ್ಧ ನಡೆದ್ದಿದ್ದ ಸಂದರ್ಭದಲ್ಲಿ ಸುಭಾಷರು ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮಡಿದರು. ಬರ್ಮಾದ ರಾಜಧಾನಿ ರಂಗೂನ್ ಬ್ರಿಟಿಷರ ವಶವಾದ್ದರಿಂದ ಐ.ಎನ್.ಎ ಸೈನಿಕರನ್ನು ಬ್ರಿಟಿಷರು ಬಂಧಿಸಿದರು. ನಂತರದ ದಿನಗಳಲ್ಲಿ ಗಾಂಧೀಜಿಯವರು ಸೇರಿದಂತೆ ಕಾಂಗ್ರೆಸ್‌ನ ಬಹುತೇಕ ನಾಯಕರೆಲ್ಲರೂ ಐ.ಎನ್.ಎ ಸೈನಿಕರನ್ನು ಬಂಧಮುಕ್ತ ಮಾಡುವಲ್ಲಿ ಶ್ರಮಿಸಿದರು.

©KTBS Not to be published

## ಡಾ. ಬಿ.ಆರ್. ಅಂಬೇಡ್ಕರ್


ಡಾ. ಬಿ.ಆರ್.ಅಂಬೇಡ್ಕರ್

ಸಾಮಾಜಿಕ ಸಮಾನತೆಯಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಎಂದು ಡಾ. ಬಿ.ಆರ್. ಅಂಬೇಡ್ಕರ್‌ರವರು ಬಲವಾಗಿ ನಂಬಿದ್ದರು. ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿರುವ ಕಟ್ಟಕಡೆಯ ಮನುಷ್ಯನಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ; ಅದು ಕೇವಲ ಮರೀಚಿಕೆಯಾಗಿ ಉಳಿಯುತ್ತದೆ ಎಂದು ಅಂಬೇಡ್ಕರ್‌ರವರು ತಿಳಿದಿದ್ದರು. ಅವರು ಭಾರತವನ್ನು ಕೇವಲ ಒಂದು ರಾಜಕೀಯ ಪರಿಕಲ್ಪನೆಯಾಗಿ ಕಾಣದೆ ಅದರ ಒಟ್ಟಾರೆ ಮುಖವನ್ನು ಪರಿಚಯಿಸಿದರು. ಇವರು ಜಾತಿ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ಅದರ ವಿನಾಶಕ್ಕೆ ಹೋರಾಟಗಳನ್ನು ರೂಪಿಸಿದರು. ಅಸ್ಪೃಶ್ಯರು ಕನಿಷ್ಠ ಮಟ್ಟದ ಅವಕಾಶಗಳಿಂದಲೂ ವಂಚಿತರಾಗಿರುವುದನ್ನು ನಿರೂಪಿಸಲು 'ಮಹದ್' ಕೆರೆ ಮತ್ತು 'ಕಾಲಾರಾಂ' ದೇವಾಲಯ ಚಳವಳಿಗಳನ್ನು ರೂಪಿಸಿದರು. ಇವರು ಮೂರೂ ದುಂಡು ಮೇಜಿನ ಪರಿಷತ್ತಿನ ಸಮಾವೇಶಗಳಲ್ಲಿ

ಭಾಗವಹಿಸಿ ನಿಮ್ನ ವರ್ಗಗಳು ವಿವಿಧ ಬಗೆಯ ಸಂಕೋಲೆಗಳಿಂದ ಬಿಡುಗಡೆ ಪಡೆಯಲು ಬೇಕಾದ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿದರು. ಹರಿಜನೋದ್ಧಾರ ಮತ್ತು ಅಸ್ಪೃಶ್ಯರ ಮುಖಂಡತ್ವಕ್ಕೆ ಸಂಬಂಧಿಸಿದಂತೆ ಗಾಂಧೀಜಿ ಮತ್ತು ಅಂಬೇಡ್ಕರ್‌ರಲ್ಲಿ ಭಿನ್ನಾಭಿಪ್ರಾಯಗಳು ಮೂಡಿದವು. ಅಸ್ಪೃಶ್ಯರ ರಕ್ಷಣೆಗಾಗಿ ಪ್ರತ್ಯೇಕ ಮತಕ್ಷೇತ್ರಗಳನ್ನು ಬಯಸಿದ್ದು ಗಾಂಧಿ ಮತ್ತು ಅಂಬೇಡ್ಕರರ ನಡುವೆ ವಿವಾದಕ್ಕೂ ಕಾರಣವಾಯಿತು. ಇವರು ಬರೋಡ ಮಹಾರಾಜರಡಿಯಲ್ಲಿ ದಿವಾನರಾಗಿದ್ದರು. ಮುಂಬೈ ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ನಂತರದಲ್ಲಿ ವೈಸ್‌ರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲ್‌ನಲ್ಲೂ ಸಹ ಅತ್ಯಂತ ಮುತುವರ್ಜಿಯಿಂದ ಕಾರ್ಯಭಾರವನ್ನು ನಿಭಾಯಿಸಿದರು. ಅಂಬೇಡ್ಕರ್ ಕಾಂಗ್ರೆಸ್ ಪಕ್ಷವನ್ನು ಸೇರದೆ 'ಬಹಿಷ್ಕೃತ ಹಿತಕಾರಣಿ ಸಭಾ' ಎಂಬ ಸಂಘಟನೆಯನ್ನು ಹಾಗೂ 'ಸ್ವತಂತ್ರ ಕಾರ್ಮಿಕ ಪಕ್ಷ' ಎಂಬ ಸ್ವತಂತ್ರ ಪಕ್ಷವನ್ನು ಸ್ಥಾಪಿಸಿದರು. 'ಪ್ರಬುದ್ಧ ಭಾರತ', 'ಜನತಾ', 'ಮೂಕನಾಯಕ', 'ಬಹಿಷ್ಕೃತ ಭಾರತ' ಪತ್ರಿಕೆಗಳನ್ನು ಹೊರಡಿಸಿದರು. ಕಮ್ಯುನಿಸ್ಟ್ ಮತ್ತು ಸಮಾಜವಾದಿ ಧೋರಣೆಗಳಿಂದ ದೂರವೇ ಉಳಿದು ಕೃಷಿ ಕಾರ್ಮಿಕರ ಏಳಿಗೆಗಾಗಿಯೂ ಇವರು ದುಡಿದರು.

ಸ್ವತಂತ್ರ ಭಾರತದ ಮುನ್ನೋಟದ ದಿಕ್ಸೂಚಿಯಾಗಿ ಭಾರತದ ಸಂವಿಧಾನವನ್ನು ರಚಿಸಬೇಕಾಯಿತು. ಸಂವಿಧಾನ ಸಭೆಯ ಅಧ್ಯಕ್ಷರಾಗಿ ಡಾ. ಬಾಬು ರಾಜೇಂದ್ರ ಪ್ರಸಾದ್‌ರವರನ್ನು ಆಯ್ಕೆ ಮಾಡಲಾಯಿತು. ಮುಂದುವರೆದು ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ಡಾ. ಬಿ.ಆರ್.ಅಂಬೇಡ್ಕರ್‌ರವರನ್ನು ಸಂವಿಧಾನ ರಚನಾ ಸಮಿತಿಯು ಸರ್ವಾನುಮತದಿಂದ ಆಯ್ಕೆ ಮಾಡಿತು. ಸಂವಿಧಾನದಲ್ಲಿ ಸಮಾನತೆಯನ್ನು ಪ್ರತಿಪಾದಿಸಿ ಅಸ್ಪೃಶ್ಯತಾ ಆಚರಣೆಯ ವಿರುದ್ಧ ಕಾನೂನಿನ ರಕ್ಷಣೆಯನ್ನು ಒದಗಿಸಿದರು. ಅಸ್ಪೃಶ್ಯತಾ ಆಚರಣೆಯನ್ನು ಅಪರಾಧವೆಂದು ಭಾರತದ ಸಂವಿಧಾನವು ಪರಿಗಣಿಸಿದೆ. ಸ್ವತಂತ್ರ ಭಾರತದಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರು ಕಾನೂನು ಮಂತ್ರಿಯಾದರು. ಆಧುನಿಕತೆ, ವೈಚಾರಿಕತೆ ಮತ್ತು ಪಾಶ್ಚಾತ್ಯ ವಿದ್ವಾಂಸರಿಂದ ಪ್ರೇರಣೆ ಪಡೆದರೂ ದೇಶೀಯ ಬೇರುಗಳ ಕಡೆಗೆ ಒಲವನ್ನು ತೋರಿದರು. ಜಾತಿ ವ್ಯವಸ್ಥೆಯಿಂದ ಬೇಸತ್ತ ಇವರು ಹಿಂದೂ ಧರ್ಮವನ್ನು ತೊರೆದು ಭಾರತೀಯ ಸಂಸ್ಕೃತಿಯ ಭಾಗವಾಗಿದ್ದ ಜಾತಿ ಮತ್ತು ಸಾಮಾಜಿಕ ಶ್ರೇಣೀಕರಣವನ್ನು ವಿರೋಧಿಸಿದ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಮಾರ್ಕ್ಸ್‌ವಾದವು ಯಾವ ಬದಲಾವಣೆಯನ್ನು ರಕ್ತ ಮತ್ತು ಹಿಂಸೆಯಿಂದ ತರಬಹುದೋ ಅದನ್ನು ಬೌದ್ಧ ಧರ್ಮವು ಶಾಂತಿ ಮತ್ತು ಅಹಿಂಸಾತ್ಮಕವಾಗಿ ತರಬಲ್ಲದು ಎಂದು ಅವರು ನಂಬಿದ್ದರು. ಅವರ ಜೀವಮಾನದ ಸಾಧನೆಗಾಗಿ ಭಾರತ ಸರ್ಕಾರವು ಇವರಿಗೆ ಮರಣೋತ್ತರವಾಗಿ 'ಭಾರತರತ್ನ'ವನ್ನು ನೀಡಿ ಗೌರವಿಸಿದೆ.

**ನಿಮಗಿದು ತಿಳಿದಿರಲಿ :**

"ಪತ್ರಿಕೆಗಳಿಲ್ಲದ ನಾಯಕ ರೆಕ್ಕೆಯಿಲ್ಲದ ಪಕ್ಷಿಯಂತೆ".

– **ಡಾ.ಬಿ.ಆರ್.ಅಂಬೇಡ್ಕರ್**


ಅಂಬೇಡ್ಕರ್ ಅವರು ಪಡೆದ ಶೈಕ್ಷಣಿಕ ಪದವಿಗಳು ಮತ್ತು ಬರೆದ ಕೃತಿಗಳ ಬಗೆಗಿನ ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.

**ನಿಮಗಿದು ತಿಳಿದಿರಲಿ :**

ಮಹಾರಾಷ್ಟ್ರದ 'ಮಹದ್' ಎನ್ನುವ ಊರಿನಲ್ಲಿದ್ದ ಕೆರೆಯ ನೀರನ್ನು ಅಸ್ಪೃಶ್ಯರು ಬಳಸುವಂತಿರಲಿಲ್ಲ. ನೀರಿನ ಬಳಕೆಯನ್ನು ಊರಿನ ಅಸ್ಪೃಶ್ಯರೂ ಉಪಯೋಗಿಸುವಂತೆ ರೂಪಿಸಿದ ಚಳವಳಿಯನ್ನು ಮಹದ್ ಚಳವಳಿಯೆಂದು ಕರೆಯುತ್ತಾರೆ. ಹಾಗೆಯೇ 'ಕಾಲರಾಂ' ಎನ್ನುವ ದೇವಾಲಯದಲ್ಲಿ ಉಳಿದೆಡೆಯಲ್ಲಿದ್ದಂತೆ ಅಸ್ಪೃಶ್ಯರಿಗೆ ಪ್ರವೇಶವಿರಲಿಲ್ಲ. ಅಲ್ಲಿ ಕೂಡ ಅಸ್ಪೃಶ್ಯರು ದೇವಾಲಯವನ್ನು ಪ್ರವೇಶಿಸುವ ಕ್ರಾಂತಿಕಾರಕ ಯೋಜನೆಯನ್ನು ಅಂಬೇಡ್ಕರ್ ಅವರು ರೂಪಿಸುತ್ತಾರೆ. ಆದರೆ ಇವುಗಳು ಜನರಲ್ಲಿ ಜಾಗೃತಿಯನ್ನುಂಟುಮಾಡಿದರೂ ಚಳವಳಿಗಳು ಆ ಕಾಲಘಟ್ಟದಲ್ಲಿ ಯಶಸ್ವಿಯಾಗಲಿಲ್ಲ. ಇಂತಹ ಸಮಸ್ಯೆಗಳಿಗೆ ಕಾನೂನು ಮಾರ್ಗವೇ ಉತ್ತರವೆಂದು ನಂಬಿದ್ದರು.

© KTBS Not to be republished

## ಜವಾಹರಲಾಲ್ ನೆಹರು


ಜವಾಹರಲಾಲ್ ನೆಹರು

ಪಂಡಿತ್ ಜವಾಹರಲಾಲ್ ನೆಹರುರವರು ಹೋಂರೂಲ್ ಚಳವಳಿಯೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರವೇಶಿಸಿದರು. 1920ರಲ್ಲಿ ನಡೆದ ಅಸಹಕಾರ ಚಳವಳಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದ ನೆಹರುರವರು 1929ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಲಾಹೋರ್ ಅಧಿವೇಶನದ ಅಧ್ಯಕ್ಷರಾಗಿದ್ದರು. ಈ ಅಧಿವೇಶನದಲ್ಲಿ ಸಂಪೂರ್ಣ ಸ್ವ-ರಾಜ್ಯದ ಗುರಿಯನ್ನು ಘೋಷಿಸಲಾಯಿತು. ಗಾಂಧೀಜಿಯವರು ಅಸಹಕಾರ ಚಳವಳಿಯನ್ನು ಹಿಂದೆ ಪಡೆದದ್ದರಿಂದ ನೆಹರುರವರು ನಿರಾಸೆಯನ್ನು ವ್ಯಕ್ತಪಡಿಸಿದ್ದರು.

ನೆಹರೂರವರ ಚಿಂತನೆಗಳು ರಾಜಕೀಯ ಚಟುವಟಿಕೆಗಳಿಗೆ ಹೊಸ ತಿರುವನ್ನು ನೀಡಿದವು. ಇವರು ಕಮ್ಯೂನಿಸ್ಟರ ಸಿದ್ಧಾಂತಗಳಿಂದ ಪ್ರಭಾವ ಹೊಂದಿದ್ದರು. ಪರಿಣಾಮವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಎಡಪಂಥೀಯ ಆಶಯಗಳು ಪ್ರಬಲವಾದವು.

ನೆಹರು ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ 49ನೆಯ ಅಧಿವೇಶನದ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದ್ದ ಸಾಮ್ರಾಜ್ಯಶಾಹಿ ಯುದ್ಧದಿಂದ ದೂರವೇ ಉಳಿಯಬೇಕು ಎಂದು ಸಾರಿದರು. 'ಚರಕ' ಮತ್ತು 'ಹರಿಜನ' ಚಳವಳಿಗಳು ಅಷ್ಟೇನೂ ಪರಿಣಾಮಕಾರಿಯಲ್ಲವೆಂದು ಇವರು ವಾದಿಸಿದರು. ಈ ಅಧಿವೇಶನದಲ್ಲಿ ಗಾಂಧೀಜಿಯವರ ಚಿಂತನೆಗಳಿಂದ ದೂರ ಸರಿದಂತೆ ಇವರು ಕಂಡುಬಂದರು. ಆದರೂ ಗಾಂಧೀಜಿಯವರ ಬಗೆಗೆ ಅವರ ಗೌರವ ಕಡಿಮೆಯಾಗಲಿಲ್ಲ. ವಿವಿಧ ಬೌದ್ಧಿಕ ಧಾರೆಗಳಿಂದ ಪ್ರಭಾವಿತಗೊಂಡಿದ್ದ ನೆಹರು ಅವುಗಳನ್ನು ಸಮನ್ವಯಗೊಳಿಸಿಕೊಳ್ಳುವ ಮೂಲಕ ಸಮಷ್ಟೀ ಪ್ರಜ್ಞೆಯನ್ನು ಪ್ರತಿಪಾದಿಸಿದರು. ಈ ದೃಷ್ಟಿಕೋನವನ್ನು ಅವರು ಪ್ರತಿಪಾದಿಸಿದ ವಿದೇಶಾಂಗ ನೀತಿಯಾದ 'ಅಲಿಪ್ತನೀತಿ' ಮಿಶ್ರ ಆರ್ಥಿಕ ವ್ಯವಸ್ಥೆ'ಗಳಲ್ಲಿ ನಾವು ಸ್ಪಷ್ಟವಾಗಿ ಗ್ರಹಿಸಬಹುದು. 50ನೆಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ನೆಹರುರವರು ತಮ್ಮ ಸಮಾಜವಾದಿ ಹಾಗೂ ಕಮ್ಯುನಿಸ್ಟ್ ವಿಚಾರಗಳ ಬಗ್ಗೆ ಮೃದು ಧೋರಣೆಯನ್ನು ತಳೆದರು. 'ಕಾಂಗ್ರೆಸ್ ಇಂದು ಭಾರತದಲ್ಲಿ ಪೂರ್ಣ ಪ್ರಜಾಪ್ರಭುತ್ವಕ್ಕಾಗಿ ನಿಂತಿದೆ ಹಾಗೂ ಪ್ರಜಾಪ್ರಭುತ್ವಕ್ಕಾಗಿಯೇ ಹೋರಾಡುತ್ತದೆಯೇ ಹೊರತು ಸಮಾಜವಾದಕ್ಕಲ್ಲ' ಎಂದರು.

ಕೈಗಾರಿಕೀಕರಣ ಮತ್ತು ನವಭಾರತದ ಶಿಲ್ಪಿಯಾಗಿ ಭಾರತದ ಮೊದಲ ಪ್ರಧಾನ ಮಂತ್ರಿಯಾಗಿದ್ದ ನೆಹರುರವರನ್ನು ನಾವು ಕಾಣುತ್ತೇವೆ. 'ಉಕ್ಕಿನ ಮನುಷ್ಯ' ಎಂದು ಖ್ಯಾತಿಯಾಗಿದ್ದ ಭಾರತದ ಮೊದಲ ಗೃಹಮಂತ್ರಿಗಳಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ನೇತೃತ್ವದಲ್ಲಿ ಭಾರತದ ಅನೇಕ ದೇಶೀ ಸಂಸ್ಥಾನಗಳ ವಿಲೀನಿಕರಣಕ್ಕೆ ನೆಹರು ಅವರು ಕಾರಣರಾದರು. ನಂತರ ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲಕ ಭಾರತಕ್ಕೆ ವಿವಿಧತೆಯನ್ನು ಒಪ್ಪುವ ತಾತ್ವಿಕ ತಳಹದಿಯನ್ನು ಹಾಕಿದರು. ಬಂಡವಾಳ ಹಾಗೂ ಸಮಾಜವಾದಿ ತತ್ವಗಳನ್ನೊಳಗೊಂಡ ಮಿಶ್ರ ಆರ್ಥಿಕ ನೀತಿಯು ನೆಹರು ಅವರ ಆಧುನಿಕ ಭಾರತದ ಅಭಿವೃದ್ಧಿಯ ಮೈಲಿಗಲ್ಲಾಯಿತು. ಬೃಹತ್ ಕೈಗಾರಿಕೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದು


> ***ಚಟುವಟಿಕೆ :***
> *ಪಂಡಿತ್ ಜವಾಹರಲಾಲ್ ನೆಹರೂರವರು ಪ್ರಥಮ ಪ್ರಧಾನಮಂತ್ರಿಯಾಗಿ ರೂಪಿಸಿದ ವಿದೇಶಾಂಗ ನೀತಿಯ ಬಗ್ಗೆ ಹೆಚ್ಚಿನ ಮಾಹಿತಿ ಓದಿರಿ.*

© KTBS Not to be published

ಅವರು ಬಲವಾಗಿ ನಂಬಿದ್ದರು. ಸ್ವಾತಂತ್ರ್ಯ ನಂತರ ಪಂಚವಾರ್ಷಿಕ ಯೋಜನೆಗಳ ಮೂಲಕ ದೇಶದ ಅಭಿವೃದ್ಧಿಯ ಕನಸನ್ನು ಕಂಡರು. ವಿಶೇಷವಾಗಿ ಪಂಚವಾರ್ಷಿಕ ಯೋಜನೆಯ ಮೂಲಕ ಮೂಲಭೂತ ಮತ್ತು ಬೃಹತ್ ಕೈಗಾರಿಕೀಕರಣಕ್ಕೆ ಚಾಲನೆಯನ್ನು ನೀಡಿದರು. ಭಾರತವು ಅಣುಶಕ್ತಿಯನ್ನು ಹೊಂದಬೇಕೆನ್ನುವ ಆಶಯದಿಂದ ಎಚ್.ಜೆ.ಬಾಬಾ ಅವರ ನೇತೃತ್ವದಲ್ಲಿ ಭದ್ರ ತಳಹದಿಯನ್ನು ರೂಪಿಸಿದರು. ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಭಾರತವು ಬಣಗಳ ಧೃವೀಕೃತ ವ್ಯವಸ್ಥೆಯಿಂದ ವಿಮುಕ್ತಗೊಂಡು ಅಲಿಪ್ತ ನೀತಿಯನ್ನು ಪ್ರತಿಪಾದಿಸಿತು. ಪಂಚಶೀಲ ತತ್ವಗಳ ಆಧಾರದ ಮೇಲೆ ಶಕ್ತಿ ರಾಜಕಾರಣದಿಂದ ದೂರವೇ ಉಳಿದು ಶಾಂತಿ ಸಹಬಾಳ್ವೆಯ ಸೂತ್ರಗಳನ್ನು ಅನುಷ್ಠಾನಕ್ಕೆ ತರಲು ಕಾರಣರಾದರು. 1964ರಲ್ಲಿ ಇವರು ನಿಧನ ಹೊಂದಿದರು.

### ಮಹಮದ್ ಅಲಿ ಜಿನ್ನಾ

ಮಹಮದ್ ಅಲಿ ಜಿನ್ನಾರವರು 1906ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಿದರು ಹಾಗೂ ದಾದಾಬಾಯಿ ನವರೋಜಿಯವರ ಖಾಸಗಿ ಕಾರ್ಯದರ್ಶಿಯಾಗಿಯೂ ಕೆಲಸವನ್ನು ನಿರ್ವಹಿಸಿದ್ದರು. ತಿಲಕರ ವಿರುದ್ಧದ ಮೊಕದ್ದಮೆಗಳ ಸಂದರ್ಭದಲ್ಲಿ ಅವರ ಪರವಹಿಸಿದ್ದರಿಂದ, ಇದು ಜಿನ್ನಾರವರಿಗೆ ಅತೀವ ಪ್ರಶಂಸೆಯನ್ನು ತಂದುಕೊಟ್ಟಿತು. ಇವರು ಹೋಂ ರೂಲ್ ಲೀಗ್‌ನ್ನು ಸೇರಿದರು. 1916ರ ಅನೇಕ ಸಮಾವೇಶಗಳಲ್ಲಿ ಹಿಂದೂ ಮತ್ತು ಮಹಮದೀಯರ ನಡುವಿನ ಏಕತೆಯ ಅಗತ್ಯವನ್ನು ತಿಳಿಸಿದರು. ಮುಸ್ಲಿಂಪರ ರಾಜಕಾರಣಿ ಎಂದು ಬಿಂಬಿತವಾಗಿದ್ದರಿಂದ ಬ್ರಿಟಿಷರ ಬಳುವಳಿಯನ್ನು ಜಿನ್ನಾ ಅವರು ವಿರೋಧಿಸಿದರು. ರೌಲತ್ ಕಾಯ್ದೆಯನ್ನು ವಿರೋಧಿಸಿ ಅವರು ತಮ್ಮ ಕೇಂದ್ರಿಯ ಶಾಸನ ಸಲಹಾ ಸಮಿತಿಗೆ ರಾಜೀನಾಮೆಯನ್ನಿತ್ತರು. ದುಂಡು ಮೇಜಿನ ಸಮಿತಿಗಳಲ್ಲಿ ಜಿನ್ನಾ ತಾನೊಬ್ಬ ರಾಷ್ಟ್ರೀಯವಾದಿ ಮುಸಲ್ಮಾನನೆಂದು ಘೋಷಿಸಿಕೊಂಡರು. 1937ರ ಚುನಾವಣೆಯ ನಂತರ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಸಮ್ಮಿಶ್ರ ಸರ್ಕಾರವನ್ನು ರೂಪಿಸಲು ವಿಫಲವಾದಾಗ ಜಿನ್ನಾ ತನ್ನ ಕಾರ್ಯತಂತ್ರವನ್ನು ಬದಲಾಯಿಸಿಕೊಂಡರು. ಬ್ರಿಟಿಷರು ಸ್ವಾತಂತ್ರ್ಯ ನೀಡುವ ಸಂದರ್ಭ ಹತ್ತಿರವಾದಂತೆ ಜಿನ್ನಾರವರು ಪಾಕಿಸ್ತಾನದ ಬೇಡಿಕೆಯನ್ನು ವಿವಿಧ ರೀತಿಯಲ್ಲಿ ತೀವ್ರಗೊಳಿಸಿದರು. ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವ ಸಮಯದಲ್ಲಿ ದೇಶವನ್ನು ವಿಭಜಿಸಿ ಪಾಕಿಸ್ತಾನವನ್ನು ಪಡೆದರು.


ಜಿನ್ನಾ ಮತ್ತು ಗಾಂಧೀಜಿ

© KTBS Not to be published

### ಭಾರತದ ವಿಭಜನೆ

ಸ್ವಾತಂತ್ರ್ಯ ಚಳವಳಿಯ ಉದ್ದಕ್ಕೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಖಂಡ ರಾಷ್ಟ್ರದ ಕಲ್ಪನೆಯನ್ನು ಹೊಂದಿತ್ತು. ಆದರೆ ಮಹಮದ್ ಅಲಿ ಜಿನ್ನಾ ಅವರು ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರದ ಬೇಡಿಕೆ ಮಂಡಿಸುತ್ತಲೇ ಇದ್ದರು. 1940ರಲ್ಲಿ ನಡೆದ ಮುಸ್ಲಿಂ ಲೀಗ್‌ನ ಲಾಹೋರ್ ಅಧಿವೇಶನದಲ್ಲಿ ಜಿನ್ನಾ ಹಿಂದೂ ಮತ್ತು ಮುಸ್ಲಿಮರು ಒಂದು ದೇಶವಾಗಲು ಸಾಧ್ಯವೇ ಇಲ್ಲ ಎಂದು ಘೋಷಿಸಿದರು. ಎರಡನೆಯ ಮಹಾಯುದ್ಧ ಮುಗಿದು ಬ್ರಿಟನ್‌ನಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂದಿತು. ಇದು ಭಾರತದಲ್ಲಿನ ರಾಜಕೀಯ ಬಿಕ್ಕಟ್ಟನ್ನು

ಶಮನಗೊಳಿಸಲು ಕ್ರಮ ಕೈಗೊಂಡಿತು. ಇದು ಕ್ಯಾಬಿನೆಟ್ ನಿಯೋಗವನ್ನು ಭಾರತಕ್ಕೆ ಸ್ವಯಂ ಅಧಿಕಾರವನ್ನು ನೀಡುವ ಕುರಿತು ಚರ್ಚಿಸಲು ಕಳುಹಿಸಿತು. ಈ ನಿಯೋಗವು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನೊಂದಿಗೆ ಚರ್ಚಿಸಿತು. ಭಾರತಕ್ಕೆ ಫೆಡರಲ್ ಮಾದರಿ ಸರ್ಕಾರವನ್ನು ಸೂಚಿಸಿತು. ಸಂವಿಧಾನ ರಚನಾ ಸಭೆ ಕರೆಯುವುದಾಗಿ ಮತ್ತು ಮಧ್ಯಂತರ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿತು. ಆದರೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ಮಧ್ಯಂತರ ಸರ್ಕಾರ ರಚಿಸುವ ವಿಚಾರದಲ್ಲಿ ಭಿನ್ನತೆ ಉಂಟಾಯಿತು. ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರಕ್ಕಾಗಿ 1946ರ ಆಗಸ್ಟ್ 16 ರಂದು ನೇರ ಕಾರ್ಯಾಚರಣೆ ದಿನಕ್ಕೆ (Direct Action Day) ಕರೆ ನೀಡಿತು. ಇದರಿಂದ ದೇಶಾದ್ಯಂತ ಕೋಮುಗಲಭೆಗಳು ನಡೆದವು. ಡಾ. ಬಾಬು ರಾಜೇಂದ್ರ ಪ್ರಸಾದ್ ಅಧ್ಯಕ್ಷತೆಯಲ್ಲಿ ಸೇರಿದ ಸಂವಿಧಾನ ಸಭೆಯಲ್ಲಿ ಮುಸ್ಲಿಂ ಲೀಗ್ ಭಾಗವಹಿಸಲಿಲ್ಲ. ಹಿಂದು ಮತ್ತು ಮುಸ್ಲಿಂ ವಿಭಜನೆಯನ್ನು ಸೃಷ್ಟಿಸುವ ಅಸಕ್ತಿಯನ್ನು ಬ್ರಿಟಿಷ್‌ರು ಹೊಂದಿದ್ದರು. ಬಂಗಾಳ ವಿಭಜನೆ, 1909ರ ಕಾಯ್ದೆಯ ಅನುಷ್ಠಾನದ ಸಂದರ್ಭಗಳಲ್ಲಿ ಬ್ರಿಟಿಷರು ತಮ್ಮ ರಾಜಕೀಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಪ್ರಯತ್ನಗಳನ್ನು ಮಾಡಿದ್ದನ್ನು ಇಲ್ಲಿ ಕಾಣಬಹುದು. ಹಾಕಿದ ವಿಭಜನೆಯ ಬೇರುಗಳು ದೇಶವಿಭಜನೆಯಲ್ಲಿ ಪರ್ಯಾವಸಾನವಾಯಿತು.

ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ಸಂಬಂಧ ತೀರ ಹದಗೆಟ್ಟಿತ್ತು. ಈ ಸಮಯದಲ್ಲಿ ಬ್ರಿಟಿಷ್ ಸರ್ಕಾರ ಶೀಘ್ರವಾಗಿ ಅಧಿಕಾರವನ್ನು ಹಸ್ತಾಂತರಿಸುವುದಾಗಿ ತಿಳಿಸಿ, 1946ರ ಮಾರ್ಚ್‌ನಲ್ಲಿ ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ಭಾರತಕ್ಕೆ ವೈಸ್‌ರಾಯ್ ಆಗಿ ಕಳುಹಿಸಿತು. ಬ್ಯಾಟನ್‌ರವರು ಗಾಂಧೀಜಿ, ಜಿನ್ನಾ ಮತ್ತಿತರ ನಾಯಕರೊಂದಿಗೆ ಮಾತುಕತೆ ನಡೆಸಿ ಭಾರತವನ್ನು ವಿಭಜಿಸುವ ಯೋಜನೆಯನ್ನು ರೂಪಿಸಿದರು. 1947ರ ಜುಲೈನಲ್ಲಿ ಭಾರತ ಸ್ವಾತಂತ್ರ್ಯ ಮಸೂದೆಯು ಕಾಯ್ದೆಯ ರೂಪವನ್ನು ಪಡೆಯಿತು. ಕಾಯ್ದೆಯನ್ವಯ 1947ರ ಆಗಸ್ಟ್ 15ರಂದು ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಪ್ರತ್ಯೇಕ ರಾಷ್ಟ್ರಗಳು ಉದಯಿಸಿದವು. ರ್‍ಯಾಡ್ ಕ್ಲಿಫ್ ಆಯೋಗವು ಈ ದೇಶಗಳ ಗಡಿಗಳನ್ನು ಗುರುತಿಸಿತು. ಪಂಡಿತ್ ಜವಾಹರಲಾಲ್ ನೆಹರುರವರು ಭಾರತದ ಪ್ರಥಮ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನವನ್ನು ಸ್ವೀಕರಿಸಿದರು.

1948ರ ಜನವರಿ 30ರಂದು ಪ್ರಾರ್ಥನಾ ಸಭೆಗೆ ನಡೆದು ಹೋಗುತ್ತಿದ್ದ ಹಿಂದೂ ಮುಸ್ಲಿಂ ಭಾವೈಕ್ಯತೆಯ ಹರಿಕಾರ ಗಾಂಧೀಜಿಯವರನ್ನು ನಾಥೋರಾಮ್ ಗೋಡ್ಸೆ ಎಂಬುವವನು ಹತ್ಯೆ ಮಾಡಿದನು. ಭೌತಿಕವಾಗಿ ಗಾಂಧೀಜಿಯವರನ್ನು ಕೊನೆಗಾಣಿಸಿದರೂ ಅವರ ಸಮಾನತೆಯ ಆಶಯಗಳು, ಮಾನವೀಯ ಸಂವೇದನೆಗಳು, ಭಾವೈಕ್ಯತೆಯ ಕನಸುಗಳು, ಮನುಕುಲದ ಆದರ್ಶಗಳಾಗಿ ಉಳಿದಿವೆ.

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಗಾಂಧೀಜಿಯವರು ____________ ರಲ್ಲಿ ಜನಿಸಿದರು.
2. ಜಲಿಯನ್ ವಾಲಾಭಾಗ್ ಹತ್ಯಾಕಾಂಡವು ____________ ಕಾಯ್ದೆಗೆ ವಿರುದ್ಧ ನಡೆದ ಹೋರಾಟದ ಪರಿಣಾಮ.
3. ಅಲಿ ಸಹೋದರರು ನಡೆಸಿದ ಚಳವಳಿ ____________ .
4. ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು ____________ ರವರು ಮಂಡಿಸಿದರು.

© KTBS Not to be republished

5. 1929ರ ಲಾಹೋರ್‌ನಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದ ಅಧ್ಯಕ್ಷರಾಗಿದ್ದವರು ___________ .

6. ಮಹದ್ ಮತ್ತು ಕಾಲರಾಂ ದೇವಾಲಯ ಚಳವಳಿಯನ್ನು ರೂಪಿಸಿದವರು ___________

7. ಭಾರತೀಯ ರಾಷ್ಟ್ರೀಯ ಸೇನೆಯ ಝಾನ್ಸಿ ರೆಜಿಮೆಂಟಿನ ನೇತೃತ್ವವನ್ನು ___________ ರವರು ವಹಿಸಿದರು.

8. ಉಪ್ಪಿನ ಸತ್ಯಾಗ್ರಹವನ್ನು ಗಾಂಧೀಜಿ ___________ ಎಂಬಲ್ಲಿ ನಡೆಸಿದರು.

9. ಕ್ವಿಟ್ ಇಂಡಿಯಾ ಚಳವಳಿಯು ___________ ರಲ್ಲಿ ನಡೆಯಿತು.

**II. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳವನ್ನು ನೀಡಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ಭರ್ತಿ ಮಾಡಿ.**

1. ಮೊದಲನೇ ದುಂಡುಮೇಜಿನ ಪರಿಷತ್ ಸಮಾವೇಶ ___________ ರಲ್ಲಿ ನಡೆಯಿತು.

   ಎ) 1930 ಬಿ) 1932 ಸಿ) 1931 ಡಿ) 1942

2. ಸ್ವರಾಜ್ ಪಕ್ಷ ಸ್ಥಾಪಿಸಿದ ವರ್ಷ ___________ .

   ಎ) 1923 ಬಿ) 1922 ಸಿ) 1929 ಡಿ) 1906

3. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದ ಅಧ್ಯಕ್ಷರಾಗಿದ್ದವರು ___________ .

   ಎ) ಸರ್ದಾರ್ ವಲ್ಲಭ ಬಾಯಿ ಪಟೇಲ್ ಬಿ) ಡಾ. ಬಿ.ಆರ್.ಅಂಬೇಡ್ಕರ್

   ಸಿ) ಲಾಲ ಲಜಪತ ರಾಯ್ ಡಿ) ಸುಭಾಷ್ ಚಂದ್ರ ಬೋಸ್

4. ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತರಾಗಿದ್ದವರು ___________ .

   ಎ) ಭಗತ್ ಸಿಂಗ್ ಬಿ) ಚಂದ್ರಶೇಖರ್ ಅಜಾದ್

   ಸಿ) ಅಬುಲ್ ಕಲಾಂ ಅಜಾದ್ ಡಿ) ಸರ್ದಾರ್ ವಲ್ಲಭ ಭಾಯಿ ಪಟೇಲ್

**III. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ, ಉತ್ತರಿಸಿ.**

1. ಗಾಂಧೀಜಿಯವರ ಹೋರಾಟದ ಅಂತಃಸತ್ವದ ಸಾಧನಗಳಾವುವು?
2. ಅಸಹಕಾರ ಚಳವಳಿಯ ಕಾರ್ಯಕ್ರಮಗಳನ್ನು ಪಟ್ಟಿ ಮಾಡಿ.
3. ಚೌರಿ ಚೌರ ಘಟನೆಯನ್ನು ವಿವರಿಸಿ.
4. ಉಪ್ಪಿನ ಸತ್ಯಾಗ್ರಹವನ್ನು ವಿವರಿಸಿ.
5. ಕ್ವಿಟ್ ಇಂಡಿಯಾ ಚಳವಳಿಯು ವಿಫಲವಾಗಲು ಕಾರಣಗಳೇನು?

© KTBS Not to be published

6. ಎರಡನೆಯ ದುಂಡು ಮೇಜಿನ ಪರಿಷತ್ತಿನ ಸಮಾವೇಶದ ಫಲಿತಾಂಶವೇನು?
7. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಸಾಧನೆಗಳನ್ನು ವಿವರಿಸಿ.
8. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ವರ್ಗಗಳ ಬಂಡಾಯಗಳನ್ನು ವಿವರಿಸಿ.
9. ನೆಹರುರವರು ಪ್ರಧಾನಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿ.

**IV. ಚಟುವಟಿಕೆಗಳು :**

1. ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.
2. ಅಂತರ್ಜಾಲದಲ್ಲಿ ಜಲಿಯನ್‌ವಾಲಾಬಾಗ್, ದಂಡಿ ಸತ್ಯಾಗ್ರಹಕ್ಕೆ ಸಂಬಂಧಿಸಿದ ಚಿತ್ರಗಳನ್ನು ಮಾಹಿತಿಯೊಂದಿಗೆ ಸಂಗ್ರಹಿಸಿ.
3. ಗಾಂಧೀಜಿಯವರ ಸತ್ಯಾಗ್ರಹ ಮತ್ತು ಅಹಿಂಸೆ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸಿ.
4. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್‌ರ ಅಭಿಪ್ರಾಯವನ್ನು ಪ್ರಬಂಧ ರೂಪದಲ್ಲಿ ಬರೆಯಿರಿ.

**V. ಯೋಜನೆ :**

1. ಸ್ವಾತಂತ್ರ್ಯ ಹೋರಾಟಕ್ಕೆ ಪೂರಕವಾದ ನಾಟಕ, ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸಿ.

* * * *

© KTBS
Not to be published

## ಅಧ್ಯಾಯ – 9

# ಸ್ವಾತಂತ್ರ್ಯೋತ್ತರ ಭಾರತ

R6T9D7

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಭಾರತ ವಿಭಜನೆಯ ಪರಿಣಾಮಗಳು.*
- *ನಿರಾಶ್ರಿತರ ಸಮಸ್ಯೆ.*
- *ರಾಜ್ಯಗಳ ಪುನರ್ ವಿಂಗಡಣೆ.*
- *ಸರ್ಕಾರ ರಚನಾ ಸಮಸ್ಯೆ.*
- *ಸಂಸ್ಥಾನಗಳ ವಿಲೀನೀಕರಣ.*

1947 ಆಗಸ್ಟ್ 15 ಭಾರತದ ಪಾಲಿಗೆ ಸಂಭ್ರಮದ ಜೊತೆಗೆ ಸಂಕಟದ ಸಂದರ್ಭವೂ ಆಗಿತ್ತು. ಸ್ವಾತಂತ್ರ್ಯವೆಂಬುದು ಅಸಂಖ್ಯ ಹುತಾತ್ಮರ ತ್ಯಾಗ ಮತ್ತು ಬಲಿದಾನಗಳ ಫಲವಾಗಿತ್ತು. ದೇಶ ವಿಭಜನೆಯು ಹೊಸ ಸವಾಲುಗಳನ್ನು ಸೃಷ್ಟಿಸಿತು. ಈ ಸವಾಲುಗಳನ್ನು ಹೊಸ ಸರಕಾರ ಹೇಗೆ ಎದುರಿಸಿತು ಎಂದು ಅರಿಯುವ ಮೊದಲು ಅದು ಸೃಷ್ಟಿಸಿದ ಪರಿಣಾಮಗಳನ್ನು ಅವಲೋಕಿಸಬೇಕು.

ಮೊದಲನೆಯದಾಗಿ, ದೇಶ ವಿಭಜನೆಯು ಹೊಸ ಸಂಕಟಗಳನ್ನು ಸೃಷ್ಟಿಸಿತು. ದೇಶವು ಮತೀಯ ಗಲಭೆಗಳ ದಳ್ಳುರಿಯಿಂದ ನಲುಗಿತ್ತು. ಎರಡೂ ಹೊಸರಾಷ್ಟ್ರಗಳಿಂದ ಮಿಲಿಯಗಟ್ಟಲೆ ಜನ ತಮ್ಮ ಹೊಸ ಬದುಕಿನ ಭರವಸೆಗಾಗಿ ತಮ್ಮ ರಾಷ್ಟ್ರಗಳನ್ನು ಆಯ್ಕೆ ಮಾಡಿಕೊಳ್ಳಲಾರಂಭಿಸಿದರು. ಭಾರತಕ್ಕೆ ಬಂದ ನಿರಾಶ್ರಿತರಿಗೆ ಊಟ ಮತ್ತು ಅವರಿಗೆ ಬೇಕಾದ ಮೂಲಭೂತ ಅಗತ್ಯಗಳನ್ನು ಪೂರೈಸುವುದೇ ದೊಡ್ಡ ಸಮಸ್ಯೆಯಾಯಿತು. ಪಾಕಿಸ್ತಾನಕ್ಕೆ ಹೋದವರಿಗಿಂತ ಭಾರತಕ್ಕೆ ಬಂದವರ ಸಂಖ್ಯೆ ಗಣನೀಯವಾಗಿತ್ತು.

© KTBS
Not to be published

ಎರಡನೆಯದಾಗಿ, ದೇಶಿ ಸಂಸ್ಥಾನಗಳ ವಿಲೀನೀಕರಣ ಬಹಳ ದೊಡ್ಡ ಸಮಸ್ಯೆಯಾಗಿತ್ತು. ಸುಮಾರು 562 ದೇಶಿ ಸಂಸ್ಥಾನಗಳಲ್ಲಿ ಬಹುತೇಕ ಸಂಸ್ಥಾನಗಳು, ಆರಂಭಿಕ ಹಿಂಜರಿಕೆಯೊಂದಿಗೆ ಅನಿವಾರ್ಯವಾಗಿ ಭಾರತದ ಒಕ್ಕೂಟವನ್ನು ಸೇರಲೇಬೇಕಾಯಿತು. ಆದರೆ ಉತ್ತರದಲ್ಲಿ ಕಾಶ್ಮೀರ, ಜುನಾಘಡ ಮತ್ತು ದಕ್ಷಿಣದಲ್ಲಿ ಹೈದರಾಬಾದ್ ಸಂಸ್ಥಾನಗಳು ವಿಲೀನೀ ಪ್ರಕ್ರಿಯೆಗೆ ಸುಲಭವಾಗಿ ಒಳಗಾಗಲಿಲ್ಲ. ಸರದಾರ್ ವಲ್ಲಭಬಾಯಿ ಪಟೇಲರು ಇದನ್ನು ಸವಾಲಾಗಿ ಸ್ವೀಕರಿಸಿ ಯಶಸ್ಸನ್ನು ಪಡೆದರು. ಈ ಮೂಲಕ ದೇಶದ ಆಂತರಿಕ ಸುಭದ್ರತೆಯನ್ನು ಕಾಪಾಡಲಾಯಿತು. ಇದರ ಜೊತೆಗೆ ರಾಷ್ಟ್ರೀಯ ಭಾವೈಕ್ಯತೆಯನ್ನು ಸಾಧಿಸುವ ಹೊಸ ಪ್ರಕ್ರಿಯೆಗೂ ಚಾಲನೆಯನ್ನು ನೀಡಲಾಯಿತು.

ಮೂರನೆಯದಾಗಿ, ವಿಭಜನೆಯು ಭಾರತದ ಅರ್ಥವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮಗಳನ್ನು ಉಂಟುಮಾಡಿತ್ತು. ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯ ವಲಯಗಳನ್ನು ಪುನರ್ ಪರಿಶೀಲಿಸಿ ಅವುಗಳಿಗೆ ಸ್ಥಿರತೆಯನ್ನು ತಂದುಕೊಡಬೇಕಾಗಿತ್ತು. ಈ ಕ್ಷೇತ್ರಗಳ ಮೇಲೆ ಅವಲಂಬಿತವಾಗಿದ್ದ ಸಮುದಾಯಗಳಿಗೆ ಹೊಸ ನೀತಿಗಳನ್ನು ಜಾರಿಗೊಳಿಸುವ ಮೂಲಕ ಭರವಸೆಯನ್ನು ಸೃಷ್ಟಿಸಬೇಕಾಗಿತ್ತು. ಏಕೆಂದರೆ ವಸಾಹತುಶಾಹಿ ಶಕ್ತಿಯು ಸುಮಾರು ಎರಡೂವರೆ ಶತಮಾನಗಳ ಅವಧಿಯಲ್ಲಿ ಭಾರತದ ಸಂಪನ್ಮೂಲಗಳನ್ನು ನಿರಂತರವಾಗಿ ಶೋಷಿಸಿತು. ದಾದಾಬಾಯಿ ನವರೋಜಿಯವರು ತಮ್ಮ 'ಸೋರಿಕೆಯ ಸಿದ್ಧಾಂತ'ದಲ್ಲಿ ಈ ವಿಷಯಗಳನ್ನು ಕೂಲಂಕುಷವಾಗಿ ಚರ್ಚಿಸಿದ್ದಾರೆ.

ನಾಲ್ಕನೆಯದಾಗಿ, ಭಾರತವು ತನ್ನ ಸಂವಿಧಾನವನ್ನು ಹೊಸದಾಗಿ ರೂಪಿಸಿಕೊಳ್ಳುವ ಮತ್ತೊಂದು ಸವಾಲಿತ್ತು. ರಾಜಕೀಯವಾಗಿ ಮತ್ತು ಆಡಳಿತಾತ್ಮಕವಾಗಿ ಕಾನೂನುಗಳ ಅಡಿಯಲ್ಲಿ ಭಾರತವು ಸ್ಥಿರತೆಯನ್ನು ಕಂಡುಕೊಳ್ಳುವುದರ ಜೊತೆಗೆ ಒಂದು ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಉದಯವಾಗಬೇಕಾಗಿತ್ತು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ರಚನೆಗೊಂಡ ಸಂವಿಧಾನ ಕರಡು ಸಮಿತಿಯು ಭಾರತಕ್ಕೆ ಕರಡು ಸಂವಿಧಾನವನ್ನು ರೂಪಿಸಿಕೊಟ್ಟಿತು. ಇದನ್ನು ಸಂವಿಧಾನ ರಚನಾ ಸಭೆಯು ಸ್ವೀಕರಿಸುವ ಮೂಲಕ ವಿಶಿಷ್ಟ ಸಂವಿಧಾನವನ್ನು ನೀಡಿತು. ಇದರ ಮೂಲಕ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗದ ಸಂಸ್ಥೆಗಳು ಬಲಗೊಳ್ಳಲು ಸಾಧ್ಯವಾಯಿತು.

ಐದನೆಯದಾಗಿ, ಭಾರತವು ದೀರ್ಘ ಹೋರಾಟದ ಮೂಲಕ ಪಡೆದ ಸ್ವಾತಂತ್ರವನ್ನು ನೆರೆಯ ಶತ್ರುಗಳಿಂದ ಕಾಪಾಡಿಕೊಳ್ಳಬೇಕಾಗಿತ್ತು. ಈ ಹಿನ್ನೆಲೆಯಲ್ಲಿ ತನ್ನ ರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸಿಕೊಳ್ಳಲು ಬೇಕಾದ ಮಾರ್ಗಗಳನ್ನು ಕಂಡುಕೊಳ್ಳತೊಡಗಿತು. ಇಂದು ಭಾರತದ ಮಿಲಿಟರಿ ಶಕ್ತಿಯು ಜಗತ್ತಿನ ಯಾವ ಮಿಲಿಟರಿ ಶಕ್ತಿಗೂ ಕಡಿಮೆಯಿಲ್ಲ. ಈ ಶಕ್ತಿಯ ಆರಂಭಿಕ ಹೆಜ್ಜೆಗಳನ್ನು ಅವಶ್ಯಕವಾಗಿ ನಾವು ಮನಗಾಣಬೇಕು.

ಆರನೆಯದಾಗಿ, ಭಾರತವು ಜಾತಿ ಮತ್ತು ಲಿಂಗ ಸಂಬಂಧಿ ಸ್ವರೂಪದ ಅಸಮಾನತೆಗಳ ಸಮಾಜವಾದದ್ದರಿಂದ ಅವುಗಳಿಗೆ ಸಮಾನತೆಯ ಆಶಯಗಳ ಅಡಿಯಲ್ಲಿ ಸಬಲೀಕರಣದ ಹೊಸ ಮಾರ್ಗವೊಂದನ್ನು ಕಂಡುಕೊಳ್ಳುವ ಅನಿವಾರ್ಯತೆ ಇತ್ತು. ಇದರ ಜೊತೆಗೆ ಹೊಸ ಹಣಕಾಸು ವ್ಯವಸ್ಥೆ, ವಿದೇಶಾಂಗ ನೀತಿಯ ಸ್ವರೂಪ ಮುಂತಾದ ಗುರುತರ ಸ್ವರೂಪದ ಸವಾಲುಗಳನ್ನು ಎದುರಿಸಬೇಕಾಗಿತ್ತು. ಈ ಎಲ್ಲ ಸವಾಲುಗಳಿಗೆ ಹೊಸದಾಗಿ ರೂಪುಗೊಂಡ ಭಾರತವು ಮುಖಾಮುಖಿಯಾಗಿ ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವವನ್ನು ಕ್ರಮೇಣ ಕಟ್ಟಿಕೊಂಡಿತು.

**ಮತೀಯ ಗಲಭೆಗಳು**

ಜಗತ್ತಿನ ಚರಿತ್ರೆಯಲ್ಲಿ ಯುದ್ಧಗಳಲ್ಲಿ ಪ್ರಾಣ ಕಳೆದುಕೊಂಡಿದ್ದಕ್ಕಿಂತ ಹೆಚ್ಚಿನ ಜನರು ಮತೀಯ ಸಂಘರ್ಷಗಳಲ್ಲಿ ಕಳೆದುಕೊಂಡರು ಎನ್ನುವ ಮಾತಿದೆ. ಇಂದಿಗೂ ಕೂಡ ಧಾರ್ಮಿಕ ನೆಲೆಯಲ್ಲಿ ನಡೆಯುವ ಸಂಘರ್ಷಗಳು ಎಲ್ಲ ಸಮಾಜಗಳಲ್ಲೂ ನಿರಂತರ ಆತಂಕಗಳನ್ನು ಸೃಷ್ಟಿಸುತ್ತಿವೆ. ಚಾರಿತ್ರಿಕವಾಗಿ ಭಾರತ ದೇಶದ ಅನುಭವವು ಇದಕ್ಕಿಂತ ಭಿನ್ನವಾಗಿಲ್ಲ.

ಭಾರತವು ಬಹುಧರ್ಮಗಳ ರಾಷ್ಟ್ರ. ಬೇರೆ ಬೇರೆ ಕಾಲಘಟ್ಟಗಳಲ್ಲಿದ್ದ ರಾಜಕೀಯ ಕಾರಣಗಳಿಂದ ವಿದೇಶಿಯರ ಆಕ್ರಮಣಗಳಿಗೆ ಒಳಗಾದ ಕಾರಣದಿಂದ ಬಹುಧರ್ಮೀಯರ ರಾಷ್ಟ್ರವಾಗಲೇಬೇಕಾದ ಚಾರಿತ್ರಿಕ ಅನಿವಾರ್ಯ ಭಾರತಕ್ಕೆ ಬಂತು. ಈ ಭಿನ್ನತೆಗಳು ಬ್ರಿಟಿಷರ ಆಡಳಿತದ ಕಾಲಘಟ್ಟದಲ್ಲಿ ಅವರು ಅನುಸರಿಸಿದ 'ಒಡೆದು ಆಳುವ ನೀತಿ'ಯಿಂದ ಸಾರ್ವಜನಿಕ ಕ್ಷೇತ್ರಕ್ಕೆ ಪ್ರವೇಶಿಸಿ ರಾಜಕೀಯ ಆಯಾಮಗಳನ್ನು ಪಡೆದುಕೊಂಡವು. ಮತೀಯ ಸಂಘರ್ಷದ ಬೀಜಗಳು ಕೊನೆಗೆ ಮತೀಯವಾದವನ್ನು ಸೃಷ್ಟಿಸಿದವು. ಹೀಗೆ ಸೃಷ್ಟಿಯಾದ ಸಂಘರ್ಷಗಳಲ್ಲಿ ಹಿಂದೂಗಳು ಮತ್ತು ಮುಸ್ಲಿಂರ ನಡುವಿನ ಸಂಘರ್ಷಗಳು ಅನೇಕ ದುರಂತಗಳನ್ನು ಸೃಷ್ಟಿಸಿದವು. ಸ್ವಾತಂತ್ರ್ಯದ ಹೋರಾಟದ ಕಾಲಘಟ್ಟದಲ್ಲಿ 'ಹಿಂದೂ' ಮತ್ತು 'ಮುಸ್ಲಿಂ' ಎಂಬ ಪ್ರತ್ಯೇಕ ಅಸ್ಮಿತೆಗಳು ಹುಟ್ಟಿಕೊಂಡು ಬೆಳೆಯತೊಡಗಿದವು. ಇದರ ಪರಿಣಾಮ 1947ರಲ್ಲಿ ಭಾರತ ಸ್ವಾತಂತ್ರ್ಯವಾದಾಗ, ವಿಶೇಷವಾಗಿ ಉತ್ತರಭಾರತವು ಹಿಂದೆಂದೂ ಕಾಣದ ಮತೀಯ ಗಲಭೆಗಳಿಗೆ ಸಾಕ್ಷಿಯಾಯಿತು. ಲಕ್ಷಾಂತರ ಜನ ಹಿಂದೂಗಳು ಮತ್ತು ಮುಸ್ಲಿಮರು ಈ ಕೋಮುದಳ್ಳುರಿಯಲ್ಲಿ ಸುಟ್ಟು ಕರಕಲಾಗಿ ಹೋದರು. ಕೆಲವೇ ತಿಂಗಳುಗಳಲ್ಲಿ ಐದು ಲಕ್ಷ ಜನರು ಹತ್ಯೆಗೀಡಾದರು ಹಾಗೂ ಸಾವಿರಾರು ಕೋಟೆಗಳು, ಆಸ್ತಿಪಾಸ್ತಿಗಳು ನಷ್ಟಕ್ಕೆ ಈಡಾದವು. ಭಾರತವು ತಾನು ಪಡೆದ ಸ್ವಾತಂತ್ರ್ಯವನ್ನು 15-08-1947ರಂದು ದೆಹಲಿಯಲ್ಲಿ ಆಚರಿಸಿ ಸಂಭ್ರಮಿಸುತ್ತಿದ್ದ ಸಂದರ್ಭದಲ್ಲಿ ಗಾಂಧೀಜಿಯವರು ನೌಕಾಲಿ ಮುಂತಾದ ಸ್ಥಳಗಳಲ್ಲಿ ಗಲಭೆಗೊಳಗಾದ ಸಂತ್ರಸ್ತರನ್ನು ಭೇಟಿಯಾಗಿ ಸಾಂತ್ವನ ಹೇಳುವುದರಲ್ಲಿ ಮಗ್ನರಾಗಿದ್ದರು.

ಸ್ವಾತಂತ್ರ್ಯಾನಂತರ ಭಾರತದ ಮೊದಲ ಪ್ರಧಾನಿಯವರಾದ ಜವಹರ್ ಲಾಲ್ ನೆಹರು ಅವರಿಗೆ ಇದು ಅತ್ಯಂತ ದೊಡ್ಡ ಸವಾಲಾಗಿತ್ತು. 'ನೆಹರೂ ಅವರು ಆದ್ಯತೆಯ ಮೇರೆಗೆ ತಮ್ಮ ಎಲ್ಲಾ ಆಡಳಿತಾತ್ಮಕ

© KTBS Not to be published

ಮತ್ತು ರಾಜಕೀಯ ಶಕ್ತಿಯನ್ನು ಬಳಸಿ ಕೆಲವೇ ತಿಂಗಳುಗಳಲ್ಲಿ ಕೋಮುಗಲಭೆಗಳನ್ನು ನಿಯಂತ್ರಣಕ್ಕೆ ತಂದರು. ಕೋಮುದಳ್ಳುರಿಯ ಭಯಾನಕ ದೃಶ್ಯಗಳು ನೆಹರು ಅವರನ್ನು ಜಾತ್ಯತೀತ ರಾಜ್ಯದ ನಿರ್ಮಾಣಕ್ಕೆ ಪ್ರೇರೇಪಿಸಿದವು. ಭಾರತವು ಜಾತ್ಯತೀತ ರಾಷ್ಟ್ರವಾಗಿ ತನ್ನ ಸಂವಿಧಾನಾತ್ಮಕ ಆಶಯಗಳನ್ನು ಅಳವಡಿಸಿಕೊಳ್ಳಲು ಈ ಹಿನ್ನೆಲೆ ಬಹುತೇಕ ಕಾರಣವಾಯಿತು. ಪ್ರತ್ಯೇಕ ರಾಷ್ಟ್ರವಾಗಿ ಪಾಕಿಸ್ತಾನದ ಹುಟ್ಟನ್ನು ಖಾನ್ ಅಬ್ದುಲ್ ಗಫಾರ್‌ಖಾನ್, ಮೌಲಾನ ಅಬುಲ್ ಕಲಾಂ ಮುಂತಾದವರು ವಿರೋಧಿಸಿದರೂ ಅದನ್ನು ತಡೆಯಲಾಗಲಿಲ್ಲ.

ಇಂದಿಗೂ ಕೋಮು ಸಂಘರ್ಷಗಳು ಮುಂದುವರೆದಿವೆ. ಕೋಮು ಸಂಘರ್ಷಕ್ಕೆ ಅಂತರಾಷ್ಟ್ರೀಯ ಆಯಾಮಗಳು ಇವೆ. ಭಾರತದ ಸಂವಿಧಾನವು ಧರ್ಮವನ್ನು ಪ್ರತಿ ವ್ಯಕ್ತಿಯ ಖಾಸಗಿ ವಿಷಯವನ್ನಾಗಿಸಿದೆ. ಧರ್ಮ ನಿರಪೇಕ್ಷತೆಯ ತಳಹದಿಯಲ್ಲಿ ದೇಶ ಬೆಳೆಯಬೇಕು ಮತ್ತು ಮುನ್ನಡೆಯಬೇಕು ಎನ್ನುವುದೇ ಭಾರತ ಸಂವಿಧಾನದ ಆಶಯ. ಈ ಆಶಯವನ್ನು ಎಲ್ಲ ಭಾರತೀಯರು ಅರಿತು ಬಾಳಬೇಕಾಗಿದೆ.

## ನಿರಾಶ್ರಿತರ ಸಮಸ್ಯೆ

ದೇಶವಿಭಜನೆಯ ಕಾಲದಿಂದ ನಿರಾಶ್ರಿತರ ಸಮಸ್ಯೆ ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿತು. 1947ರಲ್ಲಿ ಸ್ವಾತಂತ್ರ್ಯ ಬಂದ ಸಂದರ್ಭದಲ್ಲೇ ಅನೇಕ ಮಿಲಿಯನ್ ಜನರು ಭಾರತ ಮತ್ತು ಪಾಕಿಸ್ತಾನದ ನಡುವೆ ತಮ್ಮ ಮುಂದಿನ ಬದುಕಿನ ನೆಲೆಯನ್ನು ಕಂಡುಕೊಳ್ಳುವ ಪ್ರಯತ್ನಮಾಡಿದರು. ತಮ್ಮ ತಮ್ಮ ಹುಟ್ಟಿ ಬೆಳೆದ ಊರುಗಳನ್ನು ಬಿಟ್ಟು ಅನೇಕರು ತಮ್ಮ ಧರ್ಮಿಯರೇ ಬಹುಸಂಖ್ಯಾತರಿರುವ ದೇಶದ ಕಡೆ ಮುಖಮಾಡಿದರು. ಭಾರತಕ್ಕೆ ಬಂದ ನಿರಾಶ್ರಿತರ ಸಂಖ್ಯೆ 6 ಲಕ್ಷ ಮಿಲಿಯನ್. ನಿರಾಶ್ರಿತರ ಸಮಸ್ಯೆಯೆ ಸ್ವಾತಂತ್ರ್ಯೋತ್ತರ ಭಾರತದ ಚರಿತ್ರೆಯಲ್ಲಿ ಗಂಭೀರವಾದ ಸಮಸ್ಯೆಯಾಗಿ ಬೆಳೆಯುತ್ತಾ ಹೋಯಿತು. ಪಶ್ಚಿಮ ಪಾಕಿಸ್ತಾನದಿಂದ ಬಂದ ನಿರಾಶ್ರಿತರ ಸಮಸ್ಯೆಗಳನ್ನು ಬಹುತೇಕ 1951 ರ ವೇಳೆಗೆ ಪರಿಹರಿಸಲಾಯಿತು.

ಆದರೆ ಪೂರ್ವ ಪಾಕಿಸ್ತಾನದಿಂದ (ಇಂದಿನ ಬಾಂಗ್ಲಾದೇಶ) ಬರಲಾರಂಭಿಸಿದ ನಿರಾಶ್ರಿತರ ಸಂಖ್ಯೆಯು ಅನೇಕ ವರ್ಷಗಳ ಕಾಲ ಮುಂದುವರೆಯಿತು. ಬಂಗಾಳ ಪ್ರಾಂತ್ಯಕ್ಕೆ ಹೊಂದಿಕೊಂಡಂತಿದ್ದ ಪೂರ್ವ ಪಾಕಿಸ್ತಾನವು ಸ್ವಾತಂತ್ರ್ಯಾನಂತರ ಕೋಮುದಳ್ಳುರಿಯನ್ನು ಎದುರಿಸಬೇಕಾಯಿತು. ಇದರ ಪರಿಣಾಮವಾಗಿ 1971ರ ವರೆಗೂ ನಿರಾಶ್ರಿತರು ವಲಸೆ ಬರುತ್ತಿದ್ದರು. ಭಾರತವು ಬೆಂಬಲಿಸಿದ 1971ರ ಬಾಂಗ್ಲಾ ವಿಮೋಚನಾ ಯುದ್ಧದ ಪರಿಣಾಮವಾಗಿ ಸುಮಾರು 10 ಲಕ್ಷ ನಿರಾಶ್ರಿತರು ಭಾರತಕ್ಕೆ ಬಂದರು. ಭಾರತ ಸರಕಾರ ಮತ್ತು ಪಶ್ಚಿಮ ಬಂಗಾಳ, ಅಸ್ಸಾಂ, ಮೇಘಾಲಯ ಮತ್ತು ತ್ರಿಪುರ ರಾಜ್ಯ ಸರಕಾರಗಳು ಈ ನಿರಾಶ್ರಿತರಿಗೆ ಅವಶ್ಯಕವಾದ ಅನುಕೂಲಗಳನ್ನು ಕಲ್ಪಿಸುವುದರ ಮೂಲಕ ಅವರು ಭಾರತದಲ್ಲಿ ತಮ್ಮ ಭವಿಷ್ಯದ ಬದುಕನ್ನು ಕಟ್ಟಿಕೊಳ್ಳಲು ಸಹಾಯಮಾಡಿದವು. ಬಾಂಗ್ಲಾದಿಂದ ಬಂದ ಬಹುತೇಕ ನಿರಾಶ್ರಿತರಿಗೆ ಬಂಗಾಳಿ ಭಾಷೆ ಮಾತ್ರ ಪರಿಚಯವಿದ್ದುದರಿಂದ ಬಂಗಾಳದಲ್ಲಿ ಮಾತ್ರ ನೆಲೆಯೂರಲು ಪ್ರಯತ್ನಿಸಿದರು. ಇದರ ಪರಿಣಾಮ ಪಶ್ಚಿಮ ಬಂಗಾಳದ ಪ್ರದೇಶಗಳು ಹೆಚ್ಚು ಜನಸಂಖ್ಯೆಯ ಒತ್ತಡಕ್ಕೆ ಒಳಗಾದವು. ಭಾರತವೇ 1960ರ ದಶಕದ ಉತ್ತರಾರ್ಧ ಮತ್ತು 1970ರ ದಶಕದ ಮೊದಲಾರ್ಧದಲ್ಲಿ ತಾನೇ ದೊಡ್ಡ ಆರ್ಥಿಕ ಸಂಕಷ್ಟಗಳಿಗೆ ಒಳಗಾಗಿತ್ತು. ಬರಗಾಲಗಳು ನಮ್ಮ ಆರ್ಥಿಕ ಸ್ಥಿತಿಯನ್ನು ಅಲುಗಾಡಿಸಿದ್ದರೂ, ನಿರಾಶ್ರಿತರ ಸಮಸ್ಯೆಗಳನ್ನು ಮಾನವೀಯ ನೆಲೆಯಲ್ಲಿ ನೋಡಿ ಪರಿಹಾರಗಳನ್ನು ನೀಡಲಾಯಿತು. ನಿರಾಶ್ರಿತರ ಬೃಹತ್ ಸಂಖ್ಯೆ ಮತ್ತು ಸಮಸ್ಯೆಗಳು ಭಾರತದ ಆರ್ಥಿಕ ವ್ಯವಸ್ಥೆಯ ಮೇಲೆ ನೇತ್ಯಾತ್ಮಕ ಪರಿಣಾಮಗಳನ್ನು ಉಂಟುಮಾಡಿದ್ದರೂ, ಭಾರತವು ಮಾನವೀಯತೆಯನ್ನು ಬಿಟ್ಟುಕೊಡಲಿಲ್ಲ.

ನೆಹರು ಅವರ ಕಾಲದಿಂದಲೇ ಟಿಬೆಟ್‌ನಿಂದ ಅನೇಕ ಜನರು ನಿರಾಶ್ರಿತರಾಗಿ ಭಾರತಕ್ಕೆ ಬಂದಿದ್ದಾರೆ, ಅಂದಾಜಿನ ಪ್ರಕಾರ ಸುಮಾರು ಒಂದು ಲಕ್ಷ ಇಪ್ಪತ್ತು ಸಾವಿರ ಟಿಬೆಟಿಯನ್ ನಿರಾಶ್ರಿತರು ಭಾರತದಲ್ಲಿದ್ದಾರೆ. 1960 ರ ದಶಕದಲ್ಲಿ ಅಂದಿನ ಮೈಸೂರು ಸರಕಾರ ಮೈಸೂರು ಜಿಲ್ಲೆಯ ಬೈಲಕುಪ್ಪೆ ಎಂಬಲ್ಲಿ ಟಿಬೆಟಿಯನ್

© KTBS Not to be published

ನಿರಾಶ್ರಿತರಿಗಾಗಿ ಸುಮಾರು 3000 ಎಕರೆಗಳ ಜಮೀನನ್ನು ಮಂಜೂರು ಮಾಡಿತು. ಇಂದು ಇದೇ ಊರು ವಲಸೆ ಬಂದ ಟಿಬೆಟಿಯನ್ನರ ಪ್ರಮುಖ ಕೇಂದ್ರವಾಗಿ ಬೆಳೆದಿದೆ. ಇಷ್ಟೆಲ್ಲ ಸಮಸ್ಯೆಗಳ ನಡುವೆಯೂ ಇವರ ಬರುವಿಕೆಯಿಂದ ಭಾಷೆ ಮತ್ತು ಪ್ರದೇಶಗಳನ್ನು ಮೀರಿದ ಸಾಂಸ್ಕೃತಿಕ ಬಹುತ್ವವು ಮತ್ತಷ್ಟು ವಿಸ್ತೃತವಾಗಿ ಬೆಳೆಯಿತು.

## ಸ್ವಾತಂತ್ರ್ಯಾನಂತರದ ಹೊಸ ಸರ್ಕಾರ ರಚನೆ


1947 ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ತಾತ್ಕಾಲಿಕ ಸರ್ಕಾರ ರಚನೆಯಾಯಿತು. ಮೌಂಟ್ ಬ್ಯಾಟನ್ ಭಾರತದ ಗವರ್ನರ್ ಜನರಲ್ ಆದರು. ಜವಾಹರಲಾಲ್ ನೆಹರೂರವರು ಭಾರತದ ಪ್ರಧಾನ ಮಂತ್ರಿಯಾಗಿ ಸರ್ಕಾರವನ್ನು ರಚಿಸಿದರು. 1950ರ ಜನವರಿ 26ರಂದು ಭಾರತದ ಸಂವಿಧಾನ ಜಾರಿಯಾಯಿತು. ಸಂವಿಧಾನ ಜಾರಿಯಾದ ನಂತರ ಡಾ. ಬಾಬು ರಾಜೇಂದ್ರಪ್ರಸಾದ್‌ರವರು ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರಾದರು. ಸಂವಿಧಾನವು ಭಾರತವನ್ನು ಸಾರ್ವಭೌಮ, ಪ್ರಜಾಸತ್ತಾತ್ಮಕ, ಗಣರಾಜ್ಯವೆಂದು ಘೋಷಿಸಿತು. ಮುಂದೆ ಸಂವಿಧಾನಕ್ಕೆ 42ನೇ ತಿದ್ದುಪಡಿ ತಂದು 'ಜಾತ್ಯತೀತ' ಮತ್ತು 'ಸಮಾಜವಾದಿ' ಎಂಬ ಎರಡು ಅಂಶಗಳನ್ನು 1976ರಲ್ಲಿ ಸೇರಿಸಲಾಯಿತು. ಭಾರತ ಸರ್ಕಾರವು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಿತು. ಭಾರತ ಸಂಸದೀಯ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿತು.

© KTBS Not to be published

**ನಿಮಗಿದು ತಿಳಿದಿರಲಿ :**

***ಸಂಸದೀಯ ಪ್ರಜಾಪ್ರಭುತ್ವ :*** *ಜಗತ್ತಿನ ಹಲವು ಸಂವಿಧಾನಗಳನ್ನು ಮತ್ತು ಅನುಭವಗಳನ್ನು ಅಭ್ಯಾಸ ನಡೆಸಿದ ಸಂವಿಧಾನ ರಚನಾ ಸಮಿತಿಯು, ಜನರಿಂದ ಆಯ್ಕೆಯಾದ ಸಂಸದರಿಂದ ಕೂಡಿದ ಸಂಸತ್ತು ಶ್ರೇಷ್ಠ ಮತ್ತು ಅಂತಿಮವಾಗಿರಬೇಕೆಂದು ಅಭಿಪ್ರಾಯಪಟ್ಟು ಸಂಸದೀಯ ಪ್ರಜಾಪ್ರಭುತ್ವವನ್ನು ಜಾರಿಗೆ ತಂದಿತು.*

## ದೇಶೀಯ ಸಂಸ್ಥಾನಗಳ ವಿಲೀನೀಕರಣ



ವಲ್ಲಭಭಾಯ್ ಪಟೇಲ್

ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ದೇಶದಲ್ಲಿ 562 ಸಂಸ್ಥಾನಗಳಿದ್ದವು. ಬ್ರಿಟಿಷರು ದೇಶ ವಿಭಜನೆಯನ್ನು ಮಾಡಿದ್ದರ ಜೊತೆಯಲ್ಲೇ ಈ ಸಂಸ್ಥಾನಗಳ ಮುಂದೆ ಮೂರು ಅವಕಾಶಗಳನ್ನು ತೆರೆದಿಟ್ಟರು. ಒಂದು, ಭಾರತ ಒಕ್ಕೂಟಕ್ಕೆ ಸೇರಬಹುದು, ಎರಡನೆಯದು, ಪಾಕಿಸ್ತಾನಕ್ಕೆ ಸೇರಬಹುದು, ಮೂರನೆಯದು, ಯಾವುದೇ ದೇಶಕ್ಕೂ ಸೇರ್ಪಡೆಯಾಗದೆ ಸ್ವತಂತ್ರರಾಗಿರಬಹುದಾಗಿತ್ತು. ಈ ಹಿನ್ನೆಲೆಯಲ್ಲಿ 1947ರ ವಿಲೀನ ಕಾಯ್ದೆಯ ಪ್ರಕಾರ ಭಾರತ ಸರ್ಕಾರ ಎಲ್ಲಾ ದೇಶೀಯ ಸಂಸ್ಥಾನಗಳನ್ನು ಭಾರತ ಒಕ್ಕೂಟಕ್ಕೆ ಸೇರಿಸಿಕೊಳ್ಳಲು ಆಹ್ವಾನ ನೀಡಿತು. ಈ ರೀತಿ ವಿಲೀನಗೊಂಡವರಿಗೆ ಪ್ರತಿಯಾಗಿ ರಾಜ್ಯಾದಾಯವನ್ನು ಆಧರಿಸಿ ರಾಜಧನವನ್ನು ನಿಗದಿಪಡಿಸಿತು. ಜೊತೆಗೆ ಕೆಲವೊಂದು ಸವಲತ್ತು ಮತ್ತು ಸ್ಥಾನಮಾನಗಳನ್ನು ಸಹ ಇವರಿಗೆ ನೀಡಲಾಯಿತು. ಮುಂದೆ 1971ರಲ್ಲಿ ಈ ರಾಜಧನ ಮತ್ತು ಇತರ ಸ್ಥಾನಮಾನಗಳನ್ನು ಸರ್ಕಾರ ರದ್ದುಗೊಳಿಸಿತು. ಸಂಸ್ಥಾನಗಳು ವಿಲೀನಗೊಳ್ಳುವ ಪ್ರಕ್ರಿಯೆಯಲ್ಲಿ ಜುನಾಘಢ್, ಹೈದರಾಬಾದ್ ಮತ್ತು ಜಮ್ಮು ಕಾಶ್ಮೀರ, ಈ ಮೂರು ಸಂಸ್ಥಾನಗಳು ತೀವ್ರ ಪ್ರತಿರೋಧವನ್ನು ತೋರಿದವು. 'ಉಕ್ಕಿನ ಮನುಷ್ಯ' ಎಂದು ಖ್ಯಾತಿಯಾಗಿದ್ದ ಭಾರತದ ಪ್ರಥಮ ಗೃಹಮಂತ್ರಿ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ಭಾರತದ ದೇಶೀಯ ಸಂಸ್ಥಾನಗಳನ್ನು ವಿಲೀನಗೊಳಿಸುವ ಕಾರ್ಯಭಾರವನ್ನು ಯಶಸ್ವಿಯಾಗಿ ನಿರ್ವಹಿಸಲಾಯಿತು.

**ಹೈದರಾಬಾದ್ :** ಈ ಸಂಸ್ಥಾನವು ನಿಜಾಮನ ಅಧೀನದಲ್ಲಿತ್ತು. ಈತನು ಸ್ವತಂತ್ರವಾಗುಳಿಯುವ ಉದ್ದೇಶದಿಂದ ಭಾರತಕ್ಕೆ ಸೇರಲು ನಿರಾಕರಿಸಿದನು. ಇದೇ ಸಂದರ್ಭದಲ್ಲಿ ಕಮ್ಯುನಿಸ್ಟರ ನೇತೃತ್ವದಲ್ಲಿ ತೆಲಂಗಾಣ ರೈತರ ಸಶಸ್ತ್ರ ಹೋರಾಟವು ನಿಜಾಮ ಮತ್ತು ಜಮೀನ್ದಾರರ ವಿರುದ್ಧ ನಡೆಯುತ್ತಿತ್ತು. ನಿಜಾಮನ ಕ್ರೂರ ಪಡೆಯಾದ ರಜಾಕರ ಬಗೆಗೆ ಜನತೆಯಲ್ಲಿ ವ್ಯಾಪಕ ಪ್ರತಿರೋಧವಿತ್ತು. ಆಗ ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ ನಿಜಾಮನನ್ನು ಸೋಲಿಸಿ ಹೈದರಾಬಾದ್ ಸಂಸ್ಥಾನವನ್ನು 1948ರಲ್ಲಿ ಭಾರತದೊಂದಿಗೆ ವಿಲೀನಗೊಳಿಸಲಾಯಿತು. ಸರದಾರ ಪಟೇಲರು ದೃಢಮನಸ್ಸಿನಿಂದ ಈ ಬಿಕ್ಕಟ್ಟಿಗೆ ಪರಿಹಾರ ನೀಡಿದರು.

**ಜುನಾಘಢ್ :** ಇದರ ನವಾಬನು ತನ್ನ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಛಿಸಿ ವಿಲೀನೀಕರಣ ಕಾನೂನಿಗೆ ಸಹಿ ಹಾಕಿದನು. ಆಗ ಪ್ರಜೆಗಳು ಆತನ ವಿರುದ್ಧ ಬೀದಿಗಿಳಿದರು. ಇದನ್ನು ಎದುರಿಸಲಾಗದೆ ನವಾಬನು ರಾಜ್ಯ ಬಿಟ್ಟು ಪಲಾಯನ ಮಾಡಿದನು. ಅಲ್ಲಿನ ದಿವಾನ ಭಾರತ ಸರ್ಕಾರಕ್ಕೆ ಮಾಡಿದ ಮನವಿಯನ್ನು ಆಧರಿಸಿ ಸೈನ್ಯವನ್ನು ಕಳುಹಿಸಿ ಶಾಂತಿ ಸ್ಥಾಪನೆ ಮಾಡಲಾಯಿತು. 1949ರಲ್ಲಿ ಜುನಾಘಢ್ ಭಾರತ ಒಕ್ಕೂಟಕ್ಕೆ ಸೇರ್ಪಡೆಯಾಯಿತು.

**ಜಮ್ಮು-ಕಾಶ್ಮೀರ :** ಜಮ್ಮು-ಕಾಶ್ಮೀರಿನ ರಾಜನಾಗಿದ್ದ ಹರಿಸಿಂಗ್‌ನು ಸ್ವತಂತ್ರವಾಗುಳಿಯಲು ನಿರ್ಧರಿಸಿದ್ದನು. ಜಮ್ಮು ಕಾಶ್ಮೀರವು ಭಾರತಕ್ಕೆ ಸೇರಿ ಬಿಡಬಹುದೆಂಬ ಆಂತಕದಿಂದ ಪಾಕಿಸ್ತಾನವು ಕಾಶ್ಮೀರ ಕಣಿವೆಯ ಮುಸ್ಲಿಂ ಬುಡಕಟ್ಟು ಜನರನ್ನು ದಾಳಿ ಮಾಡುವಂತೆ ಪ್ರಚೋದಿಸಿತು. ಪಾಕಿಸ್ತಾನ ಸೇನೆಯ ಬೆಂಬಲಿತ ಪಠಾಣ ಬುಡಕಟ್ಟು ಜನಾಂಗವು ಭಾರತದ ಪ್ರದೇಶಕ್ಕೆ ನುಗ್ಗಲು ಪ್ರಯತ್ನಿಸಿ ಸಾಕಷ್ಟು ಪ್ರದೇಶವನ್ನು ಆಕ್ರಮಿಸಿತು. ಹರಿಸಿಂಗ್ ಭಾರತದ ಒಕ್ಕೂಟಕ್ಕೆ ಸೇರಲು ಸಮ್ಮತಿಸದೆ ಭಾರತೀಯ ಸೇನೆ ಅಲ್ಲಿಗೆ ಪ್ರವೇಶಿಸುವಂತಿರಲಿಲ್ಲ. ಆ ಸಂದರ್ಭದ ಗಂಭೀರತೆಯನ್ನು ಅರಿತ ರಾಜ ಹರಿಸಿಂಗನು ಅಕ್ಟೋಬರ್ 1947ರಲ್ಲಿ ಭಾರತದಲ್ಲಿ ಕಾಶ್ಮೀರವನ್ನು ವಿಲೀನಗೊಳಿಸಲು ಸಹಿಯನ್ನು ಹಾಕಿದನು. ನಂತರ ಭಾರತ ಸೇನೆಯು ಪಾಕಿಸ್ತಾನ ಬೆಂಬಲಿತ ಪಡೆಯನ್ನು ಹಿಮ್ಮೆಟ್ಟಿಸಿತು. ಇದೇ ಸಂದಂರ್ಭದಲ್ಲಿ ಈ ವಿಷಯವನ್ನು ವಿಶ್ವಸಂಸ್ಥೆಗೆ ತೆಗೆದುಕೊಂಡು ಹೋಗಲಾಯ್ತು. ಆದರೆ, ಕಾಶ್ಮೀರದ ಒಂದು ಭಾಗ ಪಾಕಿಸ್ತಾನದ ವಶದಲ್ಲಿ ಉಳಿಯಿತು. ಇದರ ವಿರುದ್ಧ ಭಾರತವು ವಿಶ್ವಸಂಸ್ಥೆಗೆ ದೂರು ಸಲ್ಲಿಸಿತು. ವಿಶ್ವಸಂಸ್ಥೆ ಕದನ ವಿರಾಮದ ಆದೇಶವನ್ನು ಜನವರಿ 1, 1949 ರಂದು ನೀಡಿತು. ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದ ವಾಯವ್ಯ ಪ್ರದೇಶವನ್ನು 'ಪಾಕ್ ಆಕ್ರಮಿತ ಪ್ರದೇಶ'ವೆಂದು ಈಗಲೂ ಕರೆಯಲಾಗುತ್ತದೆ. ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನವು ವಿಶಿಷ್ಟವಾಗಿದೆ.

**ಪಾಂಡಿಚೇರಿ :** ಸ್ವಾತಂತ್ರ್ಯದ ನಂತರದಲ್ಲಿ ಫ್ರೆಂಚ್‌ರು ತಮ್ಮ ವಸಾಹತುಗಳಾದ ಪಾಂಡಿಚೇರಿ, ಕಾರೈಕಲ್, ಮಾಹೆ ಮತ್ತು ಚಂದ್ರನಗರಗಳ ಮೇಲಿನ ಹಿಡಿತವನ್ನು ಮುಂದುವರಿಸಿದ್ದರು. ಇವು ಭಾರತಕ್ಕೆ ಸೇರಬೇಕೆಂದು ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಇತರ ಸಂಘಟನೆಗಳ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ 1954ರಲ್ಲಿ ಈ ಪ್ರದೇಶಗಳು ಭಾರತಕ್ಕೆ ಸೇರ್ಪಡೆಗೊಂಡವು. 1963ರಲ್ಲಿ ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಯಿತು.

**ಗೋವಾ :** ಪೋರ್ಚುಗೀಸರ ವಸಾಹತುವಾಗಿ ಮುಂದುವರಿದ ಗೋವಾವನ್ನು, ಭಾರತಕ್ಕೆ ಸೇರಿಸಬೇಕೆಂದು ನಿರಂತರವಾದ ಚಳವಳಿ ನಡೆಯಿತು. ಗೋವಾವನ್ನು ತೆರವುಗೊಳಿಸಬೇಕೆಂದು ಆದೇಶ ನೀಡಿದರೂ ಬಗ್ಗದ ಪೋರ್ಚುಗೀಸರು, ಆಫ್ರಿಕಾ ಮತ್ತು ಯುರೋಪಿನಿಂದ ಹೆಚ್ಚಿನ ಸೈನ್ಯವನ್ನು ತರಿಸಿಕೊಂಡು ಚಳವಳಿಯನ್ನು ದಮನ ಮಾಡಿ ಅಧಿಕಾರವನ್ನು ಬಲಪಡಿಸಿಕೊಳ್ಳಲು ಪ್ರಯತ್ನಿಸಿದರು. 1955ರಲ್ಲಿ ಭಾರತದ ವಿವಿಧ ಭಾಗಗಳಿಂದ ಸತ್ಯಾಗ್ರಹಿಗಳು ಬಂದು ಗೋವಾದಿಂದ ವಸಾಹತುಶಾಹಿಗಳು ತೊಲಗಬೇಕೆಂದು ವಿಮೋಚನಾ ಹೋರಾಟ ಪ್ರಾರಂಭಿಸಿದರು. 1961ರಲ್ಲಿ ಭಾರತದ ಸೈನ್ಯ ಮಧ್ಯೆ ಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು. 1987ರವರೆಗೂ ಕೇಂದ್ರಾಡಳಿತ ಪ್ರದೇಶವಾಗಿದ್ದ ಗೋವಾ ನಂತರ ರಾಜ್ಯವಾಯಿತು.

## ಭಾಷಾವಾರು ರಾಜ್ಯಗಳ ರಚನೆ

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿಯೆ ಪ್ರಾರಂಭವಾದ ಈ ಹೋರಾಟ ಭಾರತ ಸ್ವತಂತ್ರಗೊಂಡ ನಂತರವೂ ಮುಂದುವರೆದ ಪ್ರಮುಖವಾದ ಪ್ರಜಾಸತ್ತಾತ್ಮಕ ಚಳವಳಿಯಾಗಿದೆ, ಜನರಿಗೆ ಉತ್ತಮವಾದ ಆಡಳಿತವನ್ನು ನೀಡಲು ಜನರ ಭಾಷೆಯನ್ನು ಆಧರಿಸಿದ ಭೌಗೋಳಿಕ ಗಡಿಗಳನ್ನು ಗುರುತಿಸಬೇಕೆಂಬ

© KTBS not to be republished

ಒತ್ತಾಯ ತೀವ್ರವಾಗಿತ್ತು. ಬ್ರಿಟಿಷ್ ಮತ್ತು ದೇಶೀಯ ಸಂಸ್ಥಾನಗಳೆರಡರಲ್ಲೂ ಜನರಾಡುವ ಭಾಷೆಯಲ್ಲಿ ಆಡಳಿತ ನಡೆಸುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ದೇಶಾದ್ಯಂತ ಭಾಷಾವಾರು ರಾಜ್ಯಗಳನ್ನು ರಚಿಸಬೇಕೆಂಬ ಕೂಗು ತೀವ್ರವಾಗಿತ್ತು. ವಿಶಾಲಾಂಧ್ರ ರಾಜ್ಯ ರಚಿಸಬೇಕೆಂದು ಆಂಧ್ರಮಹಾಸಭಾದ ನೇತೃತ್ವದಲ್ಲಿ 1952ರಲ್ಲಿ ಪೊಟ್ಟಿ ಶ್ರೀರಾಮುಲು 58 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿ ಅಸುನೀಗಿದ ನಂತರ ಈ ಬೇಡಿಕೆ ತೀವ್ರ ಸ್ವರೂಪವನ್ನು ಪಡೆಯಿತು. ಇದರ ಪರಿಣಾಮವಾಗಿ ಮೊದಲ ಭಾಷಾವಾರು ರಾಜ್ಯವಾಗಿ 1953ರಲ್ಲಿ ಆಂಧ್ರಪ್ರದೇಶ ರಚನೆಯಾಯಿತು. 1953ರಲ್ಲಿ ಸರ್ಕಾರವು ರಾಜ್ಯ ಪುನರ್ವಿಂಗಡಣಾ ಆಯೋಗವನ್ನು ರಚಿಸಿತು. ಇದರಲ್ಲಿ ಫಜಲ್ ಅಲಿ ಅಧ್ಯಕ್ಷರಾಗಿ ಕೆ.ಎಂ.ಫಣಿಕ್ಕರ್ ಮತ್ತು ಹೆಚ್.ಎನ್.ಕುಂಜ್ರು ಸದಸ್ಯರಾಗಿದ್ದರು. ಈ ಆಯೋಗದ ವರದಿಯಂತೆ 1956ರಲ್ಲಿ ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದಿತು. ಈ ಕಾನೂನಿನ ಪ್ರಕಾರ ಅಂದು ದೇಶದಲ್ಲಿ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ರಚನೆಯಾದವು.

ಕನ್ನಡ ಮಾತನಾಡುವ ಪ್ರದೇಶಗಳು ಹಲವು ಸಂಸ್ಥಾನಗಳಲ್ಲಿ ಹರಿದು ಹಂಚಿಹೋಗಿದ್ದವು. ಅಕ್ಟೋಬರ್ 24, 1947ರಲ್ಲಿ ಮೈಸೂರು ರಾಜ್ಯವಾಯಿತು. ಇತರೆ ಕನ್ನಡ ಭಾಷಾ ಪ್ರದೇಶಗಳನ್ನು ಒಟ್ಟುಗೂಡಿಸುವ ಬೇಡಿಕೆಯಿಟ್ಟು 'ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು' ನೇತೃತ್ವದಲ್ಲಿ ಚಳವಳಿ ನಡೆಯಿತು. ಅಂತಿಮವಾಗಿ 1956 ನವೆಂಬರ್ 1 ರಂದು ವಿಶಾಲ 'ಮೈಸೂರು ರಾಜ್ಯ'ವು ಅಸ್ತಿತ್ವಕ್ಕೆ ಬಂದಿತು. ಮುಂದೆ 1973ರಲ್ಲಿ 'ಕರ್ನಾಟಕ' ಎಂದು ಮರುನಾಮಕರಣ ಮಾಡಲಾಯಿತು. ಇಂದು ಭಾರತದಲ್ಲಿ ಒಟ್ಟು 28 ರಾಜ್ಯಗಳು ಮತ್ತು ದೆಹಲಿಯೂ ಸೇರಿದಂತೆ 9 ಕೇಂದ್ರಾಡಳಿತ ಪ್ರದೇಶಗಳು ಇವೆ.

© KTBS Not to be published

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಕಂಪನಿಯ ಕೊನೆಯ ಗೌರ್ನರ್ ಜನರಲ್ ____________ ಆಗಿದ್ದನು.
2. ಭಾರತದ ಪ್ರಥಮ ಗೃಹಮಂತ್ರಿ ____________ ಆಗಿದ್ದರು.
3. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ___________ .
4. ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಗಿ __________ರಲ್ಲಿ ಸೇರಿತು.
5. ರಾಜ್ಯ ಪುನರ್ವಿಂಗಡಣಾ ಕಾನೂನು ______________ ರಲ್ಲಿ ಜಾರಿಗೆ ಬಂದಿತು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಭಾರತವು ಸ್ವಾತಂತ್ರ್ಯಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು?
2. ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು?
3. ಪಾಂಡಿಚೇರಿಯನ್ನು ಫ್ರೆಂಚರಿಂದ ವಿಮುಕ್ತಗೊಳಿಸಿದ ರೀತಿಯನ್ನು ವಿವರಿಸಿ.
4. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು?
5. ಭಾಷಾವಾರು ಪ್ರಾಂತ್ಯಗಳ ವಿಂಗಡಣಾ ಕ್ರಮವನ್ನು ಕುರಿತು ಬರೆಯಿರಿ.

**III. ಚಟುವಟಿಕೆ :**

1. ಭಾರತದ ಭೂಪಟವನ್ನು ಬಿಡಿಸಿ, ರಾಜ್ಯಗಳನ್ನು ಗುರುತಿಸಿ.

**IV. ಯೋಜನೆ :**

1. ಭಾರತದಲ್ಲಿರುವ ಪ್ರತಿ ರಾಜ್ಯಗಳ ಮಾತೃಭಾಷೆ, ರಾಜಧಾನಿಗಳ ಪಟ್ಟಿ ಸಿದ್ಧಪಡಿಸಿ.
2. ನಮ್ಮ ನೆರೆ ರಾಜ್ಯಗಳ ಸಾಂಸ್ಕೃತಿಕ ವಿಶೇಷತೆಯ ಬಗ್ಗೆ ಶಿಕ್ಷಕರ ನೆರವಿನಿಂದ ಮತ್ತು ಅಂತರ್ಜಾಲದ ನೆರವಿನಿಂದ ವರದಿ ಸಿದ್ಧಪಡಿಸಿ.

* * * *

## ಅಧ್ಯಾಯ –10

# 20ನೆಯ ಶತಮಾನದ ರಾಜಕೀಯ ಆಯಾಮಗಳು

S1L3E7

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಪ್ರಥಮ ಮಹಾಯುದ್ಧ*
- *ಸರ್ವಾಧಿಕಾರಿಗಳ ಉದಯ*
- *ಚೀನಾದ ಕ್ರಾಂತಿ*
- *ಅಮೆರಿಕಾದ ಉದಯ*
- *ರಷ್ಯಾ ಕ್ರಾಂತಿ*
- *ಎರಡನೇ ಮಹಾಯುದ್ಧ*
- *ಶೀತಲಸಮರ*

### ಪ್ರಥಮ ಮಹಾಯುದ್ಧ

1914ಕ್ಕೂ ಹಿಂದೆ ಯುರೋಪಿನ ಪ್ರಬಲ ರಾಷ್ಟ್ರಗಳಾದ ಬ್ರಿಟನ್, ಜರ್ಮನಿ, ಫ್ರಾನ್ಸ್, ಇಟಲಿ, ಆಸ್ಟ್ರೋ–ಹಂಗೇರಿಯನ್ ಸಾಮ್ರಾಜ್ಯ ಮತ್ತು ರಷ್ಯಾ ವಸಾಹತುಗಳ ಮೇಲೆ ಹಿಡಿತ ಸಾಧಿಸುವ ಕಾರಣಕ್ಕಾಗಿ ನಿರಂತರವಾದ ಸಂಘರ್ಷದಲ್ಲಿದ್ದವು. ಕೈಗಾರಿಕಾ ಕ್ರಾಂತಿ ಮತ್ತು ನೂತನ ಅವಿಷ್ಕಾರಗಳು ಯುರೋಪಿನ ದೇಶಗಳಲ್ಲಿ ತೀವ್ರವಾದ ಪೈಪೋಟಿಯನ್ನು ಸೃಷ್ಟಿಸಿದವು. ಭಾರತವನ್ನೂ ಒಳಗೊಂಡು ಜಗತ್ತಿನ ನೂರಾರು ದೇಶಗಳ ಮಾರುಕಟ್ಟೆಯನ್ನು ಮತ್ತು ಅಲ್ಲಿನ ಸಂಪನ್ಮೂಲವನ್ನು ಕಬಳಿಸಬೇಕೆಂಬ ದುರಾಲೋಚನೆಯಿಂದ ಈ ಯುರೋಪಿಯನ್ ದೇಶಗಳು ವಸಾಹತುವಿನ ಸಂಚನ್ನು ರೂಪಿಸಿದವು. ಈ ಪ್ರಕ್ರಿಯೆಯಲ್ಲಿ ಉಂಟಾದ ಸಂಕೀರ್ಣ ಒಪ್ಪಂದಗಳು ಭೌಗೋಳಿಕ ಗಡಿಗಳ ಸಮಸ್ಯೆಗಳನ್ನು ಜ್ವಲಂತಗೊಳಿಸಿದವು. ಇದು ಯುರೋಪಿನ ಬಲಾಢ್ಯ ದೇಶಗಳ ನಡುವಿನ ಶಕ್ತಿ ಸಮತೋಲನವನ್ನು ಏರುಪೇರು ಮಾಡುತ್ತಿತ್ತು.

ಇದರಿಂದಾಗಿ ಪ್ರತಿಯೊಂದು ಬಲಾಢ್ಯ ರಾಷ್ಟ್ರವೂ ಅತಿಯಾದ ಮಿಲಿಟರೀಕರಣವನ್ನು ಮಾಡಿತು. ಅನೇಕ ಮೈತ್ರಿಕೂಟಗಳು ಏರ್ಪಟ್ಟವು. ಅತಿಯಾದ ರಾಷ್ಟ್ರೀಯತೆಯು ಅಲ್ಲಲ್ಲಿ ಬೆಳೆಯಿತು. ಸಾಮ್ರಾಜ್ಯವಾದದ ನೀತಿಗಳು ಬಲಗೊಂಡವು. ಮೊದಲ ಮಹಾಯುದ್ಧವು ಈ ದೇಶಗಳನ್ನು ಎರಡು ವಿರುದ್ಧ ಬಣಗಳನ್ನಾಗಿ ವಿಭಜಿಸಿತು. ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾ ಕದನ ಬಾಂಧವ್ಯತ್ರಯ (Triple Entente) ಮೈತ್ರಿಕೂಟ ಎನಿಸಿದರೆ ಜರ್ಮನಿ, ಆಸ್ಟ್ರಿಯಾ–ಹಂಗೇರಿ ಮತ್ತು ಇಟಲಿ ಕದನ ಸೌಹಾರ್ದತ್ರಯ (Triple Alliance) ಮೈತ್ರಿಕೂಟವನ್ನು ರಚಿಸಿಕೊಂಡವು. ಸ್ವಲ್ಪಕಾಲದಲ್ಲೇ ಇಟಲಿ ವಿರೋಧಿ ಬಣಕ್ಕೆ ಸೇರಿಕೊಂಡಿತು. ಯುದ್ಧ ಬೆಳೆದಂತೆಲ್ಲಾ ಗುಂಪುಗಳಲ್ಲಿ ಬದಲಾವಣೆಗಳಾದವು.

ಮೊದಲ ಮಹಾಯುದ್ಧ 1914 ರಿಂದ 1918ರವರೆಗೆ ನಡೆಯಿತು. ಯುದ್ಧ ಪ್ರಾರಂಭವಾಗುವುದಕ್ಕೆ ತಕ್ಷಣದ ಕಾರಣವೆಂದರೆ, ಜುಲೈ 28 ರಂದು ಆಸ್ಟ್ರಿಯಾದ ರಾಜಕುಮಾರ ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆಯಾಯಿತು. ಈ ಘಟನೆಯು ಆಸ್ಟ್ರಿಯಾ ಮತ್ತು ಸರ್ಬಿಯಾ ದೇಶಗಳ ನಡುವೆ ತಕ್ಷಣವೇ ಬಿಕ್ಕಟ್ಟನ್ನು ಸೃಷ್ಟಿಸಿತು.

ಯುದ್ಧದ ಪ್ರಾರಂಭದಲ್ಲಿ ಅಮೆರಿಕ ತಟಸ್ಥವಾಗಿತ್ತು. ರಷ್ಯಾ ಜರ್ಮನಿಯ ವಿರುದ್ಧವಾಗಿತ್ತು. ಯುದ್ಧ ಕೊನೆ ಹಂತ ತಲುಪುವಾಗ ಪರಿಸ್ಥಿತಿ ಬದಲಾಯಿತು. ಅಮೆರಿಕವು ಬ್ರಿಟನ್ ಮತ್ತು ಫ್ರಾನ್ಸ್ ಜೊತೆ ಸೇರಿತು. ನವೆಂಬರ್ 1917ರಲ್ಲಿ ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿ ಸಂಭವಿಸಿ ಜರ್ಮನಿಯೊಂದಿಗೆ ಯುದ್ಧ ನಿಲುಗಡೆ ಒಪ್ಪಂದವನ್ನು ಮಾಡಿಕೊಂಡು ಯುದ್ಧದಿಂದ ಹಿಂದೆ ಸರಿಯಿತು. ಮೈತ್ರಿಬಣದ ದಾಳಿಗಳಿಂದ ಜರ್ಜರಿತವಾದ ಜರ್ಮನಿ ಯುದ್ಧವನ್ನು ಮುಂದುವರಿಸಲಾಗದೆ ಸೋಲೊಪ್ಪಿಕೊಂಡಿತು.

© KTBS Not to be republished

ಮೈತ್ರಿಕೂಟವು 1919ರಲ್ಲಿ ವಿಶೇಷವಾಗಿ ಜರ್ಮನಿಗೆ ಅತ್ಯಂತ ಅವಮಾನಕಾರಿಯಾದ ವರ್ಸೈಲ್ಸ್ ಒಪ್ಪಂದಕ್ಕೆ ಸಹಿ ಹಾಕಿತು. ಆಸ್ಟ್ರೋ-ಹಂಗೇರಿ ಮತ್ತು ಆಟೋಮನ್ ಸಾಮ್ರಾಜ್ಯಗಳು ತಮ್ಮ ಅಸ್ತಿತ್ವ ಕಳೆದುಕೊಂಡವು. ಜರ್ಮನಿ ತನ್ನ ಹೆಚ್ಚಿನ ಪ್ರದೇಶಗಳನ್ನು ಕಳೆದುಕೊಂಡಿತು. ಯುರೋಪಿನ ಭೂಪಟವೇ ಬದಲಾಗಿ ಹೋಯಿತು. ಹಲವಾರು ಸಣ್ಣ ಸ್ವತಂತ್ರ ರಾಷ್ಟ್ರಗಳು ಅಸ್ತಿತ್ವಕ್ಕೆ ಬಂದವು. ಮುಂದಿನ ದಿನಗಳಲ್ಲಿ ಸಂಭವನೀಯ ಯುದ್ಧಗಳನ್ನು ತಡೆಯುವ ದೃಷ್ಟಿಯಿಂದ ರಾಷ್ಟ್ರಸಂಘ (ಲೀಗ್ ಆಫ್ ನೇಷನ್ಸ್) 1919ರಲ್ಲಿ ರಚನೆಯಾಯಿತು. ಸೋತ ರಾಷ್ಟ್ರಗಳೊಳಗೆ ಬೆಳೆದ ಅವಮಾನಕರ ಭಾವನೆಗಳು ಉಗ್ರ ರಾಷ್ಟ್ರೀಯತೆಗೆ ಕಾರಣವಾಯಿತು. ಜರ್ಮನಿಯ ಮೇಲೆ ಹೇರಲಾದ ಯುದ್ಧನಷ್ಟ ಪರಿಹಾರ ಮತ್ತು ಇತರ ತೀರ್ಮಾನಗಳು ಅಲ್ಲಿನ ಜನರ ಮೇಲೆ ಪರಿಣಾಮ ಬೀರಿದವು. ನಿರುದ್ಯೋಗ, ಬಡತನ, ಬೆಳವಣಿಗೆ ಕುಸಿತದಿಂದ ಉಂಟಾದ ಅತೃಪ್ತಿಯನ್ನು ಜರ್ಮನ್ ಕೈಗಾರಿಕೋದ್ಯಮಿಗಳು ತಮ್ಮ ಲಾಭಕ್ಕಾಗಿ ಬಳಸಿಕೊಂಡರು. ಎರಡನೆಯ ಪ್ರಪಂಚ ಯುದ್ಧಕ್ಕೆ ಕಾರಣವಾದ ಹಿಟ್ಲರ್‌ನಂತಹ ಸರ್ವಾಧಿಕಾರಿಯ ಬೆಳವಣಿಗೆಗೆ ಇದು ಸಹಾಯ ಮಾಡಿತು. ಬ್ರಿಟನ್, ಫ್ರಾನ್ಸ್, ಜರ್ಮನಿ ಮತ್ತು ಅಮೆರಿಕದ ಶಸ್ತ್ರಾಸ್ತ್ರ ತಯಾರಿಸುವ ವ್ಯಾಪಾರಸ್ಥರು ಅಪಾರ ಪ್ರಮಾಣದಲ್ಲಿ ಲಾಭವನ್ನು ಮಾಡಿದರು.


**ನಿಮಗಿದು ತಿಳಿದಿರಲಿ :** *ಮೊದಲ ಮಹಾಯುದ್ಧದಲ್ಲಿ ಎರಡೂ ಬಣಗಳ ನಾಗರಿಕರು ಮತ್ತು ಸೈನಿಕರೂ ಸೇರಿದಂತೆ ಸುಮಾರು 1,00,00,000 ಜನ ಪ್ರಾಣ ಕಳೆದುಕೊಂಡರು. 2,00,00,000 ಜನ ಗಾಯಗೊಂಡರು ಮತ್ತು 35,00,000 ಜನ ಶಾಶ್ವತವಾಗಿ ಅಂಗವಿಕಲರಾದರು. ಯಾವುದೇ ಯುದ್ಧದ ರೀತಿಯಲ್ಲಿ ಮೊದಲ ಮಹಾಯುದ್ಧವೂ ಸಹ ಕೆಲವರ ಲಾಭಕ್ಕಾಗಿ ಪೈಪೋಟಿಯಿಂದ ನಡೆಯಿತು. ಆದರೆ ಅಪಾರವಾದ ಸಾವು-ನೋವುಗಳು ಸಂಭವಿಸಿದವು.*

© KTBS Not to be republished

## ರಷ್ಯಾ ಕ್ರಾಂತಿ

ರಷ್ಯಾ ಜಗತ್ತಿನ ಉಳಿದ ಎಲ್ಲಾ ದೇಶಗಳಿಗಿಂತಲೂ ವಿಸ್ತೀರ್ಣದಲ್ಲಿ ದೊಡ್ಡದು. 19ನೆಯ ಶತಮಾನದಲ್ಲಿ ರಷ್ಯಾವನ್ನು ಝಾರ್ ದೊರೆಗಳು ಆಳುತ್ತಿದ್ದರು. ಅವರು ತಮ್ಮ ಕೆಳಗಿದ್ದ ಕುಲೀನರು, ಜಮೀನ್ದಾರರು ರೈತರನ್ನು ಮತ್ತು ಬಡವರನ್ನು ತೀವ್ರವಾಗಿ ಶೋಷಿಸುತ್ತಿದ್ದರು. ಸಣ್ಣದಾಗಿ ಬೆಳೆಯುತ್ತಿದ್ದ ಬಂಡವಾಳದಾರರು ಕಾರ್ಮಿಕರನ್ನು ಮತ್ತು ಇತರರನ್ನು ಶೋಷಿಸುತ್ತಿದ್ದರು. ಝಾರ್ ಚಕ್ರವರ್ತಿಗಳ ಆಳ್ವಿಕೆಯಿಂದ ಜನರು ತುಂಬಾ ಬೇಸತ್ತಿದ್ದರು. ಝಾರ್‌ಶಾಹಿಯನ್ನು ರಾಷ್ಟ್ರೀಯತೆಗಳ ಜೈಲು ಎಂದು ಕರೆಯಲಾಗುತ್ತಿತ್ತು. 1905ರಲ್ಲಿ ಜಪಾನ್‌ನಂತಹ ಪುಟ್ಟ ದೇಶ ರಷ್ಯಾವನ್ನು ಸೋಲಿಸಿದ್ದು ದೇಶದೊಳಗೆ ಝಾರ್ ದೊರೆಗಳ ವಿರುದ್ಧ ವ್ಯಾಪಕವಾದ ಪ್ರತಿರೋಧವನ್ನು ಎಬ್ಬಿಸಿತು. ಇದರಿಂದಾಗಿ ಅನೇಕ ದಂಗೆಗಳು ನಡೆದವು. ಕಾರ್ಮಿಕರು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದರು. ಕಾರ್ಖಾನೆಗಳ ಕಾರ್ಮಿಕರು ಮತ್ತು ಹಳ್ಳಿಗಳ ರೈತರು ಶಸ್ತ್ರಗಳನ್ನು ಹಿಡಿದು ಹೋರಾಡಿದರು. ಇದನ್ನು ಝಾರ್‌ನ ಸೈನ್ಯ ನಿರ್ದಯವಾಗಿ ಹತ್ತಿಕ್ಕಿತು. ಇದರ ಅನುಭವದಲ್ಲಿ ಮುಂದೆ ವ್ಲಾಡಿಮಿರ್ ಇಲಿಚ್ ಲೆನಿನ್ ರೈತರು ಮತ್ತು ಕಾರ್ಮಿಕರಿಗೆ ಕ್ರಾಂತಿಕಾರಿ ಮಾರ್ಗದರ್ಶನವನ್ನು ನೀಡಿದರು. ಇದರಿಂದಾಗಿ ದುಡಿಯುವ ಜನ ಹೋರಾಟಗಳಲ್ಲಿ ಹೆಚ್ಚೆಚ್ಚು ತೊಡಗಿಸಿಕೊಂಡರು. ಇದೇ ಸಂದರ್ಭದಲ್ಲಿ ಲೆನಿನ್ ದೇಶ ಭ್ರಷ್ಟನಾಗಿದ್ದನು. ಮುಷ್ಕರಗಳ ತೀವ್ರತೆ ಹೆಚ್ಚಾಗಿ ರಷ್ಯಾದ ಕೊನೆಯ ದೊರೆ ಎರಡನೆಯ ನಿಕೋಲಸ್‌ನು ದೇಶ ತ್ಯಜಿಸಿ ಓಡಿಹೋದನು. ಇದನ್ನೇ 1917ರ 'ಫೆಬ್ರವರಿ ಕ್ರಾಂತಿ' ಎನ್ನುತ್ತಾರೆ. ಅಧಿಕಾರವನ್ನು ಉದಾರವಾದಿಗಳಾದ 'ಮೆನ್ಶವಿಕ್'ರು ಪಡೆದುಕೊಂಡರು. ಇವರು ರಷ್ಯಾವನ್ನು ಪ್ರಜಾಪ್ರಭುತ್ವ ಗಣರಾಜ್ಯವೆಂದು ಘೋಷಿಸಿದರು.

ಆ ಕಾಲಕ್ಕೆ ದೇಶಭ್ರಷ್ಟರಾಗಿದ್ದ  ಲೆನಿನ್ ವಾಪಸ್ ರಷ್ಯಾಗೆ ಬಂದು ಜನರಿಗೆ ಸರಳವಾದ 'ಶಾಂತಿ, ಆಹಾರ, ಭೂಮಿ' ಎಂಬ ಜನಪರ ಘೋಷಣೆಗಳನ್ನು ನೀಡಿದರು. ಇದಕ್ಕೆ ಕಾರ್ಮಿಕರು ಮತ್ತು ಗ್ರಾಮೀಣ ಬಡವರು ವ್ಯಾಪಕವಾಗಿ ಸ್ಪಂದಿಸಿದರು. ದುಡಿಮೆಗಾರರ ಪಕ್ಷದವರಾದ 'ಬೋಲ್ಶವಿಕ್'ರ ನೇತೃತ್ವದಲ್ಲಿ 1917ರ ಅಕ್ಟೋಬರ್‌ನಲ್ಲಿ ಕ್ರಾಂತಿ ಸಂಭವಿಸಿತು. ಲೆನಿನ್ ಕ್ರಾಂತಿ ಪಡೆಯನ್ನು ಸೇರಿ ಅಕ್ಟೋಬರ್ 7 ರಂದು ರಷ್ಯಾವನ್ನು ಸಮಾಜವಾದಿ ಗಣರಾಜ್ಯ ಎಂದು ಘೋಷಣೆ ಮಾಡಿದರು. ಇದನ್ನೆ ರಷ್ಯಾದ 'ಅಕ್ಟೋಬರ್ ಕ್ರಾಂತಿ' ಎನ್ನುತ್ತಾರೆ. ಲೆನಿನ್ ರಷ್ಯನ್ ಸರ್ಕಾರದ ಅಧ್ಯಕ್ಷರಾದರು.



ಲೆನಿನ್

ಲೆನಿನ್ ಅಧ್ಯಕ್ಷರಾದ ಕೂಡಲೇ ಎಲ್ಲಾ ಭೂಮಿ ರೈತರಿಗೆ ಸೇರಿದ್ದು ಎಂದು ಘೋಷಿಸಿದರು. ಎಲ್ಲಾ ರಷ್ಯನ್ನರಿಗೂ ಉಚಿತವಾದ ಶಿಕ್ಷಣ, ಕ್ರೀಡೆ, ಆರೋಗ್ಯ, ವಸತಿ ನೀಡುವಂತಹ ಆರ್ಥಿಕ ಮತ್ತು ರಾಜಕೀಯ ನೀತಿಗಳನ್ನು ಜಾರಿ ಮಾಡಿದರು. ಕಾರ್ಲ್ ಮಾರ್ಕ್ಸ್‌ನ ವೈಜ್ಞಾನಿಕ ಸಮಾಜವಾದದ ಚಿಂತನೆಯನ್ನು ಪ್ರಾಯೋಗಿಕವಾಗಿ ಮೊದಲ ಬಾರಿಗೆ ಜಾರಿ ಮಾಡಿದ್ದು ಲೆನಿನ್. ಇದು ಮಾನವಕುಲದ ಇತಿಹಾಸದಲ್ಲಿ ಕಂಡರಿಯದ ಸಾಮಾಜಿಕ ಪದ್ಧತಿಯಾಗಿತ್ತು. 1924ರಲ್ಲಿ ಲೆನಿನ್, ಇದನ್ನು ಬೆಳೆಸುವ ಹಂತದಲ್ಲಿ ನಿಧನರಾದರು.

ನಂತರ ರಷ್ಯಾದ ಅಧ್ಯಕ್ಷನಾದ ಜೋಸೆಫ್ ಸ್ಟಾಲಿನ್ ರಷ್ಯಾವನ್ನು ಅಮೆರಿಕಕ್ಕೆ ಸವಾಲಾಗುವಂತೆ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದನು. ಈತ ಜಾರಿಗೊಳಿಸಿದ ಪಂಚವಾರ್ಷಿಕ ಯೋಜನೆಗಳು ರಷ್ಯಾದ ಅಭಿವೃದ್ಧಿಯ ಪಥವನ್ನೇ ಬದಲಾಯಿಸಿತು. ರಷ್ಯಾ ಬಾಹ್ಯಾಕಾಶ ವಿಜ್ಞಾನದಲ್ಲಿ ವಿಶ್ವದ ಮೊದಲ ಮಾನವಸಹಿತ ಉಪಗ್ರಹವನ್ನು ಉಡಾವಣೆ ಮಾಡಿತು. ಯೂರಿಗಗಾರಿನ್ ಜಗತ್ತಿನ ಮೊದಲ ಗಗನಯಾತ್ರಿಯಾದ. ಭಾರತವು ಸ್ವಾತಂತ್ರ್ಯಾನಂತರ ಪಂಚವಾರ್ಷಿಕ ಯೋಜನೆಗಳ ಮಾದರಿಯನ್ನು ರಷ್ಯಾದಿಂದಲೇ ಪಡೆಯಿತು. ಎರಡನೆಯ ಮಹಾಯುದ್ಧದ ನಂತರ ರಷ್ಯಾ ಸಮಾಜವಾದಿ ದೇಶಗಳ ಬಣದ ನಾಯಕತ್ವ ವಹಿಸಿತು. ಏಷ್ಯಾ, ಆಫ್ರಿಕಾ ಮತ್ತು ದಕ್ಷಿಣ ಅಮೆರಿಕದ ದೇಶಗಳ ವಿಮೋಚನಾ ಹೋರಾಟಗಳಿಗೆ ಬೆಂಬಲವನ್ನು ನೀಡಿತು. ರಷ್ಯಾವನ್ನು ಬಲಿಷ್ಠ ದೇಶವನ್ನಾಗಿಸುವ ಪ್ರಕ್ರಿಯೆಯಲ್ಲಿ ಸ್ಟಾಲಿನ್ ಹಲವಾರು ತಪ್ಪುಗಳನ್ನು ಎಸಗಿದನು. ಸಮಾಜವಾದಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ ಕೆಲಸ ಸಮರ್ಪಕವಾಗಿ ಆಗಲಿಲ್ಲ. ಪರಿಣಾಮವಾಗಿ ಕ್ರಾಂತಿಗೆ ವಿರುದ್ಧವಾದ ಶಕ್ತಿಗಳು ಪ್ರಬಲವಾಗುತ್ತಾ ಬಂದವು. 1985ರಲ್ಲಿ ಗ್ಲಾಸ್‌ನೋಸ್ತ್ (Glasnost–ಮುಕ್ತತೆ) ಮತ್ತು 1987ರಲ್ಲಿ ಪೆರೆಸ್ಟ್ರೋಯಿಕ (Perestroika–ಪುನರ್‌ಸಂಘಟನೆ) ಎಂಬ ಹೆಸರಿನಲ್ಲಿ ಸುಧಾರಣೆಗಳನ್ನು ಅಂದಿನ ಸೋವಿಯತ್ ಒಕ್ಕೂಟದ ಅಧ್ಯಕ್ಷರಾದ ಗೋರ್ಬಚೆವ್ ಜಾರಿ ಮಾಡಿದ ನಂತರ ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದು ಸೋವಿಯತ್ ಒಕ್ಕೂಟ ವಿಘಟನೆಯಾಯಿತು.

© KTBS Not to be republished

***ನಿಮಗಿದು ತಿಳಿದಿರಲಿ :***

***ಪೆರೆಸ್ಟ್ರೋಯಿಕಾ ಹಾಗೂ ಗ್ಲಾಸ್‌ನೋಸ್ತ್ :*** *ಸೋವಿಯತ್ ಕಮ್ಯುನಿಸ್ಟ್ ಪಕ್ಷವು ಮಂಡಿಸಿದ ಸಮಗ್ರ ಸುಧಾರಣೆಗಳು, ದೇಶದ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವದ ಆಲೋಚನೆಯಂತಹ ಪ್ರಸ್ತಾವಗಳನ್ನು ಗೋರ್ಬಚೆವ್‌ರವರು ಜನತೆಯ ಬಳಿ ಕೊಂಡೊಯ್ಯಲು ಎರಡು ಪದಗಳನ್ನು ಬಳಸಿದರು. ಆ ಪದಗಳೇ ಪೆರೆಸ್ಟ್ರೋಯಿಕಾ ಮತ್ತು ಗ್ಲಾಸ್‌ನೋಸ್ತ.*

*ಪೆರೆಸ್ಟ್ರೋಯಿಕಾ ಎಂದರೆ – 'ಪುನರ್ ರಚನೆ' ಎಂದರ್ಥ*

*ಗ್ಲಾಸ್‌ನೋಸ್ತ ಎಂದರೆ – 'ಮುಕ್ತತೆ' ಎಂದರ್ಥ*

## ಸರ್ವಾಧಿಕಾರಿಗಳು

**ಹಿಟ್ಲರ್ :** ಮೊದಲ ಮಹಾಯುದ್ಧದ ನಂತರ ಉಂಟಾದ ಪರಿಸ್ಥಿತಿಯು ಜರ್ಮನಿಯಲ್ಲಿ ಹಿಟ್ಲರ್ ಮತ್ತು ಇಟಲಿಯಲ್ಲಿ ಮುಸೊಲಿನಿಯ ಸರ್ವಾಧಿಕಾರಗಳನ್ನು ಅಸ್ತಿತ್ವಕ್ಕೆ ತಂದಿತು. ಹಿಟ್ಲರ್ ಜರ್ಮನಿಯ ಛಾನ್ಸಲರ್ ಆಗಿ, ನಂತರ ಅಧ್ಯಕ್ಷ ಹಿಂಡೆನ್‌ಬರ್ಗ್ ನಿಧನದ ನಂತರ ಸರ್ವಾಧಿಕಾರಿಯಾದನು. ಹಿಟ್ಲರ್ ಫ್ಯೂರರ್ ಆದನು. ಹಿಟ್ಲರ್ ಪ್ರಾಬಲ್ಯ ಪಡೆಯುವುದರ ವೇಳೆಗೆ ಜರ್ಮನಿಯಲ್ಲಿ ಕಮ್ಯುನಿಸ್ಟರು ಮತ್ತು ಸೋಷಿಯಲಿಸ್ಟರು ಬಲಿಷ್ಠರಾಗಿದ್ದರು. ಈ ಹಿನ್ನೆಲೆಯಲ್ಲಿ ಜರ್ಮನ್ ಉದ್ಯಮಿಗಳ ಸಂಪೂರ್ಣ ಸಹಾಯವನ್ನು ಪಡೆದ ಹಿಟ್ಲರ್ ಇವರನ್ನು ದಮನಿಸಿದನು. ಕಾರ್ಮಿಕ ಸಂಘಗಳನ್ನು ರದ್ದುಗೊಳಿಸಿದನು. ರಾಜಕೀಯ ಪಕ್ಷಗಳನ್ನು ನಿಷೇಧಿಸಿದನು. ನಾಜಿ ಪಕ್ಷ ಏಕೈಕ ರಾಜಕೀಯ ಪಕ್ಷವೆಂದು ಘೋಷಿಸಿದನು.

ಯೆಹೂದಿಗಳು ಜಗತ್ತನ್ನು ನಿಯಂತ್ರಿಸುತ್ತಾರೆಂಬ ಭಯ ಮತ್ತು ಊಹಾತ್ಮಕವಾದ ವಿಚಾರಗಳನ್ನು ಬಿತ್ತಿ ಜನರನ್ನು ಭೀತಿಗೊಳಪಡಿಸಿದನು. ಜಗತ್ತಿನಲ್ಲಿ ಜರ್ಮನ್ ಆರ್ಯ ಜನಾಂಗವೇ ಶ್ರೇಷ್ಠವೆಂಬ ಜನಾಂಗ ವಾದವನ್ನು ಮುಂದಿಟ್ಟು ಪ್ರಬಲವಾಗಿ ಬೆಳೆದನು. ಇವೆಲ್ಲವನ್ನೂ ಮಾಡಲು ಹಿಟ್ಲರ್ ಅನುಸರಿಸಿದ್ದು ನಾಜಿವಾದ. ಇದರ ಸಾರಾಂಶವೇನೆಂದರೆ – ಜಗತ್ತಿನಲ್ಲಿ ಶ್ರೇಷ್ಠವಾದ ಜನಾಂಗವೆಂದರೆ ಆರ್ಯ ಜರ್ಮನ್ ಜನಾಂಗ. ಜಗತ್ತನ್ನು ಆಳ್ವಿಕೆ ಮಾಡಲು ಕೇವಲ ಜರ್ಮನ್ನರು ಮಾತ್ರ ಯೋಗ್ಯರು. ಉಳಿದ ಜನಾಂಗಗಳು ಕೇವಲ ಆಳಿಸಿಕೊಳ್ಳಲು ಮಾತ್ರ ಯೋಗ್ಯರು. ಜರ್ಮನ್ನರ ಎಲ್ಲಾ ಸಮಸ್ಯೆಗಳಿಗೆ ಯೆಹೂದಿಗಳೇ ಕಾರಣ. ಇವರ ಜೊತೆಗೆ ಕಮ್ಯುನಿಸ್ಟರು, ಕ್ಯಾಥೋಲಿಕ್‌ರು, ಸೋಷಿಯಲಿಸ್ಟರು ಕೂಡಾ ಕಾರಣ. ಇವರು ಬದುಕಲು ಯೋಗ್ಯರಲ್ಲ ಈ ರೀತಿಯಾಗಿ ರೂಪುಗೊಂಡ ಉಗ್ರ ರಾಷ್ಟ್ರೀಯವಾದವು ಅತ್ಯಂತ ಅಮಾನುಷವಾಗಿ ಜಾರಿಗೆ ಬಂದಿತು. ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು 'ಗೋಬೆಲ್ಸ್' ಎಂಬ ವಿಶೇಷವಾದ ಮಂತ್ರಿಯನ್ನು ನೇಮಕ ಮಾಡಿದ್ದನು. ಗಲಭೆಗಳನ್ನು ಮಾಡಿ ಜನರಲ್ಲಿ ಭೀತಿಯನ್ನು ಹುಟ್ಟಿಸಲು 'ಬೂದು ಅಂಗಿದಳ' (Brown Shirts) ಎಂಬ ಕ್ರೌರ್ಯಪಡೆಯೊಂದನ್ನು ರಚಿಸಿದ್ದನು.



ಹಿಟ್ಲರ್

© KTBS Not to be published

ಈ ನಿಟ್ಟಿನಲ್ಲಿ ಹಿಟ್ಲರ್ ನಡೆಸಿದ ಸಾಮೂಹಿಕ ಕೊಲೆಗಳು ಮತ್ತು ನರಮೇಧಗಳು ಚರಿತ್ರೆಯಲ್ಲಿ ಅತ್ಯಂತ ಕುಖ್ಯಾತಿಯನ್ನು ಪಡೆದಿವೆ. ಒಂದು ಅಂದಾಜಿನ ಪ್ರಕಾರ 6 ಮಿಲಿಯನ್ ಯೆಹೂದಿಗಳನ್ನು, ಕೋಟಿಗೂ ಹೆಚ್ಚು ಇತರೆ ಜನರನ್ನು ಕೊಲ್ಲಿಸಿದನು. ಇವನ ಸಾಮೂಹಿಕ ಕಗ್ಗೊಲೆಗಳನ್ನು ಹೊಲೊಕಾಸ್ಟ್(Holocaust) ಎಂದು ಕರೆಯಲಾಗಿದೆ. 1935ರಲ್ಲಿ ನ್ಯೂರೆಂಬರ್ಗ್ ಕಾನೂನುಗಳನ್ನು ಹಿಟ್ಲರ್ ಜಾರಿಗೊಳಿಸಿದನು. ಊಟ, ನೀರು ಯಾವುದನ್ನೂ ನೀಡದೆ ಗುಲಾಮರ ರೀತಿಯಲ್ಲಿ ದುಡಿಸಿಕೊಳ್ಳುವ 'ಕಾನ್ಸೆಂಟ್ರೇಷನ್ ಕ್ಯಾಂಪ್ಸ್' (Concentration Camps)ಗಳು, ಗಾಳಿ ಬೆಳಕಿಲ್ಲದ ಗ್ಯಾಸ್ ಛೇಂಬರ್‌ಗಳಲ್ಲಿ ಜನರನ್ನು ನೂಕಿ ವಿಷಗಾಳಿ ಬಿಟ್ಟು ಕೊಲ್ಲುತ್ತಿದ್ದನು. ಇದೇ ಅಲ್ಲದೆ ಸಾಮೂಹಿಕವಾಗಿ ಗುಂಡಿಟ್ಟು ಕೊಲ್ಲುವುದು, (Mass Shootings) ಹೀಗೆ ಹಲವು ರೀತಿಗಳಲ್ಲಿ ನರಮೇಧವನ್ನು ನಡೆಸಿದನು. ಈ ರೀತಿಯಾಗಿ ಮಕ್ಕಳೆನ್ನದೆ, ಮಹಿಳೆಯರೆನ್ನದೆ, ಮುದುಕರೆನ್ನದೆ ಎಲ್ಲರನ್ನೂ ಸಾಮೂಹಿಕವಾಗಿ ಕೊಲ್ಲಲು ವಿಶೇಷ ಪಡೆಗಳನ್ನು ರೂಪಿಸಿದನು. ಇಡೀ ಪ್ರಭುತ್ವ ಯಂತ್ರವನ್ನು ನರಮೇಧ ನಡೆಸಲು ಬಳಸಿದನು. ಜಗತ್ತನ್ನೇ ಗೆಲ್ಲಬೇಕೆಂಬ ಮತ್ತು ಜರ್ಮನ್ನರ ಆರ್ಯ ಜನಾಂಗೀಯ ಶ್ರೇಷ್ಠತೆಯನ್ನು ಜಾರಿಗೊಳಿಸಬೇಕೆಂಬ ಮಹತ್ವಾಕಾಂಕ್ಷೆಯೇ ಎರಡನೆಯ ಮಹಾಯುದ್ಧಕ್ಕೆ ಮುಖ್ಯ ಕಾರಣಗಳಲ್ಲೊಂದಾಯಿತು. ಹಿಟ್ಲರ್‌ನ ಜನಾಂಗೀಯ ದ್ವೇಷದ ಅಧ್ಯಾಯವು ಯುದ್ಧದಲ್ಲಿ ಅವನ ಸಾವಿನೊಂದಿಗೆ ಅಂತ್ಯವಾಯಿತು.

**ಮುಸೋಲಿನಿ :** 20ನೆಯ ಶತಮಾನದ ಆರಂಭದ ಯುರೋಪಿನಲ್ಲಿ ಮೂಡಿಬಂದ ಸಾಮಾಜಿಕ ಚಳವಳಿಗಳು, ಮೊದಲ ಮಹಾಯುದ್ಧದ ದುಷ್ಪರಿಣಾಮಗಳು ಮತ್ತು ರಷ್ಯನ್ ಕ್ರಾಂತಿಯ ಹಿನ್ನೆಲೆಯಲ್ಲಿ ಪ್ರತಿಗಾಮಿ ರಾಜಕೀಯವಾಗಿ ಮುಸೋಲಿನಿಯ ಫ್ಯಾಸಿಸ್ಟ್‌ವಾದ ಬೆಳೆದು ಬಂದಿತು. ಉಗ್ರ ರಾಷ್ಟ್ರೀಯವಾದ, ಪರಕೀಯ ಶಕ್ತಿಗಳ ನಾಶ, ಹಿಂಸೆಯ ವೈಭವೀಕರಣ, ಜನಾಂಗೀಯ ಶ್ರೇಷ್ಠತೆ, ಸಾಮ್ರಾಜ್ಯವಾದದ ವಿಸ್ತರಣೆ, ನರಮೇಧಗಳಿಗೆ ಬೆಂಬಲ, ಇವು ಫ್ಯಾಸಿಸ್ಟ್‌ವಾದದ ಲಕ್ಷಣಗಳಾಗಿದ್ದವು.

1922 ರಿಂದ 1943ರವರೆಗೆ ಇಟಲಿಯ ಪ್ರಧಾನಿಯಾಗಿದ್ದ ಮುಸೋಲಿನಿ 'ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷ'ದ ಸ್ಥಾಪಕ. 1925ರಲ್ಲಿ ಇಟಲಿಯಲ್ಲಿ ಪ್ರಜಾಪ್ರಭುತ್ವವನ್ನು ವಿಸರ್ಜನೆ ಮಾಡಿ ಕಾನೂನುಬದ್ಧವಾಗಿಯೇ

ಸರ್ವಾಧಿಕಾರವನ್ನು ಪಡೆದುಕೊಂಡನು. ತನ್ನ ಗುಪ್ತ ಪೊಲೀಸರ ಮುಖಾಂತರ ಎಲ್ಲಾ ರಾಜಕೀಯ ವಿರೋಧಿಗಳನ್ನು ನಾಶ ಮಾಡಿದನು. ಕಾರ್ಮಿಕರ ಮುಷ್ಕರಗಳನ್ನು ನಿಷೇಧಿಸಿದನು. ಏಕಪಕ್ಷದ ಸರ್ವಾಧಿಕಾರವನ್ನು ಸ್ಥಾಪಿಸಿದನು. ಹಿಟ್ಲರನ ಜೊತೆಗೂಡಿ ಎರಡನೇ ಯುದ್ಧದಲ್ಲಿ ಲಕ್ಷಾಂತರ ಜನರ ಸಾವಿಗೆ ಕಾರಣನಾದನು. 1945ರಲ್ಲಿ ಇವನನ್ನು ಹತ್ಯೆ ಮಾಡಲಾಯಿತು.

## ಎರಡನೆಯ ಮಹಾಯುದ್ಧ

ಮೊದಲ ಮಹಾಯುದ್ಧದ ದುರಂತವನ್ನು, ಸಾವು–ನೋವುಗಳನ್ನು ಮರೆಯುವ ಮುನ್ನವೇ ಎರಡನೆಯ ಮಹಾಯುದ್ಧವು 1939ರ ಸೆಪ್ಟೆಂಬರ್ 1ರಂದು ನಾಜಿ ಜರ್ಮನಿಯು ಪೋಲೆಂಡಿನ ಮೇಲೆ ದಾಳಿ ಮಾಡುವುದರೊಂದಿಗೆ ಪ್ರಾರಂಭವಾಯಿತು. ಎರಡನೇ ಮಹಾಯುದ್ಧವು ಬಹುಶಃ ಮಾನವನ ಚರಿತ್ರೆಯಲ್ಲಿ ನಡೆದಿರಬಹುದಾದ ಯುದ್ಧಗಳಲ್ಲೇ ಅತ್ಯಂತ ಬೃಹತ್ತಾದುದು ಮತ್ತು ಬರ್ಬರವಾದುದು. 30ಕ್ಕೂ ಹೆಚ್ಚು ದೇಶಗಳು ಈ ಯುದ್ಧದಲ್ಲಿ ನೇರವಾಗಿ ಭಾಗವಹಿಸಿದ್ದವು. ಇದು 1939 ರಿಂದ 1945 ರವರೆಗೂ ನಡೆಯಿತು. ಶ್ರೀಮಂತ ದೇಶಗಳು ಮೊದಲನೆಯ ಮಹಾಯುದ್ಧದಲ್ಲಿ ಹಣ ವ್ಯಯಮಾಡಿದ ಪರಿಣಾಮವಾಗಿ 1930ರ ದಶಕದಲ್ಲಿ ಮಹಾನ್ ಆರ್ಥಿಕ ಕುಸಿತ (Great Depression) ಉಂಟಾಯಿತು. ಇದರಿಂದಾಗಿ ಯುರೋಪ್ ಮತ್ತು ಅಮೆರಿಕದಲ್ಲಿ ಸಂಕಷ್ಟದ ಪರಿಸ್ಥಿತಿಗಳು ನಿರ್ಮಾಣವಾದವು. ಜನರ ಜೀವನಮಟ್ಟ ತೀವ್ರವಾಗಿ ಕುಸಿಯಿತು; ಕೈಗಾರಿಕೆ ಮತ್ತು ಕೃಷಿ ಬೆಳವಣಿಗೆ ಸ್ಥಗಿತವಾಯಿತು, ನಿರುದ್ಯೋಗ ವಿಪರೀತವಾಯಿತು. ಮೊದಲ ಮಹಾಯುದ್ಧದ ಸೋಲು, ಅವಮಾನಕರ ಒಪ್ಪಂದಗಳು, ಅಪಾರವಾದ ನಷ್ಟಗಳ ಹಿನ್ನೆಲೆಯಲ್ಲಿ ಜರ್ಮನಿ ಮತ್ತು ಯುರೋಪಿನ ಹಲವು ದೇಶಗಳಲ್ಲಿ ರಾಷ್ಟ್ರೀಯವಾದದ ಉಗ್ರತೆ ತೀವ್ರಗೊಂಡಿತು. ಜರ್ಮನಿ ಮತ್ತು ಯುರೋಪಿನ ಇತರ ದೇಶಗಳಲ್ಲಿ ಬೃಹತ್ ಕೈಗಾರಿಕೋದ್ಯಮಿಗಳು ಉಗ್ರ ರಾಷ್ಟ್ರೀಯತೆಯನ್ನು ಬೆಳಸಲು ದೊಡ್ಡ ಪ್ರಮಾಣದಲ್ಲಿ ಹಣವನ್ನು ನೀಡಿದರು. ಇದನ್ನೇ ಬಳಸಿಕೊಂಡು ಸೇಡಿನ ಮತ್ತು ದುರಭಿಮಾನದ ಚಳವಳಿಗಳು ಬೆಳೆದವು. ಜರ್ಮನಿಯಲ್ಲಿ ಹಿಟ್ಲರ್ ಮತ್ತು ಇಟಲಿಯಲ್ಲಿ ಮುಸೋಲಿನಿಯಂತಹ ಸರ್ವಾಧಿಕಾರಿಗಳು ಬೆಳೆದರು. ಪೂರ್ವ ಏಷ್ಯಾದಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲು ಚೀನಾದ ಮೇಲೆ ಜಪಾನ್ ದಾಳಿಗಳನ್ನು ನಡೆಸುತ್ತಿತ್ತು.

ಎರಡನೆಯ ಮಹಾಯುದ್ಧದಲ್ಲಿ ಎರಡು ವಿರುದ್ಧವಾದ ಶತ್ರುಬಣ (Axis) ಮತ್ತು ಮಿತ್ರಬಣ(Allies) ರೂಪುಗೊಂಡವು. ಆಕ್ಸಿಸ್ ಬಣದಲ್ಲಿ ಜರ್ಮನಿ, ಇಟಲಿ ಮತ್ತು ಜಪಾನ್ ದೇಶಗಳು, ಅಲೀಸ್ ಬಣದಲ್ಲಿ ಬ್ರಿಟನ್, ಫ್ರಾನ್ಸ್, ರಷ್ಯಾ ಮುಂತಾದ ದೇಶಗಳು ಇದ್ದವು. ಪೋಲೆಂಡಿನ ಮೇಲೆ ಜರ್ಮನಿ ದಾಳಿ ಮಾಡುತ್ತಿದ್ದಂತೆ, ಬ್ರಿಟನ್ ಪೋಲೆಂಡಿನ ಮಿತ್ರ ರಾಷ್ಟ್ರವಾದ್ದರಿಂದ ಜರ್ಮನಿಯ ವಿರುದ್ಧ ಯುದ್ಧ ಸಾರಿತು. ಆದರೆ ವಾಸ್ತವದಲ್ಲಿ ಬ್ರಿಟನ್ ತಕ್ಷಣದಲ್ಲೇ ಪೋಲೆಂಡಿನ ಸಹಾಯಕ್ಕೆ ಧಾವಿಸಲಿಲ್ಲ. ಅದು ಜರ್ಮನಿಯ ವಶವಾಯಿತು. ಇದೇ ಸಂದರ್ಭದಲ್ಲಿ ರಷ್ಯಾದಲ್ಲಿ ಕಮ್ಯುನಿಸ್ಟ್ ವ್ಯವಸ್ಥೆ ಜಾರಿಯಲ್ಲಿ ಇದ್ದುದರಿಂದ ಬ್ರಿಟನ್, ಫ್ರಾನ್ಸ್, ಅಮೆರಿಕ ಮುಂತಾದ ದೇಶಗಳು ಹಿಟ್ಲರನು ರಷ್ಯಾದ ಮೇಲೆ ದಾಳಿ ಮಾಡುವುದನ್ನು ಬಯಸುತ್ತಿದ್ದವು. ಇದನ್ನು ಮನಗಂಡ ರಷ್ಯಾ 1939 ಆಗಸ್ಟ್ 24ರಂದು ಜರ್ಮನಿಯ ಜೊತೆ ಯುದ್ಧರಹಿತ ಒಪ್ಪಂದ ಮಾಡಿಕೊಂಡಿತ್ತು. ಹೀಗಾಗಿ ಹಿಟ್ಲರ್ ಮೊದಲು ಪೂರ್ವದ ಬದಲಿಗೆ ಪಶ್ಚಿಮಕ್ಕೆ ದಾಳಿ ಮಾಡಿದನು. ಇಟಲಿಯ ಜೊತೆ ಒಪ್ಪಂದವನ್ನು ಮಾಡಿಕೊಂಡ ಹಿಟ್ಲರ್‌ನು ಡೆನ್ಮಾರ್ಕ್, ನಾರ್ವೆ, ಹಾಲೆಂಡ್ ದೇಶಗಳನ್ನೊಳಗೊಂಡ ಬಹುತೇಕ ಪಶ್ಚಿಮ ಯುರೋಪನ್ನು ತನ್ನ ವಶಕ್ಕೆ ತೆಗೆದುಕೊಂಡನು. 1941ರಲ್ಲಿ ಸೋವಿಯತ್ ರಷ್ಯಾದ ಕಡೆ ಹಿಟ್ಲರ್ ದೃಷ್ಟಿ ಹರಿಸಿದನು. ಇದರಿಂದ ರಷ್ಯಾ ಯುದ್ಧದಲ್ಲಿ ಭಾಗವಹಿಸಲೇ ಬೇಕಾಯಿತು. ಇದೇ ಸಂದರ್ಭದಲ್ಲಿ ಜಪಾನ್ ಹಿಟ್ಲರ್‌ನ ಬಣವನ್ನು ಸೇರಿಕೊಂಡಿತು. ಪೆಸಿಫಿಕ್ ಸಮುದ್ರದ ಪಶ್ಚಿಮ ಭಾಗದಲ್ಲಿದ್ದ ಅಮೆರಿಕ ಮತ್ತು ಯುರೋಪಿಯನ್ ಪ್ರದೇಶಗಳ ಮೇಲೆ ದಾಳಿ ಮಾಡಿ ಸಾಕಷ್ಟು ಪ್ರದೇಶಗಳನ್ನು ಜಪಾನ್ ಆಕ್ರಮಿಸಿಕೊಂಡಿತು.

© KTBS Not to be published


ಇಟಲಿ ಮತ್ತು ಜರ್ಮನಿ ಉತ್ತರ ಆಫ್ರಿಕಾದ ಬ್ರಿಟಿಷ್ ವಸಾಹತುಗಳನ್ನು ಮತ್ತು ಸೂಯೆಜ್ ಕಾಲುವೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿ ಸೋತವು. 1942ರಲ್ಲಿ ಸ್ಟಾಲಿನ್‌ಗ್ರಾಡ್ ಯುದ್ಧದಲ್ಲಿ ಜರ್ಮನ್ ಪಡೆಗಳನ್ನು ರಷ್ಯಾ ಸೋಲಿಸಿತು. ಜರ್ಮನಿ 1943ರಲ್ಲಿ ಪೂರ್ವ ಯುರೋಪ್‌ನಲ್ಲಿ ಸಾಲು ಸಾಲು ಸೋಲುಗಳನ್ನು ಕಂಡಿತು. ಇದರಲ್ಲಿ ರಷ್ಯಾ ಪ್ರಮುಖ ಪಾತ್ರ ವಹಿಸಿತು. ಮಿತ್ರಪಡೆಗಳು ಇಟಲಿಯನ್ನು ಆಕ್ರಮಿಸಿದವು. ಜಪಾನ್‌ನನ್ನು ಸೋಲಿಸುವ ಮೂಲಕ ಪಶ್ಚಿಮ ಪೆಸಿಫಿಕ್ ದ್ವೀಪಗಳನ್ನು ಅಮೆರಿಕ ವಾಪಸ್ ಪಡೆಯಿತು. ರಷ್ಯಾದ ಕೆಂಪು ಸೈನಿಕರ ಮಹಾನ್ ಮುನ್ನಡೆ ಮತ್ತು ಪಶ್ಚಿಮ ರಾಷ್ಟ್ರಗಳ ದಾಳಿಯಿಂದ ಜರ್ಮನಿ ಶರಣಾಯಿತು ಮತ್ತು ಬರ್ಲಿನ್ ಪತನವಾಯಿತು. 1945ರಲ್ಲಿ ಹಿಟ್ಲರ್ ಆತ್ಮಹತ್ಯೆ ಮಾಡಿಕೊಂಡನು. ಇದರೊಂದಿಗೆ ಯುರೋಪಿನಲ್ಲಿ ಯುದ್ಧ ಕೊನೆಗೊಂಡಿತು. 1945ರಲ್ಲಿ ಜಪಾನಿನ ಹಿರೋಷಿಮಾ ಮತ್ತು ನಾಗಸಾಕಿ ಮೇಲೆ ಅಮೆರಿಕ ಜಗತ್ತಿನ ಮೊಟ್ಟಮೊದಲ ಅಣುಬಾಂಬನ್ನು ಹಾಕಿತು. ಇದರಿಂದ ಲಕ್ಷಾಂತರ ಜನ ಹತರಾದರು. ಇದರ ದುಷ್ಪರಿಣಾಮಗಳನ್ನು ಜಪಾನ್ ಇಂದಿಗೂ ಅನುಭವಿಸುತ್ತಿದೆ. 1945 ಆಗಸ್ಟ್ 15ರಂದು ಜಪಾನ್ ಪೂರ್ಣವಾಗಿ ಶರಣಾಯಿತು. ಇದರೊಂದಿಗೆ ಮಿತ್ರ ಬಣ ಯುದ್ಧದಲ್ಲಿ ಸಂಪೂರ್ಣವಾಗಿ ವಿಜಯಿಯಾಯಿತು.

ಮಾನವ ಚರಿತ್ರೆಯಲ್ಲೇ ಅತಿ ಹೆಚ್ಚಿನ ಸಾವು–ನೋವುಗಳನ್ನು ಕಂಡ ಎರಡನೇ ಜಾಗತಿಕ ಯುದ್ಧವು ಜಗತ್ತಿನ ರಾಜಕೀಯ ಮತ್ತು ಸಾಮಾಜಿಕ ಸಂರಚನೆಯನ್ನು ಬದಲಾವಣೆ ಮಾಡಿತು. ರಾಷ್ಟ್ರ ಸಂಘದ ಜಾಗದಲ್ಲಿ ವಿಶ್ವಸಂಸ್ಥೆ ರಚನೆಯಾಯಿತು. ಯುದ್ಧದ ವಿಜಯಿ ರಾಷ್ಟ್ರಗಳಾದ ಅಮೆರಿಕ ಸಂಯುಕ್ತ ಸಂಸ್ಥಾನ, ಸೋವಿಯತ್ ರಷ್ಯಾ, ಚೀನಾ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ವಿಶ್ವಸಂಸ್ಥೆಯ ರಕ್ಷಣಾ ಮಂಡಳಿಯ ಖಾಯಂ ಸದಸ್ಯರಾದರು. ಸೋವಿಯತ್ ರಷ್ಯಾ ಮತ್ತು ಅಮೆರಿಕ ಪರಸ್ಪರ ವಿರೋಧಿಯಾದ ಶಕ್ತಿಶಾಲಿ ದೇಶಗಳಾದವು. ಶೀತಲ ಸಮರಕ್ಕೆ ಇದು ನಾಂದಿಯಾಯಿತು. ಏಷ್ಯಾ ಮತ್ತು ಆಫ್ರಿಕಾದ ವಸಾಹತುಗಳು ಸ್ವಾತಂತ್ರ್ಯ ಪಡೆಯಲು ವಾತಾವರಣ ಪೂರಕವಾಯಿತು. ಬ್ರಿಟನ್, ಫ್ರಾನ್ಸ್ ಮುಂತಾದ ರಾಷ್ಟ್ರಗಳು ತಮ್ಮ ಹಿಡಿತದಲ್ಲಿದ್ದ ಬಹುತೇಕ ವಸಾಹತುಗಳನ್ನು ಕಳೆದುಕೊಂಡವು. ಭಾರತದ ಸ್ವಾತಂತ್ರ್ಯವನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಅಮೆರಿಕ ಅಣ್ವಸ್ತ್ರ ಪ್ರಯೋಗಿಸಿದ್ದರಿಂದ ಬೃಹತ್ ದೇಶಗಳ ನಡುವೆ ಅಣ್ವಸ್ತ್ರ ಪೈಪೋಟಿಗೆ ದಾರಿಯಾಯಿತು.

© KTBS
Not to be published

### ಚೀನಾ ಕ್ರಾಂತಿ

ಜಗತ್ತಿನ ಪ್ರಾಚೀನ ನಾಗರಿಕತೆ ಹಾಗೂ ಸುದೀರ್ಘ ಇತಿಹಾಸ ಹೊಂದಿರುವ ದೇಶಗಳಲ್ಲಿ ಚೀನಾ ಕೂಡಾ ಒಂದು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಭಾರತದ ರೀತಿಯಲ್ಲಿ ಚೀನಾ ಪೂರ್ತಿಯಾಗಿ ವಸಾಹತು ದೇಶವಾಗಿರಲಿಲ್ಲ. ಅರೆ ವಸಾಹತು ದೇಶವಾಗಿತ್ತು. ಅಂದರೆ ಸ್ವಲ್ಪ ಭಾಗ ಸ್ವತಂತ್ರವಾಗಿತ್ತು. ಜೊತೆಗೆ ಫ್ರೆಂಚರು, ಜಪಾನೀಯರು ಮುಂತಾದ ಸಾಮ್ರಾಜ್ಯಶಾಹಿಗಳ ಪ್ರಭಾವಕ್ಕೂ ಒಳಗಾಗಿತ್ತು. ಚೀನಾ ಪಾಳೇಗಾರೀ ದೇಶವೂ ಆಗಿತ್ತು. ಅಂದರೆ ದೇಶದೊಳಗೆ ಜಮೀನ್ದಾರರು ಮತ್ತು ಯುದ್ಧಕೋರರ ನಿಯಂತ್ರಣವಿತ್ತು. ಭಾರತದಷ್ಟೂ ಕೈಗಾರಿಕೆಗಳು ಬೆಳೆದಿರಲಿಲ್ಲ.



ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಐಕ್ಯತೆ, ಪ್ರಜಾಪ್ರಭುತ್ವ, ಜೀವನದ ಪ್ರಶ್ನೆಗಳು ಮುಂಚೂಣಿಗೆ ಬಂದವು. 1911ರಲ್ಲಿ ಕ್ಯೊಮಿಂಟಾಂಗ್ ಪಕ್ಷದ ನಾಯಕ ಸನ್-ಯಾತ್-ಸೇನ್ ನೇತೃತ್ವದಲ್ಲಿ ಸಾಮ್ರಾಜ್ಯಶಾಹಿ ವಿರೋಧಿಯಾದ ಪ್ರಜಾಪ್ರಭುತ್ವ ಕ್ರಾಂತಿ ನಡೆಯಿತು. ಆದರೆ ಇದು ಪೂರ್ಣವಾಗಿ ಬೆಳೆಯಲಿಲ್ಲ. ಚೀನಾದಲ್ಲಿ ಕಮ್ಯುನಿಸ್ಟ್ ಪಕ್ಷವು 1925ರಲ್ಲಿ ಪ್ರಾರಂಭವಾಯಿತು. ಹಳ್ಳಿಗಳಲ್ಲಿ ರೈತರ ಚಳವಳಿ ಮತ್ತು ನಗರಗಳಲ್ಲಿ ಕಾರ್ಮಿಕರ ಚಳವಳಿಗಳನ್ನು ಇದು ಬೆಳೆಸಿತು. ಐಕ್ಯ ಚೀನಾ ಕಟ್ಟಬೇಕೆಂದು ಸನ್-ಯಾತ್-ಸೇನ್ ಮತ್ತು ಕಮ್ಯುನಿಸ್ಟ್ ಪಕ್ಷ ಒಟ್ಟಾಗಿ ಕೆಲಸ ಮಾಡಿದವು. ಸನ್-ಯಾತ್-ಸೇನ್ ಮರಣದ ನಂತರ ಕ್ಯೊಮಿಂಟಾಂಗ್ ಪಕ್ಷದ ನೇತೃತ್ವ ಷಿಯಾಂಗ್-ಕೈ-ಷೇಕ್ ಎಂಬ ದಮನಕಾರಿಯ ಕೈಗೆ ಹಸ್ತಾಂತರವಾಯಿತು. ಈತ ಸಾಮ್ರಾಜ್ಯಶಾಹಿಗಳ ಜೊತೆ ಸೇರಿ ಕಮ್ಯುನಿಸ್ಟರ ವಿರುದ್ಧ ಅವರ ನೆಲಗಳ ಮೇಲೆ ದಾಳಿ ಮಾಡಿದನು. ಇದರಲ್ಲಿ ಸುಮಾರು 70,000 ಕ್ರಾಂತಿಕಾರಿಗಳು ಕೊಲ್ಲಲ್ಪಟ್ಟರು. ತಮ್ಮನ್ನು ರಕ್ಷಿಸಿಕೊಳ್ಳುವ ಸಲುವಾಗಿ ಮಾವೋತ್ಸೆ ತುಂಗನ ನೇತೃತ್ವದಲ್ಲಿ ಚೀನಾದ ಉತ್ತರ ಭಾಗಕ್ಕೆ ಚಾರಿತ್ರಿಕವಾದ ಕಮ್ಯುನಿಸ್ಟರ ದೀರ್ಘ ಪಯಣ (Long March) ನಡೆಯಿತು. ಇದು ಜಗತ್ತಿನ ಮಿಲಿಟರಿ ಕಾರ್ಯವ್ಯೂಹದಲ್ಲೇ ಅತ್ಯಂತ ವಿಶಿಷ್ಟವಾದ ಪ್ರಯೋಗ. ಇದಕ್ಕೆ ಗ್ರಾಮಾಂತರದ ರೈತರಿಂದ ಅಭೂತಪೂರ್ವ ಬೆಂಬಲ ದೊರೆಯಿತು.

**ನಿಮಗಿದು ತಿಳಿದಿರಲಿ :**

*ದೀರ್ಘ ಪಯಣ (**Long March**) : ಚೀನಾದ ಕಮ್ಯುನಿಸ್ಟ್ ಕ್ರಾಂತಿಕಾರಿಗಳ ಮೇಲೆ ಚಿಯಾಂಗ್ ಕೈ-ಷೇಕ್ ನಡೆಸಿದ ದಾಳಿಯಿಂದ ರಕ್ಷಿಸಿಕೊಳ್ಳಲು ಚೀನಾ ಕ್ರಾಂತಿಯ ನಾಯಕ ಮಾವೋ ಸಂಘಟಿಸಿದ ಚಾರಿತ್ರಿಕ ಪಯಣವಿದು. ಆಗ್ನೇಯ ಚೀನಾದ ಜಿಯಾಂಗ್‌ಜ಼ಿ ಪ್ರದೇಶದಿಂದ ವಾಯವ್ಯ ಚೀನಾದ ಯೆನಾನ್‌ನ ತುತ್ತತುದಿಗೆ ಸುಮಾರು 10,000 ಕಿ.ಮೀ. ದೂರದವರೆಗೆ ಸುಮಾರು 80,000 ಸಾವಿರ ಕ್ರಾಂತಿಕಾರಿ ಸೈನಿಕರನ್ನು ಸ್ಥಳಾಂತರಿಸಿದ ಘಟನೆಯಿದು. ಅಕ್ಟೋಬರ್ 1934ರ ಅಕ್ಟೋಬರ್‌ನಿಂದ 1935 ಅಕ್ಟೋಬರ್‌ವರೆಗೆ ನಡೆದ ಬೃಹತ್ ಚಾರಣದಲ್ಲಿ ಅಂತಿಮವಾಗಿ ಸುಮಾರು 10,000 ಜನ ಮಾತ್ರ ಉಳಿದಿದ್ದರು.ಮಾನವನ ಸಾಮಾಜಿಕ ಕ್ರಾಂತಿಯ ಚರಿತ್ರೆಯಲ್ಲಿ ಇಷ್ಟು ಸಂಖ್ಯೆಯ ಜನ ಇಷ್ಟೊಂದು ದೂರ ನಡೆದ ಮತ್ತೊಂದು ಘಟನೆಯಿಲ್ಲ. ಹೀಗಾಗಿಯೇ ಇದನ್ನು 'ದೀರ್ಘಪಯಣ' ಎಂದು ಕರೆಯಲಾಗಿದೆ.*

© KTBS Not to be published

ಎರಡನೆಯ ಜಾಗತಿಕ ಯುದ್ಧದ ಸಂದರ್ಭದಲ್ಲಿ ಚೀನಾದ ಪ್ರದೇಶಗಳ ಮೇಲೆ ಜಪಾನ್ ದಾಳಿ ಮಾಡಿತು. ಇದರ ವಿರುದ್ಧ ಹೋರಾಟ ನಡೆಸಲು ಚೀನಾ ಕಮ್ಯುನಿಸ್ಟ್ ಪಕ್ಷ ಮುಂಚೂಣಿಗೆ ಬಂತು. 1945ರಲ್ಲಿ ಜಪಾನ್ ಯುದ್ಧದಲ್ಲಿ ಸೋತಿತು. ಜಪಾನ್ ಹಿಂದೆ ಸರಿದಂತೆಲ್ಲಾ ಆ ಪ್ರದೇಶಗಳನ್ನು ಕಮ್ಯುನಿಸ್ಟ್ ಪಕ್ಷದ ಜನತಾ ವಿಮೋಚನಾ ಸೈನ್ಯವಶಕ್ಕೆ ಪಡೆಯಿತು. ವಶಕ್ಕೆ ಪಡೆದ ಪ್ರದೇಶಗಳಲ್ಲಿ ಭೂಸುಧಾರಣೆ ಘೋಷಣೆ ಮಾಡಿತು. ಅಂದರೆ ಜನರಿಗೆ ಭೂಮಿಯನ್ನು ಹಂಚಿತು. ಇದರಿಂದ ಅಪಾರ ಜನಬೆಂಬಲ ದೊರಕಿತು. ಈ ರೀತಿಯಾಗಿ ಕೆಲವು ಪ್ರದೇಶಗಳು ಷಿಯಾಂಗ್-ಕೈ-ಷೇಕ್‌ನ ಹಿಡಿತದಲ್ಲಿದ್ದರೆ ಹೆಚ್ಚೆಚ್ಚು ಪ್ರದೇಶಗಳನ್ನು ಕಮ್ಯುನಿಸ್ಟ್ ಪಕ್ಷ ವಶಕ್ಕೆ ಪಡೆಯುತ್ತಾ ಹೋಯಿತು. 1949ರಲ್ಲಿ ಅನೇಕ ನಗರಗಳೂ ಇವರ ವಶಕ್ಕೆ ಬಂದವು. ಷಿಯಾಂಗ್-ಕೈ-ಷೇಕ್‌ನು ಸೋತು ತೈವಾನ್‌ಗೆ ಪಲಾಯನ ಮಾಡಿದನು. 1949ರ ಅಕ್ಟೋಬರ್ 1 ರಂದು ಜನತಾ ವಿಮೋಚನಾ ಸೈನ್ಯ ಪ್ರವೇಶಿಸಿತು. ಚೀನಾದಲ್ಲಿ ಪೀಕಿಂಗ್ (ಈಗಿನ ಬೀಜಿಂಗ್) ಜನತಾ ಗಣತಂತ್ರ ಸ್ಥಾಪನೆಯಾಯಿತು. ಮಾವೋತ್ಸೆ ತುಂಗ್ ಅದರ ಅಧ್ಯಕ್ಷನಾದನು.

ಕ್ರಾಂತಿಯ ನಂತರ ಚೀನಾದಲ್ಲಿ ಸಾಮೂಹಿಕ ಕೃಷಿ ಪದ್ಧತಿಯನ್ನು ಜಾರಿಗೊಳಿಸಿದರು.ಎಲ್ಲರಿಗೂ ಉಚಿತ ಶಿಕ್ಷಣ, ಆರೋಗ್ಯ, ಮೊದಲಾದ ಸೌಲಭ್ಯಗಳನ್ನು ನೀಡಿದರು. ಕೈಗಾರಿಕಾ ಬೆಳವಣಿಗೆ ಸಾಧಿಸಲು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ತುಂಬಾ ಮಹತ್ವ ನೀಡಿದರು. 'ಮುನ್ನಡೆಯ ಮಹಾಜಿಗಿತ' (Leap Forward) ಯೋಜನೆಯನ್ನು ಜಾರಿಗೊಳಿಸಲಾಯಿತು. ಖಾಸಗಿ ಆಸ್ತಿಯನ್ನು ಸಮಾಜದ ಆಸ್ತಿಯಾಗಿ ಪರಿವರ್ತಿಸಿದರು. ಈ ರೀತಿ ಮಾಡುವಾಗ 1966ರಲ್ಲಿ ಜಾರಿಗೆ ತಂದ 'ಸಾಂಸ್ಕೃತಿಕ ಕ್ರಾಂತಿ' (Cultural Revolution)

ಹಲವಾರು ತಪ್ಪುಗಳನ್ನು ಮಾಡಿತು. ಇದನ್ನು ಸರಿಪಡಿಸಲು 1979ರಲ್ಲಿ ಅಧಿಕಾರಕ್ಕೆ ಬಂದ ಡೆಂಗ್ ಷಿಯೋಪಿಂಗ್ ಹಲವಾರು ಸುಧಾರಣೆಗಳಿಗೆ ಕಾರಣರಾದರು. ಈ ಹಿನ್ನೆಲೆಯಲ್ಲಿ ಬಂಡವಾಳ ವಾದವನ್ನು ಅರಗಿಸಿಕೊಂಡ ಚೀನಾ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಜಾಗತಿಕ ಶಕ್ತಿಯಾಗಿ ಮುನ್ನುಗುತ್ತಿದೆ.

### ಶೀತಲ ಸಮರ

ಎರಡನೆಯ ಮಹಾಯುದ್ಧದ ನಂತರ ಜಾಗತಿಕವಾಗಿ ಎರಡು ಬಣಗಳ ನಡುವೆ ರಾಜಕೀಯ, ಆರ್ಥಿಕ, ಮಿಲಿಟರಿ ಮುಂತಾದ ವಿಷಯಗಳಲ್ಲಿ ಉದ್ಭವಿಸಿದ ನಿರಂತರ ಭಯ, ದ್ವೇಷ, ಅಸೂಯೆ ಮತ್ತು ಆತಂಕದ ಪರಿಸ್ಥಿತಿಯೇ ಶೀತಲ ಸಮರ. ಅಮೆರಿಕ ಸಂಯುಕ್ತ ಸಂಸ್ಥಾನದ (USA) ಬಂಡವಾಳ ಶಾಹಿ ದೇಶಗಳ ಬಣ ಮತ್ತು ಸೋವಿಯತ್ ರಷ್ಯಾದ (USSR) ಸಮಾಜವಾದಿ ದೇಶಗಳ ಬಣಗಳ ನಡುವಿನ ಅಘೋಷಿತ ಸಮರವೇ ಶೀತಲ ಸಮರ. ಮಾನವ ಜನಾಂಗದ ಸಮಸ್ಯೆಗಳಿಗೆ ಪರಿಹಾರದ ಮಾರ್ಗ ಯಾವುದು – ಬಂಡವಾಳಶಾಹಿಯೋ ಅಥವಾ ಸಮಾಜವಾದವೋ? ಎಂಬುದರ ಆಧಾರದಲ್ಲಿ ತೀವ್ರವಾಗಿ ಬೆಳೆದ ವ್ಯತ್ಯಾಸಗಳು 1917ರಿಂದ ಅಸ್ತಿತ್ವದಲ್ಲಿದ್ದರೂ ತೀವ್ರವಾಗಿ ಪ್ರಕಟಗೊಂಡಿದ್ದು ಎರಡನೇ ಮಹಾಯುದ್ಧದ ನಂತರ ಸೋವಿಯತ್ ರಷ್ಯಾದ ಸಮಾಜವಾದಿ ವ್ಯವಸ್ಥೆ 1989ರಲ್ಲಿ ಕುಸಿಯುವವರೆಗೂ ಪ್ರಬಲವಾಗಿತ್ತು. ಇವೆರಡು ಬಣಗಳನ್ನು ಹೊರತುಪಡಿಸಿ ಭಾರತ, ಈಜಿಪ್ಟ್ ಮುಂತಾದ ದೇಶಗಳ ನೇತೃತ್ವದಲ್ಲಿ ಅಲಿಪ್ತ ಚಳವಳಿ ಪ್ರಾರಂಭವಾಯಿತು.

ಶೀತಲ ಸಮರದಿಂದಾಗಿ ಎರಡು ಬಣಗಳ ನಡುವೆ ಶಸ್ತ್ರಾಸ್ತ್ರ ಪೈಪೋಟಿ ತೀವ್ರಗೊಂಡಿತು. ಇದರಲ್ಲಿ ಅಮೆರಿಕ ಮೇಲುಗೈ ಸಾಧಿಸಿತು. ಅಮೆರಿಕ ಜಗತ್ತಿನ ತುಂಬೆಲ್ಲಾ ಶಸ್ತ್ರಾಸ್ತ್ರಗಳ ಮಾರಾಟಕ್ಕೆ ವ್ಯಾಪಕವಾದ ಒಪ್ಪಂದಗಳಿಗೆ ಮುಂದಾಯಿತು. ಹೆಚ್ಚೆಚ್ಚು ರಾಷ್ಟ್ರಗಳನ್ನು ತಮ್ಮ ವ್ಯಾಪ್ತಿಯಲ್ಲಿಟ್ಟುಕೊಳ್ಳಲು ಮಿಲಿಟರಿ ಮೈತ್ರಿಕೂಟಗಳ ರಚನೆಯಾಯಿತು. ಅಮೆರಿಕದ ನೇತೃತ್ವದಲ್ಲಿ ನ್ಯಾಟೋ (North Atlantic Treaty Organisation), ಸಿಯಾಟೋ (South East Asian Treaty Organisation) ಮತ್ತು ಸೆಂಟೋ (Central East North Treaty Organisation) ಕೂಟಗಳು ರಚನೆಯಾದರೆ, ರಷ್ಯಾ ನೇತೃತ್ವದಲ್ಲಿ ವಾರ್ಸಾಕೂಟ ರಚನೆಯಾಯಿತು. ಅಮೆರಿಕದ ಪ್ರತಿಯೊಂದು ರಾಜ್ಯದಲ್ಲೂ ಬೃಹತ್ ಯುದ್ಧಾಸ್ತ್ರಗಳ ಕೈಗಾರಿಕೆಗಳು ಬೆಳೆದವು. ಅಣ್ವಸ್ತ್ರ ಪೈಪೋಟಿ ಹೆಚ್ಚಿತು. ಇದರ ಜೊತೆಗೆ ವಿವಿಧ ದೇಶಗಳಲ್ಲಿ ಸೈನಿಕ ನೆಲೆಗಳ ಸ್ಥಾಪನೆ, ಗೂಢಚರ್ಯೆ ಮತ್ತು ಪ್ರಚಾರ, ವ್ಯೋಮ ಸಮರದಂತಹ (Space War) ವಿಜ್ಞಾನ-ತಂತ್ರಜ್ಞಾನದ ಪೈಪೋಟಿ, ಇವೆಲ್ಲವೂ ಬೆಳೆದವು. ಇಡೀ ಜಗತ್ತೇ ವಿವಿಧ ರೂಪಗಳಲ್ಲಿ ಅಗೋಚರ ಯುದ್ಧದ ಆತಂಕಕ್ಕೆ ಒಳಗಾಯಿತು.

ಕೊರಿಯನ್ ಯುದ್ಧ, ವಿಯೆಟ್ನಾಂ ಯುದ್ಧ, 1956ರ ಸೂಯೆಜ್ ಕಾಲುವೆ ಬಿಕ್ಕಟ್ಟು, 1961ರ ಬರ್ಲಿನ್ ಬಿಕ್ಕಟ್ಟು, 1962ರ ಕ್ಯೂಬನ್ ಕ್ಷಿಪಣಿ ಬಿಕ್ಕಟ್ಟು, ಹೀಗೆ ಹಲವು ಆತಂಕದ ಪರಿಸ್ಥಿತಿಗಳನ್ನು ಶೀತಲ ಸಮರವು ಸೃಷ್ಟಿಸಿತು. ಸುಮಾರು 1985ರವರೆಗೂ ಪರಸ್ಪರ ಅತ್ಯಂತ ತೀವ್ರತೆಯನ್ನು ಕಂಡ ಶೀತಲ ಸಮರವು ನಂತರ ಅಮೆರಿಕದ ಕಡೆ ವಾಲಿತು. ಜಗತ್ತಿನ ಸಂಪನ್ಮೂಲಗಳನ್ನು ಹಿಡಿತಕ್ಕೆ ತೆಗೆದುಕೊಳ್ಳುವಲ್ಲಿ ಅಮೆರಿಕ ಯಶಸ್ವಿಯಾಗುತ್ತಾ ಬಂದಿತು. ರಷ್ಯಾವು ಆರ್ಥಿಕ ಬಿಕ್ಕಟ್ಟಿಗೆ ಮತ್ತು ಇತರ ಆಂತರಿಕ ಸಂಕಷ್ಟಗಳಿಗೆ ಒಳಗಾಯಿತು. ಶಸ್ತ್ರಾಸ್ತ್ರ ಪೈಪೋಟಿ ಏಕಮುಖವಾಗಿ ಅಮೆರಿಕ ಜಗತ್ತಿನ ಏಕಮಾತ್ರ ಶಕ್ತಿಯುತ ರಾಷ್ಟ್ರವಾಗಿ ತಲೆಯೆತ್ತಿತು.

### ಬಲಿಷ್ಠ ರಾಷ್ಟ್ರವಾಗಿ ಅಮೆರಿಕಾದ ಉದಯ

ವಿಶ್ವದಾದ್ಯಂತ 1927ರಲ್ಲಿ ಉಂಟಾದ ಆರ್ಥಿಕ ಮಹಾಕುಸಿತದಿಂದಾಗಿ ಅಮೆರಿಕಾದಲ್ಲಿನ ರಾಜಕೀಯದಲ್ಲಿ ಸಾಕಷ್ಟು ಬದಲಾವಣೆಯನ್ನು ತಂದಿತ್ತು. ಮೊದಲನೆಯ ಮಹಾಯುದ್ಧದಲ್ಲಿ ಅಮೆರಿಕಾ ಮಿತ್ರರಾಷ್ಟ್ರಗಳಿಗೆ ಸಾಕಷ್ಟು ಆರ್ಥಿಕ ಮತ್ತು ಸೈನಿಕ ಸಹಾಯ ನೀಡಿ ಮಿತ್ರ ರಾಷ್ಟ್ರಗಳ ಗೆಲುವಿಗೆ ಕಾರಣವಾಗಿತ್ತು. 1929

© KTBS Not to be published

ರಲ್ಲಿ ಅಮೆರಿಕಾದ ಆರ್ಥಿಕ ಬೆಳವಣಿಗೆಯು ಕುಂಠಿತಗೊಂಡಿತು. ಇದರ ಪರಿಣಾಮವಾಗಿ ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಗಳಲ್ಲಿ ಉತ್ಪಾದನೆ ಕುಸಿಯಿತು. ಅಲ್ಲದೇ ಗಣಿಗಾರಿಕೆ, ಹಡಗು ಕಟ್ಟುವಿಕೆ, ಗ್ರಾಹಕರ ವಸ್ತುಗಳಾದ ಆಟೋಮೊಬೈಲ್ ಮತ್ತು ಗೃಹಬಳಕೆ ವಸ್ತುಗಳ ಉತ್ಪಾದನೆಗೆ ಹಿನ್ನೆಡೆ ಉಂಟಾಯಿತು. ಆರ್ಥಿಕ ಕುಸಿತ ರಾಜಕೀಯ ಬದಲಾವಣೆಗೆ ಸಾಕ್ಷಿಯಾಯಿತು.

ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಜಪಾನ್ ಅಮೆರಿಕಾದ ನೌಕಾನೆಲೆ ಪರ್ಲ್‌ಹಾರ್ಬರ್ ಮೇಲೆ ದಾಳಿ ನಡೆಸಿತು. ಇದರಿಂದಾಗಿ ಅಮೆರಿಕಾ ಮಿತ್ರರಾಷ್ಟ್ರಗಳ ಪರವಾಗಿ ಯುದ್ಧ ಪ್ರವೇಶಿಸುವಂತಾಯಿತು. ಜನತೆಯನ್ನು ಸೈನ್ಯವಾಗಿ ರೂಸ್‌ವೆಲ್ಟ್‌ನು ಯುದ್ಧಕ್ಕೆ ಸನ್ನದ್ಧಗೊಳಿಸಿದನು. ಮಹಿಳೆಯರಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯಲು ಪ್ರೋತ್ಸಾಹಿಸಿದನು. ಅಮೆರಿಕಾ ಯುದ್ಧದಲ್ಲಿ ಜಯಗಳಿಸಿತು. ದ್ವಿತೀಯ ಮಹಾಯುದ್ಧ ನಡೆಯುತ್ತಿರುವಾಗಲೇ ವಿಶ್ವಸಂಸ್ಥೆಯ ಸ್ಥಾಪನೆಗೆ ಸಹಕರಿಸಿ, ಅದರ ಸ್ಥಾಪನೆಗೂ ಕಾರಣವಾಯಿತು. 1945ರ ನಂತರ ಅಮೆರಿಕಾ ಜಗತ್ತಿನ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಿದೆ. ಶೀತಲ ಸಮರದ ನಂತರದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನವು ಏಕಮೇವ ಬಲಿಷ್ಠ ರಾಷ್ಟ್ರವಾಗಿ ಬೆಳೆದು ನಿಂತಿದೆ.

## ಅಭ್ಯಾಸಗಳು

© KTBS Not to be Published

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸರಿಯಾದ ಉತ್ತರಗಳಿಂದ ಭರ್ತಿ ಮಾಡಿರಿ.**

1. ರಷ್ಯಾದಲ್ಲಿ ಕಮ್ಯುನಿಸ್ಟ್ ಸರ್ಕಾರವನ್ನು ಸ್ಥಾಪಿಸಿದವರು __________
2. ಮೊದಲನೇ ಮಹಾಯುದ್ಧವು __________ರಲ್ಲಿ ಅಂತ್ಯಗೊಂಡಿತು.
3. ಫ್ಯಾಸಿಸ್ಟ್ ಸರ್ವಾಧಿಕಾರಿಯಾಗಿದ್ದವನು __________.
4. ಎರಡನೆಯ ಮಹಾಯುದ್ಧವು __________ ರಲ್ಲಿ ಆರಂಭವಾಯಿತು.
5. ಅಮೆರಿಕಾದ ನೌಕಾ ಕೇಂದ್ರವಾಗಿದ್ದ __________ ಮೇಲೆ ಜಪಾನ್ ದಾಳಿ ಮಾಡಿತು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ :**

1. ರಷ್ಯಾದ ಕ್ರಾಂತಿಯಲ್ಲಿ ಲೆನಿನ್‌ನ ಪಾತ್ರವನ್ನು ವಿವರಿಸಿ.
2. ಪ್ರಥಮ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವನ್ನು ವಿವರಿಸಿ.
3. 'ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು' ಹೇಗೆ? ವಿವರಿಸಿ.
4. ಎರಡನೆಯ ಮಹಾಯುದ್ಧಕ್ಕೆ ಕಾರಣಗಳಾವುವು?
5. ಶೀತಲ ಸಮರ ಎಂದರೇನು?
6. ಚೀನಾ ಕ್ರಾಂತಿಯ ಪರಿಣಾಮಗಳಾವುವು?
7. ಅಮೆರಿಕಾವು ಆರ್ಥಿಕ ಮಹಾಕುಸಿತದಿಂದ ಹೇಗೆ ಹೊರ ಬಂದಿತು? ವಿವರಿಸಿ.

**III. ಚಟುವಟಿಕೆ :**

1. ಅಂತರ್ಜಾಲ ಮತ್ತು ವೃತ್ತಪತ್ರಿಕೆಗಳ ನೆರವಿನಿಂದ ಜಾಗತಿಕ ಮಟ್ಟದಲ್ಲಿ ಶಾಂತಿ ಸ್ಥಾಪನೆಗಾಗಿ ಭಾರತವು ಅನ್ಯರಾಷ್ಟ್ರಗಳೊಂದಿಗೆ ನಡೆಸುತ್ತಿರುವ ಪ್ರಯತ್ನಗಳ ಬಗ್ಗೆ ಪ್ರಬಂಧ ಬರೆಯಿರಿ.

**IV. ಯೋಜನೆ :**

1. ವಿಶ್ವದ ವಿವಿಧ ರಾಷ್ಟ್ರಗಳ ರಾಷ್ಟ್ರ ಧ್ವಜಗಳ ಚಿತ್ರವನ್ನು ಸಂಗ್ರಹಿಸಿರಿ.

* * * *

# ರಾಜ್ಯಶಾಸ್ತ್ರ

## ಅಧ್ಯಾಯ – 4

# ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ

L6F9M1

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಮಾನವ ಹಕ್ಕುಗಳ ನಿರಾಕರಣೆ*
- *ಶಸ್ತ್ರಾಸ್ತ್ರಗಳ ಪೈಪೋಟಿ*
- *ಆರ್ಥಿಕ ಅಸಮಾನತೆ*

ದ್ವಿತೀಯ ಜಾಗತಿಕ ಯುದ್ಧದ ಬಳಿಕ ವಸಾಹತುಶಾಹಿತ್ವ ಹಾಗೂ ಸಾಮ್ರಾಜ್ಯಶಾಹಿತ್ವ ಪತನಗೊಂಡವು. ಹಳೆಯ ಜಗತ್ತಿನ ಬದಲಾವಣೆಯೊಂದಿಗೆ ನೂತನ ಜಗತ್ತು ಹುಟ್ಟಿಕೊಳ್ಳಲಾರಂಭಿಸಿತು. 1945ರಲ್ಲಿ ವಿಶ್ವಸಂಸ್ಥೆ ಅಥವಾ ಸಂಯುಕ್ತ ರಾಷ್ಟ್ರ ಸಂಘದ ಆರಂಭದೊಂದಿಗೆ ಹೊಸ ಶಕೆ ಆರಂಭಗೊಂಡಿತು. ಆದರೂ ಜಾಗತಿಕವಾಗಿ ಮಾನವ ಹಕ್ಕುಗಳು, ಶಸ್ತ್ರಾಸ್ತ್ರಗಳ ಪೈಪೋಟಿ, ಆರ್ಥಿಕ ಅಸಮಾನತೆ, ವರ್ಣಭೇಧ ನೀತಿ ಹಾಗೂ ಭಯೋತ್ಪಾದಕತೆಯಂತಹ ಹಲವಾರು ಸಮಸ್ಯೆಗಳು ಇನ್ನೂ ಹಾಗೆಯೇ ಉಳಿದುಕೊಂಡಿವೆ. ವಿಶ್ವಕುಟುಂಬದ ಓರ್ವ ಮುಂಚೂಣಿಯ ಸದಸ್ಯರಾಷ್ಟ್ರವಾಗಿ ಭಾರತ ಈ ಎಲ್ಲಾ ಜಾಗತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಪೂರಕ ಪ್ರಯತ್ನ ನಡೆಸುತ್ತಿದೆ.

© KTBS Not to be published

**ಮಾನವ ಹಕ್ಕುಗಳ ನಿರಾಕರಣೆ :** ಮಾನವತಾವಾದಿಗಳು ಪ್ರತಿಯೊಬ್ಬನ ಜನ್ಮತಃ ಅಥವಾ ಹುಟ್ಟಿನಿಂದಲೇ ಬರತಕ್ಕಂತಹ ಹಕ್ಕುಗಳ ಬಗೆಗೆ ಪ್ರತಿಪಾದಿಸಿದ್ದಾರೆ. ಆದರೆ ದುರದೃಷ್ಟವಶಾತ್ ಪ್ರಪಂಚದ ಬಹುತೇಕ ಮಂದಿ ಸುಧೀರ್ಘ ಕಾಲಾವಧಿಯಲ್ಲಿ ಈ ಮಾನವ ಹಕ್ಕುಗಳನ್ನು ಅನುಭವಿಸಿಲ್ಲ. ಧರ್ಮ, ಜನಾಂಗ, ಲಿಂಗ, ಜಾತಿ, ವರ್ಣ ಹಾಗೂ ರಾಷ್ಟ್ರೀಯತೆ ಈ ಎಲ್ಲವುಗಳನ್ನು ಕಾರಣವಾಗಿರಿಸಿ, ಮಾನವ ಹಕ್ಕುಗಳ ನಿರಾಕರಣೆ ಹಾಗೂ ಶೋಷಣೆಯನ್ನು ನಾವು ಕಾಣಬಹುದಾಗಿದೆ.

**ನಿಮಗಿದು ತಿಳಿದಿರಲಿ :**

*"ಭಾರತ ಸಂವಿಧಾನದಿಂದ ಖಾತರಿ ಪಡಿಸಲಾಗಿರುವ ಅಥವಾ ಅಂತರರಾಷ್ಟ್ರೀಯ ಒಡಂಬಡಿಕೆಗಳಲ್ಲಿ ಸೇರಿಸಲಾಗಿರುವ ಮತ್ತು ಬದುಕುವ ಸ್ವಾತಂತ್ರ್ಯದ, ಸಮಾನತೆ ಮತ್ತು ವ್ಯಕ್ತಿಯ ಘನತೆಯ ಹಕ್ಕುಗಳು ಮಾನವ ಹಕ್ಕುಗಳು."*

1776ರ ಅಮೆರಿಕಾದ ಸ್ವಾತಂತ್ರ್ಯ ಯುದ್ಧ, 1789ರ ಫ್ರಾನ್ಸಿನ ಮಹಾಕ್ರಾಂತಿ, 1917ರ ರಷ್ಯಾಕ್ರಾಂತಿ, 20ನೆಯ ಶತಮಾನದ ಪ್ರಥಮಾರ್ಧದ ಭಾರತ ಹಾಗೂ ಇನ್ನಿತರ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟ, ಇವೆಲ್ಲಾ ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಟಿ ತಂದುಕೊಟ್ಟವು. ಇವುಗಳಿಂದಾಗಿ ಜಾಗತಿಕ ಮಾನವ ಹಕ್ಕುಗಳ ಘೋಷಣೆಯನ್ನು ಮಾನವ ಹಕ್ಕುಗಳ ರಕ್ಷಣೆಯ ಇತಿಹಾಸದಲ್ಲಿ ಒಂದು ಪ್ರಮುಖ ಐತಿಹಾಸಿಕ ಮೈಲುಗಲ್ಲನ್ನಾಗಿ ಗುರುತಿಸಲಾಗಿರುತ್ತದೆ. ಅಂತರರಾಷ್ಟ್ರೀಯ ತಜ್ಞರುಗಳಿಂದ ರಚಿಸಲ್ಪಟ್ಟ ಮಾನವ ಹಕ್ಕುಗಳ ಪರಿಕಲ್ಪನೆಯನ್ನು 1948ರ ಡಿಸೆಂಬರ್ 10ರಂದು ವಿಶ್ವಸಂಸ್ಥೆ ಸಾಮಾನ್ಯ ಸಭೆ ಅಂಗೀಕರಿಸಿತು.

ಸಾಮಾನ್ಯ ಸಭೆಯು ಮಾನವ ಹಕ್ಕುಗಳನ್ನು ಸಂರಕ್ಷಿಸುವ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ವಿಶ್ವಸಂಸ್ಥೆಯ ಪ್ರತಿಯೊಂದು ಸದಸ್ಯ ರಾಷ್ಟ್ರಗಳು ಕಡ್ಡಾಯವಾಗಿ ಪಾಲಿಸುವಂತೆ ನಿರ್ದೇಶಿಸಿದೆ. ಈ ರೀತಿಯ ನಿರ್ದೇಶನ ಪಡೆದ ಸದಸ್ಯ ರಾಷ್ಟ್ರಗಳು ಮಾನವ ಹಕ್ಕುಗಳ ಸಂರಕ್ಷಣೆಯನ್ನು ಮಾಡುವುದಕ್ಕೆ ಪೂರಕವಾದ ಮಾರ್ಗಸೂಚಿಗಳನ್ನು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘೋಷಣೆಯಲ್ಲಿ ನೀಡಲಾಗಿದೆ. ಈ ಮಾರ್ಗ ಸೂಚಿಗಳನ್ನು ಮುಖ್ಯವಾಗಿ 30 ಕಲಮುಗಳಲ್ಲಿ ತಿಳಿಸಲಾಗಿದೆ. ಉದಾಹರಣೆಗೆ ಪ್ರತಿಯೊಬ್ಬ ವ್ಯಕ್ತಿ

ಹುಟ್ಟಿನಿಂದಲೇ ಸ್ವಾತಂತ್ರ್ಯ, ಸಮಾನತೆ ಹಾಗೂ ಘನತೆಯನ್ನು ಹೊಂದಿರುವುದು. ಜೀವಿಸುವ ಸ್ವಾತಂತ್ರ್ಯ ಮತ್ತು ವೈಯಕ್ತಿಕ ಭದ್ರತೆ ಹೊಂದಿರುವುದು. ಗುಲಾಮಗಿರಿ ಪದ್ಧತಿ ನಿಷೇಧ ಮಹಿಳಾ ಶೋಷಣೆ ಮುಕ್ತಗೊಳಿಸುವುದು ಮುಂತಾದವುಗಳು. ಸಾರ್ವತ್ರಿಕ ಮಾನವ ಹಕ್ಕುಗಳನ್ನು ಭಾರತ ನಿರಂತರ ಪ್ರತಿಪಾದಿಸುತ್ತಾ ಬಂದಿದೆ. ಭಾರತ ಸಂವಿಧಾನದಲ್ಲಿ ಮೂರನೆಯ ಭಾಗದಲ್ಲಿ 12 ರಿಂದ 35ರ ವರೆಗಿನ ವಿಧಿಗಳ ಅಡಿಯಲ್ಲಿ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ. ಹಾಗೂ ಈ ವಿಚಾರದ ಬಗೆಗೆ ಬೆಳಕು ಚೆಲ್ಲಿದೆ. ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿಯೂ ವಿಶ್ವದಾದ್ಯಂತ ಮಾನವ ಹಕ್ಕುಗಳು ಸುರಕ್ಷಿತವಾಗಿರಬೇಕೆಂಬುದನ್ನು ಭಾರತ ಸಮರ್ಥಿಸುತ್ತಾ ಬಂದಿದೆ.

ಮಾನವ ಹಕ್ಕುಗಳ ಶೋಷಣೆಗೆ ಸಂಬಂಧಿಸಿದಂತೆ 1966 ರಲ್ಲಿ ವಿಶ್ವ ಸಂಸ್ಥೆಯು ಸದಸ್ಯ ರಾಷ್ಟ್ರಗಳೊಂದಿಗೆ ಸಭೆಯೊಂದನ್ನು ನಡೆಸಿ ಪ್ರತಿಯೊಂದು ರಾಷ್ಟ್ರಗಳು ಮಾನವ ಹಕ್ಕುಗಳ ರಕ್ಷಣೆಗೆ ಬದ್ಧವಾಗಿರಬೇಕೆಂದು ಸೂಚಿಸಿತು. ಇದರ ಪರಿಣಾಮವಾಗಿ ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕುಗಳ ಆಯೋಗವನ್ನು ರಚಿಸಲಾಗಿದೆ. ಇದಕ್ಕೆ ಪೂರಕವಾಗಿ ಭಾರತದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ರಾಷ್ಟ್ರೀಯ ಮಹಿಳಾ ಆಯೋಗ, ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ, ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗದ ರಾಷ್ಟ್ರೀಯ ಆಯೋಗಗಳನ್ನು ರಚಿಸಲಾಗಿದೆ. ರಾಜ್ಯ ಮಟ್ಟದಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗ, ರಾಜ್ಯ ಮಹಿಳಾ ಆಯೋಗ ಇತ್ಯಾದಿಗಳನ್ನು ರಚಿಸಲಾಗಿದೆ.

**ಶಸ್ತ್ರಾಸ್ತ್ರಗಳ ಪೈಪೋಟಿ :** ಒಂದು ಪ್ರಸಿದ್ಧ ಮಾತಿದೆ – 'ಅಣ್ವಸ್ತ್ರಯುಗದಲ್ಲಿ ನಾವು ಯುದ್ಧವನ್ನು ಕೊನೆಗಾಣಿಸಬೇಕು; ಇಲ್ಲವಾದರೆ ಯುದ್ಧ ನಮ್ಮನ್ನು ಕೊನೆಗಾಣಿಸುತ್ತದೆ'. ಪ್ರಚಲಿತ ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿ ಒಂದು ಭಯಾನಕ ವಿದ್ಯಮಾನ ಎಂಬುದಾಗಿ ಕಾಣಿಸುತ್ತದೆ. ನಿಶ್ಶಸ್ತ್ರೀಕರಣ ವಿಶ್ವದ ಇಂದಿನ ಹಾಗೂ ಮುಂದಿನ ಉಳಿವಿಗೆ ಅತ್ಯಗತ್ಯ ಎನಿಸುತ್ತದೆ. ಶಸ್ತ್ರಾಸ್ತ್ರಗಳ ತೀವ್ರ ಪೈಪೋಟಿಯನ್ನು ನಿಲ್ಲಿಸಲು ನಿಶ್ಶಸ್ತ್ರೀಕರಣವೊಂದೇ ಪ್ರಮುಖ ಉಪಾಯ ಎಂದು ಭಾಸವಾಗುತ್ತಿದೆ.

ನಿಶ್ಶಸ್ತ್ರೀಕರಣ ಎಂದರೆ ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣ ಇಲ್ಲವಾಗಿಸುವ ನೇರ ಪ್ರಕ್ರಿಯೆ. ಶಸ್ತ್ರಾಸ್ತ್ರಗಳ ಸ್ಪರ್ಧೆಯಿಂದ ವಿಶ್ವದಾದ್ಯಂತ ಭಯ, ಅಸ್ಥಿರತೆ, ಚಡಪಡಿಕೆ ಹಾಗೂ ಯುದ್ಧದ ಸಂಭವ ತಲೆದೋರುತ್ತದೆ. ಈ ಎಲ್ಲಾ ಅನಿಷ್ಟಗಳನ್ನು ದೂರವಿರಿಸುವ ದೃಷ್ಟಿಯಿಂದ ನಿಶ್ಶಸ್ತ್ರೀಕರಣ ಪ್ರಚಲಿತ ಜಗತ್ತಿನ ಅವಶ್ಯಕತೆ ಎಂಬುದಾಗಿ ಭಾವಿಸಲ್ಪಡುತ್ತದೆ. ಅದೇ ರೀತಿ ಶಸ್ತ್ರಾಸ್ತ್ರಗಳು ಹಾಗೂ ಮದ್ದುಗುಂಡುಗಳು ಆರ್ಥಿಕವಾಗಿಯೂ ಒಂದು ಅನಗತ್ಯ ನಷ್ಟದಾಯಕ ಎಂದೂ ಭಾವಿಸಲಾಗುತ್ತದೆ. ಅಮೆರಿಕಾದ ಅಧ್ಯಕ್ಷ ಐಸನ್ ಹೋವರ್ ಒಮ್ಮೆ ಹೀಗೆ ಉದ್ಗರಿಸಿದ್ದರು. 'ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಲ್ಲ; ಬದಲಾಗಿ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ'.

ಅಣ್ವಸ್ತ್ರ ಅಥವಾ ನ್ಯೂಕ್ಲಿಯರ್ ಬಾಂಬುಗಳ ತಯಾರಿಯೊಂದಿಗೆ ನಿಶ್ಶಸ್ತ್ರೀಕರಣ ಅಥವಾ ಶಸ್ತ್ರ ನಿಯಂತ್ರಣದ ಪ್ರಶ್ನೆ ತೀರಾ ಗಂಭೀರ ಎಂದು ಪರಿಗಣಿಸಲಾಗಿದೆ. ಭಾರತ ಒಂದು ಶಾಂತಿಪ್ರಿಯ ರಾಷ್ಟ್ರವಾದುದರಿಂದ ಶಸ್ತ್ರಾಸ್ತ್ರಗಳ ನಿಯಂತ್ರಣವನ್ನು ಪ್ರತಿಪಾದಿಸುತ್ತದೆ. ಮುಂದಿನ ಜಾಗತಿಕ ಸುರಕ್ಷೆಯ ದೃಷ್ಟಿಯಿಂದ ಯುದ್ಧಗಳ ನಿವಾರಣೆ ತುಂಬಾ ಅವಶ್ಯಕವಾಗಿದೆ. 1963ರ ಬಳಿಕ ಅಮೆರಿಕಾ ಸಂಯುಕ್ತ ಸಂಸ್ಥಾನ ಹಾಗೂ ಸೋವಿಯತ್ ರಷ್ಯಾ ಹಲವಾರು ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಂಡವು. ನಿರ್ಣಯಾತ್ಮಕ ಶಸ್ತ್ರ ನಿಯಂತ್ರಣ ಒಪ್ಪಂದ (ಸಾಲ್ಟ್), ಪಾಕ್ಷಿಕ ಪ್ರಯೋಗ ನಿಷೇಧ ಒಪ್ಪಂದ, ಸಮಗ್ರ ಪರೀಕ್ಷಣಾ ನಿಷೇಧ ಒಪ್ಪಂದ (ಸಿಟಿಬಿಟಿ), ಫಲಿಕೆ ನಿಷೇಧ ಒಪ್ಪಂದ ಇವುಗಳು ಅಣುಶಸ್ತ್ರಗಳ ತಡೆಗಟ್ಟುವಲ್ಲಿ ಕೆಲವೊಂದು ಮಹತ್ವದ ವಿಶ್ವ ಮಟ್ಟದ ಸಂಧಿಗಳು

© KTBS Not to be published

ಎಂದು ಪರಿಗಣಿಸಬಹುದು. ಹೀಗೆ "ಪರಸ್ಪರ ನಿಶ್ಚಿತ ನಾಶ"ದ ವಿರುದ್ಧ ಭಾರತವು ಸೇರಿ ಎಲ್ಲಾ ರಾಷ್ಟ್ರಗಳೂ ಪ್ರಯತ್ನಿಸುವ ಅವಶ್ಯಕತೆಯಿದೆ.

**ಆರ್ಥಿಕ ಅಸಮಾನತೆ :** ವಿಶ್ವ ಕುಟುಂಬದ ಸದಸ್ಯರಲ್ಲಿ ಪರಸ್ಪರ ಆರ್ಥಿಕ ಅಸಮಾನತೆಯ ಒಂದು ಪ್ರಮುಖ ಸಮಸ್ಯೆಯಿದೆ. ಇದು ವಸಾಹತುಶಾಹಿತ್ವ ಹಾಗೂ ಸಾಮ್ರಾಜ್ಯಶಾಹಿತ್ವದ ಒಂದು ಐತಿಹಾಸಿಕ ನೆಲೆಯ ಬಳುವಳಿ ಎಂದೂ ಭಾವಿಸಬಹುದಾಗಿದೆ. ಐರೋಪ್ಯ ರಾಷ್ಟ್ರಗಳು ಆಫ್ರಿಕಾ, ಏಷ್ಯಾ ಹಾಗೂ ಲ್ಯಾಟಿನ್ ಅಮೆರಿಕನ್ ರಾಷ್ಟ್ರಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದವು. ಈ ಸಾಮ್ರಾಜ್ಯ ಶಾಹಿತ್ವದ ಕೈಕೆಳಗೆ ಇದ್ದಂತಹ ರಾಷ್ಟ್ರಗಳು ಆರ್ಥಿಕವಾಗಿ ತೀರಾ ಹಿಂದುಳಿದವು. 20ನೇ ಶತಮಾನದ ಪೂರ್ವ ಭಾಗದವರೆಗೆ ಅವರ ಪ್ರಗತಿ ತೀರಾ ಕುಂಠಿತವಾಗಿತ್ತು. ಸ್ವಾತಂತ್ರ್ಯಾನಂತರ ಏಷ್ಯಾ ಹಾಗೂ ಆಫ್ರಿಕಾದ ರಾಷ್ಟ್ರಗಳು ಅಭಿವೃದ್ಧಿ ಸಾಧಿಸಲು ಪ್ರಯತ್ನಿಸಿದವು. ಆದರೆ ಕೃಷಿ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಆರ್ಥಿಕ ಅಡಚಣೆ ತಲೆದೋರಿತ್ತು. ಹಾಗಾಗಿ ವಿದೇಶೀ ಆರ್ಥಿಕ ಸಹಕಾರ ಇವುಗಳಿಗೆ ತೀರಾ ಅವಶ್ಯಕ ಎಂದು ಕಂಡು ಬಂತು.

ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳಿಗೆ 1945ರ ಬಳಿಕದ ರಾಜಕೀಯ ಧ್ರುವೀಕರಣ ಆಧರಿಸಿ ಅಮೆರಿಕಾ ಹಾಗೂ ಸೋವಿಯತ್ ರಷ್ಯಾದ ಗುಂಪುಗಳು ಸಹಾಯ ನೀಡಲು ಆರಂಭಿಸಿದವು. ಆದರೆ ಈ ರಾಷ್ಟ್ರಗಳ ಬಡತನ, ಮುಂದುವರಿದ ದೇಶಗಳ ರಾಜಕೀಯ ಸ್ವಾರ್ಥದ ಸಾಧನೆಗೆ ಪೂರಕವಾಗಿ ಪರಿಣಮಿಸಿತು.

ಮುಂದಿನ ಕಾಲಘಟ್ಟದಲ್ಲಿ ಭಾರತ ಅಲಿಪ್ತ ನೀತಿಯನ್ನು ಜಗತ್ತಿನಲ್ಲಿ ಮುಂದುವರಿಸಿತು. ಯಾವುದೇ ಷರತ್ತುಗಳಿಲ್ಲದೆ ಮುಂದುವರಿದ ದೇಶಗಳು ಬಡರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡಬೇಕೆಂಬ ನೀತಿಯನ್ನು ಭಾರತ ಪ್ರತಿಪಾದಿಸಿತು. ತನ್ಮೂಲಕ ಹಿಂದುಳಿದ ರಾಷ್ಟ್ರಗಳ ಆತ್ಮಗೌರವವನ್ನು ಭಾರತ ಎತ್ತಿ ಹಿಡಿಯಲು ಸಹಕರಿಸಿತು. ಅದರೊಂದಿಗೇ ಶ್ರೀಮಂತ ರಾಷ್ಟ್ರಗಳ ಬಂಡವಾಳವೂ ಕೂಡ ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನಿಸಿತು. 'ತೃತೀಯ ಜಗತ್ತು' ಎಂಬ ವಿಚಾರವೇ 'ಬಡ ರಾಷ್ಟ್ರಗಳು' ಎಂಬ ಅಂಶವನ್ನು ಎತ್ತಿ ತೋರುತ್ತಿದೆ. ಈ ದೇಶಗಳು ಆಹಾರ, ಬಂಡವಾಳ, ತಾಂತ್ರಿಕತೆ, ಆರೋಗ್ಯ ಸಲಕರಣೆ, ಉನ್ನತ ವ್ಯಾಸಂಗದ ಅವಕಾಶಗಳು ಮುಂತಾದ ಕೊರತೆಗಳಿಂದ ಹೊರಬರಲು ಪ್ರಯತ್ನಿಸುತ್ತಿವೆ. ಅದೇ ರೀತಿ ಅನ್ಯರಾಷ್ಟ್ರಗಳಲ್ಲಿನ ಅನಗತ್ಯ ವೆಚ್ಚ, ಮುಕ್ತ ವ್ಯಾಪಾರ, ಅಸಮರ್ಪಕ ಪೈಪೋಟಿ, ಜಾಗತೀಕರಣ ಮುಂತಾದ ವಿದ್ಯಮಾನಗಳು ಬಡರಾಷ್ಟ್ರಗಳ ಮೇಲೆ ಹಲವಾರು ಬಾರಿ ದುಷ್ಪರಿಣಾಮ ಬೀರುತ್ತದೆ. ಇವೆಲ್ಲವನ್ನೂ ನೀಗಿಸುವಲ್ಲಿ ವಿಶ್ವಸಂಸ್ಥೆ ಹಾಗೂ ಮುಂದುವರಿದ ರಾಷ್ಟ್ರಗಳು ಪೂರಕವಾಗಿ ಯತ್ನಿಸಬೇಕಾಗಿದೆ. ಭಾರತ ಒಂದು ಪ್ರಗತಿಪರ ರಾಷ್ಟ್ರವಾಗಿ ವಿಶ್ವ ಕುಟುಂಬದ ಎಲ್ಲಾ ರಾಷ್ಟ್ರಗಳ ಮಧ್ಯೆ ಆರ್ಥಿಕ ನ್ಯಾಯ ಹಾಗೂ ಸಮಾನತೆಯನ್ನು ಪ್ರತಿಪಾದಿಸುತ್ತಿದೆ.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಮಾನವ ಹಕ್ಕುಗಳ ದಿನವನ್ನು __________ ರಂದು ಆಚರಿಸುತ್ತೇವೆ.
2. ಭಾರತವು ನಿರಂತರವಾಗಿ __________ ಮಾನವ ಹಕ್ಕುಗಳನ್ನು ಪ್ರತಿ ಪಾದಿಸುತ್ತಾ ಬಂದಿದೆ.
3. ಮಾನವ ಹಕ್ಕು ಎಂಬುದು __________ ಸಮಾನತೆಯನ್ನು ಒಳಗೊಂಡಿದೆ.

© KTBS Not to be republished

## II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :

1. ದ್ವಿತೀಯ ಮಹಾಯುದ್ಧ ಬಳಿಕ ಎದುರಾದ ಮುಖ್ಯ ಸಮಸ್ಯೆಗಳು ಯಾವುವು?
2. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟವನ್ನು ವಿವರಿಸಿ
3. ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳಾವುವು?
4. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳಾವುವು? ಈ ರೀತಿ ಹಿಂದುಳಿಯುವಿಕೆಯ ಕಾರಣಗಳಾವುವು?
5. ಆರ್ಥಿಕ ಅಸಮಾನತೆಯ ನಿವಾರಣೆಗಾಗಿ ಭಾರತವು ಕೈಗೊಂಡಿರುವ ಸುಧಾರಣಾ ಕ್ರಮಗಳಾವುವು?

## III. ಚಟುವಟಿಕೆಗಳು :

1. ಮಾನವ ಹಕ್ಕುಗಳನ್ನು ರಕ್ಷಿಸಲು ರಚಿಸಲಾಗಿರುವ ಆಯೋಗದ ಬಗ್ಗೆ ಮಾಹಿತಿ ಸಂಗ್ರಹಿಸಿ.
2. ಕರ್ನಾಟಕ ಸರ್ಕಾರವು ರಾಜ್ಯದ ಬಡ ಜನರಿಗಾಗಿ ಕೈಗೊಂಡಿರುವ ಕಲ್ಯಾಣ ಕಾರ್ಯಕ್ರಮಗಳ ಪಟ್ಟಿ ಮಾಡಿರಿ.

## IV. ಯೋಜನೆ :

1. ವರ್ಣಭೇದ ನೀತಿಯ ವಿರುದ್ಧ ಹೋರಾಡಿದ ಮಹನೀಯರುಗಳ ಜೀವನ ಚರಿತ್ರೆ ಓದಿರಿ.

© KTBS Not to be published

* * * *

F2W6B5


# ಅಧ್ಯಾಯ – 5

# ಜಾಗತಿಕ ಸಂಸ್ಥೆಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ವಿಶ್ವ ಸಂಸ್ಥೆಯ ಸ್ಥಾಪನೆ*
- *ವಿಶ್ವ ಸಂಸ್ಥೆಯ ಉದ್ದೇಶಗಳು*
- *ವಿಶ್ವ ಸಂಸ್ಥೆಯ ಅಂಗ ಸಂಸ್ಥೆಗಳು*
- *ವಿಶ್ವ ಸಂಸ್ಥೆಯ ಸಾಧನೆಗಳು*
- *ವಿಶ್ವ ಸಂಸ್ಥೆಯ ಆಶ್ರಯದ ವಿವಿಧ ಸಂಘ ಸಂಸ್ಥೆಗಳು.*

## ವಿಶ್ವಸಂಸ್ಥೆ (ಯು.ಎನ್.ಓ)



ವಿಶ್ವಸಂಸ್ಥೆ (ಯು.ಎನ್.ಓ)

20ನೇ ಶತಮಾನವು ಎರಡು ಮಹಾನ್ ಯುದ್ಧಗಳನ್ನು ಸಾಕ್ಷೀಕರಿಸಿತು. ಮೊದಲನೆಯ ಮಹಾಯುದ್ಧದ ಬಳಿಕ ಜಾಗತಿಕ ಶಾಂತಿಗಾಗಿ 'ಲೀಗ್ ಆಫ್ ನೇಶನ್ಸ್' ಎಂಬ ಸಂಸ್ಥೆ ಪ್ರಾರಂಭವಾಯಿತು. ಆದರೆ 1939ರಲ್ಲಿ ದ್ವಿತೀಯ ಮಹಾಯುದ್ಧ ಪ್ರಾರಂಭಗೊಳ್ಳುತ್ತಿರುವಂತೆಯೇ ಈ ಸಂಸ್ಥೆ ಪತನಗೊಂಡಿತು. ಎರಡನೇ ಮಹಾಯುದ್ಧವು ಭೀಕರವಾಗಿ ನಡೆಯುತ್ತಿದ್ದಂತೆಯೇ, ಜಾಗತಿಕವಾಗಿ ಶಾಶ್ವತ ಶಾಂತಿ ಸ್ಥಾಪನೆಯ ಯತ್ನವೂ ನಡೆಯಲಾರಂಭಿಸಿತು. ವಿಶ್ವ ಮಟ್ಟದಲ್ಲಿ ಇಂಗ್ಲೆಂಡಿನ ವಿನ್‌ಸ್ಟನ್ ಚರ್ಚಿಲ್, ರಷ್ಯಾದ ಜೋಸೆಫ್ ಸ್ಟಾಲಿನ್ ಹಾಗೂ ಅಮೇರಿಕಾದ ಫ್ರಾಂಕ್ಲಿನ್ ಡಿ'ರೂಸ್‌ವೆಲ್ಟ್ ವಿಶ್ವಮಟ್ಟದ ಸಂಸ್ಥೆಯ ಸ್ಥಾಪನೆಗೆ ಮುಂದಾದರು. 'ವಿಶ್ವಸಂಸ್ಥೆ' (ಯುನೈಟೆಡ್ ನೇಶನ್ಸ್) ಎಂಬ ಶಬ್ದವನ್ನು ಅಮೇರಿಕಾದ ಅಧ್ಯಕ್ಷ ಫ್ರಾಂಕ್ಲಿನ್ ಡಿ'ರೂಸ್‌ವೆಲ್ಟ್ ಚಾಲ್ತಿಗೆ ತಂದರು ಹಾಗೂ 1942 ಜನವರಿ 1 ರಂದು 26 ರಾಷ್ಟ್ರಗಳು ಒಪ್ಪಂದವೊಂದಕ್ಕೆ ಸಹಿ ಹಾಕುತ್ತಿದ್ದಂತೆಯೇ ಪ್ರಥಮ ಬಾರಿಗೆ ಈ ಶಬ್ದವನ್ನು ಉಪಯೋಗಿಸಲಾಯಿತು. ಇದನ್ನು ಈಗ 'ವಿಶ್ವ ರಾಷ್ಟ್ರಗಳು' ಎಂದು ಕರೆಯಲಾಗುತ್ತಿದೆ. 1945 ಜೂನ್ 26 ರಂದು ಸ್ಯಾನ್ ಫ್ರಾನ್ಸಿಸ್ಕೋ ವಿಶ್ವಸಂಸ್ಥೆಯ ಕಚೇರಿ ಸಮ್ಮೇಳನದ ಶಾಂತಿ ಸನ್ನದಿಗೆ 51 ರಾಷ್ಟ್ರಗಳ ಪ್ರತಿನಿಧಿಗಳು ಹಸ್ತಾಕ್ಷರ ನೀಡಿದರು. ಹೀಗೆ ಮುಂದಕ್ಕೆ 1945 ಅಕ್ಟೋಬರ್ 24 ರಂದು ವಿಶ್ವಸಂಸ್ಥೆ ಉದಯವಾಯಿತು. ವಿಶ್ವ ಸಂಸ್ಥೆಯ ಪ್ರಕಾರ ಪ್ರಸ್ತುತ 195 ಸಾರ್ವಭೌಮ ರಾಷ್ಟ್ರಗಳಿವೆ. ಅದರಲ್ಲಿ 193 ರಾಷ್ಟ್ರಗಳು ವಿಶ್ವಸಂಸ್ಥೆಯ ಸದಸ್ಯತ್ವ ಹೊಂದಿವೆ. ಇದರ ಮುಖ್ಯ ಕಛೇರಿ ಅಮೇರಿಕಾದ ನ್ಯೂಯಾರ್ಕ್ ನಗರದಲ್ಲಿದೆ. ಎಲ್ಲಾ ಶಾಂತಿಪ್ರಿಯ ರಾಷ್ಟ್ರಗಳಿಗೆ ಇದರ ಸದಸ್ಯತ್ವ ಹೊಂದಲು ಮುಕ್ತ ಅವಕಾಶವಿದೆ.

## ವಿಶ್ವಸಂಸ್ಥೆಯ ಉದ್ದೇಶಗಳು

ವಿಶ್ವಸಂಸ್ಥೆಯ ಸನ್ನದು ಈ ಜಾಗತಿಕ ಸಂಸ್ಥೆಯ ಪ್ರಧಾನ ದಾಖಲೆ ಎನಿಸಿದ್ದು ಇದರಲ್ಲಿ 19 ಅಧ್ಯಾಯಗಳಿದ್ದು, 111 ವಿಧಿಗಳನ್ನು ಹೊಂದಿದೆ. "ವಿಶ್ವದ ಜನಸಮುದಾಯವೆನಿಸಿದ ನಾವು ............" ಎಂಬ ವಾಕ್ಯದೊಂದಿಗೆ ವಿಶ್ವಸಂಸ್ಥೆಯ ಪ್ರಸ್ತಾವನೆಯು ಪ್ರಾರಂಭಗೊಳ್ಳುತ್ತದೆ.

© KTBS
Not to be published

**ವಿಶ್ವ ಸಂಸ್ಥೆಯ ಧ್ಯೇಯೋದ್ದೇಶಗಳು ಈ ಕೆಳಗಿನಂತಿವೆ;**

(1) ಅಂತರರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಯನ್ನು ಕಾಪಾಡುವುದು;

(2) ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು,

(3) ಮಾನವನ ಮೂಲಭೂತ ಹಕ್ಕುಗಳ ಬಗೆಗೆ ನಂಬುಗೆಯನ್ನು ಹೆಚ್ಚಿಸುವುದು,

(4) ಅಂತರರಾಷ್ಟ್ರೀಯ ಮಟ್ಟದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಥವಾ ಮಾನವೀಯ ನೆಲೆಯ ಸಮಸ್ಯೆಗಳಿಗೆ ಅಂತರರಾಷ್ಟ್ರೀಯ ಸಹಕಾರದೊಂದಿಗೆ ಪರಿಹಾರ ಕಂಡು ಕೊಳ್ಳುವುದು.


(5) ಅಂತರರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ ಒದಗಿಸುವುದು ಹಾಗೂ

(6) ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು.

**ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು**

ವಿಶ್ವಸಂಸ್ಥೆಯ ಸನ್ನದು ಪ್ರಕಾರ ಒಟ್ಟು ಆರು ಪ್ರಧಾನ ಅಂಗ ಸಂಸ್ಥೆಗಳಿಗೆ ವ್ಯವಸ್ಥೆ ಮಾಡಲಾಗಿದೆ. ಅವುಗಳೆಂದರೆ

© KTBS
Not to be published




**1. ಸಾಮಾನ್ಯ ಸಭೆ :** ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡ ಅಂಗ ಸಂಸ್ಥೆ ಇದಾಗಿದೆ. ಪ್ರತಿಯೊಂದು ಸದಸ್ಯ ರಾಷ್ಟ್ರವು 5 ಸದಸ್ಯರನ್ನು ಇದಕ್ಕೆ ಕಳುಹಿಸಿಕೊಡುತ್ತದೆ. ಆದರೆ ಪ್ರತಿ ಸದಸ್ಯ ರಾಷ್ಟ್ರಕ್ಕೆ ಒಂದು ಮತದ ಹಕ್ಕು ಮಾತ್ರ ಇರುತ್ತದೆ. ಈ ಸಾಮಾನ್ಯ ಸಭೆ ತನ್ನ ಪ್ರಥಮ ಅಧಿವೇಶನದಲ್ಲಿಯೇ ಒಂದು ವರ್ಷದ ಅವಧಿಗೆ ಓರ್ವ ಅಧ್ಯಕ್ಷನನ್ನು ಆರಿಸುತ್ತದೆ. ಅದೇ ರೀತಿ 17 ಉಪಾಧ್ಯಕ್ಷರನ್ನು ಹಾಗೂ 7 ಸ್ಥಾಯಿ ಸಮಿತಿಗಳಿಗೆ ಏಳು ಮಂದಿ ಅಧ್ಯಕ್ಷರನ್ನೂ ಇಲ್ಲಿ ಆರಿಸಲಾಗುತ್ತದೆ. ಈ ಸಾಮಾನ್ಯ ಸಭೆಯ ಅಧಿವೇಶನ ಸಾಮಾನ್ಯವಾಗಿ ಸೆಪ್ಟಂಬರ್ ತಿಂಗಳಲ್ಲಿ ಆರಂಭಗೊಂಡು ಡಿಸಂಬರ್ ಮಧ್ಯಭಾಗದವರೆಗೆ ಜರಗುತ್ತದೆ. ಎಲ್ಲಾ ಹೆಚ್ಚಿನ ಪ್ರಮುಖ ನಿರ್ಧಾರಗಳಿಗೆ ಮೂರನೇ ಎರಡಂಶದಷ್ಟು ಹಾಜರಾದ ಸದಸ್ಯರ ಅನುಮೋದನೆ ಅವಶ್ಯಕ ಆಗಿರುತ್ತದೆ. ವಾರ್ಷಿಕ ಆಯವ್ಯಯ ಪಟ್ಟಿಗೆ ಈ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಪಡೆಯಬೇಕಾಗುತ್ತದೆ. ಯಾವುದಾದರೂ ತುರ್ತು ವಿಷಯಗಳು ಚರ್ಚೆ ನಡೆಯಬೇಕಿದ್ದರೆ ವಿಶೇಷ ಅಧಿವೇಶನ ಕರೆಯಬಹುದಾಗಿದೆ. ಜಾಗತಿಕ ಸಂಸತ್ತಿನ ರೀತಿಯಲ್ಲಿ ವಿಶ್ವದ ಎಲ್ಲಾ ಪ್ರಮುಖ ವಿದ್ಯಮಾನಗಳ ಚರ್ಚೆಯಲ್ಲಿ ಇದು ಪ್ರಧಾನ ಪಾತ್ರ ವಹಿಸುತ್ತದೆ.

**2. ಭದ್ರತಾ ಸಮಿತಿ :** ಇದು ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿದ್ದು ಅತ್ಯಂತ ಪ್ರಭಾವಿ ಅಂಗವೆನಿಸಿದೆ. ಇದರಲ್ಲಿ 15 ಮಂದಿ ಸದಸ್ಯರಿದ್ದು, ಅವರ ಪೈಕಿ ಅಮೆರಿಕಾ ಸಂಯುಕ್ತ ಸಂಸ್ಥಾನ, ರಷ್ಯಾ, ಬ್ರಿಟನ್, ಫ್ರಾನ್ಸ್ ಹಾಗೂ ಚೈನಾ ಖಾಯಂ ಸದಸ್ಯತ್ವ ಹೊಂದಿದ ರಾಷ್ಟ್ರಗಳೆನಿಸಿವೆ. ಇವುಗಳು ವಿಟೋ ಅಧಿಕಾರವನ್ನು ಹೊಂದಿವೆ. ವಿಟೋ ಅಧಿಕಾರವು ನಿಷೇಧಾತ್ಮಕ ಮತ ಚಲಾವಣೆಯ ಅಧಿಕಾರವಾಗಿರುತ್ತದೆ. ಉಳಿದ 10 ಮಂದಿ ಹಂಗಾಮಿ ಸದಸ್ಯರನ್ನು 2 ವರ್ಷಗಳ ಅವಧಿಗೆ ಸಾಮಾನ್ಯ ಸಭೆ ಆರಿಸುತ್ತದೆ. ಇವರು ಪ್ರಪಂಚದ ವಿವಿಧ ಭೌಗೋಳಿಕ ಪ್ರದೇಶಗಳನ್ನು ಪ್ರತಿನಿಧಿಸುತ್ತಾರೆ. ಪ್ರತಿಯೊಂದು ಸದಸ್ಯರಿಗೂ ಒಂದು ಮತ ಚಲಾಯಿಸುವ ಹಕ್ಕು ಇದೆ. ಆದರೆ ಎಲ್ಲಾ ಖಾಯಂ ಸದಸ್ಯರ ಸಮ್ಮತಿ ಪ್ರತಿಯೊಂದು ಪ್ರಮುಖ ನಿರ್ಧಾರಕ್ಕೂ ಅವಶ್ಯಕವಾಗಿದೆ. ಭಾರತ ಕೂಡಾ ಇದರ ಖಾಯಂ ಪ್ರಾತಿನಿಧಿತ್ವಕ್ಕೆ ಯತ್ನಿಸುತ್ತಿದೆ.

ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಕ್ಕಾಗಿ ಭದ್ರತಾ ಸಮಿತಿ ಯತ್ನಿಸುತ್ತದೆ. ಅವಶ್ಯಕವಿದ್ದರೆ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯನ್ನು ಅಂತರರಾಷ್ಟ್ರೀಯ ಶಾಂತಿ ಹಾಗೂ ಸುವ್ಯವಸ್ಥೆಗೆ ನಿಯೋಜಿಸುತ್ತದೆ. ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ಇದು ನೇಮಕ ಮಾಡುತ್ತದೆ ಹಾಗೂ ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಉಮೇದುವಾರಿಕೆಗೆ ಹೆಸರು ಸೂಚಿಸುತ್ತದೆ.

**3. ಆರ್ಥಿಕ ಹಾಗೂ ಸಾಮಾಜಿಕ ಸಮಿತಿ :** ಈ ಸಮಿತಿಯಲ್ಲಿ 54 ಮಂದಿ ಸದಸ್ಯರಿದ್ದಾರೆ. ಇವರ ಪೈಕಿ 18 ಮಂದಿ ಸದಸ್ಯರು ಪ್ರತಿ 3 ವರ್ಷಕ್ಕೊಮ್ಮೆ ಆರಿಸಲ್ಪಡುತ್ತಾರೆ. ತಮ್ಮ ಸದಸ್ಯರ ಪೈಕಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸಲಾಗುತ್ತದೆ. ಈ ಸಮಿತಿಯ ಮುಖ್ಯ ಕಾರ್ಯಗಳು ಈ ಕೆಳಗಿನಂತಿವೆ:

i) ಅಂತರರಾಷ್ಟ್ರೀಯ ವಲಯದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ಹಾಗೂ ಇನ್ನಿತರ ಸಂಬಂಧಿತ ವಿಷಯಗಳ ಅಧ್ಯಯನ ಹಾಗೂ ವರದಿ ಮಾಡುವಿಕೆ.

ii) ನಿರಾಶ್ರಿತರ ಬಗ್ಗೆ, ಮಹಿಳೆಯರ ಸ್ಥಾನಮಾನ, ವಸತಿ ಸಮಸ್ಯೆ ಮುಂತಾದ ಹಲವಾರು ವಿಚಾರಗಳು ಈ ಸಮಿತಿಯ ಕಾರ್ಯವ್ಯಾಪ್ತಿಯೊಳಗೆ ಬರುತ್ತದೆ.

iii) ಮಾನವ ಹಕ್ಕುಗಳ ಬಗ್ಗೆ ಹಾಗೂ ಮೂಲಭೂತ ಸ್ವಾತಂತ್ರ್ಯಗಳ ಬಗೆಗೂ ಈ ಸಮಿತಿಯು ಶಿಫಾರಸ್ಸು ಮಾಡುತ್ತದೆ.

iv) ಮಾನವ ಸಂಪನ್ಮೂಲ, ಸಂಸ್ಕೃತಿ, ಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನಗಳನ್ನು ಸಂಘಟಿಸುವುದು.

v) ವಿಶೇಷ ಪ್ರಾವಿಣ್ಯತೆಯ ಅಂಗ ಸಂಸ್ಥೆಗಳಾದ ಅಂತರರಾಷ್ಟ್ರೀಯ ಕಾರ್ಮಿಕ ಸಂಘ (ಐ.ಎಲ್.ಒ), ಆಹಾರ ಮತ್ತು ಕೃಷಿ ಸಂಸ್ಥೆ (ಎಫ್.ಎ.ಒ), ಜಾಗತಿಕ ಆರೋಗ್ಯ ಸಂಸ್ಥೆ (ಡಬ್ಲ್ಯೂ ಹೆಚ್.ಒ) ಮುಂತಾದವುಗಳ ಕಾರ್ಯಗಳನ್ನು ಸಮನ್ವಯ ಮಾಡುವುದು. ಇವೆಲ್ಲಾ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಪ್ರಮುಖ ಸಂಸ್ಥೆಗಳು.

**4. ದತ್ತಿ ಸಮಿತಿ (ಟ್ರಸ್ಟಿಶಿಪ್ ಕೌನ್ಸಿಲ್) :** ಈ ಸಂಸ್ಥೆ ವಾಸ್ತಾವಿಕವಾಗಿ ಸಾಮಾನ್ಯ ಸಭೆಯ ಉಪ ಸಂಸ್ಥೆ ಅಥವಾ ಸಹಾಯಕ ಸಂಸ್ಥೆ ಎನಿಸಿ ಕಾರ್ಯವೆಸಗುತ್ತದೆ. ಟ್ರಸ್ಟ್ ಆಶ್ರಯಿತ ಪ್ರದೇಶಗಳ ಸಂಖ್ಯೆ ಕಡಿಮೆಯಾದುದರಿಂದ ಈ ಸಮಿತಿಯ ಕಾರ್ಯಕ್ಷೇತ್ರವೂ ಕಡಿಮೆಯಾಗುತ್ತಾ ಸಾಗಿದೆ. ಸ್ವತಂತ್ರ ರಾಜ್ಯದ ಮಟ್ಟಕ್ಕೆ ಏರದ ಪ್ರದೇಶಗಳ ಉಸ್ತುವಾರಿಯನ್ನು ಈ ಸಮಿತಿ ಹೊಂದಿದೆ. ಈಗ ಇದು ನಿಷ್ಕ್ರಿಯವಾಗಿದೆ, ಏಕೆಂದರೆ ಯಾವುದೇ ದತ್ತಿ ಉಳಿದಿಲ್ಲ.

© KTBS Not to be published

**5. ಅಂತರರಾಷ್ಟ್ರೀಯ ನ್ಯಾಯಾಲಯ :** ಇದು ವಿಶ್ವಸಂಸ್ಥೆಯ ಒಂದು ಪ್ರಧಾನ ಅಂಗ ಸಂಸ್ಥೆ ಹಾಗೂ ಎಲ್ಲಾ ಸದಸ್ಯರಾಷ್ಟ್ರಗಳು ಈ ನ್ಯಾಯಾಲಯದ ಸನ್ನದಿಗೆ ತಮ್ಮ ಸಹಮತವನ್ನು ನೀಡಲು ಬದ್ಧರಾಗಿದ್ದಾರೆ. ಈ ನ್ಯಾಯಾಲಯದಲ್ಲಿ 15 ಮಂದಿ ನ್ಯಾಯಾಧೀಶರಿದ್ದು, ಇವರ ಅಧಿಕಾರದ ಅವಧಿ ಒಂಬತ್ತು ವರ್ಷಗಳು ಆಗಿದ್ದು ಇವರು ಮರು ಆಯ್ಕೆಗೆ ಅರ್ಹರಾಗಿರುತ್ತಾರೆ. ನೆದರ್‌ಲ್ಯಾಂಡಿನ ಹೇಗ್ ಎಂಬಲ್ಲಿ ಈ ನ್ಯಾಯಾಲಯ ಸ್ಥಾಪಿತಗೊಂಡಿದೆ. ಮೂರು ವರ್ಷಗಳ ಅವಧಿಗೆ ಓರ್ವ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಈ ನ್ಯಾಯಾಲಯದ ನ್ಯಾಯಾಧೀಶರೇ ಆರಿಸುತ್ತಾರೆ. ಬಹುಮತದ ಆಧಾರದಲ್ಲಿ ಇದರ ನಿರ್ಣಯಗಳು ಕೈಗೊಳ್ಳಲ್ಪಡುತ್ತವೆ. ನ್ಯಾಯ ತೀರ್ಪುಗಳ ಜತೆಗೇ ಕಾನೂನು ವಿಚಾರದಲ್ಲಿ ಇದು ಯೋಗ್ಯ ಸಲಹೆಗಳನ್ನು ನೀಡುತ್ತದೆ.

ನೈತಿಕ ಹಾಗೂ ವೈಚಾರಿಕ ನೆಲೆಗಟ್ಟಿನ ಮೇಲೆ ಈ ನ್ಯಾಯಾಲಯದ ನಿರ್ಣಯಗಳು ಮಹತ್ವ ಹೊಂದಿವೆ. ಆದರೆ ಈ ನ್ಯಾಯಾಲಯದ ತೀರ್ಪು ಕಡ್ಡಾಯವಾಗಿ ಯಾವ ದೇಶಕ್ಕೂ ಅನ್ವಯಿಸುವಂತಿಲ್ಲ. ಈ ಎಲ್ಲಾ ಇತಿಮಿತಿಗಳ ಮಧ್ಯೆಯೂ ಅಂತರರಾಷ್ಟ್ರೀಯ ಶಾಂತಿ ಹಾಗೂ ಸುಭದ್ರತೆಗೆ ಅಂತರರಾಷ್ಟ್ರೀಯ ನ್ಯಾಯಾಲಯ ತನ್ನದೇ ಆದ ಕೊಡುಗೆಯನ್ನು ನೀಡಿದೆ.

**6. ಸಚಿವಾಲಯ :** ಮಹಾಕಾರ್ಯದರ್ಶಿ ಹಾಗೂ ವಿಶ್ವಸಂಸ್ಥೆಯ ಸಿಬ್ಬಂದಿ ವರ್ಗ ಈ ಅಂಗ ಸಂಸ್ಥೆಗೆ ಸೇರಿದವರಾಗಿದ್ದಾರೆ. ಮಹಾಕಾರ್ಯದರ್ಶಿಯವರು ಈ ಕಾರ್ಯಾಂಗದ ಮುಖ್ಯಸ್ಥರು ಎನಿಸಿದ್ದಾರೆ. ಇವರನ್ನು ಭದ್ರತಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಸಾಮಾನ್ಯ ಸಭೆಯು 5 ವರ್ಷಗಳ ಅವಧಿಗೆ ಆರಿಸುತ್ತದೆ. ಇದರ ಪ್ರಧಾನ ಕಾರ್ಯಾಲಯವು ನ್ಯೂಯಾರ್ಕ್‌ನಲ್ಲಿದ್ದು, ಜಿನೇವಾ, ವಿಯೆನ್ನಾ ಹಾಗೂ ನೈರೋಬಿಗಳಲ್ಲಿ ಇದರ ಶಾಖೆಗಳಿವೆ. ದಿನನಿತ್ಯದ ಆಡಳಿತಾತ್ಮಕ ಕಾರ್ಯ ಯೋಜನೆ ಹಾಗೂ ಸಾಂಸ್ಥಿಕ ಕಾರ್ಯಗಳು ಈ ಸಚಿವಾಲಯದ ವ್ಯಾಪ್ತಿಯಲ್ಲಿ ಸೇರಿದೆ.

© KTBS Not to be published

**ನಿಮಗಿದು ತಿಳಿದಿರಲಿ :**

*ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿಗಳು :*

| | | |
|---|---|---|
| *1. ಟ್ರಿಗ್ವೆ ಲೀ (1946–1952) ನಾರ್ವೆ* | | |
| *2. ಢಾಗ್ ಹ್ಯಾಮರ್ ಶೀಲ್ಡ್* | *(1953–1961 )* | *ಸ್ವೀಡನ್.* |
| *3. ಯು.ಥಾಂಟ್* | *(1961–1971)* | *ಬರ್ಮಾ* |
| *4. ಕರ್ಟ್ ವಾಲ್ಡ್ ಹೇಮ್* | *(1972–1981)* | *ಆಸ್ಟ್ರಿಯಾ* |
| *5. ಜೇವಿಯರ್ ಪೇರುಜ್ ಡೇ ಕುಯೆಲ್ಲಾರ್* | *(1982–1991)* | *ಪೆರು* |
| *6. ಭೌತ್ರೋಸ್ ಘಾಲಿ* | *(1992–1996)* | *ಈಜಿಪ್ಟ್* |
| *7. ಕೋಫೀ ಎ.ಅನ್ನಾನ್* | *(1997–2006)* | *ಘಾನಾ* |
| *8. ಬಾನ್–ಕಿ–ಮೂನ್* | *(2007– 2017)* | *ಕೊರಿಯಾ.* |
| *9. ಅಂಟೋನಿಯೊ ಗಟೆರೆಸ್* | *(2017 ರಿಂದ)* | *ಪೋರ್ಚುಗಲ್* |

## ವಿಶ್ವಸಂಸ್ಥೆಯ ಸಾಧನೆಗಳು

**1. ಶಾಂತಿಸ್ಥಾಪನೆಯ ಕಾರ್ಯಗಳು :** ವಿಶ್ವಸಂಸ್ಥೆ ಹಲವಾರು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ. ಆದರೆ ಭದ್ರತಾ ಸಮಿತಿಯ ಖಾಯಂ ಸದಸ್ಯರ ಒಮ್ಮತದ ಕೊರತೆ ಹಾಗೂ ಜಾಗತಿಕ ವಿದ್ಯಮಾನಗಳ ಸಂಕೀರ್ಣತೆಯಿಂದಾಗಿ, ವಿಶ್ವಸಂಸ್ಥೆಯ ಸಾಧನೆಯು ಮಿಶ್ರ ರೂಪದಿಂದ ಕೂಡಿದೆ ಎನ್ನಬಹುದು. ಇದರ

ಕಾರ್ಯಾಚರಣೆ ಬಹುತೇಕ ಯುದ್ಧ ಸ್ಥಂಭನರೇಖೆಯ ವೀಕ್ಷಕರ ಅಥವಾ ಶಾಂತಿ ಪಡೆಗಳ ಮೂಲಕ ನಡೆಯುವಂತಹುದು. ಭಾರತ ವಿಶ್ವಶಾಂತಿಯ ಹಾಗೂ ಮಾನವ ಹಕ್ಕುಗಳ ರಕ್ಷಣೆಯ ಬಗೆಗಿನ ವಿಶ್ವಸಂಸ್ಥೆಯ ಕಾರ್ಯಚಟುವಟಿಕೆಗಳಲ್ಲಿ ಪೂರ್ತಿ ಸಹಕರಿಸುತ್ತದೆ.

ಸುಯೆಜ್‌ಕಾಲುವೆ ಬಿಕ್ಕಟ್ಟು, ಇರಾನ್ ಸಂಘರ್ಷ, ಇಂಡೋನೇಷ್ಯಾ, ಕಾಶ್ಮೀರ, ಪ್ಯಾಲೆಸ್ಟೈನ್, ಕೊರಿಯಾ, ಹಂಗೇರಿ, ಕಾಂಗೋ, ಸೈಪ್ರೆಸ್, ಅರಬ್–ಇಸ್ರೇಲ್, ನಮೀಬಿಯಾ, ಅಫ್ಘಾನಿಸ್ತಾನ ಇತ್ಯಾದಿ ವಿವಾದಗಳ ಪರಿಹಾರಕ್ಕಾಗಿ ವಿಶ್ವಸಂಸ್ಥೆ ಶ್ರಮಿಸಿದೆ. ಅಣ್ವಸ್ತ್ರ ಹಾಗೂ ಸಾಂಪ್ರದಾಯಿಕ ನಿಶ್ಶಸ್ತ್ರೀಕರಣದ ನಿಟ್ಟಿನಲ್ಲಿಯೂ ವಿಶ್ವಸಂಸ್ಥೆ ನಿರಂತರ ಪ್ರಯತ್ನ ಮಾಡುತ್ತಿದೆ. ಇದೀಗ ಶೀತಲ ಸಮರದ ಕಾಲಘಟ್ಟ ಮುಗಿದಿದ್ದು, ವಿಶ್ವ ಶಾಂತಿಯ ನೆಲೆಯಲ್ಲಿ ವಿಶ್ವ ಸಂಸ್ಥೆಯ ಪ್ರಭಾವೀ ಕಾರ್ಯಕ್ಕೆ ಉತ್ತಮ ವಲಯ ನಿರ್ಮಾಣಗೊಂಡಿದೆ.

**2. ಆರ್ಥಿಕ ಹಾಗೂ ಹಣಕಾಸಿನ ಸಾಧನೆ :** ವಿಶ್ವಸಂಸ್ಥೆಯ ಸನ್ನದಿನ ಪ್ರಸ್ತಾವನೆಯಲ್ಲಿ ಈ ಸಂಸ್ಥೆ 'ಸಾಮಾಜಿಕ ಪ್ರಗತಿ ಹಾಗೂ ಉತ್ತಮ ಜೀವನ ಮಟ್ಟಕ್ಕೆ ಯತ್ನಿಸಬೇಕು' ಎಂದು ಘೋಷಿಸಲಾಗಿದೆ. ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಮೇಲ್ವಿಚಾರಣೆಯಲ್ಲಿ ಈ ಕಾರ್ಯ ಸಾಧಿಸಬೇಕಾಗಿದೆ. ಆರ್ಥಿಕ ಮತ್ತು ಹಣಕಾಸಿನ ಕ್ಷೇತ್ರದಲ್ಲಿ ('General Agriment on Tariff and Trade') ಸುಂಕ ಮತ್ತು ವ್ಯಾಪಾರದ ಸಾಮಾನ್ಯ ಒಪ್ಪಂದ ಆಗಿರುತ್ತದೆ. ಉದಾಹರಣೆ : ವಿಶ್ವಸಂಸ್ಥೆಯ ಪ್ರಗತಿ ಯೋಜನೆ (ದಿ ಯುನೈಟೆಡ್ ನೇಷನ್ಸ್ ಡೆವೆಲಪ್‌ಮೆಂಟ್ ಪ್ರೋಗ್ರಾಮ್) ಕೂಡಾ ಈ ಕ್ಷೇತ್ರದ ಒಂದು ಉಲ್ಲೇಖನಾರ್ಹ ಸಾಧನೆ. ವಿಶ್ವಬ್ಯಾಂಕ್, ಐ.ಎಮ್.ಎಫ್ ನಂತಹ ವಿತ್ತೀಯ ಸಂಸ್ಥೆಗಳು ವಿಶ್ವಸಂಸ್ಥೆಯ ಸಹಯೋಗದೊಂದಿಗೆ ಉತ್ತಮ ಸಾಧನೆ ಮಾಡುತ್ತಿವೆ.

**3. ಸಾಮಾಜಿಕ ಸಾಧನೆಗಳು :** ವಿಶ್ವ ಆರೋಗ್ಯ ಸಂಸ್ಥೆ, ಯುನೆಸ್ಕೋ, ಯುನಿಸೆಫ್, UNHCR , ಮುಂತಾದುವುಗಳು ವಿಶ್ವಸಂಸ್ಥೆಯ ಸಾಮಾಜಿಕ ಕಳಕಳಿಯ ಸೇವಾ ಸಂಸ್ಥೆಗಳು. 1948ರ ಸಾರ್ವತ್ರಿಕ ಮಾನವ ಹಕ್ಕುಗಳ ಉದ್ಘೋಷಣೆ ಕೂಡಾ ಒಂದು ಉತ್ತಮ ಸಾಧನೆ ಎನಿಸಿದೆ. ವರ್ಣಭೇದ ನೀತಿಯನ್ನು ಅಳಿಸಿ ಹಾಕುವಲ್ಲಿ ಸಾಮ್ರಾಜ್ಯಶಾಹಿತ್ವ, ವಸಾಹತುಶಾಹಿತ್ವ ಇತ್ಯಾದಿಗಳನ್ನು ಇಲ್ಲವಾಗಿಸುವಲ್ಲಿಯೂ ವಿಶ್ವಸಂಸ್ಥೆಯ ಪಾತ್ರ ಗಮನಾರ್ಹ.

> **ನಿಮಗಿದು ತಿಳಿದಿರಲಿ :**
>
> ವಿಶ್ವಸಂಸ್ಥೆಯಲ್ಲಿ ಚೈನೀಸ್, ಇಂಗ್ಲಿಷ್, ಫ್ರೆಂಚ್, ರಷ್ಯನ್, ಸ್ಪಾನಿಶ್ ಹಾಗೂ ಅರೇಬಿಕ್ ಭಾಷೆಗಳು ಆಡಳಿತ ಭಾಷೆಯಾಗಿ ಮಾನ್ಯತೆ ಪಡದಿವೆ.

© KTBS Not to be published

### ವಿಶ್ವಸಂಸ್ಥೆಯ ಆಶ್ರಯದ ವಿವಿಧ ಸಂಘ ಸಂಸ್ಥೆಗಳು

**ಎ) ಆಹಾರ ಮತ್ತು ಕೃಷಿ ಸಂಸ್ಥೆ – FAO - (Food and Agricultural Organisation) :** ಜಗತ್ತಿನಾದ್ಯಂತ ಬಡತನ, ಹಸಿವು ಹಾಗೂ ಅಪೌಷ್ಟಿಕತೆಯ ವಿರುದ್ಧ ಹೋರಾಡಲು ಆಹಾರ ಮತ್ತು ಕೃಷಿ ಸಂಸ್ಥೆಯೊಂದು 1945ರಲ್ಲಿ ಉದಯವಾಯಿತು. ಇದರ ಪ್ರಧಾನ 3 ಒಳ ವಿಭಾಗಗಳೆಂದರೆ; 1) ಸಮ್ಮೇಳನ, 2) ಸಮಿತಿ ಹಾಗೂ 3) ಮಹಾನಿರ್ದೇಶಕರು ಈ ಸಂಸ್ಥೆಯ ಪ್ರಮುಖ ಉದ್ದೇಶಗಳೆಂದರೆ : ಎ) ಕೃಷಿ ಕ್ಷೇತ್ರದ ಅಭಿವೃದ್ಧಿ (ಬಿ) ಪೌಷ್ಟಿಕ ಆಹಾರ ಒದಗಿಸುವಿಕೆ ; (ಸಿ) ಹಸಿವೆಯಿಂದ ಜಾಗತಿಕ ಜನಸಮುದಾಯದ ವಿಮುಕ್ತಿ ಹಾಗೂ (ಡಿ) ಗ್ರಾಮಾಂತರ ಪ್ರದೇಶಗಳ ಜನರ ಜೀವನ ಮಟ್ಟದ ಸುಧಾರಣೆ. ಈ ಸಂಸ್ಥೆಯ ಪ್ರಧಾನ ಕಛೇರಿ ರೋಮ್‌ನಲ್ಲಿದೆ.

**ಬಿ) ವಿಶ್ವ ಆರೋಗ್ಯ ಸಂಸ್ಥೆ - WHO - (World Health Organisation) :** ಪ್ರಪಂಚದ ಮಾನವರ ಆರೋಗ್ಯ ಸುಧಾರಿಸಲು 1948ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಸ್ಥಾಪನೆಗೊಂಡಿತು. ಈ ವಿಶ್ವ ಆರೋಗ್ಯ ಸಂಸ್ಥೆಯು ಕಾಲರಾ, ಪ್ಲೇಗ್, ಮಲೇರಿಯಾ, ಸಿಡುಬು ಮುಂತಾದ ರೋಗಗಳನ್ನು ಸಂಪೂರ್ಣವಾಗಿ ತೊಡೆದು ಹಾಕಲು

ಯತ್ನಿಸುತ್ತಿದೆ. ಅದೇ ರೀತಿ ಏಡ್ಸ್, ಕ್ಯಾನ್ಸರ್‌ನಂತಹ ಭೀಕರ ರೋಗಗಳಿಂದ ಪ್ರಪಂಚವನ್ನು ಮುಕ್ತಿಗೊಳಿಸಲು ಪ್ರಯತ್ನಿಸುತ್ತದೆ. ಸಿಡುಬು ರೋಗವನ್ನು ಸಮಗ್ರವಾಗಿ ನಿವಾರಿಸುವಲ್ಲಿ ಈ ಸಂಸ್ಥೆ ಯಶಸ್ಸು ಕಂಡಿದೆ. ಜನಸಂಖ್ಯಾ ಸ್ಫೋಟ, ಪರಿಸರ ಸಂರಕ್ಷಣೆ, ಹಸಿವು, ಪೌಷ್ಟಿಕತೆಯ ಕೊರತೆ ಮುಂತಾದ ವಿಷಯಗಳು ಈ ಸಂಸ್ಥೆಯ ಕಾರ್ಯ ಸೂಚಿಯಲ್ಲಿವೆ. ಈ ಎಲ್ಲಾ ಕ್ಷೇತ್ರದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಸೇವೆ ಉಲ್ಲೇಖನಾರ್ಹ ಎನಿಸಿದೆ. ಇದರ ಮುಖ್ಯ ಕಚೇರಿ ಸ್ವಿಟ್ಜರ್‌ಲ್ಯಾಂಡಿನ ಜಿನೇವಾದಲ್ಲಿದೆ.

**ಸಿ) ಯುನೆಸ್ಕೋ (United Nations Educational Scientific and Cultural Organisation) :** ಇದು 1946ರಲ್ಲಿ ಸ್ಥಾಪಿತಗೊಂಡಿದ್ದು, ಇದರ ಮುಖ್ಯ ಕೇಂದ್ರ ಪ್ಯಾರಿಸ್‌ನಲ್ಲಿದೆ. ಇದು ವಿಶ್ವದಾದ್ಯಂತ ವಿಜ್ಞಾನ, ಶಿಕ್ಷಣ, ಸಂಸ್ಕೃತಿ ಮುಂತಾದುವುಗಳನ್ನು ಪ್ರೋತ್ಸಾಹಿಸಲು ಉದ್ದೇಶಿಸಿರುವ ಪ್ರಾವೀಣ್ಯತೆಯ ಸಂಸ್ಥೆ, ತಾಂತ್ರಿಕ ಶಿಕ್ಷಣ, ಮಾಧ್ಯಮ ತಂತ್ರಗಾರಿಕೆ, ರಚನಾತ್ಮಕ ಚಿಂತನೆ, ಸಾಂಸ್ಕೃತಿಕ ವಿಚಾರಗಳು ಹಾಗೂ ಪರಿಸರ ವಿಜ್ಞಾನದ ಬಗೆಗೆ ಇದು ಕಾರ್ಯೋನ್ಮುಖವಾಗುತ್ತದೆ. ಪ್ರಪಂಚದಾದ್ಯಂತ ಶಿಕ್ಷಣ ಹಾಗೂ ಜ್ಞಾನ ಪ್ರಸಾರದ ನಿಟ್ಟಿನಲ್ಲಿ ಇದು ಸರ್ಕಾರಗಳಿಗೆ ಹಾಗೂ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯ ನೀಡುತ್ತದೆ.

**ಡಿ) ಯುನಿಸೆಫ್ (United Nations International Children's Emergency Fund) :** ಈ ಸಂಸ್ಥೆ ದ್ವಿತೀಯ ಮಹಾಯುದ್ಧದ ಬಳಿಕ ಮಕ್ಕಳ ಕ್ಷೇಮಾಭಿವೃದ್ಧಿಗಾಗಿ 1946ರಲ್ಲಿ ಸ್ಥಾಪನೆಗೊಂಡಿತು. ಮುಂದೆ 1953 ರಲ್ಲಿ ಇದೊಂದು ಶಾಶ್ವತ ಸಂಸ್ಥೆ ಎನಿಸಿತು. ಈ ಸಂಸ್ಥೆಯಲ್ಲಿ 30 ಮಂದಿ ಸದಸ್ಯರಿದ್ದಾರೆ. ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿಗೆ ಪೂರಕವಾದ ಪರಿಸರವನ್ನು ಒದಗಿಸುವುದೇ ಈ ಸಂಸ್ಥೆಯ ಮೂಲ ಉದ್ದೇಶವಾಗಿದೆ. ಈ ಉದ್ದೇಶ ಪೂರೈಕೆಗಾಗಿ ಅವಶ್ಯಕತೆಯಿರುವ ಎಲ್ಲಾ ರಾಷ್ಟ್ರಗಳಿಗೆ ಇದು ಸಹಾಯ ನೀಡುತ್ತದೆ. 1965 ರಲ್ಲಿ ಯುನಿಸೆಫ್ ನೋಬೆಲ್ ಬಹುಮಾನಗಳಿಸಿದೆ. ಶುಭಾಶಯ ಪತ್ರಗಳ ಮಾರಾಟದ ಮೂಲಕ ಈ ಸಂಸ್ಥೆ ಗಳಿಸುವ ಹಣವನ್ನು ಮಕ್ಕಳ ಯೋಗಕ್ಷೇಮಕ್ಕಾಗಿ ವಿನಿಯೋಗಿಸುತ್ತಿದೆ. ಹೀಗೆ ಈ ಸಂಸ್ಥೆ ಮಾನವೀಯ ದೃಷ್ಟಿಕೋನ ಹೊಂದಿದ ಸಂಸ್ಥೆ ಎನಿಸಿದೆ.

© KTBS Not to be published

**ಇ) ಐ.ಎಮ್.ಎಫ್ (International Monetary Fund) :** 1945ರಲ್ಲಿ ಆರಂಭಗೊಂಡ ಈ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ 1947ರ ಬಳಿಕ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭಿಸಿತು. ಇದರ ಮುಖ್ಯ ಕಛೇರಿ ಅಮೆರಿಕಾದ ವಾಷಿಂಗ್‌ಟನ್‌ನಲ್ಲಿದೆ. ಇದು ಅಂತರರಾಷ್ಟ್ರೀಯ ಮಟ್ಟದ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸುತ್ತದೆ. ವಿಶ್ವ ವಾಣಿಜ್ಯ ವ್ಯವಹಾರದ ಬೆಳವಣಿಗೆಗೆ, ಆರ್ಥಿಕ ಸ್ಥಿರತೆ ಹಾಗೂ ಉತ್ತಮ ವಿದೇಶೀ ಪಾವತಿ ಸಮತೋಲನವನ್ನು ಕಾಯ್ದುಕೊಳ್ಳಲು ಇದು ಸಹಕರಿಸುತ್ತದೆ. ಇದರಲ್ಲಿ ಆಡಳಿತ ಮಂಡಳಿ, ಕಾರ್ಯನಿರ್ವಹಣಾ ನಿರ್ದೇಶಕ ಮಂಡಳಿ ಹಾಗೂ ಆಡಳಿತ ನಿರ್ದೇಶಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಇದರ ಕಾರ್ಯ ನಿರ್ವಹಣೆಯ ಗುಣಮಟ್ಟ ಹಾಗೂ ಪಾರದರ್ಶಕತೆ ಸಾಕಷ್ಟು ಮನ್ನಣೆಯನ್ನು ಪಡೆದಿದೆ. ವಿವಿಧ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳಿಗೆ ಕೇಂದ್ರ ಬ್ಯಾಂಕು ಎಂಬುದಾಗಿ ಇದನ್ನು ಕರೆಯಬಹುದಾಗಿದೆ. ಆರ್ಥಿಕವಾಗಿ ಮುಂದುವರಿದ ಹಾಗೂ ಹಿಂದುಳಿದ ರಾಷ್ಟ್ರಗಳ ಪರಸ್ಪರ ಸಂಬಂಧವನ್ನು ಬೆಸೆಯುವಲ್ಲಿ ಇದು ಪೂರಕ ಪಾತ್ರ ವಹಿಸುತ್ತದೆ.

**ಎಫ್) ಐ.ಬಿ.ಆರ್.ಡಿ (International Bank for Reconstruction and Development) :** ವಿಶ್ವ ಬ್ಯಾಂಕ್ ಎಂದೂ ಕರೆಯಲ್ಪಡುತ್ತಿರುವ ಈ ಸಂಸ್ಥೆ 1947ರಲ್ಲಿ ಪ್ರಾರಂಭವಾಯಿತು. ಇದರ ಮುಖ್ಯ ಕಚೇರಿ ವಾಷಿಂಗ್‌ಟನ್‌ನಲ್ಲಿದೆ. ದ್ವಿತೀಯ ಮಹಾಯುದ್ಧದ ಬಳಿಕ ಆರ್ಥಿಕ ಪುನಶ್ಚೇತನಕ್ಕಾಗಿ ಈ ಬ್ಯಾಂಕ್ ಸ್ಥಾಪನೆಗೊಂಡಿತು. ಕೃಷಿ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕ ಅಭಿವೃದ್ಧಿಗಾಗಿ ಅವಶ್ಯಕವಿರುವ

ಎಲ್ಲಾ ಸದಸ್ಯ ರಾಷ್ಟ್ರಗಳಿಗೆ ಈ ಬ್ಯಾಂಕ್ ಅಗಾಧ ಮೊತ್ತದ ಸಾಲ ನೀಡುತ್ತದೆ. ಇದು ವಿಶ್ವ ವ್ಯಾಪಾರ ಹಾಗೂ ವಿದೇಶೀ ವಿನಿಮಯ ಪಾವತಿ ಸಮತೋಲನಕ್ಕೆ ಸಹಾಯ ಮಾಡುತ್ತದೆ. ಎಲ್ಲಾ ಪ್ರಗತಿಪರ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಗೆ ಅತ್ಯಂತ ಹೆಚ್ಚಿನ ಸಹಾಯ ಈ ಬ್ಯಾಂಕ್ ನೀಡುತ್ತದೆ. ಇದರಲ್ಲಿ ಆಡಳಿತ ಮಂಡಳಿ, ಕಾರ್ಯಕಾರಿ ಮಂಡಳಿ ಹಾಗೂ ಅಧ್ಯಕ್ಷರು ಕಾರ್ಯನಿರ್ವಹಿಸುತ್ತಾರೆ. ಇದರ ಕೈಕೆಳಗೆ ಎರಡು ಸಹಕಾರೀ ಅಂಗಗಳಿವೆ. ಅವುಗಳೆಂದರೆ (ಎ) ಅಂತರರಾಷ್ಟ್ರೀಯ ಪ್ರಗತಿ ಕೂಟ ಮತ್ತು (ಬಿ) ಅಂತಾರಾಷ್ಟ್ರೀಯ ಹಣಕಾಸು ನಿಗಮ.

**ಜಿ) ಅಂತರರಾಷ್ಟ್ರಿಯ ಕಾರ್ಮಿಕ ಸಂಘ (International Labour Organisation) :** ಈ ಸಂಸ್ಥೆಯ ಹೆಸರೇ ಸೂಚಿಸುವಂತೆ ಇದು ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಆರಂಭಗೊಂಡ ಸಂಸ್ಥೆಯಾಗಿದೆ. ಇದರ ಮುಖ್ಯ ಕಾರ್ಯಾಲಯ ಸ್ವಿಟ್ಜರ್‌ಲ್ಯಾಂಡಿನ ಜಿನೇವಾದಲ್ಲಿದೆ. ಪ್ರತಿಯೊಂದು ಸದಸ್ಯರಾಷ್ಟ್ರವು ಇಬ್ಬರು ಪ್ರತಿನಿಧಿಗಳನ್ನು ಈ ಸಂಸ್ಥೆಗೆ ಕಳುಹಿಸುತ್ತಿದ್ದು, ಅದರಲ್ಲಿ ಒಬ್ಬರು ಕಾರ್ಮಿಕ ಪ್ರತಿನಿಧಿ ಹಾಗೂ ಇನ್ನೊಬ್ಬರು ಆಡಳಿತ ನಡೆಸುವವರ ಪ್ರತಿನಿಧಿ ಆಗಿರುತ್ತಾರೆ. ಕಾರ್ಮಿಕ ವರ್ಗದ ಸಾಮಾಜಿಕ ಭದ್ರತೆ, ಆರೋಗ್ಯ ಸಂರಕ್ಷಣೆ, ಉತ್ತಮ ಜೀವನ ಮಟ್ಟ ಇತ್ಯಾದಿ ವಿಚಾರಗಳು ಈ ಸಂಸ್ಥೆಯ ಕಾರ್ಯ ವ್ಯಾಪ್ತಿಗೆ ಸೇರುತ್ತದೆ. ಮಹಿಳಾ ಕಾರ್ಮಿಕರ ಹೆರಿಗೆ ಸೌಲಭ್ಯ, ಕನಿಷ್ಠ ವೇತನ ಜಾರಿ, ವಸತಿ ನಿರ್ಮಾಣ, ಇತ್ಯಾದಿ ವಿಚಾರಗಳು ಈ ಸಂಸ್ಥೆಯ ಕಾರ್ಯ ಪರಿಧಿಯೊಳಗೆ ಸೇರಿವೆ. ಈ ಸಂಸ್ಥೆಯ ನಿರ್ಣಯಗಳು ಕೇವಲ ಸಲಹೆಗಳ ರೂಪದಲ್ಲಿದ್ದರೂ, ಸದಸ್ಯ ರಾಷ್ಟ್ರಗಳು ಅವುಗಳಿಗೆ ಮನ್ನಣೆ ನೀಡುತ್ತವೆ. ಇದರ ಸಾಮಾನ್ಯ ಸಮ್ಮೇಳನ ಕಾರ್ಮಿಕ ವರ್ಗದ ಜಾಗತಿಕ ಸಂಸತ್ತಿನಂತೆಯೇ ಇದ್ದು ಅವರ ಹಿತಾಸಕ್ತಿಗಳನ್ನು ರಕ್ಷಿಸಲು ಯತ್ನಿಸುತ್ತದೆ.

**ಎಚ್) ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ ಸಮಿತಿ :** ಈ ಸಂಸ್ಥೆ ಪ್ರಧಾನವಾಗಿ ಜಾಗತಿಕ ಮಟ್ಟದ ವ್ಯಾಪಾರ ಮತ್ತು ವಾಣಿಜ್ಯ ಸಂಗತಿಗಳ ಪ್ರಗತಿಗೆ ಯತ್ನಿಸುತ್ತದೆ. ಅಂತರರಾಷ್ಟ್ರೀಯ ವ್ಯಾಪಾರದ ಬೆಳವಣಿಗೆಗೆ ಬೇಕಾದ ತಾಂತ್ರಿಕ ಸಹಕಾರ ಈ ಸಂಸ್ಥೆ ನೀಡುತ್ತದೆ. ಜಾಗತಿಕ ಮಟ್ಟದಲ್ಲಿ ಯಾವುದೇ ತೆರನಾದ ಧೋರಣಾತ್ಮಕ ತೊಂದರೆಗಳನ್ನು ಇದು ನಿವಾರಿಸಿ, ತನ್ಮೂಲಕ ಅಂತರರಾಷ್ಟ್ರೀಯ ವ್ಯಾಪಾರ ಮತ್ತು ವಾಣಿಜ್ಯದ ಬೆಳವಣಿಗೆಗೆ ಇದು ಸಹಕರಿಸುತ್ತದೆ. ಹೀಗೆ ವಿಶ್ವ ಕುಟುಂಬದ ಆರ್ಥಿಕ ಪ್ರಗತಿಗೆ ಪೂರಕವಾಗಿ ಇದು ಕಾರ್ಯ ನಡೆಸುತ್ತದೆ.

**ಐ) ವಿಶ್ವ ವ್ಯಾಪಾರ ಸಂಘ (World Trade Organisation) :** ಈ ಸಂಸ್ಥೆ 1995 ಜನವರಿ 1ರಂದು ಹುಟ್ಟಿಕೊಂಡಿತು. ಇದರ ಎಲ್ಲಾ ಸದಸ್ಯ ರಾಷ್ಟ್ರಗಳು 'ಸಾಮಾನ್ಯ ವ್ಯಾಪಾರ ಹಾಗೂ ಸುಂಕ ಒಪ್ಪಂದ' (ಗ್ಯಾಟ್)ಕ್ಕೆ ಒಪ್ಪಿಗೆ ಸೂಚಿಸಿದವು. ಅಂತರರಾಷ್ಟ್ರೀಯ ಮಟ್ಟದ ವಾಣಿಜ್ಯ ಹಾಗೂ ವ್ಯಾಪಾರದ ತೊಡಕುಗಳ ನಿವಾರಣೆಗೆ ಇದು ಯತ್ನಿಸುತ್ತದೆ. ವಿಶ್ವ ಬ್ಯಾಂಕಿನೊಂದಿಗೆ ಇದು ಅಂತರರಾಷ್ಟ್ರೀಯ ವಾಣಿಜ್ಯ ವ್ಯವಹಾರಗಳ ಧೋರಣೆಗಳನ್ನು ರೂಪಿಸುವಲ್ಲಿ ಸಹಕರಿಸುತ್ತದೆ. ಮುಕ್ತ ವಾಣಿಜ್ಯ ಧೋರಣೆಯಿಂದ ಪ್ರವರ್ಧಮಾನದೆಡೆಗೆ ಸಾಗುವ ರಾಷ್ಟ್ರಗಳು ಕೆಲವೊಂದು ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಐ.ಎಮ್.ಎಫ್ ಹಾಗೂ ಐ.ಬಿ.ಆರ್.ಡಿ. ಸಂಸ್ಥೆಗಳೊಂದಿಗೆ ಇದು ತೃತೀಯ ಆರ್ಥಿಕ ಆಧಾರ ಸ್ತಂಭ ಎಂದು ಕರೆಯಲ್ಪಡುತ್ತದೆ.

**ಪ್ರಾದೇಶಿಕ ಸಹಕಾರ :** ಪ್ರಚಲಿತ ಜಗತ್ತಿನಲ್ಲಿ ಹಲವಾರು ಪ್ರಾದೇಶಿಕ ಸಂಸ್ಥೆಗಳ ಇರುವಿಕೆಯನ್ನು ನಾವು ಗಮನಿಸಬಹುದಾಗಿದೆ. ಇವುಗಳು ಸದಸ್ಯ ರಾಷ್ಟ್ರಗಳ ಪರಸ್ಪರ ಸಹಕಾರ ಹಾಗೂ ತಿಳುವಳಿಕೆಯನ್ನು ಬಲಪಡಿಸುತ್ತವೆ. ಇಂತಹ ಪ್ರಾದೇಶಿಕ ಸಂಸ್ಥೆಗಳಲ್ಲಿ ಈ ಕೆಳಗಿನವುಗಳು ಪ್ರಾಮುಖ್ಯವಾಗಿದೆ.

**1) ಕಾಮನ್‌ವೆಲ್ತ್ ರಾಷ್ಟ್ರ ಸಂಘ (Common wealth of Nations) :** ಇದನ್ನು ಹಿಂದೆ "ಬ್ರಿಟಿಷ್ ಕಾಮನ್‌ವೆಲ್ತ್ ಆಪ್ ನೇಷನ್ಸ್" ಎಂದು ಕರೆಯುತ್ತಿದ್ದು, ಆ ಬಳಿಕ 'ಬ್ರಿಟಿಷ್'ಎಂಬ ಶಬ್ದವನ್ನು ತೆಗೆಯಲಾಯಿತು. ಈ ಸಂಸ್ಥೆ 1926ರಲ್ಲಿ ಸ್ಥಾಪನೆಗೊಂಡಿದ್ದು, ಮುಂದೆ ಭಾರತವೂ ಸೇರಿ ಸ್ವಾತಂತ್ರ್ಯಗಳಿಸಿದ ಹಲವಾರು ರಾಷ್ಟ್ರಗಳು ಇದರ ಸದಸ್ಯತ್ವವನ್ನು ಸ್ವಇಚ್ಛೆಯಿಂದ ಪಡೆದುಕೊಂಡವು. ಇದಕ್ಕೆ ಸಾಂಕೇತಿಕವಾಗಿ

© KTBS Not to be republished

ಬ್ರಿಟನ್ನಿನ ದೊರೆಯ ಹಿರಿತನವಿದೆ. ಪ್ರಸಕ್ತ ಈ ಕಾಮನ್‌ವೆಲ್ತ್ ಸಂಸ್ಥೆಯಲ್ಲಿ 54 ಸದಸ್ಯ ರಾಷ್ಟ್ರಗಳಿವೆ. ಬ್ರಿಟನ್ನಿನ ಲಂಡನ್‌ನಲ್ಲಿ ಇದರ ಕೇಂದ್ರ ಕಚೇರಿಯಿದೆ. ಇದರ ಕಾರ್ಯಕಲಾಪಗಳಲ್ಲಿ ಸದಸ್ಯರಾಷ್ಟ್ರಗಳ ಪ್ರಧಾನ ಮಂತ್ರಿಗಳು, ಅರ್ಥ ಸಚಿವರು, ಹಾಗೂ ವಿದೇಶಾಂಗ ಮಂತ್ರಿಗಳು ಭಾಗವಹಿಸುತ್ತಾರೆ. ಪ್ರಜಾತಂತ್ರವನ್ನು ಎತ್ತಿ ಹಿಡಿಯುವುದು, ಸ್ವಾತಂತ್ರ್ಯದ ಸಂರಕ್ಷಣೆ, ಬಡತನ ನಿರ್ಮೂಲನ, ವಿಶ್ವಶಾಂತಿ ನೆಲೆಗೊಳಿಸುವಿಕೆ, ಕ್ರೀಡೆ, ವಿಜ್ಞಾನ, ಹಾಗೂ ಕಲೆಯ ಬೆಳವಣಿಗೆಗೆ ಹಾಗೂ ಆ ಬಗೆಗೆ ಸಂಬಂಧಗಳ ವೃದ್ಧಿ– ಇವು ಈ ಸಂಸ್ಥೆಯ ಪ್ರಮುಖ ಉದ್ದೇಶಗಳಾಗಿವೆ. ಪರಸ್ಪರ ಸದಸ್ಯರಾಷ್ಟ್ರಗಳ ಮೈತ್ರಿಯನ್ನು ಈ ಸಂಸ್ಥೆ ಬಲಪಡಿಸುತ್ತದೆ.

**2) 'ಸಾರ್ಕ್' (South Asian Association for Regional co-operation) :** ಈ ಸಂಸ್ಥೆ 1985ರಲ್ಲಿ ಸ್ಥಾಪನೆಗೊಂಡಿದ್ದು, ಇದೀಗ ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಪಾಕಿಸ್ತಾನ, ಮಾಲ್ಡೀವ್ಸ್, ಭೂತಾನ್ ಹಾಗೂ ಅಫ್ಘಾನಿಸ್ತಾನ – ಈ 8 ರಾಷ್ಟ್ರಗಳು ಇದರ ಸದಸ್ಯತ್ವ ಹೊಂದಿವೆ. ಆರ್ಥಿಕ ಸಂಬಂಧಗಳ ವೃದ್ಧಿ, ಸಾಮಾಜಿಕ ಪ್ರಗತಿ ಹಾಗೂ ಸಾಂಸ್ಕೃತಿಕ ಬೆಳವಣಿಗೆಯನ್ನು ಪರಸ್ಪರ ಸಹಕಾರದೊಂದಿಗೆ ಸಾಧಿಸುವಿಕೆ ಈ ಸಂಸ್ಥೆಯ ಮೂಲ ಉದ್ದೇಶ. ಈ ಗುರಿ ಸಾಧನೆಗಾಗಿ ಹಲವಾರು ತಾಂತ್ರಿಕ ಸಮಿತಿಗಳು, ಕಾರ್ಯಾಚರಣೆ ಪಡೆಗಳು ಹಾಗೂ ಸ್ಥಾಯಿ ಸಮಿತಿಗಳು ರಚನೆಗೊಂಡಿವೆ. ಆದರೆ ಸದಸ್ಯ ರಾಷ್ಟ್ರಗಳ ಪರಸ್ಪರ ಅಪನಂಬಿಕೆ, ವಿವಾದಗಳು ಈ ಸಂಸ್ಥೆಯ ಪ್ರಗತಿಗೆ ತೊಡಕಾಗಿವೆ. 'ಎಲ್ಲಾ ನಿರ್ಣಯಗಳು ಸದಸ್ಯ ರಾಷ್ಟ್ರಗಳ ಅವಿರೋಧದ ನೆಲೆಯಲ್ಲೇ ಇರಬೇಕು' ಎಂಬ ಸೂತ್ರವೂ ಈ ಸಂಸ್ಥೆಯ ಪ್ರಗತಿಗೆ ಒಂದು ತೊಡಕಾಗಿ ಪರಿಣಮಿಸಿದೆ. ತಮ್ಮ ತಮ್ಮೊಳಗಿನ ವಿವಾದಗಳೇ ಈ ಸದಸ್ಯರಾಷ್ಟ್ರಗಳ ಮಧ್ಯೆ ಸಾಕಷ್ಟು ಇವೆ. ಆದರೂ ನಿಯತಕಾಲಿಕ ಸಮಾವೇಶಗಳು ಪರಸ್ಪರ ಶಾಂತಿಯುತ ಪರಿಹಾರಕ್ಕೆ ಅನುವು ಮಾಡಿಕೊಡುತ್ತದೆ. ವಿಜ್ಞಾನ, ತಾಂತ್ರಿಕತೆ, ಕೃಷಿ ಮುಂತಾದ ವಿಷಯಗಳ ಬಗ್ಗೆ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳ ಕಮ್ಮಟಗಳು, ತರಬೇತಿ ಕಾರ್ಯಾಗಾರಗಳು ಜಂಟಿಯಾಗಿ ನಡೆಯುತ್ತವೆ. 'ಸಾರ್ಕ್'ನ ಚಟುವಟಿಕೆಗಳಲ್ಲಿ ಭಾರತವು ಸಕ್ರಿಯ ಪಾತ್ರ ವಹಿಸುತ್ತಿದೆ. ಇದರ ಮುಖ್ಯ ಕಛೇರಿ ನೇಪಾಳದ ಕಠ್ಮಂಡುವಿನಲ್ಲಿದೆ.

**3) ಯುರೋಪಿಯನ್ ಯೂನಿಯನ್ :** ಈ ಸಂಸ್ಥೆ 28 ಯುರೋಪಿನ ಸದಸ್ಯ ರಾಷ್ಟ್ರಗಳನ್ನು ಒಳಗೊಂಡ ಸಂಸ್ಥೆಯಾಗಿದೆ. ಮ್ಯಾಸ್ಟ್ರಿಚ್ ಎಂಬಲ್ಲಿ ಯುರೋಪಿಯನ್ ಯೂನಿಯನ್ ಒಪ್ಪಂದದ ಅನುಗುಣವಾಗಿ 1993ರಲ್ಲಿ ಇದು ಉದಯವಾಯಿತು. ಇದು ಸದಸ್ಯ ರಾಷ್ಟ್ರಗಳ ಮಧ್ಯೆ ಸಮಾನ ಏಕ ಮಾರುಕಟ್ಟೆ, ಒಂದೇ ಚಲಾವಣೆಯ ಕರೆನ್ಸಿ, ಸಮಾನ ಕೃಷಿ ಹಾಗೂ ವ್ಯಾಪಾರ ಧೋರಣೆ ಇತ್ಯಾದಿಗಳಿಗೆ ಅವಕಾಶ ಮಾಡಿಕೊಡುತ್ತದೆ. ಇದರಲ್ಲಿನ ಮುಖ್ಯ ಅಂಗ ಸಂಸ್ಥೆಗಳೆಂದರೆ (1) ಸಮಿತಿ, (2) ಆಯೋಗ, (3) ಯುರೋಪಿನ ಸಂಸತ್ತು, ಹಾಗೂ (4) ಯುರೋಪಿನ ನ್ಯಾಯಾಲಯ. ಈ ಯುರೋಪಿಯನ್ ಯೂನಿಯನ್ ಒಂದು ಸಂಯುಕ್ತ ರಾಜ್ಯವನ್ನು ಹೋಲುವಂತಿದೆ. ಇದರ ಪ್ರತಿಪಾದಕರು ಹೇಳುವಂತೆ ಈ ಸಂಸ್ಥೆ ಶಾಂತಿ ಮತ್ತು ಪ್ರಜಾತಂತ್ರಕ್ಕಾಗಿ ಕಾರ್ಯ ನಿರ್ವಹಿಸುತ್ತದೆ. ಈ ಯುರೋಪಿಯನ್ ಯೂನಿಯನ್ ಈ ಹಿಂದಿನ ಯುರೋಪಿಯನ್ ಇಕಾನಾಮಿಕ್ ಕಮ್ಯುನಿಟೀ (ಇ.ಇ.ಸಿ)ಯ ವಾರಸುದಾರ ಸಂಸ್ಥೆಯಂತಿದೆ. ಇದರ ಸದಸ್ಯ ರಾಷ್ಟ್ರಗಳು ಸ್ವಯಂ ಇಚ್ಛೆಯಿಂದ ತಮ್ಮ ಸಾರ್ವಭೌಮ ಅಧಿಕಾರದ ಗಮನಾರ್ಹ ಅಂಶವನ್ನು ಈ ಸಂಸ್ಥೆಗೆ ನೀಡಿದ್ದಾರೆ.

**4) ಆಸಿಯನ್ (Association of South East Asian Nations) :** ಈ ಸಂಸ್ಥೆ 1967ರಲ್ಲಿ ಉದಯವಾಯಿತು. ಇದರ ಸ್ಥಾಪಕ ಸದಸ್ಯರಾಷ್ಟ್ರಗಳೆಂದರೆ, ಸಿಂಗಾಪುರ, ಮಲೇಷ್ಯಾ, ಇಂಡೋನೇಷ್ಯಾ, ಫಿಲಿಪ್ಪೈನ್ಸ್ ಹಾಗೂ ಥೈಲ್ಯಾಂಡ್. ಇದೀಗ ಇದರಲ್ಲಿ 10 ರಾಷ್ಟ್ರಗಳು ಸದಸ್ಯತ್ವ ಹೊಂದಿದೆ. ಇದರ ಮುಖ್ಯ ಉದ್ದೇಶಗಳೆಂದರೆ ಈ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ, ಸಾಮಾಜಿಕ ಬೆಳವಣಿಗೆಗೆ ಯತ್ನ ಹಾಗೂ ಸಾಂಸ್ಕೃತಿಕ ಪ್ರಗತಿ ಸಾಧಿಸುವಿಕೆ ಮತ್ತು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ತಾಂತ್ರಿಕ, ವೈಜ್ಞಾನಿಕ, ಆಡಳಿತಾತ್ಮಕ ಇತ್ಯಾದಿ ಕ್ಷೇತ್ರಗಳಲ್ಲಿ ಪರಸ್ಪರ ನೆರವು ಹಾಗೂ ಸಹಭಾಗಿತ್ವ ಹೊಂದುವಿಕೆ.

© KTBS Not to be republished

ಇದು ಒಂದು ಮಿಲಿಟರಿ ಒಕ್ಕೂಟವಲ್ಲ. ಭಾರತ ಈ ಸಂಸ್ಥೆಯ ಬಗ್ಗೆ ಉದಾರ ನೀತಿ ಹೊಂದಿದ್ದರೂ, ಅದರ ಸದಸ್ಯತ್ವ ಹೊಂದಿಲ್ಲ. ವೀಕ್ಷಕರ ಸ್ಥಾನ ಹೊಂದಿದೆ. ಇದರಲ್ಲಿ ವಿಶ್ವದ ಒಟ್ಟು ಜನಸಂಖ್ಯೆಯ 9 ಪ್ರತಿಶತ ಜನರಿದ್ದಾರೆ.

**5) ದಿ ಆರ್ಗನೈಸೇಶನ್ ಆಪ್ ಆಫ್ರಿಕನ್ ಯುನಿಟಿ :** ಈ ಆಫ್ರಿಕನ್ ಒಕ್ಕೂಟ ಸಂಸ್ಥೆ 1963ರಲ್ಲಿ ಸ್ಥಾಪನೆಗೊಂಡಿತು. ಸ್ವಾತಂತ್ರ್ಯಗಳಿಸಿದ ಆಫ್ರಿಕನ್ ರಾಷ್ಟ್ರಗಳು ತಮ್ಮ ತಮ್ಮೊಳಗೆ ಹಲವಾರು ಪ್ರಾದೇಶಿಕ ಸಂಸ್ಥೆಗಳನ್ನು ರಚಿಸಿಕೊಂಡವು. ಮುಂದೆ ಅವೆಲ್ಲಾ ಒಟ್ಟಾಗಿ ಆರ್ಗನೈಸೇಶನ್ ಆಫ್ ಆಫ್ರಿಕನ್ ಯುನಿಟಿ ಎಂಬ ಹೊಸ ಸಂಸ್ಥೆಯನ್ನು ಸ್ಥಾಪಿಸಿದವು. ಎಲ್ಲಾ ಸ್ವತಂತ್ರ ಆಫ್ರಿಕನ್ ರಾಷ್ಟ್ರಗಳ ಸ್ವಯಂ ನಿರ್ಧಾರದ ಹಕ್ಕನ್ನು ಈ ಸಂಸ್ಥೆ ಪ್ರತಿಪಾದಿಸುತ್ತದೆ. ಇದು ಸ್ವಾತಂತ್ರ್ಯ, ಸಮಾನತೆ, ನ್ಯಾಯ ಹಾಗೂ ಒಗ್ಗಟ್ಟನ್ನು ಆಫ್ರಿಕನ್ ರಾಷ್ಟ್ರಗಳಲ್ಲಿ ನೆಲೆಯಾಗಿಸಲು ಶ್ರಮಿಸುತ್ತದೆ. 'ನೂತನ ವಸಾಹತುಶಾಹಿತ್ವ'ದ ವಿರುದ್ಧ ಧ್ವನಿ ಎತ್ತಲು ಸಂಸ್ಥೆಯ ಸದಸ್ಯರು ಬದ್ಧರಾಗಿದ್ದಾರೆ, ಇದರ ಸನ್ನದಿಗೆ ಒಪ್ಪಿಗೆಯಿರುವ ಎಲ್ಲಾ ಆಫ್ರಿಕನ್ ರಾಷ್ಟ್ರಗಳು ಈ ಸಂಸ್ಥೆಯ ಸದಸ್ಯರಾಗಲು ಅರ್ಹರಾಗಿದ್ದಾರೆ.

ಈ ಸಂಸ್ಥೆಯಲ್ಲಿ (1) ಸದಸ್ಯರಾಷ್ಟ್ರಗಳ ಮುಖ್ಯಸ್ಥರ ಹಾಗೂ ಅಲ್ಲಿನ ಸರಕಾರದ ಮುಖ್ಯಸ್ಥರ ಸಭೆ, (2) ಸಚಿವ ಸಂಪುಟ ಹಾಗೂ (3) ಮಧ್ಯಸ್ಥಿಕೆ ಒಪ್ಪಂದ ಹಾಗು ರಾಜಿಪಂಚಾಯಿತಿಕೆ ಸಮಿತಿಯಿದೆ. ವಸಾಹತುಶಾಹಿತ್ವ, ವರ್ಣಭೇದ ನೀತಿ, ಸಾಮ್ರಾಜ್ಯಶಾಹಿತ್ವ ಮುಂತಾದವುಗಳ ವಿರುದ್ಧ ಈ ಸಂಸ್ಥೆ ಉತ್ತಮ ಪಾತ್ರ ವಹಿಸಿದೆ.

© KTBS Not to be published

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ವಿಶ್ವಸಂಸ್ಥೆಯು ಪ್ರಾರಂಭವಾದ ವರ್ಷ ________
2. ವಿಶ್ವಸಂಸ್ಥೆಯ ಮುಖ್ಯ ಕಚೇರಿ ________ ನಗರದಲ್ಲಿದೆ.
3. ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿರುವ ಅಂಗಸಂಸ್ಥೆ ________
4. ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಅವಧಿ ________ ವರ್ಷಗಳು
5. ಅಂತರರಾಷ್ಟ್ರೀಯ ನ್ಯಾಯಾಲಯವು ________ ಎಂಬಲ್ಲಿ ಇದೆ.
6. ವಿಶ್ವಸಂಸ್ಥೆಯ ಈಗಿನ ಮಹಾಕಾರ್ಯದರ್ಶಿಯ ಹೆಸರು ________ .
7. ವಿಶ್ವ ಆರೋಗ್ಯ ಸಂಸ್ಥೆ ಸ್ಥಾಪನೆಯಾದ ವರ್ಷ ________.
8. ಸಾರ್ಕ್ ಸ್ಥಾಪನೆಯಾದ ವರ್ಷ ________

**II. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಗುಂಪುಗಳಲ್ಲಿ ಚರ್ಚಿಸಿ ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ವಿಶ್ವಸಂಸ್ಥೆಯ  ಸ್ಥಾಪನೆಗೆ ಮುಂದಾದವರ ಹೆಸರುಗಳನ್ನು ತಿಳಿಸಿ
2. ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳಾವುವು?
3. ಭದ್ರತಾ ಸಮಿತಿಯಲ್ಲಿನ ಖಾಯಂ ಸದಸ್ಯ ರಾಷ್ಟ್ರಗಳು ಯಾವುವು?

4. ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯ ಸೂಚಿಯಲ್ಲಿರುವ ವಿಷಯಗಳಾವುವು?

5. ಅಂತರಾಷ್ಟ್ರೀಯ ಕಾರ್ಮಿಕ ಸಂಘದ ಕಾರ್ಯಗಳನ್ನು ಪಟ್ಟಿ ಮಾಡಿ

6. SAARC ನ್ನು ವಿಸ್ತರಿಸಿ.

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ, ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

1. ವಿಶ್ವಸಂಸ್ಥೆಯ ಉದ್ದೇಶಗಳನ್ನು ಪಟ್ಟಿಮಾಡಿರಿ.
2. ಸಾಮಾನ್ಯ ಸಭೆಯ ರಚನೆಯನ್ನು ವಿವರಿಸಿ.
3. ಆರ್ಥಿಕ ಹಾಗೂ ಸಾಮಾಜಿಕ ಸಮಿತಿಯ ಕಾರ್ಯಗಳಾವುವು?
4. 'ಜಾಗತಿಕ ಹಂತದಲ್ಲಿ ಶಾಂತಿ ಸ್ಥಾಪನೆ ಮಾಡುವಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾಗಿದೆ' ಈ ಹೇಳಿಕೆಯನ್ನು ಸಮರ್ಥಿಸಿ.
5. ಯುನೆಸ್ಕೋದ ಕಾರ್ಯಗಳಾವುವು?
6. ಜಾಗತಿಕ ಮಟ್ಟದಲ್ಲಿನ ಆರ್ಥಿಕ ಸಮಸ್ಯೆಗಳ ಪರಿಹಾರದಲ್ಲಿ ಐ. ಎಮ್. ಎಫ್‌ನ ಪಾತ್ರವನ್ನು ವಿಶ್ಲೇಷಿಸಿ.
7. ಕಾಮನ್‌ವೆಲ್ತ್ ರಾಷ್ಟ್ರಸಂಘದ ಉದ್ದೇಶಗಳನ್ನು ಪಟ್ಟಿಮಾಡಿರಿ.
8. ಯುರೋಪಿಯನ್ ಯೂನಿಯನ್ ಸಂಸ್ಥೆಯನ್ನು ವಿವರಿಸಿ.

© KTBS
Not to be published

**IV. ಚಟುವಟಿಕೆ :**

1. ಕರ್ನಾಟಕದಲ್ಲಿ ಯುನೆಸ್ಕೊದವರು ಗುರುತಿಸಿರುವ ಐತಿಹಾಸಿಕ ಸ್ಮಾರಕಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

**V. ಯೋಜಿತ ಕಾರ್ಯ :**

1. ಜಾಗತಿಕ ಮಟ್ಟದಲ್ಲಿ ವಿಶ್ವಸಂಸ್ಥೆಯು ನಿರ್ವಹಿಸಿರುವ ಶಾಂತಿ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ವೃತ್ತ ಪತ್ರಿಕೆಗಳಲ್ಲಿ ಬಂದಿರುವ ಮಾಹಿತಿಗಳನ್ನು ಸಂಗ್ರಹಿಸಿ.

* * * *

I7A2G2

# ಸಮಾಜಶಾಸ್ತ್ರ

## ಅಧ್ಯಾಯ–03

## ಸಾಮಾಜಿಕ ಚಳವಳಿಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ :**

- ಸಾಮಾಜಿಕ ಚಳವಳಿಗಳ ಅರ್ಥ ಮತ್ತು ಸ್ವರೂಪ, ಉಗಮ ಮತ್ತು ವಿಕಾಸ
- ಪರಿಸರ ಚಳವಳಿಗಳು
- ಮಹಿಳಾ ಚಳವಳಿಗಳು
- ಮದ್ಯಪಾನ ನಿಷೇಧ ಚಳವಳಿ
- ರೈತ ಚಳವಳಿಗಳು
- ಕಾರ್ಮಿಕ ಚಳವಳಿಗಳು
- ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿ

### ಸಾಮಾಜಿಕ ಚಳವಳಿಗಳ ಅರ್ಥ ಮತ್ತು ಸ್ವರೂಪ :

ಸಾಮಾಜಿಕ ಚಳವಳಿ ಎಂದರೆ ಮಾನವ ಸಮಾಜದ ಚಲನೆ, ಬದಲಾವಣೆ ಮತ್ತು ರೂಪಾಂತರಗಳಿಗೆ ಸಂಬಂಧಿಸಿ ನಡೆಯುವ ಒಂದು ವ್ಯವಸ್ಥಿತ ಸ್ವಾಭಾವಿಕ ಪ್ರತಿರೋಧದ ಸಾಮಾಜಿಕ ಪ್ರತಿಕ್ರಿಯೆ. 'ವ್ಯವಸ್ಥಿತ' ಎಂದರೆ ಪ್ರತಿ ಚಳವಳಿಯ ಹಿಂದೆ ಒಂದು ಉದ್ದೇಶ/ಗುರಿ, ಯೋಜನೆ ಹಾಗೂ ಕಾರ್ಯಕ್ರಮ ಇರುತ್ತದೆ. ಸ್ವಾಭಾವಿಕ ಹೇಗೆಂದರೆ, ಮಾನವ ಸಮಾಜದ ಅಥವಾ ಮಾನವ ವಿಕಾಸದಿಂದ ವಿವಿಧ ಹಂತಗಳಲ್ಲಿ ಇಂತಹ ಚಳವಳಿಗಳು ನಿರಂತರವಾಗಿ ನಡೆದಿವೆ/ಯುತ್ತಿವೆ/ಯುತ್ತವೆ. ಯಾವುದೇ ಜೀವಿಯು ತನ್ನ ಅಸ್ತಿತ್ವಕ್ಕೆ ಧಕ್ಕೆ ಬಂದಾಗ, ಅದರ ವಿರುದ್ಧ ಸ್ವಾಭಾವಿಕವಾಗಿ ಪ್ರತಿರೋಧ ವ್ಯಕ್ತಪಡಿಸುವುದುಂಟು. ಪ್ರತಿರೋಧಕ್ಕೆ ಮಾನವ ಜೀವಿ ಮತ್ತು ಸಮಾಜ ಹೊರತಾಗಿಲ್ಲ. ಇದನ್ನು ನಾವು ಸ್ವಾಭಾವಿಕ 'ಪ್ರತಿಕ್ರಿಯೆ' ಎಂದು ಭಾವಿಸುತ್ತೇವೆ. ಮಾನವ ಸಮಾಜದಲ್ಲಿ ನಡೆದ ಮತ್ತು ನಡೆಯುತ್ತಿರುವ ಶೋಷಣೆಗಳ ವಿರುದ್ಧ, ಹಲವು ವೈಯುಕ್ತಿಕ ಹಂತದಲ್ಲಿ ಹಾಗೂ ವ್ಯಕ್ತಿಗತ ನೆಲೆಯಲ್ಲಿ ಪ್ರತಿಭಟನೆಗಳು ನಡೆದಿವೆ/ಯುತ್ತಿವೆ. ವ್ಯಕ್ತಿಗತ ನೆಲೆಯಲ್ಲಿ ನಡೆಯುವ ಪ್ರತಿರೋಧಗಳನ್ನು ನಾವು ಸಾಮಾಜಿಕ ಚಳವಳಿ ಎಂದು ಕರೆಯುವುದಿಲ್ಲ. ಯಾಕೆಂದರೆ ಸಾಮಾಜಿಕ ಚಳವಳಿ ಎನ್ನುವುದು ಜನರು ಸಾಮೂಹಿಕವಾಗಿ ನಡೆಸುವ ಕ್ರಿಯೆ.

ಮಾನವ ಸಮಾಜದ ವಿಶಿಷ್ಟ ಸಾಮುದಾಯಿಕ ಕ್ರಿಯೆಗಳಲ್ಲಿ ಸಾಮಾಜಿಕ ಚಳವಳಿ ಮಹತ್ವದ್ದು ಮತ್ತು ವಿಶಿಷ್ಟವಾದುದು. ಇದನ್ನು ಕನ್ನಡದಲ್ಲಿ ಪ್ರತಿಭಟನೆ, ಆಂದೋಲನ, ಅಭಿಯಾನ, ಹೋರಾಟ, ಕ್ರಾಂತಿ, ಸಂಘರ್ಷ, ಇನ್ನೂ ಮುಂತಾದ ಪದ ಬಳಕೆಯ ಮೂಲಕ ಗುರುತಿಸಲಾಗುತ್ತದೆ. ಶೈಕ್ಷಣಿಕ ವಲಯದಲ್ಲಿ ಇಂಗ್ಲೀಷ್‌ನ 'ಮೂವ್‌ಮೆಂಟ್' (Movement) ಎಂಬ ಪದಕ್ಕೆ ಸಮಾನಾಂತರ ಪದವಾಗಿ, ಇದನ್ನು ಬಳಸಲಾಗುತ್ತಿದೆ.

ಸಾಮಾಜಿಕ ಚಳವಳಿಗಳು ಜನ ಸಮುದಾಯಕ್ಕೆ ಅಗತ್ಯ ಆಶೋತ್ತರಗಳನ್ನು ಅಭಿವ್ಯಕ್ತ ಪಡಿಸಲು ಇರುವ ಒಂದು ಸಾಮಾಜಿಕ ವೇದಿಕೆ. ಸಾಮಾಜಿಕ ಚಳವಳಿಗಳ ವೇದಿಕೆಗಳಲ್ಲಿ ಭಾಗವಹಿಸುವವರು ಚಳವಳಿಗಳು ಹೆಚ್ಚು ಚುರುಕುಗೊಂಡಂತೆ ತೆಗೆದುಕೊಳ್ಳುವ ಪೂರ್ವ ನಿಯೋಜಿತವಲ್ಲದ ತಿರುವುಗಳಿಂದ, ವಿವಿಧ ಸಂಘರ್ಷಗಳ ಪ್ರಭಾವಗಳಿಗೆ ಒಳಪಟ್ಟು, ಹೊಸ ಮನೋಭಾವನೆಗಳನ್ನು ಮತ್ತು ಹೊಸ ಸಾಮಾಜಿಕ ಪ್ರವೃತ್ತಿಗಳನ್ನು ಬೆಳೆಸಿಕೊಳ್ಳಬಹುದು. ಇದಕ್ಕೆ ಉದಾಹರಣೆ ಎಂದರೆ ಮಹಾತ್ಮ ಗಾಂಧೀಜಿ ಅವರು ಮೊದ ಮೊದಲು 'ದೇವರೇ ಸತ್ಯ' ಎಂದು ಹೇಳುತ್ತಿದ್ದರು. ನಂತರ ರಾಷ್ಟ್ರೀಯ ಚಳವಳಿಯಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್ ಜೊತೆಗಿನ ಸಂವಾದ ಸೇರಿದಂತೆ ಅನೇಕ ಸಾಮಾಜಿಕ ಸುಧಾರಕರ ಜೊತೆಗಿನ ಒಡನಾಟವು ಮಹಾತ್ಮ ಗಾಂಧೀಜಿ ಅವರನ್ನು 'ಸತ್ಯವೇ ದೇವರು' ಎನ್ನುವಲ್ಲಿಗೆ ತಂದುನಿಲ್ಲಿಸಿತು. ಇದು ಮಹಾತ್ಮ ಗಾಂಧೀಜಿ ಅವರು ವಿವಿಧ ಸಾಮಾಜಿಕ ಚಳವಳಿಗಳಿಂದ ಮೈಗೂಡಿಸಿಕೊಂಡ ಸಾಮಾಜಿಕ ಅನುಭವಗಳ ಫಲ. ಹೀಗಾಗಿ ಪ್ರತಿ ಸಾಮಾಜಿಕ ಚಳವಳಿಗಳೂ ಹೊಸ ಸಾಮಾಜಿಕ ವರ್ತನಾ ಮಾದರಿಗಳನ್ನು ರೂಪಿಸುತ್ತಲೇ ಇರುತ್ತವೆ.

©KTBS Not to be published

19ನೇ ಶತಮಾನಕ್ಕಿಂತಲೂ ಮೊದಲು ಪ್ರಾಕೃತಿಕ ಸಂಪತ್ತು ಬಹುತೇಕ ಸಾರ್ವಜನಿಕರು ಬಳಸುವ ಸಂಪತ್ತಾಗಿತ್ತು. ಕೈಗಾರಿಕೀಕರಣದ ನಂತರ ಪ್ರಾಕೃತಿಕ ಸಂಪತ್ತುಗಳ ಮೇಲೆ ಸರ್ಕಾರಗಳು ಮತ್ತು ಬಂಡವಾಳಶಾಹಿಗಳು ಹಿಡಿತ ಸಾಧಿಸಲು ಪ್ರಾರಂಭಿಸಿದವು. ಆಗ ಅವುಗಳ ಮೇಲೆ ನಿಯಂತ್ರಣ ಹೇರಲು ಕಾನೂನಾತ್ಮಕ ಕ್ರಮಗಳು ಜಾರಿಗೆ ಬಂದವು. ಸ್ವಾಭಾವಿಕ ಸಂಪನ್ಮೂಲವಾದ ಉರುವಲುಗಳ ಮೇಲೆ ನಿರ್ಬಂಧ ಹೇರಲಾಯಿತು. ಬುಡಕಟ್ಟು ಜನರು ತಾವೇ ವಾಸಿಸುವ ಪರಿಸರದಲ್ಲಿ ಅವರೇ ಬಳಸಲು ಬೇಕಾದ ಅಗತ್ಯವಾದ ಉರುವಲು ಪಡೆಯುವುದಕ್ಕೆ ಅವಕಾಶ ಸಿಗದಂತಾಯಿತು. ಈ ಬಗ್ಗೆ ಅನೇಕ ಸುಧಾರಕರು ಧ್ವನಿ ಎತ್ತಿದರು. ಈ ಹಿನ್ನೆಲೆಯಲ್ಲಿಯೇ ಸಾಮಾಜಿಕ ಚಳವಳಿ, ಪರಿಸರ ಚಳವಳಿ, ಮಹಿಳಾ ಚಳವಳಿ ಮತ್ತು ರೈತ ಚಳವಳಿಗಳನ್ನು ಅರ್ಥೈಸಬೇಕಾಗುತ್ತದೆ.

ಸಾಮಾಜಿಕ ಚಳವಳಿಗಳು ಎಲ್ಲಾ ಕಾಲ, ದೇಶಗಳಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ನಡೆದಿವೆ/ಯುತ್ತಿವೆ. ಕೆಲವು ಚಳವಳಿಗಳು ಶಾಶ್ವತ ಸಾಮಾಜಿಕ ಪರಿಣಾಮಗಳನ್ನು ತಂದಿವೆ. ಉದಾಹರಣೆಗೆ ಭಾರತದ ಸ್ವಾತಂತ್ರ್ಯ ಹೋರಾಟಗಳು ರಾಜಕೀಯ ಸ್ವಾತಂತ್ರ್ಯ ಸೇರಿದಂತೆ ಹಲವು ಶಾಶ್ವತ ಪರಿಣಾಮಗಳನ್ನು ನಮ್ಮ ಸಮಾಜದಲ್ಲಿ ತಂದಿವೆ. ಕೆಲವು ಚಳವಳಿಗಳು ಪ್ರಮುಖ ಪರಿಣಾಮಗಳನ್ನು ಬೀರದಿರಬಹುದು. ಭಾರತದ ಚರಿತ್ರೆಯನ್ನು ಗಮನಿಸಿದರೆ ಮತ್ತೆ ಮತ್ತೆ ಕಾಣುವ ಧಾರ್ಮಿಕ ಚಳವಳಿಗಳು ಅಥವಾ ಭಕ್ತಿಪಂಥ ಚಳವಳಿಗಳು ಭಾರತದ ಸಾಮಾಜಿಕ ವ್ಯವಸ್ಥೆಯ ಸ್ವರೂಪವನ್ನು ತೆರೆದಿಡುತ್ತವೆ. ಧರ್ಮ–ಜಾತಿ ಆಧಾರಿತ ದಬ್ಬಾಳಿಕೆ, ದೌರ್ಜನ್ಯ, ಕರ್ಮ ಸಿದ್ಧಾಂತದ ಪರಂಪರೆ, ಜಮೀನ್ದಾರರು–ಸಾಮಂತರ ದೌರ್ಜನ್ಯ ಮತ್ತು ಅಪಮಾನಗಳ ವಿರುದ್ಧ ಮಹಾವೀರ, ಬುದ್ಧ, ಬಸವಣ್ಣ, ಶರಣರು, ಸೂಫಿಗಳು, ದಾಸರು, ಅಂಬೇಡ್ಕರ್ ಇನ್ನೂ ಮುಂತಾದವರು ನಡೆಸಿದ ಚಳವಳಿಗಳು ಜಾತಿ ಅವಮಾನ ಮತ್ತು ದೌರ್ಜನ್ಯಕ್ಕೆ ಒಳಗಾದ ಜನರಲ್ಲಿ ಬಿಡುಗಡೆಯ ಬೆಳಕನ್ನು ತಂದವು. ಇದು ಸಾಮಾಜಿಕ ಮೇಲ್ಮುಖ ಚಲನೆಗೆ ಸಾಕಷ್ಟು ಅವಕಾಶಗಳನ್ನು ನೀಡಿತು.

© KTBS Not to be published

**ಚಳವಳಿಯ ಉಗಮ ಮತ್ತು ವಿಕಾಸ**

ಸಾಮಾನ್ಯವಾಗಿ ನಮ್ಮ ದಿನನಿತ್ಯ ಜೀವನದಲ್ಲಿ ನಮಗೆ ಅರಿವಿಲ್ಲದೆ ಅದೆಷ್ಟೋ ಚಿಕ್ಕ ಪುಟ್ಟ ಘರ್ಷಣೆಗಳು, ಘಟನೆಗಳು ಸಾಮಾಜಿಕ ಗುಂಪುಗಳಲ್ಲಿ ನಡೆಯುತ್ತಿರುತ್ತವೆ. ಅವು ಆ ಕ್ಷಣಕ್ಕೆ ಮಾತ್ರ ಉದ್ಭವಿಸಿ ಮಾಯವಾಗುತ್ತವೆ. ಇವು ಬಹಳ ಸೀಮಿತ ಉದ್ದೇಶಕ್ಕೋಸ್ಕರ ತಾತ್ಕಾಲಿಕ ಸಮಯದಲ್ಲಿ ಸಂಚಲನವನ್ನು ಉಂಟುಮಾಡುತ್ತವೆ. ಇವುಗಳನ್ನು ಚಳವಳಿಗಳ ಪ್ರಾರಂಭದ ಹಂತಗಳೆಂದು ಗುರುತಿಸುತ್ತೇವೆ. ಅವುಗಳಲ್ಲಿ ಜನಮಂದೆ, ದೊಂಬಿ/ಗಲಭೆಗಳು ಪ್ರಮುಖವಾದವುಗಳು. ಆದರೆ ಅನೇಕ ದೊಂಬಿ/ಗಲಭೆಗಳು ಸಕಾರಾತ್ಮಕ ಕಾರಣಗಳನ್ನು ಪಡೆಯದೆ ನಡೆಯುವುದೂ ಉಂಟು. ಇಂಥವನ್ನು ಚಳವಳಿಯ ಆರಂಭದ ಹಂತ ಎನ್ನಲಾಗದು.

**ಜನಮಂದೆ :** ಜನರು ಆಕಸ್ಮಿಕವಾದ ಕಾರಣದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ತಾತ್ಕಾಲಿಕವಾಗಿ ನಡೆಸುವ ಆಲೋಚನೆ, ಭಾವನೆ ಹಾಗೂ ವರ್ತನೆಗಳನ್ನು ಸಮೂಹ ವರ್ತನೆ ಎನ್ನಬಹುದು. ಉದಾಹರಣೆಗೆ ರಸ್ತೆ ಅಪಘಾತ ನಡೆದಾಗ ತಕ್ಷಣವೇ ಅಲ್ಲಿ ಹೆಚ್ಚಿನ ಜನರು ಸೇರಿ ನಡೆಸುವ ವರ್ತನೆ. ಇದನ್ನು ಜನಮಂದೆಯ ವರ್ತನೆ ಎನ್ನಬಹುದು. ಇಂಥ ಮೂಲಗಳು ಮುಂದೊಂದಿನ ಸಾಮಾಜಿಕ ಚಳವಳಿಗಳಾಗಿ ರೂಪುಗೊಳ್ಳಬಹುದು. ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ. ಉದಾಹರಣೆಗೆ ಚಲನಚಿತ್ರ ಮಂದಿರದ ಹತ್ತಿರ ಟಿಕೆಟ್ ಪಡೆಯಲು ಮುತ್ತಿಗೆ ಹಾಕಿದಂತೆ ಸೇರಿರುವ ಜನಸ್ತೋಮ, ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನರ ಗುಂಪು – ಇತ್ಯಾದಿ.

ಜನಮಂದೆಯಲ್ಲಿರುವ ಜನರ ಅನಿಯಂತ್ರಿತ ನಡವಳಿಕೆಯು ಎಷ್ಟೋ ಬಾರಿ ಸಮಾಜದ ಲೋಪದೋಷಗಳನ್ನು ಸೂಚಿಸುವುದುಂಟು. ಇದು ಕೆಲವೊಮ್ಮೆ ಸಾಮಾಜಿಕ ಸಂಸ್ಥೆಗಳ ಕಾರ್ಯವಿಧಾನದ ಬಗೆಗಿರುವ ಜನರ ಅಸಂತೃಪ್ತಿಯನ್ನು ಪ್ರಕಟಿಸುವುದಲ್ಲದೆ ಸರ್ಕಾರದ ಯೋಜನೆಗಳು, ಧೋರಣೆಗಳು ಮತ್ತು ನಿರ್ದಿಷ್ಟ ಕಾರ್ಯಕ್ರಮಗಳ ಬಗೆಗಿನ ಜನರ ಅಸಮಾಧಾನವನ್ನು ಹೊರಹಾಕುತ್ತದೆ.

**ದೊಂಬಿ/ಗಲಭೆ :** ದೊಂಬಿ/ಗಲಭೆ ಎಂಬುದು ಜನಮಂದೆ ವರ್ತನೆಯ ಮತ್ತೊಂದು ಮಾದರಿ. ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆಯನ್ನು ದೊಂಬಿ/ಗಲಭೆ ಎಂದು ಕರೆಯಬಹುದು. ಜನಮಂದೆಯಲ್ಲಿ ಕಾಣುವಷ್ಟು ಕನಿಷ್ಠ ಮಟ್ಟದ ಉದ್ದೇಶ, ಏಕತೆ ಕೂಡ ದೊಂಬಿಯಲ್ಲಿರುವುದಿಲ್ಲ. ದೊಂಬಿ/ಗಲಭೆಗಳಲ್ಲಿ ವಿವಿಧ ಸಮಾಜಘಾತಕ ಗುಂಪುಗಳು ತಮ್ಮ ಹಿತಾಸಕ್ತಿಗಳನ್ನು ಬಳಸಿಕೊಳ್ಳುವ ಉದ್ದೇಶದಿಂದಲೇ ಸಾರ್ವಜನಿಕ ಆಸ್ತಿ ಪಾಸ್ತಿಗಳನ್ನು ಹಾಳು ಮಾಡುತ್ತಾ ಮುಂದೆ ಹೋಗುತ್ತವೆ. ದೊಂಬಿ/ಗಲಭೆಗಳು ಮೊದಲಿಗೆ ಗೊಂದಲವನ್ನು ಸೃಷ್ಟಿ ಮಾಡುತ್ತವೆ. ಆ ಮೂಲಕ ಅಪಪ್ರಚಾರಗಳನ್ನು ನಡೆಸಿ ಗಲಭೆಗಳನ್ನು ಸೃಷ್ಟಿಸುತ್ತವೆ. ಕೆಲವೊಮ್ಮೆ ದೊಂಬಿ/ಗಲಭೆಗಳು ಅಪಾರವಾದ ಜೀವ ಹಾನಿಯನ್ನುಂಟು ಮಾಡುತ್ತವೆ.

ಹೀಗಾಗಿ ದೊಂಬಿ/ಗಲಭೆಗಳಲ್ಲಿ ತೊಡಗಿರುವವರ ವರ್ತನೆಗೆ ನಿಶ್ಚಿತವಾದ ಗುರಿ ಇರುವುದಿಲ್ಲ. ದೊಂಬಿ/ಗಲಭೆಗಳು ಕಾನೂನು ಮತ್ತು ಸುವ್ಯವಸ್ಥೆಗೆ ಗಂಭೀರ ಸವಾಲುಗಳಾಗಿವೆ. ಇದಕ್ಕೆ ಉದಾಹರಣೆ ಎಂದರೆ– ಕೋಮುಗಲಭೆ, ಜಾತಿಗಲಭೆ, ಜನಾಂಗೀಯ ಕಲಹ, ರಾಜಕೀಯ ಗುಂಪುಗಳ ನಡುವಿನ ಘರ್ಷಣೆ ಇತ್ಯಾದಿ. ಸಾಮಾನ್ಯವಾಗಿ ನಗರ, ಪಟ್ಟಣಗಳಲ್ಲಿ ಹೆಚ್ಚು ಕೇಂದ್ರೀಕೃತವಾಗಿ ನಡೆಯುತ್ತಿದ್ದ ದೊಂಬಿ/ಗಲಭೆಗಳು ಇತ್ತೀಚೆಗೆ ಗ್ರಾಮೀಣ ಪ್ರದೇಶಗಳಿಗೂ ವಿಸ್ತರಣೆಯಾಗಿವೆ. ಜಾತಿ, ಭೂಮಿ ಮತ್ತು ರಾಜಕೀಯ ಕಾರಣಗಳೂ ಸೇರಿದಂತೆ ಹಲವು ಪ್ರಚೋದಕ ಸನ್ನಿವೇಶಗಳು ದೊಂಬಿ/ಗಲಭೆಗಳನ್ನು ಹೆಚ್ಚಿಸಿವೆ. ಇಂತಹ ಅನಿಯಂತ್ರಿತ ವರ್ತನೆಯಿಂದ ಸಮಾಜಘಾತುಕ ಚಟುವಟಿಕೆಗಳು ಹೆಚ್ಚುತ್ತವೆ. ದೊಂಬಿ/ಗಲಭೆಗಳಿಗೆ ಪ್ರಮುಖವಾದ ಕಾರಣ ಪರ ಮತ್ತು ವಿರುದ್ಧದ ದ್ವೇಷ ಎನ್ನುವ ಮನೋಭಾವನೆ ಇರುವುದಿಲ್ಲ.

ದೊಂಬಿ/ಗಲಭೆಗಳು ದೀರ್ಘಕಾಲ ನಡೆಯಲಾರವು. ಒಂದು ಹಂತಕ್ಕೆ ಅವು ಕೊನೆಗೊಳ್ಳುತ್ತವೆ. ಅಧಿಕಾರಿಗಳ ಸಮಯಪ್ರಜ್ಞೆ, ಪೊಲೀಸ್, ರಕ್ಷಣಾ ಪಡೆ ಮತ್ತು ಕಾನೂನು ಮುಂತಾದ ಸಾಧನಗಳ ಮೂಲಕ ದೊಂಬಿ/ಗಲಭೆಗಳನ್ನು ನಿಯಂತ್ರಿಸಬಹುದು.

© KTBS
not to be published

## ಪರಿಸರ ಚಳವಳಿಗಳು

ಪರಿಸರ ಚಳವಳಿ ಎಂದರೆ ಪರಿಸರದಲ್ಲಿರುವ ಜೀವ ಜಗತ್ತಿನ ಸಂರಕ್ಷಣೆಯನ್ನು ವೈಜ್ಞಾನಿಕವಾಗಿ ಪ್ರತಿಪಾದಿಸುವ ಚಳವಳಿ. ಅಂದರೆ ನಮ್ಮ ಸುತ್ತಮುತ್ತಲಿನ ಭೂಮಿ, ಗಾಳಿ, ನೀರು ಸೇರಿದಂತೆ ಇಡೀ ಜೀವಮಂಡಲವನ್ನು ನಾಶ ಮಾಡುತ್ತಿರುವುದು ಮತ್ತು ಕಲುಷಿತ ಮಾಡುತ್ತಿರುವುದನ್ನು ವೈಜ್ಞಾನಿಕವಾಗಿ ಪ್ರತಿಭಟಿಸುವ ಚಳವಳಿಯೇ ಪರಿಸರ ಚಳವಳಿ. ಪರಿಸರ ಚಳವಳಿ ದಿಢೀರನೆ ಕಾಣಿಸಿಕೊಂಡ ಚಳವಳಿಯಲ್ಲ. ಹಲವಾರು ವರ್ಷಗಳು ಪರಿಸರ ಮತ್ತು ಪರಿಸರ ವಾಸಿಗಳ ಮೇಲೆ ನಡೆಸಿದ ದೌರ್ಜನ್ಯಗಳಿಗೆ ಹುಟ್ಟಿಕೊಂಡ ಪ್ರತಿರೋಧಗಳು ಈ ಚಳವಳಿಗಳಲ್ಲಿವೆ. ಉದಾಹರಣೆಗೆ ಜಾರ್ಖಂಡ್ ಮುಕ್ತಿ ಮೋರ್ಚಾ 1973ರಲ್ಲಿ ಪ್ರಾರಂಭವಾಗಿದ್ದರೂ ಸುಮಾರು 1930ಕ್ಕೆ ಮೊದಲೇ ಆದಿವಾಸಿಗಳಲ್ಲಿದ್ದ ವಿದ್ಯಾವಂತರು ಜಾರ್ಖಂಡ್ ಪ್ರದೇಶದ ಉಕ್ಕು ಸೇರಿದಂತೆ ಅನೇಕ ಸ್ವಾಭಾವಿಕ ಸಂಪನ್ಮೂಲಗಳ ಮೇಲೆ ಹೊರಗಿನ ಬಂಡವಾಳಶಾಹಿ ಕೈಗಾರಿಕೆಗಳು ಹಿಡಿತ ಸಾಧಿಸಿ ಸ್ಥಳೀಯರನ್ನು ನಿರ್ಗತೀಕರಣಕ್ಕೆ ಒಳಪಡಿಸಿದ್ದನ್ನು ವಿರೋಧಿಸಿದ್ದರು. ಇಂತಹ ಶೋಷಣೆಗಳ ವಿರುದ್ಧ ಪ್ರಾರಂಭವಾದ ಪ್ರಮುಖ ಪರಿಸರ ಚಳವಳಿಗಳಲ್ಲಿ ಜಾರ್ಖಂಡ್ ಮುಕ್ತಿ ಮೋರ್ಚಾ ಒಂದು.


ವಿಶ್ವಬ್ಯಾಂಕ್ ಪ್ರಾಯೋಜಿತ ಅಭಿವೃದ್ಧಿ ಯೋಜನೆಗಳು ಆದಿವಾಸಿಗಳನ್ನು ಸ್ಥಳಾಂತರ ಮಾಡಲು ಪ್ರಾರಂಭಿಸಿದ ನಂತರ ಹಲವು ಪರಿಸರ ಚಳವಳಿಗಳು ಆರಂಭಗೊಂಡವು. ಜಾಗತಿಕ ತಾಪಮಾನದಲ್ಲಿನ ಹೆಚ್ಚಳ, ಜಲಸಂಪನ್ಮೂಲಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಇನ್ನೂ ಮುಂತಾದವುಗಳನ್ನು ವಿರೋಧಿಸಿ ನಡೆಯುತ್ತಿರುವ ಚಳವಳಿಗಳೆಲ್ಲವೂ ಪರಿಸರ

**ನಿಮಗಿದು ತಿಳಿದಿರಲಿ:**

ಜಾರ್ಖಂಡ್ ಮುಕ್ತಿ ಮೋರ್ಚಾ ಮೊದಲು ಪರಿಸರ ಚಳವಳಿಯಾಗಿ ಆರಂಭವಾಯಿತು. ನಂತರ ರಾಜಕೀಯ ಚಳವಳಿಯಾಯಿತು.

ಚಳವಳಿಗಳಾಗಿವೆ. ಜೀವಜಗತ್ತಿನ ಮಹತ್ವದ ಬಗ್ಗೆ ಶೈಕ್ಷಣಿಕ ವಲಯ ಮತ್ತು ಬುದ್ಧಿಜೀವಿಗಳು, ಸಾಮಾಜಿಕ ಕಾರ್ಯಕರ್ತರು ಸ್ಥಳೀಯ ಜನರ ಜೊತೆ ಸೇರಿ ಪರಿಸರ ಸಂರಕ್ಷಣೆಗಾಗಿ ಸಾಮೂಹಿಕ ಪ್ರತಿಭಟನೆಗಳನ್ನು ನಡೆಸತೊಡಗಿದ್ದಾರೆ. ಅವುಗಳಲ್ಲಿ ಪ್ರಮುಖ ಚಳವಳಿಗಳನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಳ್ಳೋಣ.

**ಚಿಪ್ಕೋ ಚಳವಳಿ :** ಉತ್ತರ ಪ್ರದೇಶದ ತೆಹ್ರಿ–ಘರ್ವಾಲ್ ಜಿಲ್ಲೆಯ ರೆನ್ನಿ ಗ್ರಾಮದಲ್ಲಿ 2500 ಮರಗಳನ್ನು ಸರ್ಕಾರವು ಕಡಿಯಲು ಅನುಮತಿ ನೀಡಿತ್ತು. ಇದರಿಂದ ಅರಣ್ಯ ನಾಶವಾಗುತ್ತದೆ ಮತ್ತು ಪರಿಸರ ಹಾಳಾಗುತ್ತದೆ ಎಂದು ತಿಳಿದು ಅಲ್ಲಿನ ಮಹಿಳೆಯರೇ ಮುಂದಾಗಿ ಯಾವ ಆಮಿಷ–ಬೆದರಿಕೆಗಳಿಗೆ ಮಣಿಯದೆ ಮರಗಳನ್ನು ತಬ್ಬಿಕೊಂಡು 'ಅಪ್ಪಿಕೋ'(ಚಿಪ್ಕೊ) ಚಳವಳಿಯನ್ನು ಪ್ರಾರಂಭಿಸಿದರು. 1974ರಲ್ಲಿ ನಡೆದ ಈ ಚಳವಳಿಯು ಒಬ್ಬ ಮಹಿಳೆಯ ಸಮಯಸ್ಫೂರ್ತಿಯಾದರೂ ಅದರ ಪರಿಣಾಮ ದೂರಗಾಮಿಯಾದದ್ದು. ಈ ಚಳವಳಿಯ ಪರಿಣಾಮವಾಗಿ ಮರಗಳನ್ನು ಕಡಿಯಲು ಸರ್ಕಾರ ನೀಡಿದ ಅನುಮತಿ ರದ್ದಾಯಿತು.



**ಕರ್ನಾಟಕದ ಅಪ್ಪಿಕೋ ಚಳವಳಿ :** ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮದ ರೈತರು 1983ರಲ್ಲಿ ಅಪ್ಪಿಕೋ ಚಳವಳಿಯನ್ನು ನಡೆಸಿದರು. ಕಲಸೆ ಎಂದು ಕರೆಯುವ ಅರಣ್ಯದಲ್ಲಿ ಗುತ್ತಿಗೆದಾರರು ಮರ ಕಡಿಯಲು ಬಂದಾಗ ಅದನ್ನು ತಡೆಯಲು ಸ್ಥಳೀಯ ಜನರು ಮರಗಳನ್ನು ಅಪ್ಪಿಕೊಳ್ಳುವುದರ ಮೂಲಕ ಪ್ರತಿಭಟಿಸಿದರು. ಮರಗಳ ಕಳ್ಳ ಸಾಗಾಣಿಕೆ ತಪ್ಪಿಸುವುದು, ಗಿಡಮರಗಳನ್ನು ಬೆಳೆಸುವುದು ಹಾಗೂ ಪರಿಸರ ಮಹತ್ವದ ಬಗ್ಗೆ ಸಾಮಾನ್ಯ ಜನರಿಗೆ ಅರಿವು ಮೂಡಿಸುವುದು ಅಲ್ಲಿನ ಸ್ಥಳೀಯ ರೈತರ ಉದ್ದೇಶವಾಗಿತ್ತು.

**ನರ್ಮದಾ ಬಚಾವೋ ಆಂದೋಲನ :** ಗುಜರಾತ್ ರಾಜ್ಯದ ಸರ್ದಾರ್ ಸರೋವರ ಯೋಜನೆಯಡಿಯಲ್ಲಿ ನರ್ಮದಾ ನದಿಗೆ ಕಟ್ಟಲಾದ ಅಣೆಕಟ್ಟು ನಿರ್ಮಾಣ ಅಲ್ಲಿನ ಸ್ಥಳೀಯ ಜನರನ್ನು ಮತ್ತು ಬುಡಕಟ್ಟು ಜನರನ್ನು ನಿರ್ಗತೀಕರಣಕ್ಕೆ ಒಳಪಡಿಸಿತ್ತು. ಅರಣ್ಯ ನಾಶ, ಪರಿಸರ ನಾಶ, ಜೀವ ಸಂಕುಲಗಳಿಗೆ ತೊಂದರೆಯಾಗುತ್ತದೆ ಎನ್ನುವುದನ್ನು ವೈಜ್ಞಾನಿಕವಾಗಿ ತಿಳಿದು ಅವುಗಳನ್ನು ಸಂರಕ್ಷಣೆ ಮಾಡಬೇಕು ಎನ್ನುವ ಆಶಯದಿಂದ ಪರಿಸರ ಪ್ರೇಮಿ ಮೇಧಾ ಪಾಟ್ಕರ್ ಅವರ ನೇತೃತ್ವದಲ್ಲಿ ಅಣೆಕಟ್ಟು ನಿರ್ಮಾಣದ ವಿರುದ್ಧ ಬಹು ದೀರ್ಘಕಾಲ ಬಹುದೊಡ್ಡ ಚಳವಳಿಯನ್ನು ನರ್ಮದಾ ನದಿಯ ಸುತ್ತಮುತ್ತ ನಡೆಸಲಾಗುತ್ತಿದೆ. ಇದೇ 'ನರ್ಮದಾ ಬಚಾವೋ ಆಂದೋಲನ'.

**ಮೌನ ಕಣಿವೆ ಆಂದೋಲನ :** ಕೇರಳದ ಪಾಲ್‌ಘಾಟ್ ತಾಲೂಕಿನ ಮೌನ ಕಣಿವೆಯಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಅಣೆಕಟ್ಟಿನ ನಿರ್ಮಾಣದಿಂದ ಪರಿಸರ ನಾಶದ ಜೊತೆಗೆ ಅನೇಕ ಜೀವ ಪ್ರಭೇದಗಳು ಜೀವಿಸಲು ತೊಂದರೆಯಾಗುತ್ತದೆ. ಆದ್ದರಿಂದ ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತು ಮತ್ತು ವನ್ಯಮೃಗ ಆಸಕ್ತರು ಅಣೆಕಟ್ಟಿನ ನಿರ್ಮಾಣದ ವಿರುದ್ಧ ಚಳವಳಿಯನ್ನು ನಡೆಸಿದರು. ಈ ಚಳವಳಿ ಅನೇಕ ಜೀವಸಂಕುಲಗಳನ್ನು ಸಂರಕ್ಷಿಸುವಲ್ಲಿ ಯಶಸ್ವಿಯಾಯಿತು.

**ಕರ್ನಾಟಕ ಕರಾವಳಿ ತೀರದ ಪರಿಸರ ಚಳವಳಿ :** ಕರ್ನಾಟಕದ ಕರಾವಳಿಯ ಮಂಗಳೂರಿನಲ್ಲಿ ಸ್ಥಾಪಿಸಲಾಗುತ್ತಿದ್ದ ತೈಲ ಕಾರ್ಯಾಗಾರದಿಂದ ಹೊರಬರುವ ರಾಸಾಯನಿಕ ಅಂಶಗಳಿಂದ ಪರಿಸರ ನಾಶವಾಗುತ್ತದೆ ಎಂದು ತಿಳಿದ ಪರಿಸರವಾದಿಗಳು "ಮಂಗಳೂರು ರಿಫೈನ್‌ರೀಸ್ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್" (MRPL) ವಿರುದ್ಧ ಚಳವಳಿಯನ್ನು ನಡೆಸಿದರು. ಉಡುಪಿ ಹತ್ತಿರದ ನಂದಿಕೂರು ಉಷ್ಣ ಸ್ಥಾವರ ಸ್ಥಾಪನೆಯ ವಿರುದ್ಧ ಹಾಗೂ ಮಂಗಳೂರು ವಿಶೇಷ ಆರ್ಥಿಕ ವಲಯ ಉದ್ದೇಶಕ್ಕೆ ಕೃಷಿ ಭೂಮಿ ಪಡೆಯುವ ವಿರುದ್ಧ ನಡೆಸಿದ ಹೋರಾಟಗಳು ಪ್ರಮುಖವಾಗಿವೆ.

© KTBS
Not to be published

**ಕೈಗಾ ಅಣು ಸ್ಥಾವರ ವಿರೋಧಿ ಚಳವಳಿ :** ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ಕೈಗಾದಲ್ಲಿ ಅಣು ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸುವುದರ ವಿರುದ್ಧ ಚಳವಳಿಯನ್ನು ಶಿವರಾಮ ಕಾರಂತರ ನಾಯಕತ್ವದಲ್ಲಿ ಪ್ರಾರಂಭಿಸಲಾಯಿತು. ಕೈಗಾ ಅಣುಶಕ್ತಿ ಸ್ಥಾವರ ಸ್ಥಾಪನೆಯಿಂದ ಅರಣ್ಯನಾಶ, ಅಣುವಿಕಿರಣದಿಂದ ಪರಿಸರ ಮಾಲಿನ್ಯ ಮುಂತಾದ ದುಷ್ಪರಿಣಾಮಗಳಿಂದ ಜೀವ ಪ್ರಭೇದಗಳ ಮೇಲೆ ಹಾನಿಯಾಗುತ್ತದೆ, ಆದ್ದರಿಂದ ಇದನ್ನು ಸ್ಥಾಪನೆ ಮಾಡಬಾರದು ಎಂದು ಕೈಗಾ ವಿರೋಧಿ ಚಳವಳಿಯನ್ನು ನಡೆಸಲಾಯಿತು.

ಮೇಧಾ ಪಾಟ್ಕರ್, ಸುಂದರಲಾಲ್ ಬಹುಗುಣ ಅವರು ತಮ್ಮ ಚಳವಳಿಯ ಉದ್ದೇಶ ಸಾಧಿಸಲು ಬಹು ಸುದೀರ್ಘ ಅವಧಿಯ ಉಪವಾಸ ಸತ್ಯಾಗ್ರಹಗಳನ್ನು ನಡೆಸಿದ್ದಾರೆ. ಸ್ವಾತಂತ್ರ್ಯಾ ನಂತರ ಸಾಮೂಹಿಕ ಹಿತಾಸಕ್ತಿಗೆ ಇಷ್ಟೊಂದು ದೀರ್ಘ ಕಾಲದ ಉಪವಾಸ ಸತ್ಯಾಗ್ರಹಗಳು ನಡೆದಿದ್ದು ಪರಿಸರ ಚಳವಳಿಯಲ್ಲಿ ಬಿಟ್ಟರೆ ಬೇರೆ ನಿದರ್ಶನಗಳಿಲ್ಲ. ಪರಿಸರವಾದವೆಂಬುದು ಪ್ರತ್ಯೇಕ ಅಧ್ಯಯನ ಶಿಸ್ತಲ್ಲ. ಅದು ಮಾನವ ಬದುಕಿನೊಂದಿಗೆ ಸಮೀಕರಣವಾಗಿರುತ್ತದೆ.

## ಮಹಿಳಾ ಚಳವಳಿಗಳು

1980ರ ದಶಕದಲ್ಲಿ ಪಕ್ಷಾತೀತವಾಗಿ ನಡೆದ ಸಾಮೂಹಿಕ ಚಳವಳಿಗಳಲ್ಲಿ ಮಹಿಳಾ ವಿಮೋಚನಾ ಚಳವಳಿ ಮಹತ್ವದ್ದು. ಪುರುಷ ಪ್ರಾಧಾನ್ಯದ ಅಸಮಾನತೆಯ ದೃಷ್ಟಿಕೋನಗಳು, ಮಹಿಳೆಯ ಮೇಲೆ ಪುರುಷ ಪ್ರಾಧಾನ್ಯ ಸಂಸ್ಕೃತಿ ನಡೆಸಿದ ದರ್ಪ, ಶೋಷಣೆ, ದೌರ್ಜನ್ಯಗಳ ವಿರುದ್ಧ ಮಹಿಳೆಯರು ನಡೆಸಿದ ಪ್ರತಿಭಟನೆಯೇ ಮಹಿಳಾ ಚಳವಳಿ. ಅದರಲ್ಲಿಯೂ ಸಾಹಿತ್ಯ ಲೋಕದಲ್ಲಿ ಮಹಿಳೆಯರ ಶೋಷಣೆಯ ವಿರುದ್ಧದ ಪರಿಕಲ್ಪನೆಗಳ ಮೂಲಕ ಮಹಿಳಾ ಸಮಾನತೆ ಕುರಿತ ವೈಚಾರಿಕ ಕೃತಿಗಳು ಹಾಗೂ ಸೃಜನಶೀಲ ಕೃತಿಗಳು ಹೊರಬಂದಿವೆ.

ಅನೇಕ ಪ್ರತಿಭಟನೆಗಳ ನಡುವೆಯೂ ಇಂದೂ ಸಹ ವರದಕ್ಷಿಣೆಯ ಕಾರಣದಿಂದ ದೌರ್ಜನ್ಯಕ್ಕೆ ಒಳಪಡುತ್ತಿರುವವರ ಸಂಖ್ಯೆ ಅಗಣಿತ. ಸ್ವತಂತ್ರ ಭಾರತದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಅಸಮಾನತೆ ಆಧಾರಿತ ದೌರ್ಜನ್ಯಗಳು ರೂಪಾಂತರಗೊಳ್ಳುತ್ತಿವೆ. ಮಹಿಳೆಯರನ್ನು ಸೇವಕರು ಎಂದು ನೋಡುವ ಪುರುಷ ಪ್ರಧಾನ ಸಮಾಜದ 'ಸಿದ್ಧಾಂತವು' ಹೆಣ್ಣು ಮಕ್ಕಳು ಮತ್ತು ಮಹಿಳೆಯರನ್ನು ಅಸಮಾನತೆಯ ದೃಷ್ಟಿಕೋನದಿಂದಲೇ ನೋಡುತ್ತಿದೆ.

ಇಂತಹ ಅಸಮಾನತೆಗಳ ಜೊತೆ ಹೆಣ್ಣಿನ ದೈಹಿಕ ಮತ್ತು ಮಾನಸಿಕ ಕಿರುಕುಳ, ವರದಕ್ಷಿಣೆ ಕಿರುಕುಳ, ಅತ್ಯಾಚಾರ, ದೌರ್ಜನ್ಯ ಇತ್ಯಾದಿಗಳು ನಡೆಯುತ್ತಿವೆ. ನಿಂದನೆ, ಅವಾಚ್ಯ ಪದಗಳ ಬಳಕೆ ವಿವಿಧ ರೂಪದ ಹಿಂಸಾಚಾರಗಳು ಕುಟುಂಬದ ಒಳಗೂ ಮತ್ತು ಹೊರಗೂ ಹೆಣ್ಣಿನ ಸ್ವಾತಂತ್ರ್ಯ ಮತ್ತು ಗೌರವಕ್ಕೆ ಅಡ್ಡಿಯನ್ನುಂಟು ಮಾಡಿವೆ. ಇವುಗಳ ಜೊತೆ ಹೆಣ್ಣಿನ ಮೇಲಿನ ಆ್ಯಸಿಡ್ ದಾಳಿ ಹೆಣ್ಣು ಮಕ್ಕಳ ಮತ್ತು ಮಹಿಳೆಯರ ಕಳ್ಳಸಾಗಾಣಿಕೆ ಮತ್ತು ಮಾರಾಟವು ದಿನದಿಂದ ದಿನಕ್ಕೆ ವಿಚಿತ್ರ ಸ್ವರೂಪ ಪಡೆದುಕೊಳ್ಳುತ್ತಿರುವುದನ್ನು ನಾವು ಮಾಧ್ಯಮಗಳಲ್ಲಿ ಪ್ರತಿ ದಿನವೂ ನೋಡುತ್ತಿದ್ದೇವೆ. ಹಿಂದೆ ಇದ್ದ ಕುಲ ಗೌರವದ ಹತ್ಯೆಯು, ಮರ್ಯಾದೆ ಹತ್ಯೆಯ ಹೆಸರಿಗೆ ರೂಪಾಂತರವಾಗಿದೆ. ನಮ್ಮ ಸಂವಿಧಾನದ 14, 15, 16, 39 ರಲ್ಲಿ ಹೇಳಿರುವ ಸಮಾನ ಅವಕಾಶ ಮತ್ತು ಸಮಾನ ದುಡಿಮೆಗೆ ಸಮಾನ ವೇತನ ನೀಡಬೇಕು ಎನ್ನುವುದು ಸೇರಿದಂತೆ ಯಾವುದೇ ಹಕ್ಕುಗಳು ಎಲ್ಲಾ ಮಹಿಳೆಯರಿಗೆ ದೊರಕಿಲ್ಲ.

ಇಂತಹ ಅಸಮಾನತೆ ಮತ್ತು ದೌರ್ಜನ್ಯಗಳ ವಿವಿಧ ರೂಪಗಳ ವಿರುದ್ಧ ಮಹಿಳೆಯರ ಹಕ್ಕುಗಳನ್ನು ಪ್ರತಿಪಾದಿಸುವ ಚಳವಳಿಯೇ ಮಹಿಳಾ ಚಳವಳಿ. ಇವುಗಳಲ್ಲಿ ಪ್ರಮುಖವಾದುದ್ದನ್ನು ಇಲ್ಲಿ ತಿಳಿದುಕೊಳ್ಳೋಣ.

© KTBS Not to be published

## ಮದ್ಯಪಾನ ನಿಷೇಧ ಚಳವಳಿ

ಮಹಿಳೆಯರು ರೂಪಿಸಿದ ಪ್ರಮುಖ ಚಳವಳಿಗಳಲ್ಲಿ ಪಾನ ನಿಷೇಧ ಚಳವಳಿ ಪ್ರಮುಖವಾದುದು. ಈ ಚಳವಳಿ ವಿಭಿನ್ನವಾದದ್ದು. ಯಾಕೆಂದರೆ ಪಾನನಿಷೇಧದ ಸಂದರ್ಭದಲ್ಲಿ ಮಹಿಳೆಯರು ಒಗ್ಗಟ್ಟಾಗಿ ಸಂಘಟಿತವಾಗಿರುತ್ತಾರೆ.

ಮದ್ಯಪಾನ ನಿಷೇಧವು ಸ್ವಾತಂತ್ರ್ಯ ಚಳವಳಿಯ ಭಾಗ. ಗಾಂಧೀಜಿ ಮದ್ಯಪಾನ ನಿಷೇಧಿಸುವ ವಿಚಾರ ಪ್ರತಿಪಾದಿಸುತ್ತಾರೆ. ಮಹಿಳೆಯರ ಮದ್ಯಪಾನ ನಿಷೇಧ ಚಳವಳಿಯು ಚಿಪ್ಕೊ ಚಳವಳಿಯ ಭಾಗವಾಗಿ ರೂಪುಗೊಳ್ಳುತ್ತದೆ. ಕರ್ನಾಟಕದಲ್ಲಿ ಪರಿಸರ ಚಳವಳಿಯ ಭಾಗವಾಗಿ ಕರಾವಳಿ ಮತ್ತು ಮಲೆನಾಡು ಪ್ರದೇಶದಲ್ಲಿ ಮದ್ಯಪಾನ ನಿಷೇಧ ಚಳವಳಿ ಪ್ರಾರಂಭವಾಗುತ್ತದೆ. ಕುಸುಮಾ ಸೊರಬ ಅವರ ಜೊತೆಗೆ ಹಲವರು ಈ ಚಳವಳಿಯಲ್ಲಿ ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ. ಇದಲ್ಲದೆಯೂ ಹಾಸನ, ಕೋಲಾರ, ಮಂಡ್ಯ, ಚಾಮರಾಜನಗರ ಇನ್ನೂ ಮುಂತಾದ ಜಿಲ್ಲೆಗಳ ಮಹಿಳೆಯರು ಮದ್ಯಪಾನ ಮಾರಾಟದ ವಿರುದ್ಧ ಚಳವಳಿಗಳನ್ನು ನಡೆಸಿದ್ದಾರೆ. ಮದ್ಯಪಾನವು ಸಾಮಾಜಿಕ ಸಂಸ್ಥೆಗಳಲ್ಲಿ ಮತ್ತು ವೈಯಕ್ತಿಕ ನೆಲೆಯಲ್ಲಿ ಹಲವು ಬಗೆಯ ಸಮಸ್ಯೆಗಳನ್ನು ಹುಟ್ಟುಹಾಕಿದೆ. ಮಹಿಳೆಯರ ಅದರಲ್ಲೂ ಗ್ರಾಮೀಣ ಬಡ ಮಹಿಳೆಯರ ಬದುಕಿನಲ್ಲಿ ಅನೇಕ ಗಂಡಾಂತರಗಳನ್ನು ಸೃಷ್ಟಿಸಿದೆ. ಕೂಲಿಕಾರರು ತಮ್ಮ ಅತ್ಯಲ್ಪ ದುಡಿಮೆಯನ್ನು ಕುಡಿತಕ್ಕೆ ಹಾಕುವ ಮೂಲಕ ತಮ್ಮ ಚಟಕ್ಕಾಗಿ ಚಿಕ್ಕ ಮಕ್ಕಳನ್ನು ದುಡಿಮೆಗೆ ಕಳುಹಿಸುವುದರ ಜೊತೆಗೆ, ಹೆಂಡತಿಯ ದುಡಿಮೆಯಿಂದ ಬರುವ ಹಣವನ್ನು ಕಸಿದು ಮದ್ಯಪಾನದ ದಾಸರಾಗಿದ್ದಾರೆ. ಹೀಗೆ ಮದ್ಯಪಾನವು ಉಂಟುಮಾಡಿದ ಪರಿಣಾಮಗಳನ್ನು ಸಹಿಸಲಾಗದೆ ಮದ್ಯಪಾನ ನಿಷೇಧ ಚಳವಳಿಗಳನ್ನು ಮಹಿಳೆಯರೇ ಸಂಘಟಿಸಿದ್ದಾರೆ.

***ಚಟುವಟಿಕೆ :*** ಶಾಲಾ ಕೊಠಡಿ ಮತ್ತು ಸಾಮಾಜಿಕ ಪರಿಸರದಲ್ಲಿ ಹೆಣ್ಣು ಮಕ್ಕಳು ಮತ್ತು ಮಹಿಳೆಯರು ಎದುರಿಸುತ್ತಿರುವ ಸವಾಲುಗಳನ್ನು ಕುರಿತು ಎಚ್ಚರಿಕೆ ಮೂಡಿಸುವ ಚಿಕ್ಕ ರೂಪಕಗಳನ್ನು ಮಕ್ಕಳ ಮೂಲಕ ಮಾಡಿಸುವುದು.

© KTBS Not to be published

## ರೈತ ಚಳವಳಿಗಳು

ಕರ ನಿರಾಕರಣೆಯ ಮೂಲಕ ಪ್ರಾರಂಭವಾಗುವ ಕೃಷಿಕರ ಪ್ರತಿಭಟನೆಗಳು, ಕೃಷಿಕರನ್ನು ಆವರಿಸಿರುವ ಆರ್ಥಿಕ ಬಿಕ್ಕಟ್ಟುಗಳ ವಿರುದ್ಧ ಇಪ್ಪತ್ತನೆಯ ಶತಮಾನದ ಎಪ್ಪತ್ತು ಎಂಭತ್ತರ ದಶಕದಲ್ಲಿ ಅನೇಕ ಜನಾಂದೋಲನಗಳನ್ನು ನಡೆಸಿವೆ. ದೇಶದಾದ್ಯಂತ ಅನೇಕ ರೈತ ಚಳವಳಿಗಳು ಪ್ರಾರಂಭವಾಗಿ, ಎಂಬತ್ತರ ದಶಕದಲ್ಲಿ ಹೆಚ್ಚು ಗಮನಸೆಳೆದ ಸಾಮಾಜಿಕ ಚಳವಳಿಗಳಲ್ಲಿ ರೈತ ಚಳವಳಿ ಪ್ರಮುಖವಾದದ್ದು.




ಕರ್ನಾಟಕದಲ್ಲಿ ಎಪ್ಪತ್ತರ ದಶಕದಲ್ಲಿ ಅಧಿಕಾರಕ್ಕೆ ಬಂದ ಡಿ. ದೇವರಾಜ ಅರಸು ಬಹುದೊಡ್ಡ ರೀತಿಯಲ್ಲಿ ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದರು. ಜಾತಿ ವ್ಯವಸ್ಥೆಯ ಬಂಧಿಗಳಾದ ಸಾಮಾಜಿಕ ದುರ್ಬಲರ ವಿಮೋಚನೆಗೆ ಪೂರಕವಾದ ಶಾಸನಗಳನ್ನು ಜಾರಿಗೆ ತರುವ ಪ್ರಯತ್ನ ನಡೆಸಿದರು. ಗೇಣಿದಾರರನ್ನು ಭೂಮಾಲಿಕರ ಹಿಡಿತದಿಂದ ಬಿಡುಗಡೆ ಜೀತಪದ್ಧತಿ ರದ್ಧತಿ, ಬಡವರ ಋಣಪರಿಹಾರ, ಅಂದಿನ ಸಚಿವರಾದ ಶ್ರೀ ಬಸವಲಿಂಗಪ್ಪನವರ ಆಶಯವನ್ನೂ ಒಳಗೊಂಡಂತೆ ತಲೆಯ ಮೇಲೆ ಮಲ ಹೊರುವ ಅಮಾನವೀಯ ರೂಢಿಯ ನಿರ್ಮೂಲನೆ ಸೇರಿದಂತೆ ಅನೇಕ ಕ್ರಾಂತಿಕಾರಕ ಕಾರ್ಯಕ್ರಮವನ್ನು ಜಾರಿಗೊಳಿಸಿದರು.

ಆನಂತರದ ದಿನಗಳಲ್ಲಿ ರೈತರ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರದ ಗಮನ ಸೆಳೆಯಲು ಪ್ರತಿಭಟನೆ ನಡೆಸಲಾಯಿತು. ಹೀಗೆ ರೈತರು ಮತ್ತು ಜನ ನಡೆಸುವ ಪ್ರತಿಭಟನೆಗಳೆಲ್ಲ ರಾಜಕೀಯವಾದವು ಎಂದು ತಿಳಿದು ಜನ ಚಳವಳಿಯನ್ನು ದಮನ ಮಾಡಲು ಲಾಠೀ ಚಾರ್ಜು ಮತ್ತು ಗೋಲಿಬಾರು ನಡೆಯುತ್ತದೆ. ಇಂತಹ ನೀತಿಗಳನ್ನು ಖಂಡಿಸಿ 1980ರ ಜೂನ್ ತಿಂಗಳಲ್ಲಿ ಧಾರವಾಡ ಜಿಲ್ಲೆಯ ನರಗುಂದದಲ್ಲಿ ರೈತ ಬಂಡಾಯ ನಡೆಯುತ್ತದೆ. ನರಗುಂದ ರೈತ ಬಂಡಾಯ ಕೇವಲ ಸರ್ಕಾರ ನಡೆಸಿದ ದೌರ್ಜನ್ಯದ ವಿರುದ್ಧ ನಡೆದ ಬಂಡಾಯ ಮಾತ್ರವಲ್ಲ. ಇದು ಒಟ್ಟಾರೆ ರೈತಪರವಾದ ಚಳವಳಿ.

ನರಗುಂದ ಬಂಡಾಯದ ನಂತರ ಜನ ಪರ ಚಳವಳಿಗಾರರು ಸಮಾಜವಾದಿ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಸ್ಥಾಪನೆ ಮಾಡಿದರು. ಇದು ಶಿವಮೊಗ್ಗದ ಗಾಂಧಿವಾದಿ ಎಚ್.ಎಸ್. ರುದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ಅಸ್ತಿತ್ವ ಪಡೆಯಿತು. ಪ್ರೊ. ನಂಜುಂಡಸ್ವಾಮಿಯವರು ಸಂಚಾಲಕರಾಗಿ, ಎನ್.ಡಿ. ಸುಂದರೇಶ್ ಅವರು ಕಾರ್ಯದರ್ಶಿಯಾಗಿ ವಿಶಾಲ ಸಿದ್ಧಾಂತದ ಅಡಿಯಲ್ಲಿ ರೈತ ಸಂಘವನ್ನು ಕರ್ನಾಟಕದಲ್ಲಿ ಪ್ರಾರಂಭಿಸಲಾಯಿತು. ವೈಜ್ಞಾನಿಕ ಬೆಲೆ ನಿಗದಿಯಾಗದ ಕಾರಣ ರೈತರು ಸಾಲದ ಸುಳಿಯಲ್ಲಿ ಸಿಕ್ಕಿದ್ದಾರೆ, ಗ್ರಾಮಗಳ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಯಾಗಿಲ್ಲ, ಅವುಗಳನ್ನು ಅಭಿವೃದ್ಧಿ ಪಡಿಸಬೇಕು, ರೈತರ ಸ್ವಾಭಿಮಾನಕ್ಕೆ, ಸ್ವಾತಂತ್ರಕ್ಕೆ ಧಕ್ಕೆತರುವ ಜಪ್ತಿ ಕಾರ್ಯಕ್ರಮಗಳು ನಿಲ್ಲಬೇಕು, ಸ್ಥಳೀಯ ನೈಸರ್ಗಿಕ ಸಂಪತ್ತಿನಲ್ಲಿ ಸ್ಥಳೀಯ ಗ್ರಾಮಗಳಿಗೆ ಪಾಲು ದೊರೆಯಬೇಕು, ಲೇವಾದೇವಿ ಪದ್ಧತಿ ನಿಲ್ಲಬೇಕು – ಇತ್ಯಾದಿ ಗ್ರಾಮೀಣ ಜನರ ಪರವಾದ ಪ್ರಜಾಸತ್ತಾತ್ಮಕ ಬೇಡಿಕೆಗಳನ್ನು ಮಂಡಿಸುತ್ತಲೇ ಕರ್ನಾಟಕದ ರೈತ ಚಳವಳಿ ನಡೆಯುತ್ತವೆ.

ಇಂದಿಗೂ ರೈತರು ಸಂಘಟಿತವಾಗಿ ಚಳವಳಿಗಳನ್ನು ನಡೆಸುತ್ತಿದ್ದಾರೆ. ಇತ್ತೀಚೆಗೆ ಕರ್ನಾಟಕದಲ್ಲಿ ಮಹಾದಾಯಿ ಮತ್ತು ಕಾವೇರಿ ನದಿ ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ಸರ್ಕಾರಗಳು ಮತ್ತು ಕೋರ್ಟ್‌ಗಳು ನೀಡಿದ ತೀರ್ಪುಗಳ ವಿರುದ್ಧ ರೈತರು ಮಹತ್ವಪೂರ್ಣ ಸ್ವಾಭಿಮಾನ ಚಳವಳಿಗಳನ್ನು ನಡೆಸಿದ್ದನ್ನು ನೆನೆಯಲೇಬೇಕು.

***ಚಟುವಟಿಕೆ :*** *ಸ್ಥಳೀಯವಾಗಿ ರೈತರು ಎದುರಿಸುತ್ತಿರುವ ಸವಾಲುಗಳನ್ನು ಕುರಿತು ರೈತರ ಜೊತೆ ಸಂವಾದ, ಗುಂಪು ಚರ್ಚೆ ನಡೆಸುವಂತೆ ಮಕ್ಕಳನ್ನು ಪ್ರೇರೇಪಿಸಿ ಅದಕ್ಕೆ ಅವಕಾಶ ಮಾಡುವುದು.*

**ಕಾರ್ಮಿಕ ಚಳವಳಿಗಳು**

'ಕಾರ್ಮಿಕ ಚಳವಳಿ' ಅಥವಾ 'ಕಾರ್ಮಿಕ ಸಂಘ' ಎನ್ನುವುದು ಸಾಮಾನ್ಯವಾಗಿ ದುಡಿಯುವ ಜನರನ್ನು ಪ್ರತಿನಿಧಿಸುವ ಸಂಘಟನೆ. ಉತ್ತಮ ದುಡಿಯುವ ವಾತಾವರಣ, ಗೌರವಯುತ ನಡವಳಿಕೆ, ಕಾರ್ಮಿಕ ಮತ್ತು ಉದ್ಯೋಗ ಕಾನೂನುಗಳ ಅನುಷ್ಠಾನಕ್ಕೆ ಸರ್ಕಾರಗಳನ್ನು ಒತ್ತಾಯಿಸಿ ಕಾರ್ಮಿಕ ಸಂಘಟನೆಗಳ ಮೂಲಕ ನಡೆಯುವ ಚಳವಳಿಯನ್ನು ಕಾರ್ಮಿಕ ಚಳವಳಿ ಎಂದು ಕರೆಯಲಾಗುತ್ತದೆ. ಕೆಲವು ದೇಶಗಳಲ್ಲಿ ಕಾರ್ಮಿಕ ಚಳವಳಿಗಳು ರಾಜಕೀಯ ಪಕ್ಷಗಳ ಸಹ ಸಂಘಟನೆಗಳಾಗಿವೆ. ಕೈಗಾರಿಕಾ ಬಂಡವಾಳಶಾಹಿ ಶೋಷಣೆಯ ವಿರುದ್ಧವಾಗಿ ಸಮಕಾಲೀನ ಕಾರ್ಮಿಕ ಪರ ಸಿದ್ಧಾಂತವು ಬೆಳೆಯುತ್ತ ಬಂದಿದೆ.

ಐರೋಪ್ಯ ರಾಷ್ಟ್ರಗಳಲ್ಲಿ ಕೈಗಾರಿಕಾ ಕ್ರಾಂತ್ರಿಯಿಂದ ಕೃಷಿ ವಲಯದಲ್ಲಿ ಉದ್ಯೋಗದ ಅವಕಾಶಗಳು ಕುಸಿತ ಕಂಡು, ಕೈಗಾರಿಕಾವಲಯಗಳ ಕಡೆಗೆ ಕಾರ್ಮಿಕರ ಚಲನೆ ಹೆಚ್ಚಾಯಿತು. ಆಗ ಸಮಯದ ಪರಿವಿಲ್ಲದಂತೆ ಕಾರ್ಮಿಕರನ್ನು ದುಡಿಸಿಕೊಳ್ಳುವ ಮನೋಭಾವ ಹೆಚ್ಚಿತು. ಇದನ್ನು ಖಂಡಿಸಿ ಕಾರ್ಮಿಕರು ಸಂಘಟಿತರಾದರು. 19ನೇ ಶತಮಾನದಲ್ಲಿ ಪ್ರಪಂಚದಾದ್ಯಂತ ಕೈಗಾರಿಕೀಕರಣಗೊಂಡ ಪ್ರದೇಶಗಳಲ್ಲಿ ಕಾರ್ಮಿಕ ಪಕ್ಷಗಳು ಮತ್ತು ಟ್ರೇಡ್ ಯುನಿಯನ್‌ಗಳು ಕಾರ್ಮಿಕರನ್ನು ಸಂಘಟಿಸಿದವು. 'The International Working men's Association' ಎನ್ನುವುದು ಲಂಡನ್‌ನಲ್ಲಿ 1864ರಲ್ಲಿ ಪ್ರಾರಂಭವಾದ ಮೊದಲ ಕಾರ್ಮಿಕರ

© KTBS Not to be republished

ಸಂಘಟನೆಯಾಗಿದೆ. ಈ ಸಂಘಟನೆಯ ಪ್ರಮುಖ ಉದ್ದೇಶ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುವುದು. ದುಡಿಮೆಯನ್ನು ದಿನಕ್ಕೆ ಗರಿಷ್ಠ 8 ಗಂಟೆಗಳು ಮಾತ್ರ ಮಾಡಬೇಕು ಎನ್ನುವ ಕಾನೂನು ಜಾರಿಗೆ ತರುವುದು. ಹೀಗೆ ಪ್ರಾರಂಭವಾದ ಕಾರ್ಮಿಕ ಚಳವಳಿಯು 19ನೇ ಶತಮಾನದ ಮಧ್ಯ ಭಾಗದ ನಂತರ ಜಾಗತಿಕವಾಗಿ ವಿಸ್ತರಣೆಯಾಯಿತು.

ಕಾರ್ಮಿಕರ ಸಾಮಾಜಿಕ ಭದ್ರತೆಗೆ ಸಂಬಂಧಿಸಿದಂತೆ 1923ರಲ್ಲಿ ಅಂದಿನ ಸರ್ಕಾರ ಭಾರತೀಯ ಕಾರ್ಮಿಕ ಕಾಯಿದೆಯನ್ನು ಜಾರಿಗೆ ತಂದಿತು. ಈ ಕಾಯಿದೆಯಿಂದ ಕಾರ್ಮಿಕ ಸಂಘಟನೆಗಳಿಗೆ ಅನುಕೂಲವಾಯಿತು. 1923ರ ಕಾರ್ಮಿಕ ಕಾಯಿದೆ ಪ್ರಕಾರ ಸಂಘಟನೆಗಳಿಗೆ ಶಾಸನಾತ್ಮಕ ಮನ್ನಣೆ ದೊರೆಯಿತು. ನಂತರ ಅನೇಕ ಕಾರ್ಮಿಕ ಸಂಘಟನೆಗಳು ಪ್ರಾರಂಭವಾಗಿ ಇಂದಿಗೂ ಕಾರ್ಮಿಕ ಹಿತಾಸಕ್ತಿಗಳಿಗೆ ಧಕ್ಕೆ ಬಂದಾಗ, ಅದರ ವಿರುದ್ಧ ಚಳವಳಿಗಳನ್ನು ನಡೆಸುತ್ತಿವೆ. ಈ ದೇಶದಲ್ಲಿ ಅನೇಕ ಕಾರ್ಮಿಕ ಸಂಘಟನೆಗಳು ಅಸ್ತಿತ್ವದಲ್ಲಿದ್ದು ತಮ್ಮ ಹೋರಾಟವನ್ನು ಮುಂದುವರೆಸಿವೆ.

### ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿ

ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಅಸ್ಪೃಶ್ಯತೆ ಎನ್ನುವುದು ಮಾನವ ವಿರೋಧಿ ನಡವಳಿಕೆಯಾಗಿದೆ. ಸಂವಿಧಾನವನ್ನು ಅಂಗೀಕರಿಸುವುದಕ್ಕೆ ಪೂರ್ವದಲ್ಲಿ ಅಸ್ಪೃಶ್ಯರನ್ನು ಮುಟ್ಟಬಾರದು, ಸಮೀಪಿಸಬಾರದು ಮತ್ತು ನೋಡಬಾರದು ಎಂಬ ಭಾವನೆ ಬಲವಾಗಿತ್ತು.

ಅಸ್ಪೃಶ್ಯತೆ ಆಧಾರಿತ ಸಾಮಾಜಿಕ ಆಚರಣೆ ಅಸ್ಪೃಶ್ಯರು ಎನ್ನುವ ಕಾರಣಕ್ಕೆ ದಲಿತರ ಮೇಲೆ ನಡೆಯುವ ಯಾವುದೇ ಹಲ್ಲೆಗಳನ್ನು ಮಾನವೀಯ ಮತ್ತು ಸಮ ಸಮಾಜದ ನೆಲೆಯಲ್ಲಿ, ಜಾತಿ ಆಧಾರಿತ ಸಾಮಾಜಿಕ ದೌರ್ಜನ್ಯದ ವಿರುದ್ಧ ನಡೆದ ಜನ ಚಳವಳಿಯೇ ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿ. ಅಸ್ಪೃಶ್ಯತೆ ಅನುಭವಿಸಿದ ಸಮುದಾಯಗಳು ತಮ್ಮ ಸಾಮಾಜಿಕ ಸ್ಥಿತಿ-ಗತಿಗಳಲ್ಲಿ ಬದಲಾವಣೆಗಳನ್ನು ಕಂಡುಕೊಳ್ಳಲು ನಿರಂತರವಾದ ಸಂಘರ್ಷದಲ್ಲಿ ತೊಡಗುತ್ತ ಬಂದಿವೆ. ಅದರ ಪುಟ್ಟ ಚರಿತ್ರೆಯನ್ನು ಮುಂದೆ ನೋಡೋಣ.

**ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಯ ಚರಿತ್ರೆ :** ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಯ ಚರಿತ್ರೆಯನ್ನು 19ನೇ ಶತಮಾನದಿಂದ ಗುರುತಿಸಬಹುದು. ಮಹಾರಾಷ್ಟ್ರದ ಜ್ಯೋತಿರಾವ್ ಫುಲೆಯವರು ಅಸ್ಪೃಶ್ಯರು ಮತ್ತು ಹಿಂದುಳಿದ ವರ್ಗದವರನ್ನು ಒಳಗೊಂಡ ಚಳವಳಿಯನ್ನು ಆರಂಭಿಸಿದರು. 'ಚಾತುರ್ವರ್ಣ ಆಧಾರಿತ ಮಾನವ ವಿರೋಧಿ ಆಚರಣೆಗಳನ್ನು ಮತ್ತು ಅವುಗಳ ಪ್ರಾಬಲ್ಯವನ್ನು ತಡೆಯುವುದು ಈ ಚಳವಳಿಯ ಉದ್ದೇಶ. ಈ ಆಶಯದಲ್ಲಿಯೇ ನಂತರ 1917ರಲ್ಲಿ ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ ಮತ್ತಿತರ ಭಾಗಗಳಲ್ಲಿ ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಗಳು ಹುಟ್ಟಿಕೊಂಡವು. 1925ರಲ್ಲಿ ಪೆರಿಯಾರ್ ರಾಮಸ್ವಾಮಿರವರು ಆತ್ಮಗೌರವ ಚಳವಳಿಯನ್ನು ಪ್ರಾರಂಭಿಸಿದರು.

ಡಾ. ಬಿ.ಆರ್.ಅಂಬೇಡ್ಕರ್ ಅವರ ಚಿಂತನೆ ಮತ್ತು ಹೋರಾಟದೊಂದಿಗೆ ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಯು ತೀವ್ರ ಸ್ವರೂಪ ಪಡೆಯುತ್ತದೆ. 1930ರ ದುಂಡುಮೇಜಿನ ಪರಿಷತ್‌ನಲ್ಲಿ ಅಂಬೇಡ್ಕರ್ ಅವರು ನಾವು ಆಳುವ ವರ್ಗವಾಗಬೇಕೆಂದು ಅಸ್ಪೃಶ್ಯರಿಗೆ ಕರೆಕೊಟ್ಟರು. ಅಂಬೇಡ್ಕರ್ ಅವರು ನಿರಂತರವಾಗಿ ದಲಿತರ ಎಲ್ಲಾ ರೀತಿಯ ಹಕ್ಕುಗಳಿಗಾಗಿ ಹೋರಾಡುತ್ತಲೇ ಬಂದರು.

ಡಾ. ಬಿ.ಆರ್. ಅಂಬೇಡ್ಕರ್ ಅವರು ತಮ್ಮ ರಾಜಕೀಯ ಚಟುವಟಿಕೆಗಳ ಉದ್ದಕ್ಕೂ ಸಾಮಾಜಿಕವಾಗಿ ದೌರ್ಜನ್ಯಕ್ಕೆ ಒಳಗಾದ ಅಸ್ಪೃಶ್ಯರು ಮತ್ತು ಮಹಿಳೆಯರ ಹಕ್ಕುಗಳ ಪ್ರತಿಪಾದನೆಯನ್ನು ಮಾಡಿದರು. ಆಗ ಅಸ್ಪೃಶ್ಯ ದಲಿತರ ಹಿತಾಸಕ್ತಿಗಳ ಪರವಾಗಿ ಯಾವ ಪತ್ರಿಕೆಯೂ ಬರೆಯುತ್ತಿರಲಿಲ್ಲವಾದ್ದರಿಂದ 'ಮೂಕ ನಾಯಕ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿ ಅಸ್ಪೃಶ್ಯತೆಯ ಅಚರಣೆಯ ವಿರುದ್ಧ ಬಹುದೊಡ್ಡ ಚಳವಳಿಯನ್ನು ರೂಪಿಸಲು ಕಾರಣೀಭೂತರಾದರು. ಗಾಂಧೀಜಿಯವರು ಬ್ರಿಟಿಷ್ ಆಡಳಿತ ವಿರೋಧಿ ಚಳವಳಿಯನ್ನು ಪ್ರಧಾನವಾಗಿ ಪರಿಗಣಿಸಿದ್ದರೂ ಅಸ್ಪೃಶ್ಯತೆ ನಿವಾರಣೆ ಮಾಡಬೇಕೆಂಬ ಸುಧಾರಣಾ ವಾದಿಯಾಗಿದ್ದರು. ಇಂದಿಗೂ ಅಸ್ಪೃಶ್ಯತೆ ಆಚರಣೆಯ ವಿರೋಧಿ ಚಳವಳಿಗಳನ್ನು ವಿವಿಧ ಸಂಘಟನೆಗಳು ನಡೆಸುತ್ತಲೇ ಇವೆ.

© KTBS Not to be republished

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಪರಿಸರ ಚಳವಳಿ ಎಂದರೆ____________ .
2. 'ನರ್ಮದಾ ಆಂದೋಲನದ' ನೇತೃತ್ವ ವಹಿಸಿದ್ದವರು. ________________ .
3. ಡಾ. ಶಿವರಾಮ ಕಾರಂತರು ________ ದಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪಿಸುವುದನ್ನು ವಿರೋಧಿಸಿದರು.
4. ಮಹಿಳಾ ಚಳವಳಿ ಎಂದರೆ____________ .

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಸಮೂಹ ವರ್ತನೆಯ ಮಾದರಿಗಳಾವುವು?
2. ಮಹಿಳಾ ಚಳವಳಿ ಎಂದರೇನು? ಉದಾಹರಣೆ ಕೊಡಿ.
3. ಜನಮಂದೆಯ ಸ್ವರೂಪವನ್ನು ತಿಳಿಸಿ.
4. ಪರಿಸರ ಚಳವಳಿಯ ಅರ್ಥ ಮತ್ತು ಸ್ವರೂಪವನ್ನು ತಿಳಿಸಿ.

**III. ಚಟುವಟಿಕೆಗಳು :**

1. ನಿಮ್ಮ ಊರಿನಲ್ಲಿ ಮಹಿಳಾ/ಪರಿಸರ/ದಲಿತ ಇತ್ಯಾದಿ ಚಳವಳಿಗಳಲ್ಲಿ ಭಾಗವಹಿಸಿರುವ ಜನರನ್ನು ಭೇಟಿ ಮಾಡಿ ಇಂತಹ ಸಂಘಟನೆಗಳ ಮುಖ್ಯ ಉದ್ದೇಶಗಳೊಂದಿಗೆ ರೂಪಿಸಿಕೊಂಡಿರುವ ಕಾರ್ಯಕ್ರಮಗಳನ್ನು ಸಂಗ್ರಹಿಸಿರಿ.
2. ಮಹಿಳಾ ಚಳವಳಿಯು ಮಹಿಳೆಯರಲ್ಲಿ ಸಾಮಾಜಿಕ ಮನೋಭಾವವನ್ನು, ಅವರ ಆತ್ಮಬಲವನ್ನು ಹೇಗೆ ವೃದ್ಧಿಸಿದೆ ಎಂದು ಮಹಿಳೆಯರ ಜೊತೆ ಚರ್ಚೆ ಮಾಡಿ.

**IV. ಯೋಜನೆ :**

1. ಕರ್ನಾಟಕದಲ್ಲಿ ಪರಿಸರ ಮತ್ತು ಅರಣ್ಯ ಸಂಕ್ಷಣೆಗಾಗಿ ನಡೆಯುತ್ತಿರುವ ಚಳವಳಿ ಹೋರಾಟಗಳ ಬಗ್ಗೆ ವೃತ್ತ ಪತ್ರಿಕೆಗಳಲ್ಲಿ ಬರುತ್ತಿರುವ ಮಾಹಿತಿಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

* * * *

© KTBS Not to be published

C5B9F2

## ಅಧ್ಯಾಯ–04

# ಸಾಮಾಜಿಕ ಸಮಸ್ಯೆಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ :**

- ಬಾಲ ಕಾರ್ಮಿಕರು (ಮಕ್ಕಳ ದುಡಿಮೆ)
- ಹೆಣ್ಣು ಭ್ರೂಣಹತ್ಯೆ
- ಲಿಂಗತಾರತಮ್ಯ
- ಮಕ್ಕಳ ಸಾಗಾಣಿಕೆ ಮತ್ತು ಮಾರಾಟ
- ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ
- ಹಸಿವು ಮತ್ತು ಅಪೌಷ್ಟಿಕತೆ
- ಬಾಲ್ಯ ವಿವಾಹ
- ಮುಕ್ತಿಗಾಗಿ ಕೆಲವು ಕ್ರಮಗಳು

### ಬಾಲ ಕಾರ್ಮಿಕರು (ಮಕ್ಕಳ ದುಡಿಮೆ)

ಸಾಮಾನ್ಯವಾಗಿ ಅಪ್ರಾಪ್ತ ವಯಸ್ಸಿನ ಮಕ್ಕಳ ದುಡಿಮೆಯನ್ನು ಬಾಲಕಾರ್ಮಿಕತನ ಎಂದು ಕರೆಯಲಾಗುತ್ತಿದೆ. ಭಾರತದ ಸಂವಿಧಾನದ ಪ್ರಕಾರ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಆರ್ಥಿಕ ಸಂಪಾದನೆಯ ಉದ್ದೇಶದಿಂದ ದುಡಿಮೆ ಮಾಡುತ್ತಿದ್ದರೆ ಅಂತಹವರನ್ನು ಬಾಲ ಕಾರ್ಮಿಕರು ಎಂದು ಕರೆಯಲಾಗಿದೆ.

© KTBS
Not to be published

ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ಹಲವಾರು ದೇಶಗಳಲ್ಲಿ ಮಕ್ಕಳ ದುರ್ಬಳಕೆ ಹಾಗೂ ದುಡಿತ ಒಂದು ಸಾಮಾಜಿಕ ಸಮಸ್ಯೆ. 2011ರ ಜನಗಣತಿಯಂತೆ ಭಾರತದಲ್ಲಿ ಇಂದಿಗೂ 12.6 ದಶಲಕ್ಷ ಮಂದಿ ಮಕ್ಕಳು ಮನೆಗಳಲ್ಲಿ, ಬೀದಿ ಬೀದಿಯಲ್ಲಿ, ಕಾರ್ಖಾನೆ ಹಾಗೂ ಕೃಷಿ ಕ್ಷೇತ್ರಗಳಲ್ಲಿ ಬಲವಂತದ ದುಡಿಮೆಗೆ ಗುರಿಯಾಗಿದ್ದಾರೆ. ಇದೇ ರೀತಿ ಇಡೀ ಪ್ರಪಂಚದಲ್ಲಿ 215 ದಶಲಕ್ಷ ಮಂದಿ ಮಕ್ಕಳು ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. ಮಕ್ಕಳ ದುಡಿಮೆಯಿಂದ ಅವರ ದೈಹಿಕ, ಮಾನಸಿಕ, ಸಾಮಾಜಿಕ ಆರೋಗ್ಯ ಕುಂಠಿತವಾಗುತ್ತದೆ. ಮಕ್ಕಳು ಶಿಕ್ಷಣದಿಂದ ವಂಚಿತರಾಗಿ ಅವರ ಕೌಶಲ್ಯವು ವಿಕಾಸವಾಗುವ ಮೊದಲೇ ನಶಿಸುತ್ತದೆ.


ಬಾಲಕಾರ್ಮಿಕರು ಎಂದರೆ ಯಾರು? 14 ವರ್ಷದೊಳಗಿನ ಯಾವ ಮಕ್ಕಳು ಶಾಲೆಯಿಂದ ಹೊರಗಿದ್ದಾರೋ ಅವರೆಲ್ಲರೂ ಬಾಲಕಾರ್ಮಿಕರು. ಅವರು ದುಡಿಯಲಿ, ದುಡಿಯದೇ ಇರಲಿ, ಮನೆಯಲ್ಲಿ ಇರಲಿ, ಹೊರಗೆ ಇರಲಿ, ಶಾಲೆಗೆ ದಾಖಲಾಗಿ ನಿತ್ಯ ಶಾಲೆಗೆ ಹೋಗದಿದ್ದರೆ ಅವರೆಲ್ಲರೂ ಬಾಲಕಾರ್ಮಿಕರು ಎನಿಸಿಕೊಳ್ಳುತ್ತಾರೆ. ಹಾಗಾದರೆ 15 ವರ್ಷದ ಮೇಲೆ ದುಡಿಯಲು, ಕೆಲಸ ಮಾಡಲು ಹೋಗಬಹುದಾ? ಇಲ್ಲ, 2016ರಲ್ಲಿ ಕಾನೂನು ತಿದ್ದುಪಡಿಯಾಗಿ "ಹದಿಹರೆಯದವರ ದುಡಿಮೆ ನಿಷೇಧ"ವನ್ನು ಜಾರಿಗೆ ತಂದಿದೆ. ಬಾಲಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ–1986ಕ್ಕೆ ತಿದ್ದುಪಡಿ ಮಾಡಿ 14 ವರ್ಷದೊಳಗಿನ ಯಾವುದೇ ಮಕ್ಕಳು ಅಥವಾ ಹದಿಹರೆಯದವರು ಯಾವುದೇ ಅಪಾಯಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುವಂತಿಲ್ಲ ಹಾಗೂ ಯಾರೂ 14 ವರ್ಷದೊಳಗಿನ ದುಡಿಮೆಗೆ/ಕೆಲಸಕ್ಕೆ/ಜೀತಕ್ಕೆ/ಸಂಬಳ/ ಕೂಲಿಗೆ ಇಟ್ಟುಕೊಳ್ಳುವಂತಿಲ್ಲ. ಅದು ಶಿಕ್ಷಾರ್ಹ ಅಪರಾಧ. ಆ ಕಾಯ್ದೆ ಯಾವುದು? ಎನ್ನುವುದನ್ನು ಮುಂದೆ ನೋಡೋಣ.

ಬಾಲಕಾರ್ಮಿಕ, ಹದಿಹರೆಯದವರ ದುಡಿಮೆ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ– 1986. 2016ರ ತಿದ್ದುಪಡಿಯಂತೆ :– (Child and Adolecent Labour Prohibition and Regulation Act 1986 ( As Amended In July 2016)-

1. ಈ ಕಾಯ್ದೆಯ ಪ್ರಕಾರ 14 ವರ್ಷದೊಳಗಿನ ಯಾವುದೇ ಮಕ್ಕಳನ್ನು ಯಾವುದೇ ಕಾರಣಕ್ಕೂ, ಯಾವುದೇ ಕ್ಷೇತ್ರದಲ್ಲಿ, ಎಲ್ಲಿಯೂ ಕೂಡ ದುಡಿಸುವಂತಿಲ್ಲ. ದುಡಿಮೆಗೆ ಇಟ್ಟುಕೊಳ್ಳುವಂತಿಲ್ಲ. ಈ ಕಾಯ್ದೆಯ ಪರಿಚ್ಛೇದ – 14ರ ಪ್ರಕಾರ ಮಕ್ಕಳನ್ನು ದುಡಿಮೆಯಲ್ಲಿ ಇಟ್ಟು ಕೊಳ್ಳುವವರಿಗೆ, 2 ವರ್ಷದ ತನಕ ಜೈಲು ಮತ್ತು ರೂ. 50,000/– ತನಕ ದಂಡ ವಿಧಿಸಲಾಗುತ್ತದೆ.

2. ಯಾವುದೇ ಕುಟುಂಬದವರೂ ಕೂಡ ಅವರ ಹೊಲ, ಗದ್ದೆ, ವ್ಯಾಪಾರಗಳು ಅವರ 14 ವರ್ಷದೊಳಗಿನ ಅವರ ಸ್ವಂತ ಮಕ್ಕಳನ್ನು ಕೂಡ "ಶಾಲಾ" ಅವಧಿಯಲ್ಲಿ ಕೆಲಸಕ್ಕೆ ಇಟ್ಟುಕೊಳ್ಳುವಂತಿಲ್ಲ. ಒಂದು ವೇಳೆ ಇಟ್ಟುಕೊಂಡರೆ ಮಕ್ಕಳ ತಂದೆ, ತಾಯಿ ಅಥವಾ ಕುಟುಂಬಸ್ಥರೇ ಮಾಲೀಕರಾಗಿ ಅಪರಾಧಿಗಳಾಗುತ್ತಾರೆ. ಅವರಿಗೆ ರೂ 10,000/– ದಂಡ ವಿಧಿಸಲಾಗುತ್ತದೆ.

3. ಈ ಕಾಯ್ದೆಯು 15 ರಿಂದ 18 ವರ್ಷದೊಳಗಿನ ಮಕ್ಕಳನ್ನು ಹದಿಹರೆಯದವರು ಎಂದು ಹೇಳುತ್ತದೆ. ಜೊತೆಗೆ 15 ರಿಂದ 18 ವರ್ಷದೊಳಗಿನ ಯಾವುದೇ ಮಕ್ಕಳನ್ನು ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸುವಂತಿಲ್ಲ. ಒಂದು ವೇಳೆ ದುಡಿಸಿದರೆ ಎರಡು ವರ್ಷ ಜೈಲು, ರೂ. 50,000 ದಂಡ ವಿಧಿಸಲಾಗುತ್ತದೆ.



© KTBS Not to be published

ಈ ಕಾಯ್ದೆಯು 1948ರ ಕೈಗಾರಿಕೆ ಕಾಯ್ದೆಯಲ್ಲಿ ಗುರುತಿಸಿದ 29 ಕ್ಷೇತ್ರಗಳ ಜೊತೆಗೆ 2 ಕ್ಷೇತ್ರ ಸೇರಿಸಿ ಒಟ್ಟು 31 ಕ್ಷೇತ್ರಗಳನ್ನು ಅಪಾಯಕಾರಿ ಎಂದು ಗುರುತಿಸಿದೆ. ಉದಾಹರಣೆಗೆ ಗಣಿಗಾರಿಕೆ, ಸ್ಫೋಟಕ ವಸ್ತು ತಯಾರಿಕೆ, ಉರಿಯುವ ಸಾಮಗ್ರಿಗಳ ಉತ್ಪಾದನಾ ಘಟಕ, ಕಬ್ಬಿಣ ಮತ್ತು ಸ್ಟೀಲ್ ತಯಾರಿಕಾ ಘಟಕ, ಮೋಟಾರ್ ಸೈಕಲ್ ಮತ್ತು ವಾಹನ ರಿಪೇರಿ, ಸಿಮೆಂಟ್, ರಬ್ಬರ್, ರಾಸಾಯನಿಕ ಪದಾರ್ಥ ಉತ್ಪಾದನಾ ಘಟಕಗಳಲ್ಲಿ 18 ವರ್ಷದೊಳಗಿನ ಯಾವುದೇ ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಳ್ಳುವಂತಿಲ್ಲ. ಒಂದು ಪಕ್ಷ ಇಟ್ಟುಕೊಂಡರೆ ಅದು ಶಿಕ್ಷಾರ್ಹ ಅಪರಾಧ.

**ಮಕ್ಕಳ ದುಡಿಮೆ ಅಥವಾ ಬಾಲಕಾರ್ಮಿಕತೆಗೆ ಕಾರಣಗಳು :**

1. ಮಕ್ಕಳ ಹಕ್ಕುಗಳನ್ನು ಗೌರವಿಸಲು, ಅವುಗಳನ್ನು ರಕ್ಷಣೆ ಮಾಡಲು ಅಗತ್ಯವಾಗಿ ಬೇಕಾದ ಸಾಮಾಜಿಕ ಪರಿಸರವಿಲ್ಲದಿರುವುದು, ಮಕ್ಕಳ ದುಡಿಮೆ, ಬಾಲ್ಯವಿವಾಹ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟಕ್ಕೆ ಪ್ರಮುಖವಾದ ಕಾರಣಗಳಾಗಿವೆ. ಕಡಿಮೆ ಕೂಲಿಗೆ, ಹೆಚ್ಚು ದುಡಿಮೆಯನ್ನು ಬಯಸುವ ಮಾಲೀಕರ ವರ್ಗದ ಸ್ವಾರ್ಥ ಲಾಭಕೋರತನವು ಮಕ್ಕಳ ದುಡಿಮೆಯನ್ನು ಹೆಚ್ಚು ಮಾಡಲು ಕಾರಣವಾಗಿದೆ. ಹೋಟೆಲ್, ಸಣ್ಣ ಕೈಗಾರಿಕೆ, ಪಟಾಕಿ ತಯಾರಿಕಾ ಘಟಕಗಳು, ಅಸಂಘಟಿತ ದುಡಿಮೆಯ ವಲಯ, ಬರದಿಂದ ಉಂಟಾಗುವ ಕೃಷಿ ಸಮಾಜದ ಬಿಕ್ಕಟ್ಟುಗಳು, ವಲಸೆ, ಪೋಷಕರ ದುಶ್ಚಟಗಳು ಮಕ್ಕಳ ದುಡಿಮೆ ಹೆಚ್ಚಲು ಕಾರಣವಾಗಿವೆ.

2. ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕುಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗದಿರುವುದು, ಎಲ್ಲಾ ಮಕ್ಕಳಿಗೂ 10ನೇ ತರಗತಿ ವರೆಗೆ ಶಿಕ್ಷಣ ಸಂಪೂರ್ಣ ಉಚಿತವಾಗಿ ದೊರಕದಿರುವುದು, ಮಕ್ಕಳ ದುಡಿಮೆಯನ್ನು ಹೆಚ್ಚಿಸಿದೆ. ಕುಟುಂಬದ ಆರ್ಥಿಕ ಸ್ಥಿತಿ, ಕನಿಷ್ಠ ಕೂಲಿ, ಭೂಸುಧಾರಣಾ ಕಾಯ್ದೆಯ ಅನುಷ್ಠಾನದ ಕೊರತೆಗಳು ಸಹ ಬಾಲಕಾರ್ಮಿಕರನ್ನು ಹೆಚ್ಚು ಮಾಡಿವೆ.

**ಮಕ್ಕಳ ದುಡಿಮೆಯ ದುಷ್ಪರಿಣಾಮಗಳು :**

© KTBS Not to be published

1. ಬಾಲಕಾರ್ಮಿಕತೆಯು ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮೇಲೆ ಅತ್ಯಂತ ಗಂಭೀರವಾದ ಪರಿಣಾಮಗಳನ್ನು ಉಂಟುಮಾಡುತ್ತದೆ. ಬಾಲಕಾರ್ಮಿಕರಾಗಿ ದುಡಿಯುವ ಮಕ್ಕಳು ಯುವಕರಾದಾಗ ಅನೇಕ ದೈಹಿಕ ಮತ್ತು ಮಾನಸಿಕ ಕಾಯಿಲೆಗಳಿಗೆ ಒಳಗಾಗುತ್ತಾರೆ.

2. ಚಿಕ್ಕ ವಯಸ್ಸಿನಲ್ಲಿಯೇ ದುಡಿಮೆಯಲ್ಲಿ ಭಾಗವಹಿಸುವುದರಿಂದ, ಕಲಿಕೆಯ ವಯಸ್ಸಿನಲ್ಲಿ ಶಿಕ್ಷಣ ದಿಂದ ವಂಚಿತರಾಗಿ ಅನಕ್ಷರಸ್ಥರಾಗುತ್ತಾರೆ. ಇದು ಅವರ ಹಕ್ಕುಗಳನ್ನು, ಸ್ವಾತಂತ್ರವನ್ನು ಕಸಿದುಕೊಳ್ಳುತ್ತದೆ.

3. ಮಕ್ಕಳ ದುಡಿಮೆಯು ಕುಟುಂಬಗಳ ಸಾಮಾಜಿಕ ಚಲನೆ, ಆರ್ಥಿಕ ಚಲನೆ ಕುಸಿಯುವಂತೆ ಮಾಡುತ್ತದೆ. ಅಂತಹ ಕುಟುಂಬಗಳಲ್ಲಿ ಮಕ್ಕಳು ಮತ್ತೆ ಮತ್ತೆ ದುಡಿಮೆಗೆ, ದೌರ್ಜನ್ಯಕ್ಕೆ, ಶೋಷಣೆಗೆ ಒಳಗಾಗುತ್ತಿದ್ದಾರೆ. ಇಂತಹ ಬಿಕ್ಕಟ್ಟುಗಳು ಬಾಲ್ಯವಿವಾಹ, ಮಕ್ಕಳ ಮಾರಾಟ ಮತ್ತು ಸಾಗಾಣೆ ಮಾಡುವ, ಸಮಾಜ ವಿರೋಧಿ ಚಟುವಟಿಕೆಗೆ ಅವಕಾಶ ಮಾಡಿಕೊಡುತ್ತವೆ. ಇದರ ಪರಿಣಾಮವಾಗಿ ಮಕ್ಕಳು ಚಿಕ್ಕ ವಯಸ್ಸಿನಲ್ಲಿ, ಅದರಲ್ಲಿಯೂ ಹೆಣ್ಣು ಮಕ್ಕಳು ದೌರ್ಜನ್ಯ, ಹಿಂಸೆ, ಲೈಂಗಿಕ ಶೋಷಣೆಗೆ ಬಲಿಯಾಗುವ ಸಾಧ್ಯತೆ ಹೆಚ್ಚಾಗುತ್ತದೆ. ಪುಟ್ಟ ವಯಸ್ಸಿನಲ್ಲಿ ವಿವಿಧ ಕಾಯಿಲೆಗೆ ತುತ್ತಾಗಿ, ಅಂಗವಿಕಲರಾಗುವ ಸಾಧ್ಯತೆಗಳು ಹೆಚ್ಚುತ್ತವೆ.

ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ನೇರ, ಸ್ಪಷ್ಟ ಮತ್ತು ಮೊದಲ ಪರಿಹಾರವೆಂದರೆ 18 ವರ್ಷದೊಳಗಿನ ಎಲ್ಲಾ ಮಕ್ಕಳು ಶೇಕಡ 100 ಶಾಲಾದಾಖಲಾತಿ ಆಗಿ 18 ವರ್ಷದ ತನಕ ನಿರಂತರ ಶಾಲಾ ಶಿಕ್ಷಣವನ್ನು ಪೂರೈಸುವುದು ಮತ್ತು ಅದಕ್ಕೆ ಸಮಗ್ರವಾಗಿ ಎಲ್ಲರ ಸಹಕಾರ, ಸಹಭಾಗಿತ್ವ, ಸಮನ್ವಯತೆ ಮತ್ತು ಭಾಗವಹಿಸುವುದೇ ಪರಿಹಾರ.

> ***ಚಟುವಟಿಕೆ :*** ನಿಮ್ಮ ಸ್ನೇಹಿತರು ಯಾರಾದರೂ ಬಾಲಕಾರ್ಮಿಕತನಕ್ಕೆ ಒಳಗಾಗಿದ್ದರೆ, ಶಾಲೆಯಿಂದ ಹೊರಗುಳಿದಿದ್ದರೆ ಕೂಡಲೇ ಶಿಕ್ಷಕರ ಗಮನಕ್ಕೆ ತನ್ನಿ.

1. ಎಲ್ಲಾ ಸಂದರ್ಭಗಳಲ್ಲಿ ಲಿಂಗ ಸಮಾನತೆಯನ್ನು ಕಾಪಾಡುವುದು ಮತ್ತು ತರುವುದು.
2. ಅಸಹಾಯಕ ಕುಟುಂಬಗಳು ಬದುಕಿಗೆ ವಲಸೆ / ಗುಳೆ ಹೋಗುವುದನ್ನು ತಡೆಗಟ್ಟುವುದು.
3. ಬಾಲ್ಯವಿವಾಹ, ಮಕ್ಕಳ ಸಾಗಾಣಿಕೆ/ಮಾರಾಟ ತಡೆ ಕುರಿತು ಅರಿವನ್ನು ಹೆಚ್ಚಿಸುವುದು.
4. ಮಕ್ಕಳ ರಕ್ಷಣಾತ್ಮಕ ಹಕ್ಕುಗಳನ್ನು ಪಂಚಾಯತಿಗಳು ಜವಾಬ್ದಾರಿಯಿಂದ ನಿರ್ವಹಿಸುವುದು.

> ***ಗಮನಿಸಿ :*** *2011ರ ಜನಗಣತಿಯಂತೆ ಭಾರತದಲ್ಲಿ ಇಂದಿಗೂ 12.6 ದಶಲಕ್ಷ ಮಂದಿ ಮಕ್ಕಳು ಮನೆಗಳಲ್ಲಿ, ಬೀದಿ ಬೀದಿಯಲ್ಲಿ, ಕಾರ್ಖಾನೆ ಹಾಗೂ ಕೃಷಿ ಕ್ಷೇತ್ರಗಳಲ್ಲಿ ಬಾಲಕಾರ್ಮಿಕರಾಗಿ ಬಲವಂತದ ದುಡಿಮೆಗೆ ಗುರಿಯಾಗಿದ್ದಾರೆ. ಇದೇ ರೀತಿ ಇಡೀ ಪ್ರಪಂಚದಲ್ಲಿ 215 ದಶಲಕ್ಷ ಮಂದಿ ಮಕ್ಕಳು ವಿವಿಧ ಕ್ಷೇತ್ರಗಳಲ್ಲಿ ದುಡಿತಕ್ಕೆ ಒಳಗಾಗಿದ್ದಾರೆ.*

## ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ

ಇತ್ತೀಚಿನ ದಿನಗಳಲ್ಲಿ ಮಕ್ಕಳ ಮೇಲೆ ಶಾಲೆಗಳಲ್ಲಿ, ಕುಟುಂಬಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯಗಳನ್ನು ತಡೆಯುವ ದಿಕ್ಕಿನಲ್ಲಿ 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ – 2012' (Protection of Children from Sexual Offences Act-2012) ಜಾರಿಗೆ ತರಲಾಗಿದೆ. ಈ ಕಾಯಿದೆಯು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ಹೀಗೆ ವಿವರಿಸುತ್ತದೆ: 18 ವರ್ಷದೊಳಗಿನ ಯಾವುದೇ ಮಕ್ಕಳ ಮೇಲೆ (ಗಂಡು & ಹೆಣ್ಣು) ಯಾವುದೇ ರೀತಿಯಲ್ಲಿ ಲೈಂಗಿಕ ಉದ್ದೇಶದಿಂದ ಶೋಷಣೆ, ಹಿಂಸೆ, ದೌರ್ಜನ್ಯ, ಕಿರುಕುಳ, ಹಲ್ಲೆ ನಡೆಸಿದರೆ ಅಥವಾ ಅಸುರಕ್ಷಿತ ಸ್ಪರ್ಶ ಮಾಡಿದರೂ ಅದನ್ನು ಲೈಂಗಿಕ ದೌರ್ಜನ್ಯ ಎಂದು ಪರಿಗಣಿಸಿ ಅಂತಹವರಿಗೆ ಶಿಕ್ಷೆ ನೀಡುವ ಕಾನೂನು ಇದು. ಈ ಕಾಯಿದೆಯನ್ನು (Protection of Children from Sexual Offences Act-2012) ಜೂನ್, 19–2012 ರಲ್ಲಿ ಭಾರತ ಸರ್ಕಾರ ಜಾರಿಗೆ ತಂದಿದೆ.

© KTBS
Not to be published

### ಈ ಕಾಯಿದೆಯ ಪ್ರಮುಖ ಅಂಶಗಳು :

1. ಲೈಂಗಿಕ ದೌರ್ಜನ್ಯ (ಭೇದಕ ಹಠದ ದೌರ್ಜನ್ಯ)
2. ಬಲತ್ಕಾರ/ದುರುಪಯೋಗದ/ತೀವ್ರ ಭೇದಕ ಲೈಂಗಿಕ ದೌರ್ಜನ್ಯ
3. ಲೈಂಗಿಕ ಹಲ್ಲೆ
4. ತೀವ್ರ ಸ್ವರೂಪದ ಲೈಂಗಿಕ ಹಲ್ಲೆ
5. ಲೈಂಗಿಕ ಕಿರುಕುಳ
6. ಅಶ್ಲೀಲ ಚಿತ್ರ ತಯಾರಿಕೆಗೆ ಮಕ್ಕಳ ಬಳಕೆ
7. ಅಶ್ಲೀಲ ಚಿತ್ರ ಸಂಗ್ರಹ

ಈ ಮೇಲೆ ಪ್ರಸ್ತಾಪಿಸಿರುವ ಯಾವುದೇ ರೀತಿಯ ಲೈಂಗಿಕ ದೌರ್ಜನ್ಯವನ್ನು ಮಕ್ಕಳ ಮೇಲೆ ನಡೆಸಿದಲ್ಲಿ ಹಲ್ಲೆಯ ಸ್ವರೂಪವನ್ನಾಧರಿಸಿ ಶಿಕ್ಷೆ ವಿಧಿಸಲು ಈ ಕಾಯ್ದೆ ಅವಕಾಶ ಕಲ್ಪಿಸಿದೆ.

## ಹೆಣ್ಣು ಭ್ರೂಣಹತ್ಯೆ :

ಸ್ವಾಭಾವಿಕವಾಗಿ ತಾಯಿಯ ಗರ್ಭದಲ್ಲಿ ಬೆಳೆದ ಹೆಣ್ಣು ಭ್ರೂಣವನ್ನು ಬೆಳೆಯದಂತೆ ತಡೆಯುವುದು ಅಥವಾ ಕಾನೂನನ್ನು ಕಡೆಗಣಿಸಿ ಹತ್ಯೆ ಮಾಡುವುದನ್ನು ಹೆಣ್ಣು ಭ್ರೂಣ ಹತ್ಯೆ ಎಂದು ಕರೆಯಲಾಗುತ್ತದೆ. ಇತ್ತೀಚೆಗೆ ನಮ್ಮ ಸಾಮಾಜಿಕ ಬದುಕನ್ನು ಬಹಳವಾಗಿ ಕಾಡುತ್ತಿರುವ ಹೆಣ್ಣು ಭ್ರೂಣಹತ್ಯೆ ಕುರಿತು ನಿಖರವಾದ ಮಾಹಿತಿ ಸಿಗುವುದು ಕಷ್ಟಸಾಧ್ಯ. ಆದರೆ ಹೆಣ್ಣು ಭ್ರೂಣಹತ್ಯೆಯನ್ನು ಸೂಚಿಸುವ ಅಂಶಗಳು ನಮಗೆ ಸಿಗುತ್ತವೆ. ಹೆಣ್ಣು ಭ್ರೂಣಹತ್ಯೆ ಹೇಗೆ ನಡೆಯುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಈ ಅಂಶಗಳು ಬಹಳ ಪ್ರಮುಖ.

ಭಾರತದ ಜನಗಣತಿ ವರದಿಗಳ ಪ್ರಕಾರ 1961ರಲ್ಲಿ 0–6 ವಯೋಮಾನ ಮಕ್ಕಳ ಗುಂಪಿಗೆ ಸೇರಿದ ಲಿಂಗಾನುಪಾತವು 1980ರ ನಂತರ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗಿ ಗಂಡು ಮಕ್ಕಳ ಸಂಖ್ಯೆ ಹೆಚ್ಚುತ್ತಿರುವುದು ಕಂಡು ಬಂದಿದೆ. 2001ರ ಜನಗಣತಿಯ ಪ್ರಕಾರ ಪ್ರತಿ 1000 ಪುರುಷರಿಗೆ ಹೆಣ್ಣುಮಕ್ಕಳ ಸಂಖ್ಯೆ 933 ರಷ್ಟಿದ್ದರೆ, 2012ರಲ್ಲಿ ಪ್ರತಿ 1000 ಪುರುಷರಿಗೆ ಹೆಣ್ಣುಮಕ್ಕಳ ಸಂಖ್ಯೆ 940 ರಷ್ಟಿದೆ. ಆದರೆ 0–06 ವಯೋಮಾನದ ಮಕ್ಕಳಲ್ಲಿ ಲಿಂಗ ಅನುಪಾತವು ಪ್ರತಿ 1000 ಗಂಡು ಮಕ್ಕಳಿಗೆ 914 ಹೆಣ್ಣುಮಕ್ಕಳ ಪ್ರಮಾಣದಲ್ಲಿದೆ. ಭಾರತದಲ್ಲಿ ಪ್ರತಿ ದಿನ 1600 ಹೆಣ್ಣು ಮಕ್ಕಳು ಕಾಣೆಯಾಗುತ್ತಿದ್ದಾರೆ. ಪ್ರತಿ ವರ್ಷ ಆರು ಲಕ್ಷ ಹೆಣ್ಣು ಮಕ್ಕಳು ಕಾಣೆಯಾಗುತ್ತಿದ್ದಾರೆ ಎಂದು ಯು.ಎನ್.ಓ ದ ಜನಗಣತಿಯು ತಿಳಿಸಿದೆ. ಇದುವರೆಗೆ ಭಾರತದಲ್ಲಿ ಇರುವ ಒಟ್ಟು ಜನಸಂಖ್ಯೆಯಲ್ಲಿ 100 ಮಿಲಿಯನ್ ಮಹಿಳೆಯರು ಕಾಣೆಯಾಗಿದ್ದಾರೆ ಎಂದು ಕೆಲವು ಸಮೀಕ್ಷೆಗಳು ತಿಳಿಸಿವೆ.

ಕರ್ನಾಟಕದಲ್ಲಿ 1991ರ ಜನಗಣತಿ ಪ್ರಕಾರ ಒಂದು ಸಾವಿರ ಪುರುಷರಿಗೆ 960 ಜನ ಮಹಿಳೆಯರು ಇದ್ದರೆ, 2001ರ ಜನಗಣತಿ ಪ್ರಕಾರ ಅದು 965ಕ್ಕೆ ಹೆಚ್ಚಳವಾಗಿದೆ. ಸಂಖ್ಯೆಯ ದೃಷ್ಟಿಯಿಂದ ಇದು ಹೆಚ್ಚಳದಂತೆ ಕಂಡುಬರುತ್ತದೆ. ಇದೆ ಸಂದರ್ಭದಲ್ಲಿ 0–06 ವಯೋಗುಂಪಿನಲ್ಲಿನ ಲಿಂಗ ಅನುಪಾತವನ್ನು ಗಮನಿಸಿದರೆ ಆತಂಕವಾಗುತ್ತದೆ. ಕರ್ನಾಟಕದಲ್ಲಿ 1991ರ ಜನಗಣತಿ ಪ್ರಕಾರ 0–06 ವಯೋಗುಂಪಿನಲ್ಲಿ ಒಂದು ಸಾವಿರ ಗಂಡು ಮಕ್ಕಳಿಗೆ 960 ಜನ ಹೆಣ್ಣು ಮಕ್ಕಳು ಇದ್ದರೆ, ಇದು 2001ರಲ್ಲಿ 949ಕ್ಕೆ ಇಳಿದಿದೆ.

ಪ್ರಾದೇಶಿಕವಾಗಿ ನೋಡಿದರೆ, ನಗರ ಪ್ರದೇಶದಲ್ಲಿ ಶೇಕಡ 80 ರಷ್ಟು ಮತ್ತು ಗ್ರಾಮೀಣ ಪ್ರದೇಶದಲ್ಲಿ ಶೇಕಡ 69 ರಷ್ಟು ನವಜಾತ ಶಿಶುಗಳ ಮರಣವಾಗಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–3ರ ಪ್ರಕಾರ ಹಿಂದಿನ ಹತ್ತು ವರ್ಷಗಳಲ್ಲಿ ನವಜಾತ ಶಿಶುವಿನ ಮರಣದಲ್ಲಿ ಗಂಡು ಶಿಶುವಿನ ಮರಣ ಪ್ರಮಾಣ ಶೇಕಡ 53.6 ಇದ್ದರೆ, ಹೆಣ್ಣು ಶಿಶುವಿನ ಮರಣ ಪ್ರಮಾಣವು ಶೇಕಡ 34.6ರಷ್ಟು ಇದೆ. ಹಾಗೆಯೇ ಜನನ ನಂತರದ ಶಿಶುವಿನ ಮರಣ ಪ್ರಮಾಣವು ಗಂಡು ಶಿಶುವಿನಲ್ಲಿ ಶೇಕಡ 16.5 ಇದ್ದರೆ, ಹೆಣ್ಣು ಶಿಶುವಿನಲ್ಲಿ ಶೇಕಡ 19.3ಕ್ಕೆ ಹೆಚ್ಚಳ್ಳವಾಗಿದೆ. ಇದು ನಮಗೆ ಹೆಣ್ಣು ಮಕ್ಕಳ ಬಗ್ಗೆ ಇರುವ ಅಸಹನೆಯನ್ನು ಸೂಚಿಸುತ್ತದೆ.

ಪುರುಷರಿಗಿಂತ ಮಹಿಳೆಯರ ಜೀವಿತ ಅವಧಿ ಹೆಚ್ಚಾಗಿರುತ್ತದೆ. ಆದರೆ ಹೆಣ್ಣು ಮಕ್ಕಳ ಮರಣದರವು ಗಂಡು ಮಕ್ಕಳಿಗಿಂತ ಹೆಚ್ಚಾಗಿದೆ. ತಳಮಟ್ಟದಲ್ಲಿ ನಾವು ರೂಪಿಸಿರುವ ಆರೋಗ್ಯ ಕಾರ್ಯಕ್ರಮಗಳು ಮತ್ತು ಜನರಿಗೆ ನಿಗದಿತ ಸಮಯದಲ್ಲಿ, ನಿಗದಿತ ಪ್ರಮಾಣದಲ್ಲಿ ಪೌಷ್ಠಿಕ ಆಹಾರವು ದೊರಕದಿರುವುದು ಇದಕ್ಕೆ ಪ್ರಮುಖ ಕಾರಣ ಎಂದು ಹೇಳುತ್ತಿದ್ದಾರೆ.

ಹೆಣ್ಣು ಭ್ರೂಣಹತ್ಯೆಯನ್ನು ಹತ್ತಿಕ್ಕಲು ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನೀಡುವುದು, ಮುಖ್ಯವಾಗುತ್ತದೆ. ಸಮಾನತೆಯ ಮನೋಧರ್ಮಕ್ಕೆ ಮಹತ್ವ ಕೊಡಬೇಕಾಗುತ್ತದೆ. ಮತ್ತೊಂದೆಡೆ ಕುಸಿಯುತ್ತಿರುವ ಲಿಂಗಾನುಪಾತವನ್ನು ಗುರುತಿಸಿ ಹೆಣ್ಣು ಭ್ರೂಣಹತ್ಯೆಯನ್ನು 1994ರಲ್ಲಿ ಜಾರಿಗೆ ತಂದ Per-Conception and Pre-Natal Diagnostic Techniques Act (PCPNDT-1994) ಕಾನೂನಿನ ಮೂಲಕವು ತಡೆಯಲು ಪ್ರಯತ್ನಿಸಲಾಗುತ್ತಿದೆ.

ಆದರೂ ಸಹ ಸಾಮಾಜಿಕ–ಸಾಂಸ್ಕೃತಿಕ ಅಂಶಗಳು ಹೆಣ್ಣು ಭ್ರೂಣಹತ್ಯೆಯನ್ನು ನಿರ್ಬಂಧಿಸುವಲ್ಲಿ ಪೂರ್ಣ ಪ್ರಮಾಣದಲ್ಲಿ ಸಫಲವಾಗಿಲ್ಲ. ನಮ್ಮ ಸಾಮಾಜಿಕ ಸಂದರ್ಭದಲ್ಲಿ ಮಧ್ಯಮ ವರ್ಗ, ಮೇಲ್ವರ್ಗ ಹಾಗೂ ಶಿಕ್ಷಿತರಲ್ಲಿ ಹೆಣ್ಣು ಭ್ರೂಣಹತ್ಯೆಯು ಹೆಚ್ಚಾಗಿ ಕಂಡುಬರುವುದು ಬಹುದೊಡ್ಡ ಸವಾಲಾಗಿದೆ. ಸಾಮಾಜಿಕವಾಗಿ ಆರ್ಥಿಕವಾಗಿ ಮುಂದುವರಿದ ಸಾಮಾಜಿಕ ಗುಂಪು ಹಾಗೂ ವರ್ಗಗಳಲ್ಲಿ ಹೆಣ್ಣು ಭ್ರೂಣಹತ್ಯೆ ಹೆಚ್ಚಾಗಿ ನಡೆಯುತ್ತಿದೆ. ಆದರೆ ಈ ಪಿಡುಗಿನ ಮೂಲ ಬೇರುಗಳನ್ನು ಮದುವೆ ಹಾಗೂ ಆಸ್ತಿಯ ವಂಶಪಾರಂಪರ್ಯದಲ್ಲಿ ನಾವು ಕಾಣಬಹುದು. ಮಗಳ ಮದುವೆ ಖರ್ಚು, ವರದಕ್ಷಿಣೆ, ಆಕೆಯ ಗಂಡನ

© KTBS Not to be republished

ಮನೆಯವರ ನಿರಂತರ ಶೋಷಣೆ, ಲೈಂಗಿಕ ಶೋಷಣೆ ಮತ್ತು ದೌರ್ಜನ್ಯ, ಸಾರ್ವಜನಿಕ ಸ್ಥಳಗಳಲ್ಲಿಯೇ ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು, ಇನ್ನೂ ಮುಂತಾದವು ಒಂದು ಕಡೆಯಾದರೆ, ಮತ್ತೊಂದು ಕಡೆಯಲ್ಲಿ ವಂಶಪಾರಂಪರ್ಯವಾಗಿ ಬಂದ ಆಸ್ತಿಯ ಹಕ್ಕುದಾರ ಮಗನೇ ಆಗಬೇಕಾದದ್ದು ಇನ್ನೊಂದು ಕಾರಣವಾಗಿ ಮೇಲುನೋಟಕ್ಕೆ ಕಂಡುಬರುತ್ತಿದೆ. ಇವು ಪುರುಷ ಪ್ರಾಧಾನ್ಯತೆಯು ಹೆಣ್ಣು ಭ್ರೂಣಹತ್ಯೆಯನ್ನು ಹೆಚ್ಚಿಸಲು ಮತ್ತು ಮಹಿಳೆಯರ ಬಗ್ಗೆ ಇರುವ ತಾರತಮ್ಯವನ್ನು ವಿಸ್ತರಿಸುವ ಕಾರಣಗಳಾಗಿವೆ.

> ***ಚಟುವಟಿಕೆ :*** *ಹೆಣ್ಣು ಮಕ್ಕಳ ಬಗ್ಗೆ ಅಸಮಾನತೆಯ ಭಾವನೆಗಳು ನಿಮ್ಮ ಪರಿಸರದಲ್ಲಿ ಕಂಡು ಬಂದರೆ ಅವರಿಗೆ ತಿಳಿಸಿಹೇಳುವ ಪ್ರಯತ್ನ ಮಾಡಿ.*

**ಹಸಿವು ಮತ್ತು ಅಪೌಷ್ಠಿಕತೆ :**

ಆಹಾರ ಮತ್ತು ಕೃಷಿ ಸಂಸ್ಥೆ (ಎಫ್.ಎ.ಒ) ಒಬ್ಬ ವ್ಯಕ್ತಿಗೆ ಪ್ರತಿದಿನಕ್ಕೆ ಅಗತ್ಯವಾಗಿ ಬೇಕಾಗುವಷ್ಟು ಕ್ಯಾಲೋರಿ ಪೂರೈಕೆ ಪ್ರಮಾಣವನ್ನು ತಿಳಿಸಿದೆ. ಅಲ್ಲದೆ ಪ್ರತಿ ವ್ಯಕ್ತಿಯ ವಯಸ್ಸು, ಕೆಲಸ, ವಾಸಿಸುವ ಪ್ರದೇಶ, ಹವಾಮಾನ ಇತ್ಯಾದಿಗಳ ಆಧಾರದ ಮೇಲೆ ಬದುಕಿರಲು ಕನಿಷ್ಠ ಶಕ್ತಿ ನೀಡುವ ಆಹಾರದ ಅಗತ್ಯಗಳನ್ನು ವೈದ್ಯಕೀಯ ಸಮಾಜಶಾಸ್ತ್ರೀಯ ಅಧ್ಯಯನಗಳು ನಿಗದಿಪಡಿಸಿವೆ.

ನಿಗದಿತವಾದ ಆಹಾರ ಒಬ್ಬ ವ್ಯಕ್ತಿಗೆ ಸತತವಾಗಿ ಸಿಗದಿದ್ದರೆ ಅದು ಹಸಿವು. ನಮಗೆ ಆರೋಗ್ಯಕರವಾಗಿರಲು ಪಿಷ್ಠ, ಕೊಬ್ಬು, ವಿಟಮಿನ್ ಮತ್ತು ಲವಣಗಳು ಇನ್ನೂ ಮುಂತಾದ ಪೋಷಕಾಂಶಗಳು ತಕ್ಕ ಪ್ರಮಾಣದಲ್ಲಿ ದೊರಕಬೇಕು. ಪೋಷಕಾಂಶಗಳ ಅಭಾವವನ್ನು 'ಕಾಣದ ಹಸಿವು' ಎನ್ನುತ್ತಾರೆ. ಬಡವರು ಹೆಚ್ಚಾಗಿ ಕ್ಯಾಲೋರಿ ಮತ್ತು ಪೋಷಕಾಂಶ ಎರಡರಿಂದಲೂ ವಂಚಿತರಾಗುತ್ತಾರೆ. ಎಫ್.ಎ.ಒ. ಪ್ರಕಾರ ಭಾರತದಲ್ಲಿ ಸರಾಸರಿ ದಿನಕ್ಕೆ ಕನಿಷ್ಟ 1820 ಕ್ಯಾಲೋರಿ ಅಗತ್ಯವಾಗಿ ಬೇಕು ಕನಿಷ್ಠ ಅಗತ್ಯಕ್ಕಿಂತ ಅಂದರೆ 1632ಕ್ಕಿಂತ ಕಡಿಮೆ ಕ್ಯಾಲೋರಿ ಇರುವ ಆಹಾರ ಪಡೆಯುವವರು ಹಸಿವು ಮತ್ತು ಪೋಷಕಾಂಶಗಳಿಂದ ಬಳಲುವವರು ಎಂದು ನಿರ್ಧರಿಸಲಾಗುತ್ತದೆ.

© KTBS Not to be published

**ಹಸಿವಿನ ಸೂಚಕ**

ಹಸಿವಿಗೆ ಹಲವು ಮುಖಗಳಿವೆ. ಒಂದು : ಬದುಕಿರಲು ಅಗತ್ಯವಾಗಿ ಬೇಕಾದಷ್ಟು ಆಹಾರ ಸಿಗದಿರುವುದು. ಮತ್ತೊಂದು, ಸತತ ಆಹಾರದ ಮತ್ತು ಪೋಷಕಾಂಶಗಳ ಕೊರತೆಯಿಂದ ನಿಶ್ಯಕ್ತಿ, ತೀವ್ರ ಅನಾರೋಗ್ಯ, ವಿಕಲಾಂಗತೆ, ಅಕಾಲಿಕ ಮರಣ. ಹಸಿವಿನ ಸೂಚಕ ಈ ಎಲ್ಲಾ ಮುಖಗಳನ್ನು ಹೊಂದಿರುತ್ತದೆ. ಅಕಾಲಿಕ ಮರಣವು ಕನಿಷ್ಟ ಪೋಷಕಾಂಶಗಳ ಕೊರತೆ ಮತ್ತು ಅದರ ಪರಿಣಾಮವನ್ನು ಪ್ರತಿಬಿಂಬಿಸುತ್ತದೆ. ಆದ್ದರಿಂದ ಈಗಾಗಲೇ ದೊರೆಯುವ ಅಂಕಿ ಸಂಖ್ಯೆ ಆಧಾರದ ಮೇಲೆ ಹಸಿವಿನ ಸೂಚಕವನ್ನು ರೂಪಿಸಲಾಗುತ್ತದೆ.

ಹಸಿವಿನ ಸೂಚಕವನ್ನು ಕೆಳಕಂಡ ಮೂರು ಪ್ರಮುಖ ಅಂಶಗಳ ಸರಾಸರಿಯಿಂದ ತಿಳಿಯಬಹುದು. ಈ ಕೆಳಗಿನ ಮೂರು ಅಂಶಗಳನ್ನು ಕೂಡಿ ಮೂರರಿಂದ ಭಾಗಿಸಿದರೆ ಬರುವ ಸಂಖ್ಯೆಯೇ ಹಸಿವಿನ ಸೂಚಕ.

1. ಕನಿಷ್ಠ ಕ್ಯಾಲೋರಿ ದೊರಕದ ಆಹಾರ ಸೇವಿಸುವವರ ಶೇಕಡವಾರು ಪ್ರಮಾಣ.
2. ಸರಾಸರಿ ತೂಕಕ್ಕಿಂತ ಕಡಿಮೆ ತೂಕ ಇರುವ 5 ವರ್ಷದವರೆಗಿನ ಮಕ್ಕಳ ಶೇಕಡವಾರು ಪ್ರಮಾಣ
3. 5 ವರ್ಷದವರೆಗಿನ ಮಕ್ಕಳ ಮರಣದ ಶೇಕಡವಾರು ಪ್ರಮಾಣ

ಈ ಸೂಚಕಗಳನ್ನು ಆಧಾರವಾಗಿಸಿಕೊಂಡು ವಿಶ್ವ ಬ್ಯಾಂಕ್ ಗುರುತಿಸಿರುವಂತೆ ಭಾರತದಲ್ಲಿ– ಪ್ರಪಂಚದಲ್ಲಿಯೇ ಹೆಚ್ಚಿನ ಮಕ್ಕಳು ಹಸಿವು ಮತ್ತು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಹಾಗೆಯೇ ಕಡಿಮೆ ತೂಕದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಭಾರತದಲ್ಲಿಯೇ. ಇದು ಶಿಶು ಮರಣವನ್ನು, ಮಕ್ಕಳ

ಚಲನೆಯನ್ನು, ಸಂತಾನೋತ್ಪತ್ತಿಯನ್ನು ಮತ್ತು ಆರ್ಥಿಕ ಬೆಳವಣಿಗೆಯ ಜೊತೆ ಸಹ ಸಂಬಂಧವನ್ನು ಹೊಂದಿದೆ. 2015ರಲ್ಲಿ ಪ್ರಕಟವಾಗಿರುವ ಜಾಗತಿಕ ಹಸಿವಿನ ಸೂಚ್ಯಂಕದ ಪ್ರಕಾರ, ಭಾರತವು 100ನೇ ರ್‍ಯಾಂಕ್‌ನಲ್ಲಿದೆ. ಇದು ಭಾರತದಲ್ಲಿ ಇರುವ ಹಸಿವಿನ ಗಂಭೀರತೆಯನ್ನು ಸೂಚಿಸುತ್ತದೆ.

**ಅಪೌಷ್ಟಿಕತೆ**

2011 ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–4 (ಎಚ್.ಎಫ್.ಎಚ್.ಎಸ್.–4) ಪ್ರಕಾರ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿರುವ ಶೇಕಡ 24.3 ರಷ್ಟು ಮಹಿಳೆಯರ ಮತ್ತು ನಗರ ಪ್ರದೇಶದ ಶೇಕಡ 16.2 ಮಹಿಳೆಯರ ಬಾಡಿ ಮಾಸ್ ಸೂಚಿ (ಬಿ.ಎಂ.ಐ.) ಕನಿಷ್ಟ ಮಟ್ಟಕ್ಕಿಂತಲೂ ಕಡಿಮೆ ತೂಕ ಹೊಂದಿದ್ದಾರೆ. 06 ರಿಂದ 56 ತಿಂಗಳ ಮಕ್ಕಳಲ್ಲಿ ಶೇಕಡ 60.9 ರಷ್ಟು ಮಕ್ಕಳು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಗರ್ಭಿಣಿಯರಲ್ಲಿ ಶೇಕಡ 45.2 ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಮದುವೆಯಾಗಿರುವ ಶೇಕಡ 80.4 ರಷ್ಟು ಮಹಿಳೆಯರು ಅತ್ಯಂತ ವಿರಳವಾಗಿ ಕೌಟುಂಬಿಕ ನಿರ್ಧಾರಗಳಲ್ಲಿ ಭಾಗವಹಿಸುತ್ತಿದ್ದರೆ, ಶೇಕಡ 79.5 ಮಹಿಳೆಯರು ತನ್ನ ಗಂಡನಿಂದಲೇ ಹಿಂಸೆಗೆ ಒಳಪಡುತ್ತಿದ್ದಾಳೆ ಎಂದು ಎಚ್.ಎಫ್.ಎಚ್. ಎಸ್.–4 ವರದಿ ತಿಳಿಸುತ್ತದೆ.

ಶೇಕಡ 33ರಷ್ಟು ಮಹಿಳೆಯರು ಮತ್ತು ಶೇಕಡ 28ರಷ್ಟು ಪುರುಷರ ಬಾಡಿ ಮಾಸ್ ಸೂಚಿ (ಬಿ.ಎಂ.ಐ.) ನಿಗದಿತ ಕನಿಷ್ಠ ಮಟ್ಟಕ್ಕಿಂತಲೂ ಕಡಿಮೆ ಇದೆ. 15–35 ತಿಂಗಳ ವಯೋಮಾನದ ಶೇಕಡ 79ರಷ್ಟು ಮಕ್ಕಳು, 15–49 ವಯೋಮಾನದ ಶೇಕಡ 56ರಷ್ಟು ಮಹಿಳೆಯರು, ಇದೇ ವಯೋಮಾನಕ್ಕೆ ಸೇರಿದ ಶೇಕಡ 24ರಷ್ಟು ಪುರುಷರು ಮತ್ತು ಶೇಕಡ 58ರಷ್ಟು ಗರ್ಭಿಣಿಯರು ಆಹಾರದ ಕೊರತೆ ಮತ್ತು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಇತ್ತೀಚೆಗೆ ಬಿಡುಗಡೆಯಾದ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–2015–16 (ಎನ್. ಎಚ್.ಎಸ್.ಎಫ್.,ವರದಿ–2015–16) ಕರ್ನಾಟಕದಲ್ಲಿ 06–35 ತಿಂಗಳ ವಯೋಮಾನದ ಒಟ್ಟು ಮಕ್ಕಳಲ್ಲಿ ಶೇಕಡ 70.4 ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ.

ಈ ರೀತಿ ರಕ್ತಹೀನತೆಯಿಂದ ಬಳಲುತ್ತಿರುವವರು ಬಹುತೇಕ ಮಕ್ಕಳು ಬಡತನ ರೇಖೆಗಿಂತ ಕೆಳಗಿರುವ ಕುಟುಂಬವರ್ಗಕ್ಕೆ ಸೇರಿದವರು. ಇವರಿಗೆ ಆಹಾರ ಭದ್ರತೆ ನೀಡುವ ಸಲುವಾಗಿ, ಕರ್ನಾಟಕದಲ್ಲಿ ಸಾರ್ವಜನಿಕ ಪಡಿತರ ವ್ಯವಸ್ಥೆಯ ಮೂಲಕ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಆಹಾರ ಪದಾರ್ಥಗಳನ್ನು ವಿತರಿಸಲಾಗುತ್ತಿದೆ. ಒಟ್ಟಿನಲ್ಲಿ ಅಪೌಷ್ಠಿಕತೆಯು ದೇಶದ ದೊಡ್ಡ ಸಮಸ್ಯೆಗಳಲ್ಲಿ ಒಂದಾಗಿದ್ದು ಇದನ್ನು ಸರಿಪಡಿಸುವ ದಿಕ್ಕಿನಲ್ಲಿ ಪ್ರತಿವ್ಯಕ್ತಿ, ಪ್ರತಿ ಸಂಘಟನೆ ಮತ್ತು ಪ್ರತಿ ಸರ್ಕಾರವೂ ಯೋಚನೆ ಮಾಡಬೇಕಾಗಿದೆ.

**ಲಿಂಗತಾರತಮ್ಯ :**

ಜೆಂಡರ್ ಅಥವಾ ಲಿಂಗತ್ವ ಎಂಬುದು ಮಹಿಳೆಯರು ಹಾಗೂ ಪುರುಷರು ಎಂದು ಗುರುತಿಸಿಕೊಳ್ಳುವುದಕ್ಕಾಗಿ ಇರುವ ಪರಿಕಲ್ಪನೆಯಾಗಿದೆ. ಲಿಂಗ ಅನನ್ಯತೆಯು ಒಬ್ಬ ವ್ಯಕ್ತಿಯು ಹೆಣ್ಣು ಅಥವಾ ಗಂಡು ಎಂದು ಗುರುತಿಸಿಕೊಳ್ಳುವ ಪ್ರಜ್ಞೆ, ನಡತೆ, ದೈಹಿಕ ಲಕ್ಷಣ ಮತ್ತು ವ್ಯಕ್ತಿಯ ಜೀವನದ ಇತರ ಅಂಶಗಳಿಂದ ನಿರ್ಧಾರವಾಗುತ್ತದೆಯೇ ಹೊರತು ಕೇವಲ ಜೈವಿಕವಾಗಿ ಅಲ್ಲ. ಇದು ಸ್ತ್ರೀ ಪುರುಷರಿಬ್ಬರಿಗೆ ಹಾಗೂ ಒಬ್ಬರಿಗೊಬ್ಬರಿಗೆ ಸಂಬಂಧಿಸಿದಂತೆ ಅವರವರ ಸ್ಥಾನವನ್ನು ಸೂಚಿಸುತ್ತದೆ.

ಆದರೆ ಇಂದು ಲಿಂಗ ಸಂಬಂಧ ಎಂದಾಕ್ಷಣ ಕೇವಲ ಮಹಿಳೆ ಎಂದು ಭಾವಿಸಲಾಗಿದೆ. ಅಭಿವೃದ್ಧಿ ಸಿದ್ಧಾಂತಗಳಲ್ಲಿ ಲಿಂಗದ ಪರಿಕಲ್ಪನೆಯನ್ನು ಸಾಮಾನ್ಯವಾಗಿ ಮಹಿಳೆಯರ ವಿಷಯಗಳನ್ನು ಅಧ್ಯಯನ ಮಾಡಲು

© KTBS Not to be published

ಬಳಸಲಾಗುತ್ತದೆ. ಏಕೆಂದರೆ ಅಭಿವೃದ್ಧಿಯ ಪ್ರಕ್ರಿಯೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಹೊರಗುಳಿದವರು ಹೆಣ್ಣು ಮಕ್ಕಳು ಮತ್ತು ಮಹಿಳೆಯರೇ ಆಗಿದ್ದಾರೆ. ಹೀಗಿರಲು ಅಭಿವೃದ್ಧಿಯನ್ನು ಲಿಂಗ ಸಂಬಂಧದ ನೆಲೆಯಿಂದ ಅರ್ಥಮಾಡಿಕೊಳ್ಳುವುದು ಕೆಲವು ಕಾರಣಗಳಿಗಾಗಿ ಮುಖ್ಯವಾಗಿದೆ.

**ಲಿಂಗತಾರತಮ್ಯದ ಪ್ರಕಾರಗಳು**

ಜಗತ್ತಿನ ಎಲ್ಲ ಭಾಗದಲ್ಲಿ ಲಿಂಗತಾರತಮ್ಯವಿದೆ. ಆದರೆ ಅದು ಎಲ್ಲ ಕಡೆಗಳಲ್ಲಿಯೂ ಒಂದೇ ರೀತಿ ಇಲ್ಲ. ಅದು ಅನೇಕ ರೂಪಗಳಲ್ಲಿರುತ್ತದೆ. ಲಿಂಗ ಸಂಬಂಧಿ ಅಸಮಾನತೆಯೆಂಬುದು ಏಕಸ್ವರೂಪರ ವಿಷಯವಲ್ಲ. ಇದು ಸಾಮಾಜಿಕ ಸಂಬಂಧಗಳಿಂದ ಕೂಡಿದ ಈ ಕೆಳಗಿನಂತೆ ಮೊತ್ತವಾಗಿದೆ. ಮಹಿಳೆ ಮತ್ತು ಪುರುಷರ ನಡುವೆ ಇರುವ ಸ್ಥೂಲವಾದ ಅಸಮಾನತೆಗಳನ್ನು ಅಮರ್ತ್ಯ ಸೇನ್ ಈ ಕೆಳಗಿನಂತೆ ಗುರುತಿಸುತ್ತಾರೆ.

**ಜನನ ಪ್ರಮಾಣದಲ್ಲಿ ಅಸಮಾನತೆ :** ಪುರುಷಶಾಹಿ ಸಮಾಜದಲ್ಲಿ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳಿಗೆ ಆದ್ಯತೆ ಹೆಚ್ಚು. ಇದರಿಂದಾಗಿ ಲಿಂಗಾಧಾರಿತ ಭ್ರೂಣಹತ್ಯೆ ಅನೇಕ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿದೆ. ಇದು ಮುಖ್ಯವಾಗಿ ಪೂರ್ವ ಹಾಗೂ ದಕ್ಷಿಣ ಏಷ್ಯಾ, ಚೈನಾ, ದಕ್ಷಿಣ ಕೋರಿಯಾ, ಸಿಂಗಾಪೂರ್ ಹಾಗೂ ತೈವಾನ್ ರಾಷ್ಟ್ರಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

**ಮೂಲಸೌಕರ್ಯದಲ್ಲಿ ಅಸಮಾನತೆ :** ಕೆಲವೊಮ್ಮೆ ಜನಸಂಖ್ಯಾ ಲಕ್ಷಣಗಳು ಮಹಿಳೆಯರ ವಿರುದ್ಧ ಇಲ್ಲದಿದ್ದರೂ ಅದು ಬೇರೆ ರೀತಿಯಲ್ಲಿ ವ್ಯಕ್ತವಾಗುತ್ತದೆ. ಏಷ್ಯಾ, ಆಫ್ರಿಕಾ ಹಾಗೂ ಲ್ಯಾಟಿನ್ ಅಮೆರಿಕಾದ ಅನೇಕ ರಾಷ್ಟ್ರಗಳಲ್ಲಿ ಹುಡುಗರಿಗೆ ಹೋಲಿಸಿದರೆ ಹುಡುಗಿಯರಿಗೆ ಶಾಲೆಗೆ ಹೋಗುವ ಅವಕಾಶಗಳು ಕಡಿಮೆ ಇವೆ. ಅಲ್ಲದೆ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಹ ಹೆಣ್ಣುಮಕ್ಕಳಿಗೆ ಅವಕಾಶವಿರುವುದಿಲ್ಲ.

**ಅವಕಾಶಗಳಲ್ಲಿ ಅಸಮಾನತೆ :** ಮೂಲಭೂತ ಅವಶ್ಯಕತೆಯಾದ ಶಾಲಾ ಶಿಕ್ಷಣದಲ್ಲಿ ಅಷ್ಟಾಗಿ ಅಸಮಾನತೆ ಕಂಡುಬರದಿದ್ದರೂ ಉನ್ನತ ಶಿಕ್ಷಣದ ಅವಕಾಶಗಳು ಹುಡುಗರಿಗೆ ಹೋಲಿಸಿದಾಗ ಹೆಣ್ಣುಮಕ್ಕಳಿಗೆ ಕಡಿಮೆ. ಉನ್ನತ ಶಿಕ್ಷಣ ಹಾಗೂ ವೃತ್ತಿ ತರಬೇತಿಯಲ್ಲಿರುವ ಅಸಮಾನತೆಯನ್ನು ಯೂರೋಪ್ ಮತ್ತು ಉತ್ತರ ಅಮೆರಿಕಾದ ಕೆಲವು ರಾಷ್ಟ್ರಗಳಲ್ಲಿಯೂ ಕಾಣಬಹುದು.

**ಒಡೆತನದ ಅಸಮಾನತೆ :** ಸಮಾಜದಲ್ಲಿ ಆಸ್ತಿ ಒಡೆತನದಲ್ಲಿ ಮಹಿಳೆ ಮತ್ತು ಪುರುಷರ ನಡುವೆ ಅಸಮಾನತೆಯನ್ನು ಕಾಣಬಹುದು. ಮೂಲಭೂತ ಸೊತ್ತಾದ ಮನೆ ಹಾಗೂ ಭೂಮಿಯ ಒಡೆತನದಲ್ಲಿಯೂ ಲಿಂಗ ಅಸಮಾನತೆಯಿದೆ. ಇದರಿಂದ ಮಹಿಳೆಯರು ವಾಣಿಜ್ಯ, ಆರ್ಥಿಕ ಚಟುವಟಿಕೆಗಳಷ್ಟೇ ಅಲ್ಲದೆ ಕೆಲವು ಸಾಮಾಜಿಕ ಚಟುವಟಿಕೆಗಳಲ್ಲಿ ಮುಂದುವರಿಯಲು ತೊಂದರೆಯುಂಟಾಗುತ್ತದೆ. ಈ ಅಸಮಾನತೆಯು ಜಗತ್ತಿನಾದ್ಯಂತ ಹರಡಿದ್ದರೂ ಸ್ಥಳೀಯತೆಗನುಗುಣವಾಗಿ ಬದಲಾಗುತ್ತದೆ. ಉದಾಹರಣೆಗೆ ಭಾರತದಲ್ಲಿ ಪಿತ್ರಾರ್ಜಿತ ಆಸ್ತಿಯ ಹಕ್ಕು ಗಂಡುಮಕ್ಕಳ ಪರವಾಗಿದೆ. ಆದರೆ ಕೇರಳದ ನಾಯರ್ ಸಮುದಾಯದಲ್ಲಿ ಪಿತ್ರಾರ್ಜಿತ ಆಸ್ತಿಯ ಬದಲು ಮಾತೃಸಂಸ್ಕೃತಿಯ (Matrilineal) ಆಸ್ತಿಯ ಹಕ್ಕು ಇರುವುದನ್ನು ಕಾಣಬಹುದು. ಇತ್ತೀಚಿನ ನ್ಯಾಯಾಲಯಗಳ ತೀರ್ಪುಗಳ ಪ್ರಕಾರ ಪಿತ್ರಾರ್ಜಿತ ಆಸ್ತಿಯಲ್ಲಿ ಭಾರತದ ಮಹಿಳೆಯರೂ ಪಾಲು ಪಡೆಯಬಹುದಾಗಿದೆ.

**ಕೌಟುಂಬಿಕ ಅಸಮಾನತೆ :** ಸಾಮಾನ್ಯವಾಗಿ ಕುಟುಂಬಗಳಲ್ಲಿ ಲಿಂಗ ಸಂಬಂಧಿ ಅಸಮಾನತೆ ಇರುವುದನ್ನು ಕಾಣಬಹುದು. ಇದು ಅನೇಕ ರೂಪಗಳನ್ನು ಪಡೆದಿರುತ್ತದೆ. ಕೆಲವು ಕುಟುಂಬಗಳಲ್ಲಿ ಲಿಂಗ ಪಕ್ಷಪಾತದ ಯಾವುದೇ ಕುರುಹು

> ***ಚಟುವಟಿಕೆ :*** *ಲಿಂಗತಾರತಮ್ಯದ ಪರಿಣಾಮಗಳನ್ನು ಕುರಿತು ಮಕ್ಕಳ ಜೊತೆ ಸಂವಾದ ಮಾಡುವುದು, ರೂಪಕ ಮತ್ತು ನಾಟಕಗಳನ್ನು ಮಕ್ಕಳ ಮೂಲಕ ಮಾಡಿಸುವುದು.*

© KTBS Not to be published

ಇಲ್ಲದಿರಬಹುದು. ಅಂದರೆ ಮರಣದರದಲ್ಲಿ, ಗಂಡುಮಕ್ಕಳ ಒಲವು, ಶಿಕ್ಷಣ, ಉದ್ಯೋಗ, ಇವುಗಳಲ್ಲಿ ಅಸಮಾನತೆ ಇಲ್ಲದಿದ್ದರೂ ಮನೆಗೆಲಸದ ಹೊರೆ ಹಾಗೂ ಮಕ್ಕಳ ಪೋಷಣೆ ಇವು ಮಹಿಳೆಯರಿಗೇ ಮೀಸಲಿರುವುದನ್ನು ನೋಡಬಹುದು.

**ಬಾಲ್ಯವಿವಾಹ**



ಬಾಲ್ಯವಿವಾಹ ನಮ್ಮ ಸಮಾಜವನ್ನು ಪರಂಪರಾಗತವಾಗಿ ಕಾಡಿದ ಒಂದು ಸಾಮಾಜಿಕ ಸಮಸ್ಯೆ. ಹಾಗಾದರೆ ಬಾಲ್ಯವಿವಾಹ ಎಂದರೇನು ಎನ್ನುವುದನ್ನು ತಿಳಿಯೋಣ.

ಕಾನೂನಿನ ಪ್ರಕಾರ ಬಾಲ್ಯವಿವಾಹ ಎಂದರೆ 18 ವರ್ಷದೊಳಗಿನ ಹುಡುಗಿಗೆ (ಬಾಲಕಿಗೆ) ಅಥವಾ 21 ವರ್ಷದೊಳಗಿನ ಹುಡುಗನಿಗೆ ಮದುವೆ ಮಾಡಿದರೆ ಅದನ್ನು ಬಾಲ್ಯವಿವಾಹ ಎಂದು ಕರೆಯಲಾಗುತ್ತದೆ. ಇಬ್ಬರಲ್ಲಿ ಯಾರಾದರೂ ಒಬ್ಬರು ಕಾನೂನು ಹೇಳುವುದಕ್ಕಿಂತ ಚಿಕ್ಕವರಿದ್ದರೆ ಅದು ಬಾಲ್ಯವಿವಾಹ. ಹುಡುಗನಿಗೆ 21 ವರ್ಷ ಆಗಿರಬೇಕು ಅಥವಾ ಹುಡುಗಿಗೆ 18 ವರ್ಷ ಆಗಿರಬೇಕು. ಇಲ್ಲದಿದ್ದಲ್ಲಿ ಅಂತಹ ಮದುವೆ ಬಾಲ್ಯವಿವಾಹವಾಗುತ್ತದೆ. ಜೊತೆಗೆ 18 ವರ್ಷದೊಳಗಿನ ಬಾಲಕಿಯನ್ನು ಯಾರೇ ದೊಡ್ಡವರು ಮದುವೆಯಾದಲ್ಲಿ ಅದು ಬಾಲ್ಯವಿವಾಹವಾಗುತ್ತದೆ. ಹುಡುಗಿಗೆ ಮದುವೆಯಾಗಲು 18 ವರ್ಷ ಪೂರ್ಣ ತುಂಬಿರಬೇಕು. ಅಂತಹ ಮದುವೆ ಮಾತ್ರ ಕಾನೂನುಬದ್ಧ. ಆ ವಯಸ್ಸಿನ ಒಳಗೆ ಯಾರದ್ದೇ ಮದುವೆ ಆದಲ್ಲಿ ಕಾನೂನುಬಾಹಿರ ಮತ್ತು ಅದು ಅಪರಾಧ.

© KTBS Not to be published

ಬಾಲ್ಯವಿವಾಹ ಯಾಕೆ ಮಾಡಬಾರದು ಎಂದರೆ 18 ವರ್ಷದೊಳಗಿನ ಮಕ್ಕಳಿಗೆ ಮದುವೆ ಮಾಡಿದರೆ ಅದು ಕಾನೂನು ಪ್ರಕಾರ ಅಪರಾಧ. ಯಾವುದೇ ಹೆಣ್ಣಿಗೆ 'ಮದುವೆ' ಎಂಬ ಪದ್ಧತಿಗೆ ಒಳಗಾಗಬೇಕಾದರೆ ಅವಳ ದೇಹ, ಮನಸ್ಸು, ಗರ್ಭಕೋಶ, ಮಾನಸಿಕ, ಬೌದ್ಧಿಕ, ಒಟ್ಟಾರೆ ಶಾರೀರಿಕ ಸಾಮರ್ಥ್ಯ ಬೆಳೆಯಲು 18 ವರ್ಷ ಬೇಕು. ಮಾನವ ಸಮಾಜದಲ್ಲಿ ವಿವಾಹವು ಸಂತಾನೋತ್ಪತ್ತಿ ಪ್ರಕ್ರಿಯೆಯ ಪ್ರಮುಖ ಭಾಗ. ಹೀಗಾಗಿ ಹೆಣ್ಣು ಮದುವೆ ನಂತರ 'ಗರ್ಭ' ಧರಿಸುವುದು 'ಮಗು'ವನ್ನು ಪಡೆಯುವುದು ಸಹಜ. ಹೆಣ್ಣು ಮಕ್ಕಳು 'ಗರ್ಭ' ಧರಿಸಲು ಅವರ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಅತ್ಯಂತ ಪ್ರಮುಖ. ವೈದ್ಯಕೀಯ ಸಂಶೋಧನೆಗಳ ಪ್ರಕಾರವೇ ಹೆಣ್ಣು ಮಕ್ಕಳಿಗೆ 'ಗರ್ಭ' ಧರಿಸಲು, ಅಂದರೆ ಗರ್ಭಕೋಶ ಸಮರ್ಥವಾಗಿ ಬೆಳೆಯಲು 18 ವರ್ಷ ಬೇಕು. ಆಗ ಮಾತ್ರ ಅದು ಭ್ರೂಣವನ್ನು 9 ತಿಂಗಳು ಸಮರ್ಥವಾಗಿ ಬೆಳೆಸಲು ಸಾಧ್ಯ. ಇಲ್ಲದಿದ್ದರೆ 'ಭ್ರೂಣ'(ಮಗು)ಕ್ಕೆ ತೊಂದರೆಯಾಗಿ ರಕ್ತಸ್ರಾವವಾಗಿ, ಭ್ರೂಣ ಸಾಯುವ ಸಾಧ್ಯತೆಗಳೇ ಹೆಚ್ಚು. ಚಿಕ್ಕ ವಯಸ್ಸಿನಲ್ಲಿ 'ಗರ್ಭ' ಧರಿಸುವುದರಿಂದ ಹೆರಿಗೆಯ ಸಮಯದಲ್ಲಿ ತಾಯಿ ಸಾವಿಗೆ ಒಳಗಾಗುವ ಸಾಧ್ಯತೆ ಹೆಚ್ಚು. ಈ ಕಾರಣಕ್ಕೆ ಕಡ್ಡಾಯವಾಗಿ ಹೆಣ್ಣಿಗೆ 18 ವರ್ಷ ಆದ ಮೇಲೆಯೇ ಮದುವೆ ಮಾಡಬೇಕು ಎಂದು ಕಾನೂನು ರೂಪಿಸಲಾಗಿದೆ. ಅದಕ್ಕಾಗಿ ಹೆಣ್ಣು ಮಕ್ಕಳಿಗೆ 18 ವರ್ಷ ಪೂರ್ಣಗೊಂಡ ಮೇಲೆಯೇ ಮದುವೆ ಮಾಡಬೇಕು.

ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮೊದಲು ಮಾಡುವ ವಿವಾಹವನ್ನು, ಬಾಲ್ಯವಿವಾಹ ಎಂದು ಕಾನೂನಲ್ಲಿ ಪರಿಗಣಿಸಿ, ಶಿಕ್ಷಾರ್ಹ ಅಪರಾಧ ಎಂದು ಹೇಳಲಾಗಿದೆ. ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಇಲ್ಲದೆ, ಅವರಿಗೆ ಹುಟ್ಟುವ ಮಕ್ಕಳ ದೈಹಿಕ ಬೆಳವಣಿಗೆ ಸೇರಿದಂತೆ ಎಲ್ಲವೂ ಕುಂಠಿತವಾಗುತ್ತದೆ. ಅದಕ್ಕಾಗಿ ಕಾನೂನಿನಲ್ಲಿ ಬಾಲ್ಯವಿವಾಹವನ್ನು ನಿಷೇಧಿಸಲಾಗಿದೆ. ಇದನ್ನು ತಡೆಗಟ್ಟಲು ಯಾವ ಕಾನೂನು ಇದೆ ಎನ್ನುವುದನ್ನು ಮುಂದೆ ಚರ್ಚೆ ಮಾಡೋಣ. ಅದಕ್ಕಿಂತ ಮೊದಲು ಬಾಲ್ಯವಿವಾಹಕ್ಕೆ ಕಾರಣಗಳನ್ನು ಚರ್ಚೆ ಮಾಡೋಣ.

## ಬಾಲ್ಯವಿವಾಹಕ್ಕೆ ಕಾರಣಗಳು :

1. ಬಾಲ್ಯವಿವಾಹಕ್ಕೆ ಪ್ರಮುಖ ಕಾರಣ 'ಲಿಂಗ ತಾರತಮ್ಯ'. ಹೆಣ್ಣು ಬೇರೆಯವರ ಮನೆಗೆ ಹೋಗುವವಳು ಅವಳನ್ನು ಬೇಗ ಮದುವೆ ಮಾಡಿ ಕಳುಹಿಸಬೇಕು ಎಂಬ ನಂಬಿಕೆ. 'ಹೆಣ್ಣು' ಮತ್ತು 'ಗಂಡು' ಮಕ್ಕಳ ನಡುವಿನ ಬೇಧಭಾವ ಇಂದು ಹೆಚ್ಚು ಬಾಲ್ಯವಿವಾಹಕ್ಕೆ ಕಾರಣವಾಗಿದೆ. ವಿಶೇಷವೆಂದರೆ ಪ್ರಮುಖವಾಗಿ 'ಬಾಲ್ಯವಿವಾಹಕ್ಕೆ' ಬಾಲ್ಯವಿವಾಹಗಳೇ ಕಾರಣವಾಗಿವೆ. ಹಿಂದೆ ಬಾಲ್ಯವಿವಾಹಕ್ಕೆ ಒಳಗಾದವರೆಲ್ಲರೂ ಹಿಂದಿನ ಕುಟುಂಬದ ಕ್ರಮದಂತೆ ಅದನ್ನೇ ಮುಂದುವರಿಸುತ್ತಾರೆ. 'ಬಾಲ್ಯವಿವಾಹ'ಕ್ಕೆ ಪ್ರಮುಖ ಕಾರಣ 'ಶಿಕ್ಷಣ ಇಲ್ಲದಿರುವಿಕೆ', ಬಾಲಕಾರ್ಮಿಕತೆ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟ. ಚಿಕ್ಕ ವಯಸ್ಸಿನಲ್ಲಿ 'ಶಾಲೆ'ಗೆ ಹೋಗದೇ 'ಬಾಲಕಾರ್ಮಿಕರಾಗಿ'ದ್ದಲ್ಲಿ ಮುಂದೆ ಅನಕ್ಷರಸ್ಥರಾಗಿ 'ಬಾಲ್ಯವಿವಾಹ'ದಂತಹ ಸಮಸ್ಯೆಗೆ ಒಳಗಾಗುತ್ತಾರೆ. ಉದಾಹರಣೆಗೆ, 8ನೇ ತರಗತಿ ಅಥವಾ 10ನೇ ತರಗತಿಯ ವರೆಗೆ ಓದಿದ ಅಥವಾ ಶಿಕ್ಷಣ ಪಡೆದಂತಹ ಬಡ ಕುಟುಂಬಗಳು, ತಮ್ಮ ಮಕ್ಕಳನ್ನು 18–21 ವರ್ಷದೊಳಗೆ ಮದುವೆ ಮಾಡುವುದಿಲ್ಲ. ಆದ್ದರಿಂದ 18 ವರ್ಷದ ತನಕ 'ಶಿಕ್ಷಣ' ಎಷ್ಟು ಪ್ರಮುಖ ಎಂಬುದನ್ನು ತಿಳಿಯಬೇಕು.

2. ಕಾನೂನಿನ ಕನಿಷ್ಠ ಮಟ್ಟದ ಅನುಷ್ಠಾನ ಮತ್ತು ಬಳಕೆಯ ಕೊರತೆ. ಶಿಕ್ಷಣ ವ್ಯವಸ್ಥೆಯಲ್ಲಿ ಕಾನೂನುಗಳ ಅನುಷ್ಠಾನದ ಕೊರತೆ. ಶಿಕ್ಷಣಕ್ಕೆ, ಸಮಾಜದ / ಸಮುದಾಯಗಳ / ಸಾರ್ವಜನಿಕ ಅಸಹಕಾರ. ಮಕ್ಕಳ ಹಕ್ಕುಗಳ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳ ದೋಷಪೂರಿತವಾದ ಅನುಷ್ಠಾನ.

© KTBS
Not to be published

## ಬಾಲ್ಯವಿವಾಹ ನಿಷೇಧ ಕಾಯಿದೆ – 2006

ಭಾರತದ ಎಲ್ಲಾ ರಾಜ್ಯಗಳಿಗೆ ಈ ಕಾಯಿದೆ ಅನ್ವಯಿಸುತ್ತದೆ. ಕೆಲವು ತಿದ್ದುಪಡಿಯ ಮೂಲಕ 2006ರಲ್ಲಿ ಬಾಲ್ಯ ವಿವಾಹ ನಿಷೇಧ ಕಾಯಿದೆ ಜಾರಿಗೆ ಬಂದಿದೆ. ಹಿಂದೆ 1929 ಮತ್ತು 1986ರಲ್ಲಿ ಇತ್ತು. ಆದರೆ ಭಾರತ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ 1992 ಡಿಸೆಂಬರ್ 11 ರಂದು ಸಹಿ ಮಾಡಿದ ಮೇಲೆ, ಕೆಲವು ಮಕ್ಕಳ ಸ್ನೇಹಿ ಬದಲಾವಣೆಗಳೊಂದಿಗೆ ಹೊಸ ಕಾನೂನನ್ನು ಜಾರಿಗೆ ತರಲಾಯಿತು.

ಹೆಣ್ಣು ಅಥವಾ ಗಂಡಿನಲ್ಲಿ ಯಾರಾದರೂ ಒಬ್ಬರು ಅಥವಾ ಇಬ್ಬರೂ ಚಿಕ್ಕವರಾದರೂ ಅದು ಅಪರಾಧ. ಯಾವುದೇ ಚಿಕ್ಕ ಹುಡುಗಿಯನ್ನು ಯಾರೇ ದೊಡ್ಡವರು ಮದುವೆಯಾದಲ್ಲಿ ಅವರು ಶಿಕ್ಷೆಗೆ ಅರ್ಹರು. ಇಂತಹ ಬಾಲ್ಯವಿವಾಹ ನಡೆದಲ್ಲಿ (ಮ್ಕಕಳನ್ನು ಬಿಟ್ಟು) ಮದುವೆ ಮಾಡಿದ, ಮಾಡಿಸಿದ, ಕುಮ್ಮಕ್ಕು ನೀಡಿದ, ಸಹಾಯ ಮಾಡಿದ, ಭಾಗವಹಿಸಿದವರೆಲ್ಲರೂ 2 ವರ್ಷ ಜೈಲು, 1 ಲಕ್ಷ ದಂಡ ಶಿಕ್ಷೆ ಅನುಭವಿಸಬೇಕಾಗುತ್ತದೆ. ಈ ಕಾಯಿದೆಯಲ್ಲಿ ಇರುವ ಕಾಲಂ–9, 10, 11, ರ ಪ್ರಕಾರ ಬಾಲ್ಯವಿವಾಹ ಮಾಡಿಸಿದ ಪೂಜಾರಿ, ಅಡುಗೆಯವರು, ಶಾಮಿಯಾನದವರು, ಫೋಟೋಗ್ರಾಫರ್, ವೀಡಿಯೋಗ್ರಾಫರ್, ವಾಲಗದವರು, ವಾಹನ ಚಾಲಕರು ಹಾಗೂ ಮದುವೆಯಲ್ಲಿ ಭಾಗವಹಿಸಿದ ಎಲ್ಲರೂ ಅಪರಾಧಿಗಳಾಗುತ್ತಾರೆ.

ಪ್ರಮುಖವಾಗಿ ಮದುವೆ ಮಾಡಿದ ಹುಡುಗ / ಹುಡುಗಿಯ ತಂದೆ ತಾಯಿಗಳು ಕುಟುಂಬಸ್ಥರು ಹಾಗೂ ಮದುವೆ ಛತ್ರದ ಮುಖ್ಯಸ್ಥರು ಕೂಡ ಅಪರಾಧಿಗಳು. ಈ ಕಾನೂನಿನಲ್ಲಿ ಮದುವೆ ಪತ್ರಿಕೆ ಟೈಪ್ ಮಾಡಿದ, ಮುದ್ರಿಸಿದ, ಮುದ್ರಣಕಾರರು ಕೂಡ ಅಪರಾಧಿಗಳು ಎಂದು ಹೇಳುತ್ತದೆ. ಯಾಕೆಂದರೆ 'ಬಾಲ್ಯವಿವಾಹ' ಮಕ್ಕಳ ಹಕ್ಕುಗಳ ಉಲ್ಲಂಘನೆ. ಅದಕ್ಕೆ ಯಾರೆ ಸಹಕರಿಸಿದರು ಅಥವಾ ಅದನ್ನು ಪ್ರಶ್ನಿಸದೇ ಭಾಗವಹಿಸಿದರೆ ಅಥವಾ ನಮ್ಮ ಸಾಮಾಜಿಕ ಜವಾಬ್ದಾರಿಯನ್ನು ಮರೆತರೆ ಅದು ಮಕ್ಕಳ ಹಕ್ಕುಗಳ ಮತ್ತು ಮಾನವ ಹಕ್ಕಿನ,

ಉಲ್ಲಂಘನೆ. ಹಾಗಾಗಿ ಅವರೆಲ್ಲರೂ ಅಪರಾಧಿಗಳು. ಈ ದೇಶದ ಪ್ರಜೆಗಳು ತಮ್ಮ ಸಾಮಾಜಿಕ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಯಾರೂ ಮರೆಯುವಂತಿಲ್ಲ ಎಂದು ಈ ಕಾನೂನು ಸ್ಪಷ್ಟಪಡಿಸುತ್ತದೆ.

**ಬಾಲ್ಯವಿವಾಹದ ದುಷ್ಪರಿಣಾಮಗಳು**

ಮಕ್ಕಳ ಸರ್ವತೋಮುಖ ಬೆಳವಣಿಗೆ ಕುಂಠಿತವಾಗಿ, ಅವರು ಪ್ರಶ್ನಿಸುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾರೆ. ಇದರ ಪರಿಣಾಮವಾಗಿ ಮಕ್ಕಳ ಮೇಲೆ ಅತಿಯಾದ ದೌರ್ಜನ್ಯ, ನಿರ್ಲಕ್ಷ್ಯ, ಹಿಂಸೆ, ಶೋಷಣೆ ಮತ್ತು ಲೈಂಗಿಕ ದೌರ್ಜನ್ಯ ಹೆಚ್ಚುತ್ತವೆ. ಮಕ್ಕಳ ಎಲ್ಲಾ ಹಕ್ಕುಗಳ ಉಲ್ಲಂಘನೆ – ಬಾಲ್ಯತನ, ಶಿಕ್ಷಣ, ಮನೋರಂಜನೆ, ಗೆಳೆಯರ ಒಡನಾಟಕ್ಕೆ ಧಕ್ಕೆ, ಅಪೌಷ್ಟಿಕತೆ, ರಕ್ತಹೀನತೆ, ಅನಾರೋಗ್ಯ, ಗರ್ಭಪಾತ, ಶಿಶುಮರಣ, ತಾಯಿಮರಣಕ್ಕೆ ಕಾರಣವಾಗುತ್ತದೆ. ವಿಶೇಷವಾಗಿ ಹೆಣ್ಣು ಮಕ್ಕಳು ಚಿಕ್ಕ ವಯಸ್ಸಿನಲ್ಲಿ ವಿಧವೆಯಾಗುವ ಸಂಭವ ಹೆಚ್ಚು. ಹೆಣ್ಣು ಮಕ್ಕಳು ಯಾವುದೇ ಸಾಮಾಜಿಕ ಭದ್ರತೆಗಳಿಲ್ಲದೆ ಆಗಾಗ ದೌರ್ಜನ್ಯಕ್ಕೆ ಒಳಗಾಗುವ ಸಂದರ್ಭಗಳು ಹೆಚ್ಚು.

**ಬಾಲ್ಯವಿವಾಹ ತಡೆ ಹೇಗೆ**

ಕರ್ನಾಟಕ ರಾಜ್ಯ ಸರ್ಕಾರ ಸುಮಾರು 47 ವಿವಿಧ ಹಂತದ ಅಧಿಕಾರಿಗಳನ್ನು 'ಬಾಲ್ಯವಿವಾಹ ನಿಷೇಧಾಧಿಕಾರಿಗಳು' ಎಂದು ನಿಗದಿಪಡಿಸಿದೆ. ಆದ್ದರಿಂದ ಎಲ್ಲೇ ಬಾಲ್ಯವಿವಾಹ ನಡೆದಾಗ ನಾವು ದೂರು ನೀಡಬಹುದು. ಪ್ರಪ್ರಥಮವಾಗಿ ಮಕ್ಕಳ ಸಹಾಯವಾಣಿ 1098ಗೆ ದೂರು ನೀಡಬಹುದು. ದೂರು ನೀಡಿದವರು ಹೆಸರು ಹೇಳದೆಯೂ ಇರಬಹುದು. ಸ್ಥಳೀಯವಾಗಿ ನಿಮ್ಮ ಮನೆ ಪಕ್ಕದ ಯಾವುದೇ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕರಿಗೆ, ಗ್ರಾಮ ಲೆಕ್ಕಿಗರಿಗೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ, ನಗರದಲ್ಲಿ ಆರೋಗ್ಯ ನಿರೀಕ್ಷಕರುಗಳಿಗೆ ಅಥವಾ ಆ ವ್ಯಾಪ್ತಿಯ ಪೊಲೀಸ್ ಠಾಣೆಗೆ ದೂರು ನೀಡಬಹುದು. ಇವರೆಲ್ಲರೂ ಬಾಲ್ಯವಿವಾಹ ನಿಷೇಧಾಧಿಕಾರಿಗಳು. ಅಂದರೆ 'ಬಾಲ್ಯವಿವಾಹ' ಆಗದಂತೆ ನೋಡಿಕೊಳ್ಳಬೇಕಾದವರು. ಒಂದು ವೇಳೆ ಬಾಲ್ಯ ವಿವಾಹ ನಡೆದಿದ್ದರೆ ಅದರ ವಿರುದ್ಧ ಕ್ರಮಕೈಗೊಳ್ಳಲು ಪೊಲೀಸ್ ಠಾಣೆಗೆ ಕಾನೂನು ರೀತ್ಯಾ ದೂರು ಅಥವಾ ಪ್ರಕರಣ ದಾಖಲಿಸುವವರು ಆಗಿದ್ದಾರೆ. ಜೊತೆಗೆ ತಾಲ್ಲೂಕು/ಜಿಲ್ಲಾಮಟ್ಟದ ಎಲ್ಲಾ ಅಧಿಕಾರಿಗಳು ಬಾಲ್ಯವಿವಾಹ ನಿಷೇಧಾಧಿಕಾರಿಯಾಗಿರುತ್ತಾರೆ. ಇವರಿಗೆ ಯಾವುದೇ ಸಮಯದಲ್ಲಿಯಾದರೂ ಬಾಲ್ಯವಿವಾಹ ಕುರಿತು ದೂರು ನೀಡಬಹುದು.

**ಬಾಲ್ಯವಿವಾಹಕ್ಕೆ ಪರಿಹಾರಗಳು**

1. 18 ವರ್ಷದ ತನಕ ಯಾವ ಮಕ್ಕಳು ಶಾಲೆ / ಕಾಲೇಜು ಬಿಡದಿರುವಂತೆ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ. ಅಂದರೆ 100% ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಬೇಕು. ಹಾಜರಾತಿಯ ಜೊತೆಗೆ 100% ಜನನ ನೋಂದಣಿ ಮತ್ತು ಜನನ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯ ಮಾಡುವುದು.

> ***ಚಟುವಟಿಕೆ :*** ನಿಮ್ಮ ಸ್ನೇಹಿತರು ಯಾರಾದರೂ ಬಾಲ್ಯವಿವಾಹವಾಗುವ ಪರಿಸ್ಥಿತಿ ಕಂಡುಬಂದರೆ ತಕ್ಷಣ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಗೆ ಮತ್ತು ಅದರ ಸದಸ್ಯರ ಗಮನಕ್ಕೆ ತನ್ನಿ.

2. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು, ಬಾಲಕಿಯರ ಬಲವರ್ಧನೆ ಮತ್ತು ಸಬಲೀಕರಣ ಆದ್ಯತೆ ಎಲ್ಲೇ ಬಾಲ್ಯವಿವಾಹ ನಡೆದರು ತಪ್ಪದೇ ದೂರು ನೀಡುವುದು, ಖಂಡಿಸುವುದು, ಪ್ರಶ್ನಿಸುವುದು.

© KTBS Not to be published

## ಮಕ್ಕಳ ಸಾಗಾಣಿಕೆ ಮತ್ತು ಮಾರಾಟ

ಇಂದು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಸಮಾಜದಲ್ಲಿ ಅಷ್ಟೇ ವೇಗದಲ್ಲಿ ಒಳ್ಳೆಯ ಮತ್ತು ಕೆಟ್ಟ ಅಂಶಗಳೂ ಬೆಳೆಯುತ್ತವೆ. ಅದರಲ್ಲಿ ಮಾನವ ಸಮಾಜಕ್ಕೆ ಅತ್ಯಂತ ದೊಡ್ಡ ಸವಾಲಾಗಿರುವ ಪ್ರಪಂಚದ ಅತ್ಯಂತ ದೊಡ್ಡ ದೌರ್ಜನ್ಯ ಮತ್ತು ಶೋಷಣೆ ಎಂದರೆ ಮಾನವ ಕಳ್ಳ ಸಾಗಾಣಿಕೆ (Human Trafficking). ಇಂದು ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಕಳ್ಳ ವ್ಯವಹಾರದ ನಂತರ ಎರಡನೇ ಅತ್ಯಂತ ದೊಡ್ಡ ವ್ಯವಹಾರ ಅಥವಾ ಮಾರಾಟ ಎಂದರೆ "ಮಾನವ ಕಳ್ಳ ಸಾಗಾಣಿಕೆ", ಮಾನವ ಕಳ್ಳ ಸಾಗಾಣಿಕೆಯಲ್ಲಿ ಶೇಕಡ 70% ಮಹಿಳೆಯರು ಮತ್ತು ಮಕ್ಕಳೇ ಬಲಿಪಶು ಆಗಿದ್ದಾರೆ. ಪ್ರತಿ ವರ್ಷ ರೂ. 32 ಬಿಲಿಯನ್‌ಗಳಷ್ಟು ಮಾನವ ಕಳ್ಳ ಸಾಗಾಣಿಕೆಯಲ್ಲಿ ವ್ಯವಹಾರ ನಡೆಯುತ್ತದೆ ಎಂದು 2012–13 ರಲ್ಲಿ ವಿಶ್ವಸಂಸ್ಥೆ ಅಂದಾಜು ಮಾಡಿದೆ.

ಭಾರತದಲ್ಲಿ ದೇವದಾಸಿಯಂತಹ ಅನಿಷ್ಠ ಪದ್ಧತಿಗೆ ಮಕ್ಕಳನ್ನು ಒಳಪಡಿಸುವುದು, ಬಾಲ್ಯವಿವಾಹ ಮಾಡುವುದು ನಂತರ ಅವರನ್ನು ಲೈಂಗಿಕ ಜೀತಕ್ಕೆ ಇಡುವುದು, ಇವು ಕೆಲವು ಬಡ ಕುಟುಂಬಗಳಲ್ಲಿ ತಂದೆ ತಾಯಿಗಳಿಗೆ ಗೊತ್ತಿದ್ದ ಪ್ರಕರಣಗಳೇ ಆಗಿರುತ್ತಿದ್ದವು. ಅದರೆ ಕೆಲವು ಪ್ರಕರಣಗಳಲ್ಲಿ ಊರಲ್ಲಿ ತಿರುಗುತ್ತಿದ್ದ. ಲೈಂಗಿಕ ಧಂದೆಯನ್ನು ಕುದುರಿಸುವ ಮಧ್ಯವರ್ತಿಗಳು, ಸಂಬಂಧಿಕರ ಗಂಡು ಮಕ್ಕಳು, ಹೆಣ್ಣು ಮಕ್ಕಳನ್ನು ಪ್ರೀತಿಸುವ ನಾಟಕವಾಡಿ, ಕೆಲಸ ಕೊಡಿಸುವ ಭರವಸೆ ನೀಡಿ ಕರೆದೊಯ್ದು, ಲೈಂಗಿಕ ದಂಧೆಯ ಮನೆಗಳಿಗೆ ಮಾರಾಟ ಮಾಡುತ್ತಿದ್ದ ಪ್ರಕರಣಗಳೂ ಇವೆ. ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ಸಂಶೋಧನೆಗೆ ಒಳಪಟ್ಟ ಕೆಲವು ಯುವತಿಯರು ಹೇಳುವಂತೆ, ಮುಂಬೈಯಲ್ಲಿ ಘರವಾಲಿಗಳಾಗಿರುವ (ಸ್ವಂತ ಅಥವಾ ಬಾಡಿಗೆ) ಮಹಿಳೆಯರ ತಮ್ಮಂದಿರು, ಗಂಡು ಮಕ್ಕಳು ಊರಲ್ಲಿ ಲೈಂಗಿಕ ದಂಧೆಯನ್ನು ಕುದುರಿಸುವ ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಿರುತ್ತಾರೆ ಎಂದು ಹೇಳಿದ್ದಾರೆ.

ಅವರು ಸುತ್ತ ಮುತ್ತ ಹಳ್ಳಿಗಳಲ್ಲಿಯೂ ತಿರುಗಾಡುತ್ತಾ, ಹೆಣ್ಣು ಮಕ್ಕಳಿದ್ದು, ಸಮಸ್ಯೆ ಇರುವ ಮನೆಗಳನ್ನು ಗಮನಿಸುತ್ತಾ, ಅವರಿಗೆ ಒಂದಿಷ್ಟು ಹಣ ನೀಡಿ, ಅವರ ಹೆಣ್ಣು ಮಕ್ಕಳನ್ನು ಸಾಗಿಸಿಕೊಂಡು ಹೋಗುತ್ತಾರೆ. ಕೆಲವು ಪ್ರಕರಣಗಳಲ್ಲಿ ಹುಡುಗಿಯರನ್ನೇ ನೇರವಾಗಿ ಪುಸಲಾಯಿಸಿ ಓಡಿಸಿಕೊಂಡು ಅಥವಾ ಕರೆದುಕೊಂಡು ಬಂದು ಲೈಂಗಿಕ ದಂಧೆಯ ಮನೆಗಳನ್ನು ಸೇರಿಸಿರುವ ಉದಾಹರಣೆಗಳಿವೆ. ಇತ್ತೀಚೆಗೆ ಚಿಕ್ಕ ಹುಡುಗಿಯರಿಗೆ ಚಾಕಲೇಟ್ ಸೇರಿದಂತೆ ಏನೆಲ್ಲ ಕೊಡಿಸುವ, ಜಾತ್ರೆ ತೋರಿಸುವ, ಸಿನೆಮಾ ತೋರಿಸುವ, ಹೊಸ ಬಟ್ಟೆ ಕೊಡಿಸುವ ಆಸೆಗಳನ್ನು ತೋರಿಸಿ ಕರೆದೊಯ್ದು, ಲೈಂಗಿಕ ದಂಧೆಯ ಮನೆಗಳಿಗೆ ಮಾರಾಟ ಮಾಡಿದ ಪ್ರಕರಣಗಳೂ ಕಂಡು ಬರುತ್ತವೆ. ಅಭಿವೃದ್ಧಿ ಅಧ್ಯಯನ ವಿಭಾಗವು ಸಂಶೋಧನೆಗೆ ಒಳಪಡಿಸಿದ ದೇವದಾಸಿಯರಲ್ಲದವರಲ್ಲಿ, ಶೇಕಡಾ 4 ರಷ್ಟು ಪ್ರಕರಣಗಳು ಚಿಕ್ಕ ವಯಸ್ಸಿನಲ್ಲಿ ಸಾಗಾಣಿಕೆಯಾದವರು. ಈ ಕುರಿತು ನಾವು ಹೆಚ್ಚು ಎಚ್ಚರದಿಂದಿರಬೇಕು. ಅಲ್ಲದೆ ನಮ್ಮ ಶಾಲೆಯ ಸುತ್ತ ಮುತ್ತ ಅಪರಿಚಿತರು ನಮ್ಮ ಜೊತೆ ವ್ಯವಹರಿಸುವಾಗ ಅವರ ನಡವಳಿಕೆಗಳನ್ನು ಬಹಳ ಎಚ್ಚರದಿಂದ ಗಮನಿಸಬೇಕು. ಅವರ ಬಗ್ಗೆ ಅನುಮಾನ ಬಂದಲ್ಲಿ ಶಿಕ್ಷಕರಿಗೆ ಮತ್ತು ಪೋಷಕರಿಗೆ ತಕ್ಷಣ ತಿಳಿಸಬೇಕು.

ಮಕ್ಕಳ ಸಾಗಾಣಿಕೆ ಎಂದರೆ ಏನು? 18 ವರ್ಷದೊಳಗಿನ ಯಾವುದೇ ವ್ಯಕ್ತಿಯ (ದೇಶದ ಒಳಗೆ ಅಥವಾ ದೇಶದ ಹೊರಗೆ) ನೇಮಕಾತಿ, ಸಾಗಾಣಿಕೆ, ವರ್ಗಾವಣೆ, ಆಶ್ರಯ, ರವಾನಿಸುವುದು, ಸ್ವಾಧೀನ ಪಡಿಸುವುದು ಅಥವಾ ಶೋಷಣೆಯ ಉದ್ದೇಶಕ್ಕಾಗಿ ನಡೆಯುವ ಕೃತ್ಯವನ್ನು ಮಕ್ಕಳ ಸಾಗಾಣಿಕೆ ಎಂದು ಕರೆಯುತ್ತಾರೆ. ಸಾಗಾಣಿಕೆಗೆ ಒಳಗಾದವರಲ್ಲಿ ಶೇಕಡ 27 ಬಲವಂತದ ದುಡಿಮೆಯಲ್ಲಿದ್ದರೆ, ಶೇಕಡ 27 ಮನೆಕೆಲಸದಲ್ಲಿ, ಶೇಕಡ 46 ಲೈಂಗಿಕ ಶೋಷಣೆ / ಲೈಂಗಿಕ ದಂಧೆಗೆ ಒಳಗಾಗಿದ್ದಾರೆ. ಬಲವಂತ ದುಡಿಮೆ ಒಳಗಾಗಿ ಇರುವ ಮಕ್ಕಳನ್ನು ಭಿಕ್ಷಾಟನೆಗೆ ತಳ್ಳಲಾಗಿದೆ.

© KTBS Not to be published

## ಮಕ್ಕಳ ಸಾಗಾಣಿಕೆಗೆ ಕಾರಣಗಳು

ಬಾಲಕಾರ್ಮಿಕತೆ, ಬಾಲ್ಯವಿವಾಹ, ಶಾಲೆಬಿಡುವುದು, ಬಡತನ, ಕುಟುಂಬಗಳಲ್ಲಿ ಮಕ್ಕಳ ಬಗ್ಗೆ ಅಸಡ್ಡೆ, ಜೀತ ಪದ್ದತಿ, ಪ್ರಮುಖ ಕಾರಣಗಳು. ಅನಿಯಮಿತ ವಲಸೆ ಮತ್ತು ಸ್ಥಳಾಂತರ. ಹೆಚ್ಚಾಗುತ್ತಿರುವ ಸಂಪರ್ಕ ತಂತ್ರಜ್ಞಾನ ಹಾಗೂ ಇಂಟರ್‌ನೆಟ್ ಬಳಕೆ. ಸಾಮಾಜಿಕ ಅಸಮಾನತೆ, ಲಿಂಗ ಅಸಮಾನತೆ, ತಾರತಮ್ಯ. ಕೌಶಲ್ಯಗಳ ಕೊರತೆ, ಹೆಚ್ಚಾಗುತ್ತಿರುವ ಸಾಲದ ಹೊರೆ, ಅಸಮಾನ ವ್ಯಾಪಾರ ಸಂಬಂಧ – ಇವುಗಳೂ ಕಾರಣವಾಗುತ್ತಿವೆ.

**ದುಷ್ಪರಿಣಾಮಗಳು :** ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಮಾರಕ, ದೈಹಿಕ ಹಾಗೂ ಲೈಂಗಿಕ ಶೋಷಣೆಗೆ ಬಲಿ, ಮಕ್ಕಳ ಸಾವು ಮತ್ತು ಗಂಭೀರ ರೋಗದ ಅಪಾಯ/ಹೆಚ್.ಐ.ವಿ/ಲೈಂಗಿಕ ಕಾಯಿಲೆ, ಅನಗತ್ಯ ಗರ್ಭಧಾರಣೆ, ಬಲವಂತದ ಗರ್ಭಧಾರಣೆ, ಕೊಲೆ, ಮಾದಕ ವ್ಯಸನಗಳಿಗೆ ಬಲಿ, ಇತ್ಯಾದಿ ಒಟ್ಟು ಸಮಾಜದ ಸ್ವಾರ್ಥಕ್ಕೆ ಕಳಂಕ ತರುವ ಸಾಮಾಜಿಕ ಸವಾಲುಗಳಾಗಿವೆ.

ಅನೈತಿಕ ಮಾನವ ಕಳ್ಳ ಸಾಗಾಣಿಕೆ ತಡೆ ಕಾಯ್ದೆ – 1956ಕ್ಕೆ ತಿದ್ದುಪಡಿ ತಂದಿದ್ದು ಯಾವುದೇ ಮಗು, ಮಹಿಳೆ, ಮಾನವ ಕಳ್ಳ ಸಾಗಾಣಿಕೆಯನ್ನು ನಿಷೇಧಿಸುತ್ತದೆ. ಅದರಂತೆ ಯಾವುದೇ ಮಕ್ಕಳನ್ನು / ಮಹಿಳೆಯರನ್ನು ಹಣದ ಅಥವಾ ಇತರ ಯಾವುದೇ ಆಸೆಗೆ, ಒತ್ತಾಯ ಮಾಡಿ, ಕಾನೂನುಬಾಹಿರವಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಯಾವುದೇ ರೀತಿ ಕರೆದುಕೊಂಡು ಹೋದಲ್ಲಿ ಅದು ಮಕ್ಕಳ / ಮಹಿಳೆಯರ ಸಾಗಾಣಿಕೆ ಆಗುತ್ತದೆ. ಅಂತಹವರ ಮೇಲೆ ಐಪಿಸಿ–370 ರಂತೆ ಪ್ರಕರಣ ದಾಖಲಿಸಿ, ಅವರಿಗೆ 10 ವರ್ಷ ಅಥವಾ ಜೀವಾವಧಿ ಶಿಕ್ಷೆಗೆ ಒಳಪಡಿಸಲು ಅವಕಾಶವಿದೆ.

© KTBS
Not to be published

## ಕೆಲವು ಪರಿಹಾರ ಕ್ರಮಗಳು

ಮಕ್ಕಳ ಹಕ್ಕು ಅನುಷ್ಠಾನಕ್ಕಾಗಿ ಹಾಗೂ ಬಾಲಕಾರ್ಮಿಕತೆ, ಬಾಲ್ಯವಿವಾಹ, ಮಕ್ಕಳ ಸಾಗಾಣಿಕೆ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಇನ್ನಿತರ ಶೋಷಣೆಯ ಮುಕ್ತಿಗಾಗಿ ಕೆಲವು ಕ್ರಮಗಳನ್ನು ಕೈಗೊಳ್ಳಬಹುದು.

1. ಎಲ್ಲಾ ಸರ್ಕಾರಿ / ಅನುದಾನಿತ/ ಅನುದಾನರಹಿತ ಶಾಲೆಗಳಲ್ಲಿ ಕಡ್ಡಾಯವಾಗಿ "ಮಕ್ಕಳ ಹಕ್ಕುಗಳ ಕ್ಲಬ್" ರಚಿಸಿ ಅನುಷ್ಠಾನಕ್ಕೆ ತರುವುದು.
2. ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಶಾಲೆಗಳಲ್ಲಿ ಕಡ್ಡಾಯವಾಗಿ "ಮಕ್ಕಳ ಸುರಕ್ಷತಾ ಸಮಿತಿ" ರಚಿಸಿ ಅನುಷ್ಠಾನಕ್ಕೆ ತರುವುದು.
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪ್ರತಿ ವರ್ಷ ಕಡ್ಡಾಯವಾಗಿ "ಮಕ್ಕಳ ಗ್ರಾಮ ಸಭೆ" ಗಳನ್ನು ನಡೆಸಿ ಆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 18 ವರ್ಷದೊಳಗಿನ ಎಲ್ಲಾ ಮಕ್ಕಳ ಸಮಸ್ಯೆಯ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದು.
4. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ "ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ"ರಚಿಸಿ ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ನಡೆಸಿ 18 ವರ್ಷದೊಳಗಿನ ಎಲ್ಲಾ ಮಕ್ಕಳ ಸಮಸ್ಯೆಯ ಪರಿಹಾರಕ್ಕೆ ಕ್ರಮ.
5. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ ಕಡ್ಡಾಯವಾಗಿ "ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ತಡೆ" ಸಮಿತಿ ರಚಿಸಿ ಪ್ರತಿ ಎರಡು

ತಿಂಗಳಿಗೊಮ್ಮೆ ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮಾರಾಟದ ಘಟನೆ ಆಗದಂತೆ ಪರಿಶೀಲನೆ ನಡೆಸುವುದು. ಎಲ್ಲಾ ಮಹಿಳೆಯರಿಗೆ ಮಕ್ಕಳಿಗೆ ಸುರಕ್ಷಿತ ಗ್ರಾಮ/ತಾಲ್ಲೂಕು/ಜಿಲ್ಲೆಯನ್ನಾಗಿ ಮಾಡಿ ಪಂಚಾಯತಿಗಳನ್ನು ಬಾಲಕಾರ್ಮಿಕ, ಬಾಲ್ಯವಿವಾಹ, ಮಕ್ಕಳ ಮತ್ತು ಮಹಿಳೆಯರ ಸಾಗಾಣಿಕೆಯ ಮುಕ್ತ ಪಂಚಾಯತಿಯನ್ನಾಗಿ ಮಾಡುವುದು.

6. ರಾಜ್ಯದ ಪ್ರತಿ ಅಂಗನವಾಡಿ ಕೇಂದ್ರದಲ್ಲಿ ಒಂದು 'ಬಾಲಿಕಾ ಸಂಘ' ಪ್ರಾರಂಭಿಸಿ ಅದರಲ್ಲಿ 11–18 ವರ್ಷದ ಆ ಕೇಂದ್ರ ವ್ಯಾಪ್ತಿಯ ಎಲ್ಲಾ ಬಾಲಕಿಯರನ್ನು ಸೇರಿಸಿ ಸಂಘಟಿಸಿ ಅವರಲ್ಲಿ ಲಿಂಗತ್ವ, ಲಿಂಗತಾರತಮ್ಯ, ಲಿಂಗ ಸಮಾನತೆ, ಬಾಲಕಾರ್ಮಿಕತೆ, ಬಾಲ್ಯವಿವಾಹ, ಮಕ್ಕಳ ಸಾಗಾಣಿಕೆ, ಲೈಂಗಿಕ ದೌರ್ಜನ್ಯ, ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶ, ಜನನ ಪ್ರಮಾಣ ಪತ್ರ, ಶಾಲಾ ಶಿಕ್ಷಣದ ಮಹತ್ವ, ಚುಚ್ಚು ಮದ್ದುಗಳು, ಹದಿಹರೆಯದವರ ಬೆಳವಣಿಗೆ, ಆರೋಗ್ಯ ವಿಚಾರ, ಹೆಚ್.ಐ.ವಿ/ಏಡ್ಸ್‌ನ ಮಾಹಿತಿ, ಪೌಷ್ಟಿಕ ಆಹಾರ, ಶೌಚಾಲಯ ಬಳಕೆ, ಸ್ವಚ್ಛತೆ, ಮಕ್ಕಳ ಹಕ್ಕುಗಳು, ಮಕ್ಕಳ ಕಾನೂನುಗಳು, ಇಲಾಖಾ ಸೌಲಭ್ಯಗಳು, ಇಲಾಖೆಗಳು ಹಾಗೂ ಇನ್ನಿತರ ಮಾಹಿತಿ ನೀಡಿ ಬಾಲಕಿಯರನ್ನು ಸಬಲೀಕರಿಸಬೇಕು.

ಈ ಮೇಲಿನ ಪ್ರಮುಖ ಅಂಶಗಳು ಈಗಾಗಲೇ ಸರ್ಕಾರಿ ಸುತ್ತೋಲೆ, ಆದೇಶ, ಆಶಯದಂತೆ ಇವೆ. ಇದನ್ನು ಎಲ್ಲ ಮಕ್ಕಳು, ನಾಗರಿಕರು, ಪೋಷಕರು, ಇಲಾಖೆಗಳು, ಅಧಿಕಾರಿಗಳು, ಒಟ್ಟಾಗಿ ಅನುಷ್ಠಾನ ಮಾಡಬೇಕು.

© KTBS Not to be published

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಸಂವಿಧಾನದ ________________ ವಿಧಿ ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನು ಬಾಹಿರ ಎಂದು ಘೋಷಿಸಿದೆ.
2. 'ಬಾಲ್ಯವಿವಾಹ ನಿಷೇಧ ಕಾಯಿದೆ' ಜಾರಿಗೆ ಬಂದ ವರ್ಷ ________________.
3. ಬಾಲಕಾರ್ಮಿಕರ ಕಲ್ಯಾಣಕ್ಕಾಗಿ ________________ರಲ್ಲಿ 'ರಾಷ್ಟ್ರೀಯ ನೀತಿ' ಜಾರಿಗೊಳಿಸಿತು.
4. ಹೆಣ್ಣುಭ್ರೂಣ ಹತ್ಯೆಯನ್ನು ನಿಷೇಧಿಸಿದ ಕಾಯಿದೆ ________________ ರಲ್ಲಿ ಜಾರಿಗೆ ಬಂದಿತು.
5. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ________________ ರಲ್ಲಿ ಜಾರಿಗೆ ಬಂದಿತು.

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಭಾರತದ ಯಾವುದಾದರೂ ಎರಡು ಸಾಮಾಜಿಕ ಸಮಸ್ಯೆಗಳನ್ನು ಹೆಸರಿಸಿ.
2. ಬಾಲಕಾರ್ಮಿಕರು ಎಂದರೆ ಯಾರು?
3. ಹೆಣ್ಣುಭ್ರೂಣ ಹತ್ಯೆ ಎಂದರೇನು?
4. ಬಾಲ್ಯವಿವಾಹ ಎಂದರೇನು?
5. ಲಿಂಗತಾರತಮ್ಯ ಎಂದರೇನು?
6. ಮಕ್ಕಳ ಮಾರಾಟ ಮತ್ತು ಸಾಗಾಣಿಕೆ ಎಂದರೇನು?

**III. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ.**

1. ಬಾಲಕಾರ್ಮಿಕ ಸಮಸ್ಯೆಗೆ ಕಾರಣಗಳಾವುವು? ತಿಳಿಸಿ.
2. ಬಾಲ್ಯವಿವಾಹದ ಪರಿಣಾಮಗಳು ಯಾವುವು?
3. ಬಾಲಕಾರ್ಮಿಕ ಸಮಸ್ಯೆಯ ನಿರ್ಮೂಲನಾ ಕ್ರಮಗಳಾವುವು? ವಿವರಿಸಿ.
4. ಹೆಣ್ಣು ಭ್ರೂಣ ಹತ್ಯೆಯ ದುಷ್ಪರಿಣಾಮಗಳಾವುವು?
5. ಲಿಂಗತಾರತಮ್ಯದ ಪ್ರಕಾರಗಳು ಯಾವುವು?
6. ಹಸಿವಿನ ದುಷ್ಪರಿಣಾಮಗಳನ್ನು ವಿವರಿಸಿ?

**IV. ಚಟುವಟಿಕೆ :**

1. ನಿಮ್ಮ ಊರಿನ ಸಾಮಾಜಿಕ ಸಮಸ್ಯೆಗಳನ್ನು ಪಟ್ಟಿ ಮಾಡಿ ಅವುಗಳಿಗೆ ಪರಿಹಾರಗಳನ್ನು ಬರೆಯಿರಿ.

**V. ಯೋಜನೆ :**

1. ನಿಮ್ಮ ಶಾಲೆಗೆ ಕಾನೂನು ತಜ್ಞರನ್ನು ಕರೆದು, ಬಾಲಕಾರ್ಮಿಕತನ, ಬಾಲ್ಯವಿವಾಹ, ಹೆಣ್ಣುಭ್ರೂಣ ಹತ್ಯೆ, ಲಿಂಗತಾರತಮ್ಯ, ಇತ್ಯಾದಿ ಸಾಮಾಜಿಕ ಸಮಸ್ಯೆಗಳ ಬಗ್ಗೆ ಉಪನ್ಯಾಸ ಮತ್ತು ಸಂವಾದ ಏರ್ಪಡಿಸಿ.

© KTBS
Not to be published

* * * *

# ಭೂಗೋಳ

## ಅಧ್ಯಾಯ-8

# ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

A4L8Y5

**ಈ ಅಧ್ಯಾಯದಲ್ಲಿ ಈ ಕೆಳಕಂಡ ಅಂಶಗಳನ್ನು ತಿಳಿಯುತ್ತೇವೆ.**

- *ಖನಿಜಗಳ ಅರ್ಥ ಮತ್ತು ಪ್ರಾಮುಖ್ಯತೆ.*
- *ಭಾರತದ ಪ್ರಮುಖ ಖನಿಜಗಳು-ಅವುಗಳ ಉತ್ಪತ್ತಿ, ಹಂಚಿಕೆ ಮತ್ತು ಉತ್ಪಾದನೆ.*
- *ಶಕ್ತಿ ಸಂಪನ್ಮೂಲಗಳು-ಅರ್ಥ ಮತ್ತು ಪ್ರಾಮುಖ್ಯತೆ.*
- *ಸಾಂಪ್ರದಾಯಿಕ ಶಕ್ತಿ ಮೂಲಗಳು-ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ಪರಮಾಣು ಶಕ್ತಿ.*
- *ಭಾರತದಲ್ಲಿ ವಿದ್ಯುಚ್ಛಕ್ತಿಯ ಅಭಾವ ಮತ್ತು ಪರಿಹಾರಗಳು.*

© KTBS Not to be republished

### ಖನಿಜಗಳ ಅರ್ಥ ಮತ್ತು ಪ್ರಾಮುಖ್ಯತೆ

ಖನಿಜವು ಒಂದು ನೈಸರ್ಗಿಕ ಅಜೈವಿಕ ಮೂಲಧಾತುವಾಗಿದ್ದು ಅದು ನಿಗದಿತ ರಾಸಾಯನಿಕ ಸಂಯೋಜನೆ ಮತ್ತು ಭೌತಿಕ ಗುಣ ಧರ್ಮಗಳನ್ನು ಹೊಂದಿರುತ್ತದೆ. ಉದಾ: ಕಬ್ಬಿಣದ ಅದಿರು, ಮ್ಯಾಂಗನೀಸ್, ಬಾಕ್ಸೈಟ್ ಇತ್ಯಾದಿ. ಭೂಮಿಯಿಂದ ಖನಿಜಗಳನ್ನು ಹೊರತೆಗೆಯುವ ಕಾರ್ಯವನ್ನು 'ಗಣಿಗಾರಿಕೆ' ಎನ್ನುವರು

ಖನಿಜಗಳು ಪ್ರಕೃತಿಯ ಕೊಡುಗೆ, ದೇಶವೊಂದರ ಸಮೃದ್ಧಿಯಲ್ಲಿ ಇವುಗಳ ಪಾತ್ರ ಮಹತ್ವದ್ದು. ಅವು ಕೈಗಾರಿಕೆ, ನಿರ್ಮಾಣಕಾರ್ಯ, ಸಾರಿಗೆ ಮತ್ತು ಸಂಪರ್ಕಗಳ ಪ್ರಗತಿ, ವ್ಯಾಪಾರ ಮತ್ತು ವಾಣಿಜ್ಯೋದ್ಯಮಗಳ ಪ್ರಗತಿಗೆ ಹೆಚ್ಚು ಉಪಯುಕ್ತ. ಕೆಲವು ಖನಿಜಗಳಂತೂ ಆರ್ಥಿಕ ಮೌಲ್ಯಗಳನ್ನುಳ್ಳವು. ಉದಾ: ಚಿನ್ನ, ವಜ್ರ, ಇತ್ಯಾದಿ. ಭಾರತದ ವಿವಿಧ ಖನಿಜ ಸಂಪತ್ತುಗಳನ್ನು ಹೊಂದಿದೆ.

### ಪ್ರಮುಖ ಖನಿಜಗಳು

**ಕಬ್ಬಿಣದ ಅದಿರು :** ಇದೊಂದು ಕಬ್ಬಿಣಾಂಶವುಳ್ಳ ಲೋಹ ಖನಿಜ, ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯ ಅತಿ ಪ್ರಮುಖ ಕಚ್ಚಾ ವಸ್ತು. ಭಾರತದಲ್ಲಿ ಅಪಾರವಾದ ಕಬ್ಬಿಣದ ಅದಿರು ನಿಕ್ಷೇಪವಿದೆ. ಅದು ಅನೇಕ ರಾಜ್ಯಗಳಲ್ಲಿ ಕಂಡುಬರುತ್ತದೆ. ಆದರೆ ಕೆಲವು ರಾಜ್ಯಗಳಲ್ಲಿ ಸಮೃದ್ಧವಾಗಿ ಹಂಚಿಕೆಯಾಗಿದೆ. ಉದಾ: ಒಡಿಶಾ, ಕರ್ನಾಟಕ, ಛತ್ತೀಸ್‌ಗರ್, ಜಾರ್ಖಂಡ್, ತೆಲಂಗಾಣ, ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ರಾಜಸ್ತಾನ. ಇವು ಪ್ರಮುಖ ಕಬ್ಬಿಣದ ಅದಿರು ಉತ್ಪಾದಿಸುವ ರಾಜ್ಯಗಳೂ ಆಗಿದೆ.

ಒಡಿಶಾ ಭಾರತದಲ್ಲಿ ಅತ್ಯಧಿಕ ಕಬ್ಬಿಣದ ಅದಿರು ಉತ್ಪಾದಿಸುವ ರಾಜ್ಯ. ಈ ರಾಜ್ಯದ ಕಬ್ಬಿಣದ ಅದಿರು ನಿಕ್ಷೇಪ ಹೆಚ್ಚಾಗಿ ಮಯೂರ್ಬಂಜ್, ಕಿಯೊಂಜ್ಹಾರ್, ಸುಂದರ್‌ಗಡ್ ಮತ್ತು ಕಟಕ್ ಜಿಲ್ಲೆಗಳಲ್ಲಿ ದೊರೆಯುತ್ತದೆ. ಛತ್ತೀಸ್‌ಗರ್‌ನ ಬಸ್ತಾರ್, ದುರ್ಗ್ ಮತ್ತು ಜಬಲ್ಪುರ, ಜಾರ್ಖಂಡ್‌ನ ಸಿಂಗಭೂಮ್, ಪಲಮಾವು, ಧನ್ಬಾದ್ ಮತ್ತು ಹಜ್ಹಾರಿಬಾಗ್, ಕರ್ನಾಟಕದ ಸಂಡೂರು, ಹೊಸಪೇಟೆ, ಕೆಮ್ಮಣ್ಣುಗುಂಡಿ ಮತ್ತು ಕುದುರೆಮುಖ ಭಾಗಗಳು ಇತರೆ ಪ್ರಮುಖ ಕಬ್ಬಿಣದ ಅದಿರು ನಿಕ್ಷೇಪವುಳ್ಳವು. ಗೋವಾ, ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶಗಳಲ್ಲಿಯೂ ಕಬ್ಬಿಣದ ಅದಿರು ದೊರೆಯುತ್ತದೆ.


ಭಾರತವು ಪ್ರಪಂಚದ 4ನೆಯ ಪ್ರಮುಖ ಕಬ್ಬಿಣದ


**ನಿಮಗಿದು ತಿಳಿದಿದೆಯೆ!**

***ಅದಿರು:*** *ಯಾವ ನಿಕ್ಷೇಪದಿಂದ ಖನಿಜವನ್ನು ಪಡೆಯಬಹುದೋ ಅದೇ ಅದಿರು.*

***ಖನಿಜಶಾಸ್ತ್ರ :*** *ಖನಿಜಗಳನ್ನು ಕುರಿತ ವೈಜ್ಞಾನಿಕ ಅಧ್ಯಯನ.*

ಅದಿರು ಉತ್ಪಾದಿಸುವ ದೇಶ. ಇದು ತನ್ನ ಒಟ್ಟು ಉತ್ಪಾದನೆಯಲ್ಲಿ ಶೇ.35 ಭಾಗದಷ್ಟನ್ನು ತನ್ನ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಗಾಗಿ ಉಪಯೋಗ ಮಾಡಿಕೊಳ್ಳುತ್ತದೆ. ಉಳಿದ ಹೆಚ್ಚಿನ ಭಾಗವನ್ನು ರಫ್ತು ಮಾಡುವುದು.




**ಮ್ಯಾಂಗನೀಸ್ ಅದಿರು:** ಇದು ಅತ್ಯಂತ ಪ್ರಮುಖವಾದ ಮಿಶ್ರಲೋಹ ಖನಿಜ. ಇದನ್ನು ಹೆಚ್ಚಾಗಿ ಉಕ್ಕು ತಯಾರಿಸಲು ಉಪಯೋಗಿಸಲಾಗುವುದು. ಅಲ್ಲದೆ ಬ್ಯಾಟರಿ, ಬಣ್ಣ, ಗಾಜು, ಪಿಂಗಾಣಿ ವಸ್ತು ಮತ್ತು ಕ್ಯಾಲಿಕೊ ಪ್ರಿಂಟಿಂಗ್‌ಗಾಗಿಯೂ ಬಳಸಲಾಗುವುದು. ಪ್ರಪಂಚದಲ್ಲಿ ಮ್ಯಾಂಗನೀಸ್ ಉತ್ಪಾದಿಸುವ ಮತ್ತು ರಫ್ತು ಮಾಡುವ ದೇಶಗಳಲ್ಲಿ ಭಾರತವೂ ಒಂದಾಗಿದೆ. ಒಡಿಶಾ, ಮಹಾರಾಷ್ಟ್ರ, ಮಧ್ಯ ಪ್ರದೇಶ ಮತ್ತು ಕರ್ನಾಟಕಗಳು ಭಾರತದ ಪ್ರಮುಖ ಮ್ಯಾಂಗನೀಸ್ ಉತ್ಪಾದಿಸುವ ರಾಜ್ಯಗಳು. ಇವುಗಳಲ್ಲಿ ಒಡಿಶಾವು ದೇಶದಲ್ಲೇ ಅಧಿಕ ಪ್ರಮಾಣದ ಮ್ಯಾಂಗನೀಸ್ ನಿಕ್ಷೇಪಗಳನ್ನು ಹೊಂದಿರುವ ಹಾಗೂ ಉತ್ಪಾದಿಸುವ ರಾಜ್ಯ. ಈ ರಾಜ್ಯದ ಸುಂದರ್‌ಗಡ್, ಕಾಲಹಂಡಿ ಮತ್ತು ಕೋರಾಪುಟ್ ಜಿಲ್ಲೆಗಳಲ್ಲಿ ಉತ್ತಮ ದರ್ಜೆಯ ಮ್ಯಾಂಗನೀಸ್ ನಿಕ್ಷೇಪ ದೊರೆಯುತ್ತದೆ.


© KTBS
Not to be published


ಮಹಾರಾಷ್ಟ್ರದ ನಾಗಪುರ, ಭಂಡಾರ, ರತ್ನಗಿರಿ, ಮಧ್ಯ ಪ್ರದೇಶದ ಬಾಲ್ಘಾಟ್, ಚಿಂದ್ವಾರ, ಜಬಲ್ಪುರ ಮತ್ತು ದೀವಾಸ್, ಕರ್ನಾಟಕದ ಉತ್ತರ ಕನ್ನಡ, ಶಿವಮೊಗ್ಗ, ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳು ಭಾರತದ ಇತರ ಮುಖ್ಯ ಮ್ಯಾಂಗನೀಸ್ ಉತ್ಪಾದಿಸುವ ಭಾಗಗಳು. ತೆಲಂಗಾಣ, ರಾಜಸ್ತಾನ, ಗುಜರಾತ್, ಜಾರ್ಖಂಡ್ ಮತ್ತು ಬಿಹಾರ ರಾಜ್ಯಗಳಲ್ಲಿಯೂ ಮ್ಯಾಂಗನೀಸ್ ಉತ್ಪಾದನೆಯಾಗುತ್ತಿದೆ.

ಪ್ರಪಂಚದಲ್ಲಿ ಭಾರತವು 5ನೆಯ ಪ್ರಮುಖ ಮ್ಯಾಂಗನೀಸ್ ಉತ್ಪಾದಿಸುವ ದೇಶ. ಭಾರತ ತನ್ನ ಉಳಿಕೆ ಮ್ಯಾಂಗನೀಸನ್ನು ಜಪಾನ್, ಬ್ರಿಟನ್, ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಬೆಲ್ಜಿಯಂ ದೇಶಗಳಿಗೆ ರಫ್ತು ಮಾಡುತ್ತದೆ.

**ಬಾಕ್ಸೈಟ್ :** ಇದು ಅಲ್ಯೂಮಿನಿಯಂ ಲೋಹ

ತಯಾರಿಕೆಗೆ ಅಗತ್ಯವಾದ ಮುಖ್ಯ ಕಚ್ಚಾವಸ್ತು. ಭಾರತದಲ್ಲಿ ಅಪಾರವಾದ ಬಾಕ್ಸೈಟ್ ನಿಕ್ಷೇಪವಿದೆ. ಅದು ಹೆಚ್ಚಾಗಿ ಒಡಿಶಾ, ಗುಜರಾತ್, ಜಾರ್ಖಂಡ್, ಮಹಾರಾಷ್ಟ್ರ, ಛತ್ತಿಸ್‌ಗಡ್, ತಮಿಳುನಾಡು ಮತ್ತು ಮಧ್ಯಪ್ರದೇಶಗಳಲ್ಲಿ ಹಂಚಿಕೆಯಾಗಿದೆ.




**ಇದು ನಿಮಗೆ ತಿಳಿದಿರಲಿ!**

***ಬಾಕ್ಸೈಟ್:*** *ಈ ಶಬ್ಧವು "ಲೆಸ್‌ಬಾಕ್ಸ್" (Les Baux) ಪದದಿಂದ ಬಂದದ್ದು. ಲೆಸ್‌ಬಾಕ್ಸ್ ಸ್ಥಳವು ಫ್ರಾನ್ಸಿನ ಆರ್ಲೆಸ್ ಸಮೀಪವಿದೆ. ಇಲ್ಲಿ ಮೊಟ್ಟ ಮೊದಲಿಗೆ ಬಾಕ್ಸೈಟ್ ಅದಿರನ್ನು ಕಂಡು ಹಿಡಿಯಲಾಗಿತು.*

***ಅಲ್ಯೂಮಿನಿಯಂ:*** *ಇದನ್ನು '20ನೇ ಶತಮಾನದ ಅದ್ಭುತ ಲೋಹ' ಎನ್ನುವರು. ಏಕೆಂದರೆ ಅದನ್ನು ಹಲವು ಉದ್ದೇಶಗಳಿಗಾಗಿ ಬಳಸಲಾಗುವುದು.*

ಒಡಿಶಾವು ಭಾರತದಲ್ಲೇ ಅತ್ಯಧಿಕ ಬಾಕ್ಸೈಟ್ ನಿಕ್ಷೇಪ ಮತ್ತು ಉತ್ಪಾದನೆಗಳೆರಡರಲ್ಲೂ ಪ್ರಥಮ ಸ್ಥಾನದಲ್ಲಿದೆ. ಈ ರಾಜ್ಯದ ಬಾಕ್ಸೈಟ್ ನಿಕ್ಷೇಪವು ಹೆಚ್ಚಾಗಿ ಕಾಲಹಂಡಿ, ಕೋರಾಪುಟ್, ಸುಂದರಗಡ ಮತ್ತು ಸಾಂಬಲ್ಪುರ ಜಿಲ್ಲೆಗಳಲ್ಲಿ ಹಂಚಿಕೆಯಾಗಿದೆ. ಛತ್ತೀಸ್‌ಗರ್‌ನ ಬಿಲಾಸ್ಪುರ, ದುರ್ಗ್, ಸುರ್ಗುಜ ಮತ್ತು ರಾಯ್‌ಗರ್, ಮಹಾರಾಷ್ಟ್ರದ ರತ್ನಗಿರಿ, ಕೊಲ್ಹಾಪುರ, ಥಾಣೆ ಮತ್ತು ಸತಾರ, ಜಾರ್ಖಂಡ್‌ನ ರಾಂಚಿ, ಲೊಹಾರ್ಡಾಗ ಮತ್ತು ಪಲಮಾವು, ಗುಜರಾತ್‌ನ ಜಾಮನಗರ, ಜುನಾಗಡ, ಖೆಡ ಮತ್ತು ಬಾವನಗರ, ಮಧ್ಯ ಪ್ರದೇಶದ ಶಾಹದೋಲ್, ಮಂಡಲ ಮತ್ತು ಬಾಲ್ಘಾಟ್, ಆಂಧ್ರಪ್ರದೇಶದ ಗೋದಾವರಿ ಮತ್ತು ವಿಶಾಖಪಟ್ಟಣ, ತಮಿಳುನಾಡಿನ ಸೇಲಂ ಮತ್ತು ನೀಲಗಿರಿ ಹಾಗೂ ಕರ್ನಾಟಕದ ಉತ್ತರ ಕನ್ನಡ, ಬೆಳಗಾವಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬಾಕ್ಸೈಟ್ ನಿಕ್ಷೇಪವು ಕಂಡುಬರುತ್ತದೆ.

**ಅಬ್ರಕ :** ಪ್ರಮುಖ ಅಲೋಹ ಖನಿಜ. ಇದನ್ನು ಬಹಳ ತೆಳುವಾದ ಹಾಳೆಗಳಾಗಿ ವಿಭಜಿಸಬಹುದು. ಅವು ಪಾರದರ್ಶಕವೂ ಮತ್ತು ಶಾಖ ನಿರೋಧಕ ಗುಣವುಳ್ಳವು. ಅವುಗಳನ್ನು ಹೆಚ್ಚಾಗಿ ವಿದ್ಯುದುಪಕರಣ ಉದ್ಯಮ, ಟೆಲಿಫೋನ್, ವಿಮಾನ ತಯಾರಿಕೆ, ಸ್ವಚಾಲನಾ ವಾಹನ ಕೈಗಾರಿಕೆ ಮತ್ತು ನಿಸ್ತಂತು (wireless) ಸಂಪರ್ಕ ಮಾಧ್ಯಮಗಳಲ್ಲಿ ಬಳಕೆ ಮಾಡಲಾಗುತ್ತದೆ.

© KTBS Not to be republished

**ನಿಮಗಿದು ಗೊತ್ತೆ!**

ಆಂಧ್ರ ಪ್ರದೇಶದ ನೆಲ್ಲೂರು ಜಿಲ್ಲೆಯಲ್ಲಿ ದೊರೆಯುವ ಅಬ್ರಕ ನಿಕ್ಷೇಪವು ತೆಳು ಹಸಿರು ಬಣ್ಣವುಳ್ಳದ್ದು. ಅದನ್ನು 'ಹನಿಮೈಕ' (Honey mica) ಎಂದು ಕರೆಯಲಾಗಿದೆ.

ಅಬ್ರಕದ ನಿಕ್ಷೇಪವು ವ್ಯಾಪಕವಾಗಿ ಆಂಧ್ರಪ್ರದೇಶ, ರಾಜಸ್ತಾನ, ಜಾರ್ಖಂಡ್ ಮತ್ತು ಬಿಹಾರ ರಾಜ್ಯಗಳಲ್ಲಿ ಹಂಚಿಕೆಯಾಗಿದೆ. ಆಂಧ್ರಪ್ರದೇಶ ಭಾರತದಲ್ಲೇ ಅತಿ ಹೆಚ್ಚು ಅಬ್ರಕ ಉತ್ಪಾದಿಸುವ ರಾಜ್ಯ. ಈ ರಾಜ್ಯದಲ್ಲಿ ಅಬ್ರಕ ನಿಕ್ಷೇಪಗಳು ಪ್ರಮುಖವಾಗಿ ನೆಲ್ಲೂರು, ಕೃಷ್ಣ, ವಿಶಾಖ ಪಟ್ಟಣ, ಗೋದಾವರಿ ಮತ್ತು ಅನಂತಪುರ ಜಿಲ್ಲೆಗಳಲ್ಲಿ ದೊರೆಯುತ್ತದೆ.

ರಾಜಸ್ತಾನವು ಭಾರತದ ಎರಡನೇ ಮುಖ್ಯ ಅಬ್ರಕ ಉತ್ಪಾದಿಸುವ ರಾಜ್ಯ. ಇಲ್ಲಿ ಅಬ್ರಕವು ಜೈಪುರ, ಅಜ್ಮೀರ್, ಬಿಲ್ವಾರ ಮತ್ತು ಉದಯಪುರ ಜಿಲ್ಲೆಗಳಲ್ಲಿ ದೊರೆಯುತ್ತದೆ. ಜಾರ್ಖಂಡ್‌ನ ಹಜ್ಹಾರಿಬಾಗ್, ಧನ್ಬಾದ್, ಪಲಮಾವು, ರಾಂಚಿ ಮತ್ತು ಸಿಂಗಭೂಮ್, ಬಿಹಾರಿನ ಗಯಾ, ಮುಂಗ್ಯೆರ್ ಮತ್ತು ಬಾಗಲ್ಪುರ ಜಿಲ್ಲೆಗಳು ದೇಶದ ಇತರ ಪ್ರಮುಖ ಅಬ್ರಕ ನಿಕ್ಷೇಪವುಳ್ಳ ಭಾಗಗಳು. ಸ್ವಲ್ಪಮಟ್ಟಿಗೆ ಗುಜರಾತ್, ಮಹಾರಾಷ್ಟ್ರ, ಒಡಿಶಾ, ಕರ್ನಾಟಕ, ತಮಿಳುನಾಡು ಮತ್ತು ಛತ್ತೀಸ್‌ಗರ್‌ಗಳಲ್ಲಿಯೂ ಅಬ್ರಕ ಲಭ್ಯವಿದೆ.

ಭಾರತ ಪ್ರಪಂಚದಲ್ಲೇ ಅತಿ ಹೆಚ್ಚು ಅಬ್ರಕ ಉತ್ಪಾದಿಸುವ ಮತ್ತು ರಫ್ತು ಮಾಡುವ ರಾಷ್ಟ್ರ. ಹಲವು ರಾಷ್ಟ್ರಗಳಲ್ಲಿ ಕೃತಕ ಅಬ್ರಕವನ್ನು ಉತ್ಪಾದಿಸಿಕೊಳ್ಳುತ್ತಿರುವುದರಿಂದ ಇತ್ತೀಚೆಗೆ ಭಾರತದ ಅಬ್ರಕದ ರಫ್ತು ಪ್ರಮಾಣವು ಕಡಿಮೆಯಾಗಿದೆ.

© KTBS Not to be published

## ಶಕ್ತಿ ಸಂಪನ್ಮೂಲಗಳು


**ಅರ್ಥ ಮತ್ತು ಮಹತ್ವ :** ವಿದ್ಯುಚ್ಛಕ್ತಿ ಉತ್ಪಾದನೆಗೆ ಅಗತ್ಯವಾಗಿರುವ ಸಂಪನ್ಮೂಲಗಳನ್ನು 'ಶಕ್ತಿ ಸಂಪನ್ಮೂಲಗಳು' ಎಂದು ಕರೆಯಲಾಗಿದೆ.

ಒಂದು ದೇಶದ ಆರ್ಥಿಕಾಭಿವೃದ್ಧಿ ಮತ್ತು ಜನರ ಜೀವನ ಮಟ್ಟದ ಸುಧಾರಣೆಗೆ ಶಕ್ತಿ ಸಂಪನ್ಮೂಲಗಳು ಅತ್ಯಗತ್ಯ. ಕೈಗಾರಿಕೆ, ಕೃಷಿ, ವಾಣಿಜ್ಯೋದ್ಯಮ, ಸಾರಿಗೆ–ಸಂಪರ್ಕ ಮೊದಲಾದವುಗಳ ಪ್ರಗತಿಯಲ್ಲಿ ಶಕ್ತಿ ಸಂಪನ್ಮೂಲಗಳ ಪಾತ್ರ ಮುಖ್ಯವಾದುದು.

ಶಕ್ತಿ ಸಂಪನ್ಮೂಲಗಳನ್ನು ಅವುಗಳ ಸ್ವರೂಪವನ್ನಾಧರಿಸಿ ಸಾಂಪ್ರದಾಯಿಕ ಮತ್ತು ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳೆಂದು ವಿಂಗಡಿಸಬಹುದು. ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳಲ್ಲಿ ಕಲ್ಲಿದ್ದಲು, ಪೆಟ್ರೋಲಿಯಂ, ನೈಸರ್ಗಿಕಾನಿಲ ಇತ್ಯಾದಿ ಸೇರುತ್ತವೆ. ಇವುಗಳಲ್ಲಿ ಬಹಳಷ್ಟು ಮುಗಿದುಹೋಗಬಲ್ಲವುಗಳಾಗಿವೆ. ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳಲ್ಲಿ ಸೌರಶಕ್ತಿ, ಪವನಶಕ್ತಿ, ಉಬ್ಬರವಿಳಿತ ಶಕ್ತಿ, ಭೂಗರ್ಭಶಕ್ತಿ, ಜೈವಿಕ ಅನಿಲ ಮೊದಲಾದವು ಸೇರುತ್ತವೆ. ಭಾರತವು ತನ್ನ ವಿದ್ಯುತ್ ಅಭಾವದ ಸಮಸ್ಯೆ ನಿವಾರಣೆಗೆ ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಬಳಕೆ ಮತ್ತು ಅಭಿವೃದ್ಧಿ ಅಗತ್ಯ.

## ಕಲ್ಲಿದ್ದಲು

ಕಲ್ಲಿದ್ದಲು ಸಸ್ಯಾವಶೇಷವುಳ್ಳ ಇಂಧನ ಖನಿಜ. ಸಾವಿರಾರು ವರ್ಷಗಳ ಹಿಂದೆ ಭೂಗರ್ಭದಲ್ಲಿ ಹುದುಗಿ ಹೋಗಿದ್ದ ಸಸ್ಯಾವಶೇಷವು ಅಧಿಕ ಉಷ್ಣಾಂಶ ಮತ್ತು ಒತ್ತಡಗಳಿಂದ ಕಲ್ಲಿದ್ದಲಾಗಿ ಪರಿವರ್ತನೆಗೊಂಡಿದೆ. ಹೀಗಾಗಿ ಕಲ್ಲಿದ್ದಲಿನಲ್ಲಿ ಹೆಚ್ಚು ಇಂಗಾಲವು ಸಂಯೋಜನೆಯಾಗಿರುತ್ತದೆ.




**ಪ್ರಾಮುಖ್ಯತೆ :** ಕಲ್ಲಿದ್ದಲು ಭಾರತದ ಪ್ರಮುಖ ಶಕ್ತಿ ಸಂಪನ್ಮೂಲವಾಗಿದೆ. ದೇಶದಲ್ಲಿ ಬಳಕೆಯಾಗುವ ಒಟ್ಟು ವಿದ್ಯುಚ್ಛಕ್ತಿಯಲ್ಲಿ ಶೇ. 67 ಭಾಗವು ಕಲ್ಲಿದ್ದಲು ಮೂಲದ್ದು. ಕಲ್ಲಿದ್ದಲಿನಿಂದ ಅನೇಕ ಉಪವಸ್ತುಗಳೂ ದೊರೆಯುತ್ತದೆ. ಉದಾ: ಅಮೋನಿಯ, ಕೋಲ್‌ಟಾರ್, ಕೋಲ್‌ಗ್ಯಾಸ್, ಬೆಂಜಾಲ್, ನ್ಯಾಪ್ತ, ಸಲ್ಫರ್ ಇತ್ಯಾದಿ. ಇವುಗಳನ್ನು ವಿವಿಧ ಕೈಗಾರಿಕೆಗಳ ಕಚ್ಚಾ ವಸ್ತುಗಳಾಗಿ ಬಳಕೆ ಮಾಡಲಾಗುವುದು. ಉದಾ: ಬಣ್ಣ, ಪ್ಲಾಸ್ಟಿಕ್, ಕೃತಕನಾರು, ಕೃತಕ ರಬ್ಬರ್ ಮುಂತಾದವು.

ಭಾರತದಲ್ಲಿ ಕಲ್ಲಿದ್ದಲು ನಿಕ್ಷೇಪವು ಎರಡು ಭೂ ಯುಗಗಳಿಗೆ ಸಂಬಂಧಿಸಿದೆ. ಹೀಗಾಗಿ ಗೊಂಡ್ವಾನ ಮತ್ತು ಟರ್ಷಿಯರಿ ಕಲ್ಲಿದ್ದಲು ನಿಕ್ಷೇಪವೆಂದು ವಿಂಗಡಿಸಲಾಗಿದೆ. ಆದರೆ ಗೊಂಡ್ವಾನ ಕಲ್ಲಿದ್ದಲು ನಿಕ್ಷೇಪವುಳ್ಳ ಪ್ರದೇಶ ವಿಶಾಲವಾದುದು ಹಾಗೂ ಪ್ರಮುಖವಾದುದು.

© KTBS
Not to be published

**ಹಂಚಿಕೆ ಮತ್ತು ಉತ್ಪಾದನೆ :** ಭಾರತದಲ್ಲಿ ಕಲ್ಲಿದ್ದಲು ನಿಕ್ಷೇಪವು ಹೆಚ್ಚಾಗಿ ಕೆಲವು ರಾಜ್ಯಗಳಲ್ಲಿ ಹಂಚಿಕೆಯಾಗಿದೆ. ಉದಾ: ಜಾರ್ಖಂಡ್, ಛತ್ತೀಸ್‌ಗರ್, ಒಡಿಶಾ, ಮಹಾರಾಷ್ಟ್ರ, ಮಧ್ಯಪ್ರದೇಶ, ತೆಲಂಗಾಣ ಮತ್ತು ಪಶ್ಚಿಮಬಂಗಾಳ. ಈ ರಾಜ್ಯಗಳು ಭಾರತದ ಒಟ್ಟು ಕಲ್ಲಿದ್ದಲು ನಿಕ್ಷೇಪದಲ್ಲಿ ಶೇ.96 ಭಾಗವನ್ನು ಹೊಂದಿವೆ. ಅಸ್ಸಾಂ, ಮೇಘಾಲಯ ಮತ್ತು ನಾಗಾಲ್ಯಾಂಡ್‌ಗಳಲ್ಲಿಯೂ ಕಲ್ಲಿದ್ದಲು ನಿಕ್ಷೇಪವು ದೊರೆಯುತ್ತದೆ. ಪ್ರಪಂಚದಲ್ಲಿ ಕಲ್ಲಿದ್ದಲು ಉತ್ಪಾದಿಸುವ ಮುಖ್ಯ ದೇಶಗಳಲ್ಲಿ ಭಾರತವು ಮೂರನೆಯದಾಗಿದೆ.

> ***ಇದು ನಿಮಗೆ ತಿಳಿದಿರಲಿ!***
> ವಿವಿಧ ಉಪಯುಕ್ತತೆಗಳನ್ನಾಧರಿಸಿ ಕಲ್ಲಿದ್ದಲನ್ನು 'ಕಪ್ಪು ಬಂಗಾರ' ಎನ್ನುವರು

## ಪೆಟ್ರೋಲಿಯಂ


ಪೆಟ್ರೋಲಿಯಂ ಪ್ರಮುಖವಾಗಿ ಹೈಡ್ರೋಕಾರ್ಬನ್‌ವುಳ್ಳ ಖನಿಜತೈಲ. ಇದೊಂದು ಅತಿ ಪ್ರಮುಖ ಇಂಧನ ಹಾಗೂ ಹಲವು ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುವ ಮೂಲವೂ ಆಗಿದೆ. ವಾಣಿಜ್ಯ ದೃಷ್ಟಿಯಲ್ಲಿ ಮುಖ್ಯ ಶಕ್ತಿಯ ಮೂಲ ಮತ್ತು ಇದನ್ನು ಹೆಚ್ಚಾಗಿ ಸಾರಿಗೆಯಲ್ಲಿ ಬಳಸಲಾಗುತ್ತದೆ. ಕೃತಕ ರಬ್ಬರ್, ಕೃತಕ ರೇಷ್ಮೆ, ಔಷಧಿ, ರಾಸಾಯನಿಕ ಗೊಬ್ಬರ, ಬಣ್ಣ ತಯಾರಿಕೆ ಮೊದಲಾದ ಕೈಗಾರಿಕೆಗಳಿಗೆ ಬೇಕಾದ ಕಚ್ಚಾಪದಾರ್ಥಗಳನ್ನು ಪೂರೈಸುವುದು.

> **ನಿಮಗೆ ಇದು ತಿಳಿದಿದೆಯೆ!**
>
> * *'Petra'* ಮತ್ತು *'oleum'* ಎಂಬ ಎರಡು ಲ್ಯಾಟಿನ್ ಶಬ್ದಗಳಿಂದ **'petroleum'** ಪದ ರೂಪಿತವಾದದ್ದು. petra ಎಂದರೆ ಕಲ್ಲು' ' *oleum'* ಎಂದರೆ ತೈಲ ಎಂದರ್ಥ. ಹೀಗಾಗಿ ಪೆಟ್ರೋಲಿಯಂನ್ನು **'ಕಲ್ಲೆಣ್ಣೆ'** ಎಂತಲೂ ಕರೆಯಬಹುದು.
>
> * ಬಳಕೆ ಮತ್ತು ಆರ್ಥಿಕ ಮೌಲ್ಯಗಳನ್ನಾಧರಿಸಿ ಪೆಟ್ರೋಲಿಯಂನ್ನು **'ದ್ರವ ಚಿನ್ನ'** ಎಂತಲೂ ಕರೆಯಲಾಗಿದೆ.

**ಪೆಟ್ರೋಲಿಯಂ ಹಂಚಿಕೆ :** ಭಾರತದಲ್ಲಿ ಪೆಟ್ರೋಲಿಯಂ ನಿಕ್ಷೇಪವು ಹೆಚ್ಚಾಗಿ ಬಾಂಬೆ ಹೈ ಹಾಗೂ ಗುಜರಾತ್, ಅಸ್ಸಾಂ, ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹಂಚಿಕೆಯಾಗಿದೆ.

ಬಾಂಬೆ ಹೈ ತೈಲ ಪ್ರದೇಶವು ಮುಂಬಯಿಗೆ ಸಮೀಪಕ್ಕೆ ಅರಬ್ಬಿ ಸಮುದ್ರದಲ್ಲಿದ್ದು, ಇಲ್ಲಿ ಅಪಾರವಾದ ತೈಲ ನಿಕ್ಷೇಪವಿದೆ. ಇದು ಭಾರತದಲ್ಲೇ ಹೆಚ್ಚು ಕಚ್ಚಾ ತೈಲ ಉತ್ಪಾದಿಸುವ ಪ್ರದೇಶ. ಎರಡನೆಯ ಪ್ರಮುಖ ತೈಲ ಉತ್ಪಾದಿಸುವ ಪ್ರದೇಶ ಗುಜರಾತ್‌ನಲ್ಲಿದೆ. ಇದರ ಮುಖ್ಯ ತೈಲ ಪ್ರದೇಶಗಳೆಂದರೆ ಅಂಕಲೇಶ್ವರ, ಕ್ಯಾಂಬೆ, ಕಲೋಲ್, ನೌಗಾಂ ಮತ್ತು ಮಹ್ಸೇನ. ಭಾರತದಲ್ಲಿ ಪೆಟ್ರೋಲಿಯಂ ನಿಕ್ಷೇಪವನ್ನು ಮೊಟ್ಟಮೊದಲಿಗೆ ಅಸ್ಸಾಂನ 'ಮಾಕುಂ' ಎಂಬಲ್ಲಿ ಕಂಡುಹಿಡಿಯಲಾಯಿತು. ಹೀಗಾಗಿ ಆರಂಭದಲ್ಲಿ ಪೆಟ್ರೋಲಿಯಂ ಉತ್ಪಾದನೆಯಲ್ಲಿ ಅಸ್ಸಾಂ ಮೊದಲ ಸ್ಥಾನದಲ್ಲಿತ್ತು. ಇಂದು ಮೂರನೇ ಸ್ಥಾನಕ್ಕೆ ಬಂದಿದೆ. ಇಲ್ಲಿನ ಪ್ರಮುಖ ತೈಲ ಪ್ರದೇಶಗಳು ದಿಗ್ಬಾಯಿ, ನಹರ್ಕಾತಿಯ, ಮೊರಾನ್, ಹುಗ್ರಿಜನ್, ಸಿಬ್ಸಾಗರ್ ಮತ್ತು ರುದ್ರಸಾಗರಗಳಲ್ಲಿವೆ. ದೇಶದ ಇತರ ತೈಲ ಪ್ರದೇಶಗಳು ಗೋದಾವರಿ, ಕೃಷ್ಣ ಮತ್ತು ಕಾವೇರಿ ನದಿಕಣಿವೆ ಮತ್ತು ಮುಖಜ ಭಾಗಗಳಲ್ಲಿ ಕಂಡುಬರುತ್ತವೆ.

ಪೆಟ್ರೋಲಿಯಂ ಉತ್ಪಾದನೆಯಲ್ಲಿ ಭಾರತ ಮಹತ್ವವುಳ್ಳದ್ದಲ್ಲ. ಹೀಗಾಗಿ ತನ್ನ ಅಪಾರ ಬೇಡಿಕೆಯನ್ನು ಪೂರೈಸಿಕೊಳ್ಳಲು ಹೆಚ್ಚಿನ ಪ್ರಮಾಣದಲ್ಲಿ ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳುತ್ತಿದೆ.




## ಜಲವಿದ್ಯುಚ್ಛಕ್ತಿ

ಧುಮುಕುವ ನೀರಿನ ರಭಸದಿಂದ ಉತ್ಪಾದಿಸುವ ವಿದ್ಯುತ್‌ನ್ನು ಜಲ ವಿದ್ಯುಚ್ಛಕ್ತಿ ಎಂದು ಕರೆಯಲಾಗಿದೆ. ಇದು ನವೀಕರಿಸಬಲ್ಲ, ಸುಲಭವಾದ ಬೆಲೆಗೆ ದೊರೆಯುವ ಹಾಗೂ ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳಿಗಿಂತ ಅಧಿಕ ಶಾಖ ಮತ್ತು ಶಕ್ತಿ ನೀಡುವಂತಹದು. ಇದನ್ನು ಬಳಸುವುದರಿಂದ ಯಂತ್ರಗಳು ಸ್ವಚ್ಛವಾಗಿರುತ್ತವೆ ಮತ್ತು ಇದರ ಪ್ರಸರಣವೂ ಸುಲಭ.

ಭಾರತವು ಸಾಕಷ್ಟು ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ನೈಸರ್ಗಿಕಾನಿಲಗಳಂತಹ ಪಳೆಯುಳಿಕೆ ಇಂಧನಗಳನ್ನು ಹೊಂದಿಲ್ಲ. ಹೀಗಾಗಿ ಜಲವಿದ್ಯುಚ್ಛಕ್ತಿ ಉತ್ಪಾದನಾ ಅಭಿವೃದ್ಧಿ ಅತ್ಯಾವಶ್ಯಕ. ಜೊತೆಗೆ ದೇಶದಲ್ಲಿ ಜಲವಿದ್ಯುಚ್ಛಕ್ತಿ ಅಭಿವೃದ್ಧಿಗೆ ಅಗತ್ಯವಾದ ಅಂಶಗಳು ಪೂರಕವಾಗಿವೆ.

© KTBS Not to be published

ಭಾರತದಲ್ಲಿ ಮೊಟ್ಟಮೊದಲಿಗೆ (1897) ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರವನ್ನು ಪಶ್ಚಿಮ ಬಂಗಾಳದ ಡಾರ್ಜಲಿಂಗ್‌ನಲ್ಲಿ ಸ್ಥಾಪಿಸಲಾಗಿತ್ತು. ಆದರೆ ವಾಸ್ತವ ಜಲವಿದ್ಯುತ್ ಉತ್ಪಾದನೆಯು ಕಾವೇರಿ ನದಿಗೆ ಶಿವನಸಮುದ್ರದ ಬಳಿ (1902) ನಿರ್ಮಿಸಿದ ಜಲವಿದ್ಯುದಾಗಾರದಿಂದ ಆರಂಭಗೊಂಡಿತು.

ಭಾರತದ ಪ್ರಮುಖ ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರಗಳು–

**ಕರ್ನಾಟಕ :** ಶಿವನಸಮುದ್ರ, ಶರಾವತಿ, ಲಿಂಗನಮಕ್ಕಿ, ಆಲಮಟ್ಟಿ, ಕಾಳಿ ಮತ್ತು ಭದ್ರ.

**ತಮಿಳುನಾಡು:** ಮೆಟ್ಟೂರು, ಪೈಕಾರ, ಪಾಪನಾಸಂ, ಪೆರಿಯಾರ್, ಮೊಯಾರ್, ಕುಂದ್ಹಾ, ಸುರುಳಿಯಾರ್ ಶೋಲಯಾರ್, ಮತ್ತು ಕೊಡಯಾರ್.

**ಮಹಾರಾಷ್ಟ್ರ:** ಕೊಯ್ನಾ, ಖೋಪೋಲಿ, ಭೋಲ, ಭೀವ್‌ಪುರಿ ಮತ್ತು ಭೀರ ಜಲವಿದ್ಯುತ್ ಕೇಂದ್ರಗಳು.

**ಒಡಿಶಾ :** ಹಿರಾಕುಡ್, ಭೀಮ್‌ಕುಂಡ್, ಬಾಲಿಮೆಲ ಮತ್ತು ರಿಗಾಲಿ.

**ಆಂಧ್ರಪ್ರದೇಶ :** ಶ್ರೀಶೈಲಂ ಮತ್ತು ರಾಮಪಾದಸಾಗರ.

**ತೆಲಂಗಾಣ:** ನಿಜಾಮಸಾಗರ, ನಾಗಾರ್ಜುನ ಸಾಗರ, ಮತ್ತು ಸಿಲೇರು.

> ***ನಿಮಗೆ ತಿಳಿದಿದೆಯೆ!***
>
> ***ಪಳೆಯುಳಿಕೆ ಇಂಧನಗಳು:*** *ಸಸ್ಯ ಮತ್ತು ಪ್ರಾಣಿಗಳ ಅವಶೇಷಗಳು ಪಳೆಯುಳೀಕೀಕರಣದಿಂದ* *fossilized* *ಸೃಷ್ಟಿಯಾದ ಯಾವುದೇ ಇಂಧನವು ಪಳೆಯುಳಿಕೆ ಇಂಧನವಾಗಿರುತ್ತದೆ.*

**ಕೇರಳ:** ಇಡಕ್ಕಿ, ಸಬರ್‌ಗಿರಿ, ಪಲ್ಲಿವಾಸಲ್, ಕಲ್ಲಡ ಮತ್ತು ಪರಾಂಬಿಕುಲಂ.

**ಇತರೆ:** ಗುಜರಾತಿನ ಯುಕೈ, ಕಾಡನ, ಜಾರ್ಖಂಡ್‌ನ ಸುವರ್ಣರೇಖಾ, ಮೈಥಾನ್, ತಿಲೈಯಾ, ಪಂಚತ್‌ಹಿಲ್, ಪಂಜಾಬಿನ ಭಾಕ್ರ–ನಂಗಲ್, ಬಿಹಾರಿನ ಕೋಸಿ ನದಿಕಣಿವೆ, ಮಧ್ಯ ಪ್ರದೇಶದ ಗಾಂಧಿ ಸಾಗರ ಇತ್ಯಾದಿ.

© KTBS Not to be published

## ಪರಮಾಣುಶಕ್ತಿ

ಪರಮಾಣ್ವಕ ಖನಿಜಗಳಿಂದ ತಯಾರಿಸುವ ವಿದ್ಯುಚ್ಛಕ್ತಿಯನ್ನು ಪರಮಾಣುಶಕ್ತಿ ಎನ್ನುವರು. ಭಾರತದಲ್ಲಿ ವಿದ್ಯುಚ್ಛಕ್ತಿಗಾಗಿ ಬೇಡಿಕೆಯು ಹೆಚ್ಚಾಗಿದೆ. ಈ ಬೇಡಿಕೆಯನ್ನು ಪೂರೈಸುವಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿಲ್ಲ. ಹೀಗಾಗಿ ಭಾರತವು ಪರಮಾಣುಶಕ್ತಿಯನ್ನು ಉತ್ಪಾದಿಸುವ ಯೋಜನೆಗಳನ್ನು ಹಮ್ಮಿಕೊಂಡಿದೆ.

ಭಾರತದಲ್ಲಿ ಅಪಾರವಾದ ಪರಮಾಣ್ವಕ ಖನಿಜಗಳಿವೆ. ಉದಾ: ಯುರೇನಿಯಂ ಮತ್ತು ಥೋರಿಯಂ. ಇವು ಪರಮಾಣು ವಿದ್ಯುತ್ ತಯಾರಿಕೆಗೆ ಅಗತ್ಯ. ಜೊತೆಗೆ ಭಾರತದಲ್ಲಿ ಅಗತ್ಯವಾಗಿ ತಂತ್ರಜ್ಞಾನ ಲಭ್ಯವಿದೆ. ಭಾರತದಲ್ಲಿ ಮೊಟ್ಟಮೊದಲ ಪರಮಾಣು ವಿದ್ಯುತ್ ತಯಾರಿಕಾ ಕೇಂದ್ರವನ್ನು ತಾರಾಪುರ ಎಂಬಲ್ಲಿ (1969) ಸ್ಥಾಪಿಸಲಾಯಿತು. ಇಂದು ದೇಶದಲ್ಲಿ ಒಟ್ಟು 7 ಪರಮಾಣು ವಿದ್ಯುತ್ ಕೇಂದ್ರಗಳಿವೆ. ಅವುಗಳೆಂದರೆ – 1) ತಾರಾಪುರ; ಮುಂಬಯಿ ಸಮೀಪ, ಮಹಾರಾಷ್ಟ್ರ. 2) ರಾಣಪ್ರತಾಪಸಾಗರ; ಕೋಟಾದ ಬಳಿ, ರಾಜಸ್ತಾನ. 3) ಕಲ್ಪಾಕಂ; ಚೆನ್ನೈ ಸಮೀಪ, ತಮಿಳುನಾಡು. 4) ನರೋರ, ಉತ್ತರ ಪ್ರದೇಶ. 5) ಕಾಕ್ರಪಾರ, ಗುಜರಾತ್, 6) ಕೈಗ; ಕಾರವಾರದ ಬಳಿ, ಕರ್ನಾಟಕ ಮತ್ತು 7) ಕೂಡಂಕುಳಂ, ತಮಿಳುನಾಡು.

## ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಅವಶ್ಯಕತೆ

ಭಾರತದಲ್ಲಿ ಅಪರಿಮಿತವಾದ ಅಸಂಪ್ರದಾಯಿಕ ಶಕ್ತಿ ಮೂಲಗಳು ದೊರೆಯುತ್ತವೆ. ಅವು ನವೀಕರಿಸಬಲ್ಲ ಮೂಲಗಳು, ಮಾಲಿನ್ಯ ಮುಕ್ತವಾದವು ಮತ್ತು ಪರಿಸರ ಸ್ನೇಹಿಗಳಾಗಿವೆ. ಅವುಗಳನ್ನು ಸುಲಭವಾಗಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಸರಬರಾಜು ಮಾಡಬಹುದು. ಅವುಗಳ ಉತ್ಪಾದನೆಯಿಂದ ದೇಶದ ವಿದ್ಯುತ್ ಅಭಾವವನ್ನು ನೀಗಿಸಬಹುದು. ಭಾರತದಲ್ಲಿ ಇತ್ತೀಚೆಗೆ ವಿದ್ಯುಚ್ಛಕ್ತಿ ಬಳಕೆಯ ದರವು ಹೆಚ್ಚಾಗಿದೆ. ಹೀಗಾಗಿ ತುರ್ತಾಗಿ ಪರ್ಯಾಯ ಶಕ್ತಿ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು ಅವಶ್ಯಕತೆ ಇದೆ.

**ವಿದ್ಯುಚ್ಛಕ್ತಿಯ ಅಭಾವ :** ಇತ್ತೀಚಿನ ದಿನಮಾನಗಳಲ್ಲಿ ಭಾರತವು ಎದುರಿಸುತ್ತಿರುವ ಹಲವು ಸಮಸ್ಯೆಗಳಲ್ಲಿ ವಿದ್ಯುತ್ ಅಭಾವವೂ ಒಂದಾಗಿದೆ. ಈ ಮೊದಲಿಗೆ ಪ್ರಸ್ತಾಪಿಸಿದಂತೆ ಬೇಡಿಕೆಗೆ ತಕ್ಕಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿಲ್ಲ. ಹೀಗಾಗಿ ವಿದ್ಯುತ್ ಅಭಾವ ಎದುರಾಗಿದೆ. ಇದರಿಂದ ದೇಶದ ಕೈಗಾರಿಕೆ, ಕೃಷಿ, ಸಾರಿಗೆ, ವ್ಯಾಪಾರ ಮೊದಲಾದವುಗಳ ಮೇಲೆ ಪ್ರತಿಕೂಲ ಪರಿಣಾಮವೇರ್ಪಡುತ್ತದೆ.

**ಕಾರಣಗಳು :** ಭಾರತದ ವಿದ್ಯುತ್ ಅಭಾವಕ್ಕೆ ಪ್ರಮುಖ ಕಾರಣಗಳೆಂದರೆ– i) ದೇಶದಲ್ಲಿ ಕಡಿಮೆ ಪೆಟ್ರೋಲಿಯಂ ನಿಕ್ಷೇಪದ ಲಭ್ಯತೆ ಮತ್ತು ತೈಲದ ಕೊರತೆ. ii) ಕಡಿಮೆ ದರ್ಜೆಯ ಕಲ್ಲಿದ್ದಲು. iii) ಅಕಾಲಿಕ ಮಳೆ ಮತ್ತು ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ನೀರಿನ ಕೊರತೆ. iv) ಪ್ರಸರಣ ಪ್ರಕ್ರಿಯೆಯಲ್ಲಾಗುವ ವಿದ್ಯುತ್‌ನ ನಷ್ಟ ಮತ್ತು v) ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಕಡಿಮೆ ಬಳಕೆ.

**ಪರಿಹಾರಗಳು :** ವಿದ್ಯುಚ್ಛಕ್ತಿ ಅಭಾವಕ್ಕೆ ಪರಿಹಾರಗಳೆಂದರೆ: i) ದೇಶದಲ್ಲಿ ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳ ಉತ್ಪಾದನೆಯನ್ನು ಹೆಚ್ಚಿಸುವುದು. ii) ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳಿಗೆ ಬದಲಾಗಿ ಇತರೆ ಪರ್ಯಾಯ ಶಕ್ತಿ ಸಂಪನ್ಮೂಲಗಳನ್ನು ಬಳಸಲು ಕ್ರಮಕೈಗೊಳ್ಳುವುದು. iii) ಹೆಚ್ಚೆಚ್ಚು ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ಪ್ರಾಮುಖ್ಯತೆ ನೀಡುವುದು. iv) ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಕೆ ಮಾಡುವುದು.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಭಾರತದ ಅತ್ಯಂತ ಪ್ರಮುಖವಾದ ಮಿಶ್ರಲೋಹ ________ .

2. ಅಲ್ಯೂಮಿನಿಯಂನ ಪ್ರಮುಖ ಕಚ್ಚಾ ಪದಾರ್ಥ ________ .

3. ಭಾರತದ ಅತ್ಯಂತ ಪ್ರಮುಖವಾದ ಅಲೋಹ ಖನಿಜ ________ ಆಗಿರುತ್ತದೆ.

4. ಸಸ್ಯಾವಶೇಷ ಇಂಧನ ________ ಆಗಿರುತ್ತದೆ.

5. ಶಿವನಸಮುದ್ರ ಜಲವಿದ್ಯುತ್ ಕೇಂದ್ರವು ________ ರಾಜ್ಯದಲ್ಲಿದೆ.

**II. ಗುಂಪುಗಳಲ್ಲಿ ಚರ್ಚಿಸಿ ಕೆಳಕಂಡವುಗಳಿಗೆ ಉತ್ತರಿಸಿ**

1. ಖನಿಜ ಮತ್ತು ಗಣಿಗಾರಿಕೆಗಳಿಗೆ ವ್ಯಾಖ್ಯೆ ನೀಡಿ.
2. ಮ್ಯಾಂಗನೀಸ್ ಅದಿರಿನ ಪ್ರಮುಖ ಉಪಯೋಗಗಳು ಯಾವುವು?
3. ಭಾರತದಲ್ಲಿ ಬಾಕ್ಸೈಟ್ ಉತ್ಪಾದಿಸುವ ಪ್ರಮುಖ ರಾಜ್ಯಗಳನ್ನು ಹೆಸರಿಸಿ.
4. ಶಕ್ತಿ ಸಂಪನ್ಮೂಲಗಳ ಅರ್ಥ ಮತ್ತು ಭಾರತದಲ್ಲಿ ಅವುಗಳ ಪ್ರಾಮುಖ್ಯತೆ ಕುರಿತು ವಿವರಿಸಿ.
5. ಭಾರತದಲ್ಲಿ ಪೆಟ್ರೋಲಿಯಂ ಹಂಚಿಕೆಯನ್ನು ಕುರಿತು ವಿವರಿಸಿ.
6. ಭಾರತದ ಪರಮಾಣು ವಿದ್ಯುತ್ ತಯಾರಿಕಾ ಕೇಂದ್ರಗಳನ್ನು ಹೆಸರಿಸಿ.
7. ತಮಿಳುನಾಡಿನ ಪ್ರಮುಖ ಜಲವಿದ್ಯುತ್ ಕೇಂದ್ರಗಳನ್ನು ತಿಳಿಸಿ.

**III. ಚಟುವಟಿಕೆಗಳು :**

1. ಭಾರತದ ರೇಖಾನಕ್ಷೆಯನ್ನು ಬರೆದು ಅದರಲ್ಲಿ ಪೆಟ್ರೋಲಿಯಂ ಮತ್ತು ಪರಮಾಣು ವಿದ್ಯುತ್ ಉತ್ಪಾದನಾ ಸ್ಥಳಗಳನ್ನು ಗುರುತಿಸಿ ಮತ್ತು ಹೆಸರಿಸಿ.
2. ಭಾರತದ ರೇಖಾ ನಕ್ಷೆಯನ್ನು ಬರೆದು ಅದರಲ್ಲಿ ಪ್ರಮುಖ ಜಲವಿದ್ಯುತ್ ಕೇಂದ್ರಗಳನ್ನು ಗುರುತಿಸಿ.

**IV. ಯೋಜನಾ ಕಾರ್ಯ :**

1. ಭಾರತದಲ್ಲಿ ದೊರೆಯಬಲ್ಲ ಖನಿಜಗಳ ನಮೂನೆ (ಸ್ಯಾಂಪಲ್)ಯನ್ನು ಸಂಗ್ರಹಿಸಿ ಮತ್ತು ಅವುಗಳ ಬಗ್ಗೆ ಟಿಪ್ಪಣಿ ಬರೆಯಿರಿ.

* * * *

© KTBS Not to be published

## ಅಧ್ಯಾಯ–9

# ಭಾರತದ ಸಾರಿಗೆ ಮತ್ತು ಸಂಪರ್ಕ

W9J7J7

**ಈ ಅಧ್ಯಾಯದಲ್ಲಿ ಈ ಕೆಳಕಂಡ ಅಂಶಗಳನ್ನು ತಿಳಿಯುತ್ತೇವೆ.**

- *ಸಾರಿಗೆಯ ಅರ್ಥ ಮತ್ತು ಪ್ರಾಮುಖ್ಯತೆ.*
- *ಭಾರತದಲ್ಲಿ ಸಾರಿಗೆ ವಿಧಾನಗಳು:*
  - *1) ಭೂಸಾರಿಗೆ ಮತ್ತು ವಿಧಗಳು*
  - *2) ಜಲಸಾರಿಗೆ ಮತ್ತು ವಿಧಗಳು*
  - *3) ವಾಯುಸಾರಿಗೆ ಮತ್ತು ವಿಧಗಳು*
- *ಸಂಪರ್ಕ ಮಾಧ್ಯಮ : ಅರ್ಥ, ಪ್ರಾಮುಖ್ಯತೆ ಮತ್ತು ವಿಧಗಳು.*

### ಸಾರಿಗೆಯ ಅರ್ಥ ಮತ್ತು ಪ್ರಾಮುಖ್ಯತೆ

**ಅರ್ಥ:** ಸರಕು, ಸೇವೆ ಮತ್ತು ಪ್ರಯಾಣಿಕರನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವುದನ್ನು 'ಸಾರಿಗೆ' ಎನ್ನುವರು. ಇದು ಸ್ಥಳ ಮತ್ತು ಕಾಲದ ಉಪಯುಕ್ತತೆಯನ್ನು ಪೂರೈಸುತ್ತದೆ. ಉತ್ಪಾದನೆ, ವಿತರಣೆ, ವಿನಿಮಯ ಹಾಗೂ ಎಲ್ಲಾ ಇತರೆ ಸಂಬಂಧಪಟ್ಟ ಕಾರ್ಯ ನಿರ್ವಹಣೆಗೆ ಸಂಪರ್ಕ ಕಲ್ಪಿಸುತ್ತದೆ.

**ಪ್ರಾಮುಖ್ಯತೆ:** ಪ್ರಥಮ, ದ್ವಿತೀಯ ಮತ್ತು ತೃತೀಯ ಕ್ಷೇತ್ರದ ಮಾನವನ ಚಟುವಟಿಕೆಗಳ ಎಲ್ಲಾ ಪರಿಸ್ಥಿತಿಗಳ ಅಭಿವೃದ್ಧಿಯಲ್ಲಿ ಸಾರಿಗೆ ವ್ಯವಸ್ಥೆ ಪ್ರಮುಖ ಪಾತ್ರವಹಿಸುತ್ತದೆ. ಹೀಗಾಗಿ "ರಾಷ್ಟ್ರೀಯ ವ್ಯವಸ್ಥೆಯೊಂದರಲ್ಲಿ ಕೃಷಿ ಮತ್ತು ಕೈಗಾರಿಕೆಗಳು ದೇಹ ಮತ್ತು ಅಸ್ಥಿಗಳಾದರೆ ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳ ಜಾಲವು ರಕ್ತನಾಳಗಳಿದ್ದಂತೆ" ಎಂಬ ನಾಣ್ಣುಡಿಯಿದೆ.

ಸಮರ್ಥನೀಯ ಮತ್ತು ಸುಲಭ ದರದ ಸಾರಿಗೆ ಸೌಲಭ್ಯವು ಸಂಪನ್ಮೂಲಗಳು ಮತ್ತು ಕೃಷಿಯ ಅಭಿವೃದ್ಧಿಗೆ ನೆರವಾಗುತ್ತದೆ. ಇದು ಕೈಗಾರಿಕಾ ಪ್ರಗತಿಗೆ ಉತ್ತೇಜನ, ಮಾರುಕಟ್ಟೆಯ ವಿಸ್ತರಣೆ, ದೇಶೀಯ ಮತ್ತು ವಿದೇಶೀ ವ್ಯಾಪಾರದ ವೃದ್ಧಿ, ಉದ್ಯೋಗ ಸೃಷ್ಟಿ, ಜನರ ಆದಾಯ ಮತ್ತು ಜೀವನ ಮಟ್ಟದ ಸುಧಾರಣೆ, ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ಮತ್ತು ರಕ್ಷಣಾ ಪಡೆಗೂ ನೆರವಾಗುತ್ತದೆ.

© KTBS
Not to be published

### ಸಾರಿಗೆ ವಿಧಗಳು

ಭಾರತದ ವಿವಿಧ ಸಾರಿಗೆ ಮಾಧ್ಯಮಗಳನ್ನು ತಿಳಿಯಲು ಈ ಕೆಳಕಂಡ ಚಾರ್ಟು ನೆರವಾಗುತ್ತದೆ.

**ಸಾರಿಗೆ**

| **ಭೂಸಾರಿಗೆ** | **ಜಲಸಾರಿಗೆ** | **ವಾಯುಸಾರಿಗೆ** |
|---|---|---|
| i) ರಸ್ತೆ ಸಾರಿಗೆ | i) ಒಳನಾಡಿನ ಜಲ ಸಾರಿಗೆ | i) ರಾಷ್ಟ್ರೀಯ ವಾಯು ಸಾರಿಗೆ |
| ii) ರೈಲು ಸಾರಿಗೆ | ii) ಸಾಗರ ಜಲ ಸಾರಿಗೆ | ii) ಅಂತಾರಾಷ್ಟ್ರೀಯ ವಾಯು ಸಾರಿಗೆ |
| iii) ಕೊಳವೆ ಮಾರ್ಗಗಳು | | |

## 1. ಭೂ ಸಾರಿಗೆ

**i) ರಸ್ತೆ ಸಾರಿಗೆ :** ರಸ್ತೆಗಳು ಬಹುಪ್ರಾಚೀನ ಹಾಗೂ ಸಾರ್ವತ್ರಿಕವಾದ ಸಾರಿಗೆ ಮಾಧ್ಯಮ. ಅವು ಒಂದು ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುವವು. ಭಾರತವು ಹಳ್ಳಿ ಪ್ರಧಾನ ದೇಶ ಹಾಗೂ ಕೃಷಿ ಪ್ರಧಾನ ರಾಷ್ಟ್ರ. ದೇಶದ ಕೃಷಿ ಮತ್ತು ಗ್ರಾಮೀಣ ಕೈಗಾರಿಕೆಗಳ ಪ್ರಗತಿಗಾಗಿ ರಸ್ತೆಗಳು ಅತ್ಯಾವಶ್ಯಕ. ಏಕೆಂದರೆ ಮೂಲೆ ಮೂಲೆಗಳಲ್ಲಿರುವ ಹಳ್ಳಿಗಳನ್ನು ಸಂಪರ್ಕಿಸಲು ರಸ್ತೆಗಳು ಬಹಳ ಸೂಕ್ತವಾದವು.

ರಸ್ತೆಗಳನ್ನು ಅರಣ್ಯ ಮತ್ತು ಗುಡ್ಡಗಾಡುಗಳಲ್ಲಿಯೂ ನಿರ್ಮಿಸಬಹುದು. ಅವು ಬಹುದೂರದ ಅಥವಾ ಎಲ್ಲೋ ಇರುವ ಸ್ಥಳಗಳನ್ನು ಪಟ್ಟಣ ಮತ್ತು ನಗರಗಳೊಂದಿಗೆ ಸಂಪರ್ಕ ಕಲ್ಪಿಸುತ್ತವೆ. ಮನೆಮನೆಗೆ ಸೇವೆ ಕಲ್ಪಿಸುತ್ತವೆ. ರೈಲು ಸಂಚಾರ, ಬಂದರು ಮತ್ತು ವಿಮಾನ ನಿಲ್ದಾಣಗಳಿಗೆ ಸಂಪರ್ಕ ಕಲ್ಪಿಸುತ್ತವೆ. ಅವು ಪ್ರವಾಸೋದ್ಯಮ, ವ್ಯಾಪಾರ ಮತ್ತು ವಾಣಿಜ್ಯ ಹಾಗೂ ಕೈಗಾರಿಕಾಭಿವೃದ್ಧಿಗೆ ಹೆಚ್ಚು ನೆರವಾಗುತ್ತವೆ. ಉದ್ಯೋಗಾವಕಾಶ ಕಲ್ಪಿಸುತ್ತವೆ. ರಕ್ಷಣಾ ಇಲಾಖೆಯಲ್ಲಿ, ಅದರಲ್ಲೂ ಗಡಿಪ್ರದೇಶಗಳಲ್ಲಿ ರಸ್ತೆಗಳು ಹೆಚ್ಚು ಉಪಯುಕ್ತ.

**ರಸ್ತೆಗಳ ಪ್ರಕಾರಗಳು**

1. ರಸ್ತೆಗಳನ್ನು ನಿರ್ಮಾಣದ ವಿಧವನ್ನಾಧರಿಸಿ ಎರಡು ವಿಧಗಳಾಗಿ ವಿಂಗಡಿಸಬಹುದು. ಅವುಗಳೆಂದರೆ:

i) ಪಕ್ಕಾ ರಸ್ತೆಗಳು: ಇವು ಸಿಮೆಂಟ್ ಕಾಂಕ್ರೀಟ್ ಅಥವಾ ಡಾಂಬರಿನಿಂದ ನಿರ್ಮಿಸಲ್ಪಟ್ಟವು.

ii) ಕಚ್ಚಾ ರಸ್ತೆಗಳು: ಇವು ಜಲ್ಲಿ ಮತ್ತು ಮಣ್ಣುಗಳಿಂದ ನಿರ್ಮಿಸಿದ ರಸ್ತೆಗಳಾಗಿದ್ದು, ಅವು ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿವೆ. ಇವುಗಳನ್ನು ಸುಧಾರಣೆ ಮಾಡಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ದಿಶೆಯಲ್ಲಿ ಪ್ರಧಾನಮಂತ್ರಿಗಳ 'ಗ್ರಾಮಸಡಕ್ ಯೋಜನೆ'ಯನ್ನು ಹಮ್ಮಿಕೊಳ್ಳಲಾಗಿದೆ.

2. ನಿರ್ಮಾಣ ಮತ್ತು ನಿರ್ವಹಣೆಗಳನ್ನು ಆಧರಿಸಿ ರಸ್ತೆಗಳನ್ನು ಕೆಳಕಂಡಂತೆ ಐದು ಪ್ರಕಾರಗಳಾಗಿ ವಿಂಗಡಿಸಲಾಗಿದೆ.

i) ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳು
ii) ರಾಷ್ಟ್ರೀಯ ಹೆದ್ದಾರಿಗಳು
iii) ರಾಜ್ಯ ಹೆದ್ದಾರಿಗಳು
iv) ಜಿಲ್ಲಾ ರಸ್ತೆಗಳು
v) ಗ್ರಾಮೀಣ ರಸ್ತೆಗಳು


**ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳು :** ಇದೊಂದು ನಾಲ್ಕರಿಂದ ಆರು ಪಥಗಳ ಉತ್ತಮ ರಸ್ತೆಗಳ ರಚನಾ ಯೋಜನೆ.ಇದು 1999ರಲ್ಲಿ ಆರಂಭವಾಯಿತು. ಈ ಹೆದ್ದಾರಿ ಜಾಲವು ದೇಶದ ಪ್ರಮುಖ ನಗರ,ಸಾಂಸ್ಕೃತಿಕ ಮತ್ತು ಕೈಗಾರಿಕಾ ಕೇಂದ್ರಗಳನ್ನು ಸಂಪರ್ಕಿಸುತ್ತದೆ. ಇದು ದೆಹಲಿ–ಜೈಪುರ–ಅಹ್ಮದಾಬಾದ್–ಸೂರತ್–ಮುಂಬಯಿ–ಪುಣೆ–ಬೆಂಗಳೂರು–ಚೆನ್ನೈ–ವಿಶಾಖಪಟ್ಟಣ–ಭುವನೇಶ್ವರ–ಕೊಲ್ಕತ–ಅಲಹಾಬಾದ್–ಕಾನ್ಪುರ–ದೆಹಲಿಗಳೊಂದಿಗೆ ಸಂಪರ್ಕ ಕಲ್ಪಿಸುವುದು.

ಸೂಪರ್ ಹೆದ್ದಾರಿಯನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ: ಎ) ಉತ್ತರ–ದಕ್ಷಿಣ ಕಾರಿಡಾರ್:– ಇದು ಶ್ರೀನಗರದಿಂದ ಕನ್ಯಾಕುಮಾರಿಯವರೆಗೆ ವಿಸ್ತರಿಸಿದೆ. ಬಿ) ಪೂರ್ವ–ಪಶ್ಚಿಮ ಕಾರಿಡಾರ್:– ಇದು ಅಸ್ಸಾಂನ ಸಿಲ್ಚಾರ್‌ನಿಂದ ಗುಜರಾತ್‌ನ ಪೋರ್‌ಬಂದರಿನವರೆಗೆ ಹಬ್ಬಿದೆ. ಇವು ಅನೇಕ ಪ್ರಮುಖ ನಗರ, ಕೈಗಾರಿಕಾ ಕೇಂದ್ರಗಳು ಮತ್ತು ಬಂದರುಗಳನ್ನು ಸಂಪರ್ಕಿಸುತ್ತವೆ.

ಈ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣಾ ಕಾರ್ಯವು "ಕೇಂದ್ರ ಲೋಕೋಪಯೋಗಿ ಇಲಾಖೆ ಪ್ರಾಧಿಕಾರ" (CPWD)ಕ್ಕೆ ಸೇರಿರುತ್ತದೆ.

© KTBS Not to be republished

**ii) ರಾಷ್ಟ್ರೀಯ ಹೆದ್ದಾರಿಗಳು:** ಈ ಪ್ರಮುಖ ರಸ್ತೆಗಳು ರಾಜ್ಯಗಳ ರಾಜಧಾನಿಯಿಂದ ಪ್ರಮುಖ ಬಂದರು, ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಮುಖ್ಯ ನಗರ ಮತ್ತು ಪಟ್ಟಣಗಳೊಂದಿಗೆ ಸಂಪರ್ಕ ಕಲ್ಪಿಸುತ್ತವೆ. ಇವುಗಳ ನಿರ್ಮಾಣ ಮತ್ತು ನಿರ್ವಹಣೆಯು "ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ" (NHAI)ಕ್ಕೆ ಸಂಬಂಧಿಸಿದೆ.




© KTBS
Not to be published

**iii) ರಾಜ್ಯ ಹೆದ್ದಾರಿಗಳು :** ಇವು ರಾಜ್ಯ ರಾಜಧಾನಿಗಳೊಂದಿಗೆ ಜಿಲ್ಲಾಕೇಂದ್ರ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಪರ್ಕ ಕಲ್ಪಿಸುವವು. ಇವುಗಳ ನಿರ್ಮಾಣ ಮತ್ತು ನಿರ್ವಹಣೆಯು ರಾಜ್ಯದ ಲೋಕೋಪಯೋಗಿ ಇಲಾಖೆ (PWD)ಗೆ ಸೇರಿದೆ.

**iv) ಜಿಲ್ಲಾ ರಸ್ತೆಗಳು :** ಇವುಗಳ ನಿರ್ವಹಣೆಯು ಜಿಲ್ಲಾ ಪಂಚಾಯತ್‌ಗೆ ಸೇರಿರುತ್ತದೆ. ಇವು ತಾಲ್ಲೂಕು ಕೇಂದ್ರಗಳನ್ನು ರಾಜ್ಯ ಹೆದ್ದಾರಿ, ರೈಲು ಸಾರಿಗೆ ಮೊದಲಾದುವುಗಳೊಂದಿಗೆ ಸಂಪರ್ಕಿಸುತ್ತವೆ.

**v) ಗ್ರಾಮೀಣ ರಸ್ತೆಗಳು :** ಇವು ಪ್ರತಿ ಹಳ್ಳಿಗಳನ್ನು ಪರಸ್ಪರ ಸಂಪರ್ಕಿಸುವುದಲ್ಲದೆ, ಪಟ್ಟಣ ಮತ್ತು ಮಾರುಕಟ್ಟೆ ಕೇಂದ್ರಗಳೊಂದಿಗೆ ಸಂಪರ್ಕ ಕಲ್ಪಿಸುವವು. ಇವುಗಳಲ್ಲಿ ಬಹಳಷ್ಟು ಕಚ್ಚಾ ರಸ್ತೆಗಳಾಗಿದ್ದು ಮಳೆಗಾಲದಲ್ಲಿ ಸಂಚಾರ ಕಷ್ಟ. ಇವುಗಳನ್ನು ಪಕ್ಕಾ ರಸ್ತೆಗಳಾಗಿ ಪರಿವರ್ತಿಸುವ ಪ್ರಯತ್ನ ಸಾಗಿದೆ.

**ನಿಮಗೆ ತಿಳಿದಿದೆಯೆ!**

* ನಂ.7, ರಾಷ್ಟ್ರೀಯ ಹೆದ್ದಾರಿಯು ಭಾರತದಲ್ಲೇ ಅತಿ ಉದ್ದವಾದುದು.
* ಮನಾಲಿ – ಲೆಹ್ ರಸ್ತೆಯು ಪ್ರಪಂಚದಲ್ಲೇ ಅತಿ ಎತ್ತರದಲ್ಲಿರುವ ರಸ್ತೆ.

**ಗಡಿ ರಸ್ತೆಗಳು :** ದೇಶದ ಗಡಿಪ್ರದೇಶದಲ್ಲಿ ರಕ್ಷಣಾಪಡೆಯ ಬಳಕೆಗಾಗಿಯೇ ನಿರ್ಮಿಸಿದ ರಸ್ತೆಗಳಿಗೆ 'ಗಡಿ ರಸ್ತೆಗಳು' ಎನ್ನುವರು. ಇವು ಪಾಕಿಸ್ತಾನ, ನೇಪಾಳ, ಭೂತಾನ, ಬಾಂಗ್ಲಾದೇಶ ಮತ್ತು ಮ್ಯೆಯನ್ಮಾರ್‌ಗಳಿಗೆ ಹೊಂದಿಕೊಂಡ ಭಾರತದ ಗಡಿ ಉದ್ದಕ್ಕೂ ಕಂಡುಬರುತ್ತವೆ. ಇವುಗಳ ನಿರ್ಮಾಣ ಮತ್ತು ನಿರ್ವಹಣೆಯು 'ಗಡಿ ರಸ್ತೆ ಅಭಿವೃದ್ಧಿ ಪ್ರಾಧಿಕಾರ'ಕ್ಕೆ ಸೇರಿರುತ್ತದೆ.

**ii. ರೈಲು ಸಾರಿಗೆ :** ರೈಲು ಮಾರ್ಗಗಳು ಭಾರತದ ಮತ್ತೊಂದು ಪ್ರಮುಖ ಭೂಸಾರಿಗೆ ಮಾಧ್ಯಮ. ಅವು ಭಾರವಾದ ಸರಕು ಮತ್ತು ಅಧಿಕ ಸಂಖ್ಯೆಯ ಪ್ರಯಾಣಿಕರನ್ನು ದೂರದ ಸ್ಥಳಗಳಿಗೆ ಸಾಗಿಸಲು ಹೆಚ್ಚು ಉಪಯುಕ್ತವಾದವು. ಅವು ಕೃಷಿ, ಕೈಗಾರಿಕೆ ಮತ್ತು ಭಾರತದ ಆರ್ಥಿಕತೆಯ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಅಲ್ಲದೆ ದೇಶದ ವ್ಯಾಪಾರ ಮತ್ತು ಪ್ರವಾಸೋದ್ಯಮದ ಬೆಳವಣಿಗೆಗೂ ನೆರವಾಗುವುವು.

ಭಾರತದಲ್ಲಿ ರೈಲು ಸಾರಿಗೆ ನಿರ್ಮಾಣವು ಬ್ರಿಟಿಷರ ಕಾಲದಲ್ಲಿ ಆರಂಭಗೊಂಡಿತು. ಅಂದು ಕ್ಷಾಮ ಪೀಡಿತ ಭಾಗಗಳಿಗೆ ಆಹಾರ ಧಾನ್ಯ ಮತ್ತು ಮೇವುಗಳನ್ನು ಮತ್ತು ಸೈನ್ಯವನ್ನು ಸ್ಥಳದಿಂದ ಸ್ಥಳಕ್ಕೆ ಒಯ್ಯುವುದು ರೈಲು ಮಾರ್ಗಗಳ ನಿರ್ಮಾಣದ ಉದ್ದೇಶವಾಗಿತ್ತು. ಭಾರತದ ಪ್ರಥಮ ರೈಲು ಮಾರ್ಗವು 1853ರಲ್ಲಿ ಬಾಂಬೆ (ಮುಂಬಯಿ) ಮತ್ತು ಥಾಣೆಗಳ ನಡುವೆ ನಿರ್ಮಾಣಗೊಂಡಿತು. ತರುವಾಯ ಕೊಲ್ಕತ–ರಾಣಿಗಂಜ್ (1854) ಮದ್ರಾಸ್ (ಚೆನ್ನೈ)–ಅರ್ಕೊನಾಮ್ (1864) ರೈಲು ಮಾರ್ಗಗಳು ನಿರ್ಮಾಣಗೊಂಡವು. ಕ್ರಮೇಣ ದೇಶದ ಇತರೆ ಭಾಗಗಳಲ್ಲಿಯೂ ರೈಲು ಮಾರ್ಗಗಳು ನಿರ್ಮಾಣಗೊಂಡವು.

ರೈಲು ಸಾರಿಗೆಯು ಭಾರತದ ಅತಿ ದೊಡ್ಡ ಸಾರ್ವಜನಿಕ ಉದ್ದಿಮೆ. ಇಂದು ದೇಶದಲ್ಲಿ 64,015 ಕಿ.ಮೀ. ಉದ್ದದ ರೈಲು ಮಾರ್ಗಗಳಿದ್ದು ಸುಮಾರು 7031 ರೈಲು ನಿಲ್ದಾಣಗಳಿವೆ. ಸಮರ್ಥನೀಯ ಆಡಳಿತ ವ್ಯವಸ್ಥೆಗಾಗಿ ಭಾರತೀಯ ರೈಲ್ವೆಯನ್ನು 17 ವಲಯಗಳನ್ನಾಗಿ ವಿಂಗಡಿಸಲಾಗಿದೆ. ಸುರಕ್ಷಿತ ಮತ್ತು ಸುಖಕರವಾದ ರೈಲು ಪ್ರಯಾಣಕ್ಕಾಗಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ.

© KTBS Not to be published

**iii. ಕೊಳವೆ ಮಾರ್ಗಗಳು :** ಇದು ಹೊಸ ಭೂಸಾರಿಗೆ ವಿಧಾನ. ಕೊಳವೆ ಮಾರ್ಗಗಳನ್ನು ನೆಲದೊಳಗೆ ಹಾಸಲಾಗಿರುತ್ತದೆ. ವಿಶೇಷವಾಗಿ ಕಚ್ಚಾ ತೈಲವನ್ನು ತೈಲ ಶುದ್ಧೀಕರಣ ಕೇಂದ್ರಗಳಿಗೆ, ನೈಸರ್ಗಿಕಾನಿಲ ಹಾಗೂ ಕೆಸರು ರೂಪದಲ್ಲಿ ಖನಿಜಗಳನ್ನು ಸಾಗಿಸಲು ಕೊಳವೆ ಮಾರ್ಗಗಳನ್ನು ಬಳಸಲಾಗುವುದು. ಭಾರತದ ಒಟ್ಟು 35,676 ಕಿ.ಮೀ. ಉದ್ದದ ಕೊಳವೆ ಮಾರ್ಗಗಳಿವೆ.

> **ನಿಮಗೆ ತಿಳಿದಿದೆಯೆ!**
>
> ಹಜಿರಾ–ಬಿಜಯಪುರ–ಜಗದೀಶಪುರ (HBJ) ಅನಿಲಕೊಳವೆ ಮಾರ್ಗವು ಭಾರತದಲ್ಲೇ ಉದ್ದವಾದುದು (2300ಕಿ.ಮೀ.).


**2. ಜಲಸಾರಿಗೆ**

ಪುರಾತನ ಕಾಲದಲ್ಲಿ ಪ್ರಪಂಚದ ಪ್ರಮುಖ ಸಮುದ್ರಯಾನ ರೂಢಿಸಿಕೊಂಡಿದ್ದ ದೇಶಗಳಲ್ಲಿ ಭಾರತವೂ ಒಂದಾಗಿತ್ತು. ಜಲಸಂಚಾರವು ಹಡಗು ಮತ್ತು ದೋಣಿಗಳಿಂದ ನೌಕಾಯಾನ ಸೌಲಭ್ಯ ಕಲ್ಪಿಸುತ್ತದೆ. ಜಲಮಾರ್ಗಗಳನ್ನು ಎರಡು ವಿಧಗಳಾಗಿ ವಿಂಗಡಿಸಬಹುದು: i) ಒಳನಾಡಿನ ಜಲಸಾರಿಗೆ ಮತ್ತು ii) ಸಾಗರ ಜಲಸಾರಿಗೆ.

**i) ಒಳನಾಡಿನ ಜಲಸಾರಿಗೆ :** ಒಳನಾಡಿನ ಜಲಸಂಚಾರವು ನದಿ, ಸರೋವರ, ಹಿನ್ನೀರು ಮತ್ತು ಕಾಲುವೆಗಳ ಮೂಲಕ ಸಾಗುತ್ತದೆ. ಹಿಂದಿನ ಕಾಲದಲ್ಲಿ ಒಳನಾಡಿನ ಜಲ ಸಾರಿಗೆಯು ಭಾರತದ ಸಾರಿಗೆ ಮಾಧ್ಯಮದಲ್ಲಿ ಪ್ರಾಮುಖ್ಯತೆ ಹೊಂದಿತ್ತು. ಇಂದು ರಸ್ತೆ ಮತ್ತು ರೈಲುಸಾರಿಗೆಗಳ ಪ್ರಗತಿಯಿಂದಾಗಿ ಅದರ ಮಹತ್ವವು ಕಡಿಮೆಯಾಗಿದೆ. ಭಾರತದಲ್ಲಿ ಒಳನಾಡಿನ ಜಲಸಾರಿಗೆಯು ಮುಖ್ಯವಾಗಿ ಕೆಲವು ಸರಕು ಮತ್ತು ಪ್ರಯಾಣಿಕರ ಸಾಗಾಣಿಕೆಗೆ ಸಂಬಂಧಿಸಿದೆ. ಅದು ಹೆಚ್ಚಾಗಿ ಉತ್ತರ ಭಾರತದ ಗಂಗ, ಬ್ರಹ್ಮಪುತ್ರ ಮತ್ತು ಅವುಗಳ ಉಪನದಿಗಳ ಮೂಲಕ ಸಾಗುವುದು. ಒಳನಾಡಿನ ಜಲಸಾರಿಗೆಯು ದಕ್ಷಿಣ ಭಾರತದ ನದಿಗಳ ಮುಖಜ ಭಾಗಕ್ಕೆ ಸೀಮಿತಗೊಂಡಿದೆ.

**ii) ಸಾಗರ ಜಲಸಾರಿಗೆ :** ಸಮುದ್ರ ಮತ್ತು ಸಾಗರಗಳ ಮೂಲಕ ಏರ್ಪಡುವ ನೌಕಾಯಾನವೇ ಸಾಗರ ಜಲಸಾರಿಗೆ. ಭಾರತದ ಉದ್ದವಾದ ಸಮುದ್ರ ತೀರ ಮತ್ತು ಕೆಲವು ನೈಸರ್ಗಿಕ ಬಂದರುಗಳ ಜೊತೆಗೆ ದೇಶವು ಪೂರ್ವಾರ್ಧಗೋಳದ ಮಧ್ಯದಲ್ಲಿ ನೆಲೆಸಿದೆ. ದೇಶದ ವಿದೇಶೀ ವ್ಯಾಪಾರದಲ್ಲಿ ಶೇ. 85 ಭಾಗವು ಸಾಗರ ಮಾರ್ಗದ ಮೂಲಕ ಸಾಗುತ್ತದೆ. ಈ ಎಲ್ಲಾ ಅಂಶಗಳು ದೇಶದ ಸಾಗರ ಜಲಸಾರಿಗೆಗೆ ಪೂರಕವಾಗಿವೆ.

**ಬಂದರುಗಳು :** ಸರಕು ತುಂಬಲು ಮತ್ತು ಇಳಿಸುವುದಕ್ಕಾಗಿ ಹಡಗು ತಂಗುವ ಸ್ಥಳವೇ ಬಂದರು. ಇವು ಭೂ ಮಾರ್ಗ ಮತ್ತು ಸಮುದ್ರ ಮಾರ್ಗಗಳು ಸಂಧಿಸುವ ಸ್ಥಳ. ಭಾರತದಲ್ಲಿ ಹಲವು ಬಂದರುಗಳಿವೆ. ಅವುಗಳನ್ನು ಪ್ರಮುಖ, ಮಧ್ಯಮ ಮತ್ತು ಸಣ್ಣ ಪ್ರಮಾಣದ ಬಂದರುಗಳೆಂದು ವಿಂಗಡಿಸಲಾಗಿದೆ. ಪ್ರಮುಖ ಬಂದರುಗಳು ದೊಡ್ಡ ಹಡಗುಗಳು ತಂಗುವ ಲಂಗರು ಸ್ಥಳ, ಬಂದರು ಕಟ್ಟೆ ಹಾಗೂ ಸರಕುಗಳನ್ನು ತುಂಬುವ ಮತ್ತು ಇಳಿಸುವ ಅಗತ್ಯ ಆಧುನಿಕ ಸೌಲಭ್ಯಗಳನ್ನು ಹೊಂದಿರುತ್ತವೆ. ಭಾರತದಲ್ಲಿ 14 ಪ್ರಮುಖ ಬಂದರುಗಳಿವೆ. ಅವುಗಳಲ್ಲಿ 6 ಪಶ್ಚಿಮ ತೀರದಲ್ಲಿ ಮತ್ತು ಉಳಿದ 7 ಪೂರ್ವ ತೀರದಲ್ಲಿ ನೆಲಸಿವೆ. ಮತ್ತೊಂದು ಪ್ರಮುಖ ಬಂದರು ಅಂಡಮಾನ್ ಮತ್ತು ನಿಕೋಬಾರ್ ದ್ವೀಪದಲ್ಲಿದೆ.




© KTBS Not to be published

**ಪಶ್ಚಿಮ ತೀರದ ಪ್ರಮುಖ ಬಂದರುಗಳು**

**ಕಾಂಡ್ಲ :** ಇದು ಗುಜರಾತಿನ ಕಛ್ ಖಾರಿಯ ಶಿರೋಭಾಗದಲ್ಲಿದೆ.

**ಮುಂಬಯಿ:** ಇದು ದೊಡ್ಡ ಪ್ರಮಾಣದ, ವಿಶಾಲ ಸ್ಥಳಾವಕಾಶವುಳ್ಳ ಹಾಗೂ ಹಡಗು ತಂಗುವ ಉತ್ತಮ ಸ್ಥಳವುಳ್ಳ ಬಂದರು. ಇದು ಮಹಾರಾಷ್ಟ್ರದಲ್ಲಿದ್ದು, ಇದನ್ನು "ಭಾರತದ ಹೆಬ್ಬಾಗಿಲು" ಎಂದು ಕರೆಯಲಾಗಿದೆ.

**ಜವಹರಲಾಲ್ ನೆಹರು ಬಂದರು:** ಹಿಂದೆ ಇದನ್ನು 'ನವ್ಹಾಶೇವ ಬಂದರು' ಎಂದು ಕರೆಯಲಾಗಿತ್ತು. ಇದು ಮುಂಬಯಿ ನಗರದಿಂದ 10 ಕಿ.ಮೀ. ದೂರದಲ್ಲಿರುವ ಎಲಿಫೆಂಟಾ ಗುಹೆಗಳಿಗೆ ಸಮೀಪದಲ್ಲಿದೆ. ಮುಂಬಯಿ ಬಂದರಿನ ಒತ್ತಡವನ್ನು ಕುಗ್ಗಿಸಲು ಈ ಬಂದರು ನಿರ್ಮಾಣಗೊಂಡಿದೆ.

**ಮರ್ಮಗೋವ:** ಇದು ಗೋವಾರಾಜ್ಯದ ಜುವಾರಿ ನದಿಯ ಅಳಿವೆಯ ಅಂಚಿನಲ್ಲಿದೆ.

**ನವ ಮಂಗಳೂರು:** ಇದನ್ನು 'ಕರ್ನಾಟಕದ ಹೆಬ್ಬಾಗಿಲು' ಎಂದು ಕರೆಯಲಾಗಿದೆ.

**ಕೊಚಿ:** ಕೇರಳ ತೀರದಲ್ಲಿದೆ. ಇದನ್ನು 'ಅರಬ್ಬಿ ಸಮುದ್ರದ ರಾಣಿ' ಎಂದು ಕರೆಯಲಾಗಿದೆ.

**ಪೂರ್ವ ತೀರದ ಪ್ರಮುಖ ಬಂದರುಗಳು**

**ತುತಕುಡಿ :** ತಮಿಳುನಾಡಿನ ಕರಾವಳಿಯ ಆಗ್ನೇಯ ಭಾಗದಲ್ಲಿ ನೆಲಸಿದೆ.

**ಚೆನ್ನೈ:** ಇದು ತಮಿಳುನಾಡಿನಲ್ಲಿರುವ ಅತಿ ಹಳೆಯ ಬಂದರು. ಇದೊಂದು ಕೃತಕ ರೇವುವುಳ್ಳದ್ದು.

**ಎನ್ನೋರ್ :** ಚೆನ್ನೈ ಬಂದರಿನ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದಿಂದ ಇದನ್ನು ನಿರ್ಮಿಸಲಾಗಿದೆ. ಚೆನ್ನೈ ಬಂದರಿನಿಂದ ಉತ್ತರ ಭಾಗದಲ್ಲಿದೆ.

**ವಿಶಾಖಪಟ್ಟಣ :** ಇದೊಂದು ಭೂಭಾಗದಿಂದ ಸುತ್ತುವರಿದ ಆಳವಾದ ಮತ್ತು ಸಂರಕ್ಷಿತ ಬಂದರು. ಆಂಧ್ರಪ್ರದೇಶದ ಕರಾವಳಿಯಲ್ಲಿದೆ.

**ಪಾರಾದೀಪ್ :** ಒಡಿಶಾದ ಮಹಾನದಿ ಮುಖ ಭಾಗದಲ್ಲಿರುವ ಬಂದರು.

**ಹಾಲ್ಡಿಯಾ:** ಇದು ಹೂಗ್ಲಿ ಮತ್ತು ಹಾಲ್ಡಿ ನದಿಗಳ ಸಂಗಮ ಸ್ಥಳದಲ್ಲಿ ನೆಲೆಸಿದೆ (ಪಶ್ಚಿಮ ಬಂಗಾಳ). ಕೊಲ್ಕತ ಬಂದರಿಗೆ ಪ್ರವೇಶಿಸಲಾಗದ ದೊಡ್ಡ ಪ್ರಮಾಣದ ಹಡಗುಗಳು ಈ ಬಂದರಿಗೆ ಪ್ರವೇಶಿಸುವವು.

**ಕೊಲ್ಕತ :** ಹೂಗ್ಲಿ ನದಿಯ ಎಡದಂಡೆಯಲ್ಲಿದ್ದು, ಭಾರತದ ನದಿದಂಡೆಯ ಬಂದರಾಗಿದೆ. ಭಾರತದ ಎರಡನೇ ದೊಡ್ಡ ಬಂದರು. ಸಮುದ್ರಯಾನದಲ್ಲಿ ನಡೆಯುವ ವ್ಯಾಪಾರ ಕಾರ್ಯನಿರ್ವಹಿಸುವ ಅಗ್ನೇಯ ಏಷ್ಯಾದ ದೊಡ್ಡ ಬಂದರು. ಹೂಗ್ಲಿ ನದಿಯಿಂದ ಆಗಾಗ್ಗೆ ಹೂಳು ತುಂಬಿಕೊಳ್ಳುವುದರಿಂದ ಹಡಗು ಸಂಚಾರಕ್ಕೆ ತೊಂದರೆಯಾಗುವುದು. ಹೀಗಾಗಿ ಹೂಳು ತೆಗೆಯುವ ಕಾರ್ಯ ಅವಶ್ಯ.

**ಪೋರ್ಟ್ ಬ್ಲೇರ್ :** ಇದು ಭಾರತದ ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಂದಾದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿದೆ.

**3. ವಾಯು ಸಾರಿಗೆ**

ಇದು ಅತ್ಯಂತ ವೇಗಯುತ ಸಾರಿಗೆ ಮಾಧ್ಯಮ. ಪ್ರಯಾಣಿಕರು ಮತ್ತು ಟಪಾಲು ಸಾಗಿಸಲು ಬಹಳ ಸಮರ್ಪಕವಾದ ಸಾರಿಗೆ ಸೌಲಭ್ಯ. ಸಮರ, ಪ್ರವಾಹ, ಭೂಕಂಪಗಳಂತಹ ತುರ್ತುಪರಿಸ್ಥಿತಿಗೆ ಇದು ಬಹುಉಪಯುಕ್ತ. ಭಾರತವು ವಿಶಾಲವಾದ ದೇಶವಾಗಿದ್ದು ವಾಯುಸಾರಿಗೆ ಅಭಿವೃದ್ಧಿಗೆ ಅಗತ್ಯವಾದ ಎಲ್ಲಾ ಪೂರಕ ಅಂಶಗಳನ್ನು ಹೊಂದಿದೆ.


ಇಂದು ಭಾರತದಲ್ಲಿ ಎರಡು ಪ್ರಮುಖ ವಾಯು ಸಂಚಾರ ಸಂಸ್ಥೆಗಳಿವೆ. ಅವುಗಳೆಂದರೆ : i) ಏರ್ ಇಂಡಿಯಾ ನ್ಯಾಷನಲ್, ಇದು ಭಾರತ ಮತ್ತು ಪ್ರಪಂಚದ ಅನೇಕ ದೇಶಗಳೊಂದಿಗೆ ವಾಯು ಸಂಚಾರ ಸೌಲಭ್ಯ ಕಲ್ಪಿಸುತ್ತದೆ. ii) ಇಂಡಿಯನ್ ಏರ್‌ಲೈನ್ಸ್: ಇದು ದೇಶದೊಳಗೆ ವಾಯುಸಂಚಾರ ಕಲ್ಪಿಸುವುದರ ಜೊತೆಗೆ ನೆರೆಹೊರೆ ದೇಶಗಳಿಗೂ ಸಂಪರ್ಕ ಕಲ್ಪಿಸುವುದು. ಇತ್ತೀಚಿನವರೆಗೂ ಭಾರತದ ವಾಯು ಸಾರಿಗೆ

© KTBS Not to be published

ಸಾರ್ವಜನಿಕ ವಲಯಕ್ಕೆ ಸೇರಿತ್ತು. ಆದರೆ ಈಗ ನಿಯಮಿತ ಪರವಾನಗಿ ಪಡೆದ ಖಾಸಗಿ ಸಂಸ್ಥೆಗಳು ವಾಯುಸಂಚಾರ ಸೇವೆ ನೀಡುತ್ತಿವೆ. ಉದಾ : ಜೆಟ್ ಏರ್‌ವೇಸ್, ಸಹರ, ಪ್ಯಾರಮೌಂಟ್ ವಾಯುಯಾನ ಸಂಸ್ಥೆ ಇತ್ಯಾದಿ.

**ವಿಮಾನ ನಿಲ್ದಾಣಗಳು :** ಭಾರತದಲ್ಲಿ 141 ವಿಮಾನ ನಿಲ್ದಾಣಗಳಿವೆ. ಅವುಗಳಲ್ಲಿ 28 ಅಂತಾರಾಷ್ಟ್ರೀಯ, 88 ದೇಶೀಯ ಮತ್ತು 25 ವಾಯುಪಡೆಗೆ ಸೇರಿದ ಗಡಿಭದ್ರತಾ ವಿಮಾನ ನಿಲ್ದಾಣಗಳಾಗಿವೆ. ಕೆಲವು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳು ಈ ಕೆಳಕಂಡಂತಿವೆ:

1. ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ದೆಹಲಿ.
2. ಛತ್ರಪತಿ ಶಿವಾಜಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಮುಂಬಯಿ.
3. ನೇತಾಜಿ ಸುಭಾಷ್‌ಚಂದ್ರಬೋಸ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಕೊಲ್ಕತ.
4. ಅಣ್ಣಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಚೆನ್ನೈ.
5. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು.
6. ರಾಜೀವ್‌ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಹೈದರಾಬಾದ್.




© KTBS Not to be published

7. ಶ್ರೀಗುರು ರಾಮದಾಸ್‌ಜಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಅಮೃತಸರ.
8. ಲೋಕಪ್ರಿಯ ಗೋಪಿನಾಥ್ ಬೋರ್ಡೋಲೊಯಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಗುವಹಾತಿ.
9. ಬಿಜು ಪಾಟ್ನಾಯಕ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಭುವನೇಶ್ವರ್.
10. ಸರ್ದಾರ್ ವಲ್ಲಬಾಯ್ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಅಹ್ಮದಾಬಾದ್.
11. ವೀರ ಸಾವರ್ಕರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಫೋರ್ಟ್ ಬ್ಲೇರ್.
12. ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ನಾಗ್ಪುರ.
13. ಜಾರುಕಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಶಿಲ್ಲಾಂಗ್.
14. ಲಾಲ್ ಬಹದ್ದೂರ್ ಶಾಸ್ತ್ರಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ವಾರಣಾಸಿ.

**ಸಂಪರ್ಕ ಮಾಧ್ಯಮ**

ಒಬ್ಬರಿಂದ ಮತ್ತೊಬ್ಬರಿಗೆ ಅಥವಾ ಸ್ಥಳದಿಂದ ಸ್ಥಳಕ್ಕೆ ಸಮಾಚಾರವನ್ನು ವಿನಿಮಯ ಮಾಡಿಕೊಳ್ಳುವುದನ್ನು ಸಂಪರ್ಕ ಮಾಧ್ಯಮ ಎನ್ನುವರು. ಮಾನವನಿಗೆ ಇದೇನು ಹೊಸದಲ್ಲ. ಪ್ರಾಚೀನ ಕಾಲದಲ್ಲಿ ಸಮಾಚಾರದ ರವಾನೆಗಾಗಿ ಪಕ್ಷಿ ಮತ್ತು ಪ್ರಾಣಿಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತಿತ್ತು.

**ಪ್ರಾಮುಖ್ಯತೆ :** ಸರ್ಕಾರದ ನೀತಿ ನಿಯಮ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಸಂಪರ್ಕ ಮಾಧ್ಯಮ ನೆರವಾಗುವುದು. ಇದು ನೈಸರ್ಗಿಕ ವಿಪತ್ತು ಮತ್ತು ವಿನಾಶಗಳು, ಹವಾಗುಣ ಮುನ್ಸೂಚನೆಗಳನ್ನು ನಾವು ತಿಳಿಯಲು ಸಹಾಯವಾಗುವುದು. ವ್ಯಾಪಾರ ವಾಣಿಜ್ಯ, ಕೈಗಾರಿಕೆ, ಕೃಷಿ ಇತ್ಯಾದಿಗಳ ಅಭಿವೃದ್ಧಿಗೂ ನೆರವಾಗುವುದು. ಮನರಂಜನೆ, ಪ್ರಪಂಚದ ದಿನನಿತ್ಯದ ಮಾಹಿತಿಗಳನ್ನು ಪೂರೈಸುತ್ತದೆ. ಅಲ್ಲದೆ ದೇಶದ ಏಕತೆ ಮತ್ತು ಸಮಗ್ರತೆ ನಿರ್ವಹಣೆಗೂ ನೆರವಾಗುತ್ತದೆ.

ಇಂದು ಭಾರತದಲ್ಲಿ ವಿವಿಧ ಬಗೆಯ ಸಂಪರ್ಕ ಮಾಧ್ಯಮಗಳು ರೂಢಿಯಲ್ಲಿವೆ. ಅವುಗಳನ್ನು ಎರಡು ಪ್ರಮುಖ ವರ್ಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ: i) ವೈಯಕ್ತಿಕ ಸಂಪರ್ಕ ಮಾಧ್ಯಮ ಮತ್ತು ii) ಸಮುದಾಯ ಸಂಪರ್ಕ ಮಾಧ್ಯಮ. ಅಂಚೆ, ಟೆಲಿಗ್ರಾಫ್, ಟೆಲಿಫೋನ್, ಫ್ಯಾಕ್ಸ್, ಈ–ಮೇಲ್, ಅಂತರ್ಜಾಲ, ಸೆಮಿನಾರ್ ಇತ್ಯಾದಿಗಳು ವೈಯಕ್ತಿಕ ಮಾಧ್ಯಮಗಳಾಗಿವೆ. ವೃತ್ತಪತ್ರಿಕೆ ಮತ್ತು ನಿಯತಕಾಲಿಕೆಗಳು, ಆಕಾಶವಾಣಿ, ದೂರದರ್ಶನ, ಪುಸ್ತಕಗಳು ಸಮುದಾಯ ಸಂಪರ್ಕಮಾಧ್ಯಮಗಳು.

**ಅಂಚೆ ಸೇವೆ :** ಭಾರತದಲ್ಲಿ ಪುರಾತನ ಕಾಲದಿಂದಲೂ ರೂಢಿಯಲ್ಲಿದ್ದ ಮುಖ್ಯ ಮಾಧ್ಯಮಗಳಲ್ಲಿ ಅಂಚೆ ಸೇವೆಯೂ ಒಂದು. ಅಂಚೆ ಕಚೇರಿಗಳು ಹಲವು ಸೇವೆಗಳನ್ನು ಪೂರೈಸುತ್ತಿವೆ. ಉದಾ: ಪತ್ರಗಳು, ಪಾರ್ಸಲ್, ಪ್ಯಾಕೆಟ್, ಮನಿಆರ್ಡರ್ ಮುಂತಾದವುಗಳನ್ನು ಸ್ಥಳದಿಂದ ಸ್ಥಳಕ್ಕೆ ರವಾನಿಸುವವು. ಜೊತೆಗೆ ಸಣ್ಣ ಉಳಿತಾಯ ಖಾತೆ, ಠೇವಣಿಗಳು, ರಾಷ್ಟ್ರೀಯ ಉಳಿತಾಯ ಪತ್ರಗಳು ಇತ್ಯಾದಿ ಸೇವೆಗಳನ್ನೂ ಪೂರೈಸುತ್ತವೆ.

**ದೂರವಾಣಿ ಸಂಪರ್ಕ :** ಇದು ಟೆಲಿಗ್ರಾಫ್, ಟೆಲಿಫೋನ್, ಫ್ಯಾಕ್ಸ್ ಇತ್ಯಾದಿಗಳ ಸೇವೆಗಳನ್ನು ಕೇಬಲ್ಲುಗಳ ಮೂಲಕ ಏರ್ಪಡುವುದು. ಇಂದು ಭಾರತದಲ್ಲಿ ದೂರವಾಣಿ ಸಂಪರ್ಕ ಜಾಲದ ವ್ಯವಸ್ಥೆ ಪ್ರತಿ ದೂರದ ಸ್ಥಳಗಳಿಗೂ ಲಭ್ಯವಾಗುತ್ತಿದೆ. ಟೆಲಿಫೋನ್ ಮತ್ತು ಮೊಬೈಲ್ ಸೌಲಭ್ಯವು ಟೆಲಿಗ್ರಾಫಿಕ್ ಸೇವೆಗೆ ಬದಲಿ ವ್ಯವಸ್ಥೆಯಾಗಿದ್ದು ಬಹು ವ್ಯಾಪಕವಾಗಿ ಬಳಕೆಯಲ್ಲಿವೆ.

**ಆಕಾಶವಾಣಿ ಮತ್ತು ದೂರದರ್ಶನ :** ಸಮುದಾಯ ಸಂಪರ್ಕ ಮಾಧ್ಯಮದಲ್ಲಿ ಆಕಾಶವಾಣಿ ಮತ್ತು ದೂರದರ್ಶನಗಳ ಪಾತ್ರ ಮಹತ್ವವುಳ್ಳದ್ದು. ಭಾರತದ ಯಾವುದೇ ದೂರದ ಸ್ಥಳದಲ್ಲಿ ವಾಸಿಸುವ ಜನರೂ

© KTBS Not to be republished

ಸಹ ಆಕಾಶವಾಣಿಯಿಂದ ಸಮಾಚಾರಗಳನ್ನು ಕೇಳಬಹುದು ಮತ್ತು ದೂರದರ್ಶನವನ್ನು ವೀಕ್ಷಿಸಬಹುದು. ಹೀಗಾಗಿ ಅವು ನಮ್ಮ ಗ್ರಾಮೀಣ ಪ್ರದೇಶಗಳಿಗೂ ಹೆಚ್ಚು ಉಪಯುಕ್ತ. ಏಕೆಂದರೆ ನಮ್ಮ ರೈತರು ಕೃಷಿ ಸಮಸ್ಯೆ, ಕೃಷಿ ಉತ್ಪನ್ನಗಳ ಬೆಲೆ, ಹವಾಗುಣ ಮುನ್ಸೂಚನೆ, ಆಧುನಿಕ ಕೃಷಿ ವಿಧಾನ ಮೊದಲಾದವುಗಳ ಬಗ್ಗೆ ತಾಜಾಸುದ್ಧಿಗಳನ್ನು ಪಡೆಯುವರು. ಅಲ್ಲದೆ ಅವು ಶಿಕ್ಷಣ, ಮನರಂಜನೆ ಮತ್ತು ಮಾಹಿತಿ ಆಧಾರಿತವಾದಂತಹ ವಿವಿಧ ಕಾರ್ಯಕ್ರಮಗಳ ಬಗ್ಗೆ ಸುದ್ಧಿಗಳನ್ನು ಬಿತ್ತರಿಸುವವು. 1930ರಲ್ಲಿ "ಆಲ್ ಇಂಡಿಯಾ ರೇಡಿಯೊ" ಎಂದು ಕರೆಯಲಾಯಿತು. ಟೆಲಿವಿಷನ್ ಪ್ರಸಾರವು 1959ರಲ್ಲಿ ದೆಹಲಿಯಿಂದ "ದೂರದರ್ಶನ" (DD) ಎಂಬ ಹೆಸರಿನಿಂದಲೇ ಆರಂಭಗೊಂಡಿತು.

**ವೃತ್ತಪತ್ರಿಕೆಗಳು :** ಇವು ಮುದ್ರಣ ಸಂಪರ್ಕ ಮಾಧ್ಯಮಕ್ಕೆ ಸೇರಿದ್ದು ಬಹಳ ಪ್ರಮುಖ ಹಾಗೂ ಪ್ರಚಲಿತ ಸಂಪರ್ಕ ಸಾಧನಗಳಾಗಿವೆ. ಭಾರತದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ದಿನಪತ್ರಿಕೆ ಮತ್ತು ನಿಯತಕಾಲಿಕೆಗಳು ವಿವಿಧ ಭಾಷೆಗಳಲ್ಲಿ ನೊಂದಾವಣೆಯಾಗಿವೆ. ಅವುಗಳಲ್ಲಿ 41 ವೃತ್ತಪತ್ರಿಕೆಗಳು 100 ವರ್ಷಗಳಿಗೂ ಹೆಚ್ಚು ಇತಿಹಾಸ ಹೊಂದಿವೆ. ಗುಜರಾತಿ ಭಾಷೆಯ "ಬಾಂಬೆ ಸಮಾಚಾರ" (ಇಂದು "ಮುಂಬಯಿ ಸಮಾಚಾರ") ಎಂಬುದು ಭಾರತದ ಅತ್ಯಂತ ಹಳೆಯದೂ ಮತ್ತು ಈಗಲೂ ಅಸ್ತಿತ್ವ ಕಾಯ್ದುಕೊಂಡಿರುವ ವೃತ್ತಪತ್ರಿಕೆ. ಇದು 1822ರಿಂದಲೇ ತನ್ನ ಪ್ರಸಾರವನ್ನು ಆರಂಭಿಸಿತು.

**ಉಪಗ್ರಹ ಮತ್ತು ಕಂಪ್ಯೂಟರ್ ಜಾಲ :** ಎಲೆಕ್ಟ್ರಾನಿಕ್ ತಂತ್ರಜ್ಞಾನ ಹಾಗೂ ಬಾಹ್ಯಾಕಾಶ ವಿಜ್ಞಾನಗಳ ಅಭಿವೃದ್ಧಿಯು ಸಂಪರ್ಕ ಮಾಧ್ಯಮದಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿತು. ಕಂಪ್ಯೂಟರ್ ಜಾಲವು ಅಂತರ್ಜಾಲ (ಇಂಟರ್‌ನೆಟ್), ಇ-ಮೇಲ್ ಸೇವೆ, ಫ್ಯಾಕ್ಸ್ ಇತ್ಯಾದಿ ಸೌಲಭ್ಯ ಕಲ್ಪಿಸುತ್ತದೆ. ಕೃತಕ ಉಪಗ್ರಹದ ಹಾರಾಟವು ಜಾಗತಿಕ ಸಂಪರ್ಕ ಮಾಧ್ಯಮದ ಇತಿಹಾಸದಲ್ಲಿ ಹೊಸ ಶಕೆಯೊಂದನ್ನು ಸೃಷ್ಟಿಸಿದೆ. ಭಾರತದಾದ್ಯಂತ ಆಕಾಶವಾಣಿ ಮತ್ತು ದೂರದರ್ಶನಗಳ ಪ್ರಸಾರಕ್ಕೆ ಉಪಗ್ರಹ ತಂತ್ರಜ್ಞಾನ ಹೆಚ್ಚು ನೆರವಾಗಿದೆ.

ಭೌಗೋಳಿಕ ಮಾಹಿತಿ ವ್ಯವಸ್ಥೆ (GIS), ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ (GPS) ಮತ್ತು ದೂರ ಸಂವೇದಿ (RS) ತಂತ್ರಜ್ಞಾನಗಳು ಭಾರತದಲ್ಲಿ ಪ್ರಗತಿಗೊಂಡಿವೆ. ಭೌಗೋಳಿಕ ಮಾಹಿತಿ ವ್ಯವಸ್ಥೆಯು ಪೃಥ್ವಿಯ ಮೇಲ್ಭಾಗದ ವಿವರಣಾ ಸ್ಥಳಗಳ ಮಾಹಿತಿ ಸಂಗ್ರಹಿಸುವ ಮತ್ತು ತಿಳಿಸುವ ಒಂದು ಕಂಪ್ಯೂಟರ್ ವ್ಯವಸ್ಥೆಯಾಗಿದೆ. ಭೌಗೋಳಿಕ ಸ್ಥಾನ ವ್ಯವಸ್ಥೆಯು ಸಂಕೇತ ಆಧಾರಿತವಾಗಿದ್ದು ಪೃಥ್ವಿಯ ಮೇಲಿನ ಚರ, ಸ್ಥಿರ ವಸ್ತು ಅಥವಾ ವ್ಯಕ್ತಿಯ ಸ್ಥಾನ ನಿರ್ಧರಿಸುವ ವ್ಯವಸ್ಥೆ. ಇದರಲ್ಲಿ ಅಕ್ಷಾಂಶ, ರೇಖಾಂಶ ಮತ್ತು ಸಮುದ್ರ ಮಟ್ಟದಿಂದ ಎತ್ತರಗಳನ್ನಾಧರಿಸಿ ಸ್ಥಳ ನಿರ್ಧರಿಸಲಾಗುವುದು. ದೂರ ಸಂವೇದಿ ತಂತ್ರಜ್ಞಾನವು ಪೃಥ್ವಿಯ ಮೇಲಿನ ಮಾಹಿತಿಗಳನ್ನು ಸಂವೇದನೆಯ ಮೂಲಕ ಸಂಗ್ರಹಿಸುತ್ತದೆ. ಇದು ಒಂದು ವಸ್ತು, ಸ್ಥಳ ಅಥವಾ ಲಕ್ಷಣಗಳನ್ನು ನೇರ ಸಂಪರ್ಕ ಹೊಂದದೆ ಮಾಹಿತಿಗಳನ್ನು ಸಂಗ್ರಹಿಸುವ ಮಾಧ್ಯಮ. ದೂರ ಸಂವೇದಿಯ ಮುಖಾಂತರ ಬಾಹ್ಯ ಮತ್ತು ಉಪಗ್ರಹ ಛಾಯಾಚಿತ್ರಗಳನ್ನು ತೆಗೆದುಕೊಳ್ಳಬಹುದು.

© KTBS Not to be published

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಭಾರತದ ಹಳ್ಳಿಗಳು ಮತ್ತು ಕೃಷಿ ಅಭಿವೃದ್ಧಿಗೆ ________ ಸಾರಿಗೆ ಮಾಧ್ಯಮ ಅತ್ಯಾವಶ್ಯಕವಾದುದು.
2. ಭಾರತದಲ್ಲಿ ಮೊಟ್ಟಮೊದಲಿಗೆ ರೈಲುಮಾರ್ಗವನ್ನು ________ ಮತ್ತು ________ ಗಳ ನಡುವೆ ನಿರ್ಮಿಸಲಾಯಿತು.
3. ಭಾರತದ ಹೆಬ್ಬಾಗಿಲು ಎಂದು ________ ಬಂದರನ್ನು ಕರೆಯಲಾಗಿದೆ.

4. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ________ ಎಂದು ಹೆಸರು ಕೊಡಲಾಗಿದೆ.

5. ಬಾಂಬೆ ಸಮಾಚಾರ ವೃತ್ತಪತ್ರಿಕೆ ________ ರಲ್ಲಿ ಆರಂಭಗೊಂಡಿತು.

**II. ಗುಂಪುಗಳಲ್ಲಿ ಚರ್ಚಿಸಿ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಸಾರಿಗೆ ಮತ್ತು ಸಂಪರ್ಕ ಮಾಧ್ಯಮ ಎಂದರೇನು?
2. ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳನ್ನು ಕುರಿತು ವಿವರಿಸಿ.
3. ಭಾರತದ ರೈಲು ಸಾರಿಗೆಯನ್ನು ಕುರಿತು ವಿವರಿಸಿ.
4. ಭಾರತದಲ್ಲಿ ರಸ್ತೆಮಾರ್ಗಗಳ ಪ್ರಾಮುಖ್ಯತೆ ಕುರಿತು ಸಂಕ್ಷಿಪ್ತವಾಗಿ ವಿವರಿಸಿ.
5. ಭಾರತದ ವಾಯು ಸಾರಿಗೆ ಕುರಿತು ವಿವರಿಸಿ.
6. ಭಾರತದ ವಿವಿಧ ಸಂಪರ್ಕ ಮಾಧ್ಯಮಗಳನ್ನು ತಿಳಿಸಿ.

**III. ಚಟುವಟಿಕೆ :**

1. ಭಾರತದ ಬಾಹ್ಯ ನಕ್ಷೆ ಬರೆದು ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳನ್ನು ಗುರುತಿಸಿ ಮತ್ತು ಹೆಸರಿಸಿ.

**IV. ಯೋಜನಾ ಕಾರ್ಯ :**

1. ಭಾರತದಲ್ಲಿ ಹಾರಾಟ ಮಾಡಿದ ಉಪಗ್ರಹಗಳ ಛಾಯಾಚಿತ್ರಗಳನ್ನು ಸಂಗ್ರಹಿಸಿ.

* * * *

© KTBS
Not to be published

X4C1K7

# ಅಧ್ಯಾಯ–10
# ಭಾರತದ ಕೈಗಾರಿಕೆಗಳು

**ಈ ಅಧ್ಯಾಯದಲ್ಲಿ ಕೆಳಕಂಡ ಅಂಶಗಳನ್ನು ತಿಳಿಯುತ್ತೇವೆ.**

- ಕೈಗಾರಿಕೆಗಳ ಅರ್ಥ ಮತ್ತು ಪ್ರಾಮುಖ್ಯತೆ.
- ಕೈಗಾರಿಕೆಗಳ ಸ್ಥಾನೀಕರಣ.
- ಭಾರತದಲ್ಲಿ ಪ್ರಮುಖ ಕೈಗಾರಿಕಾ ಪ್ರದೇಶಗಳು.
- ಭಾರತದ ಪ್ರಮುಖ ಕೈಗಾರಿಕೆಗಳು: ಕಬ್ಬಿಣ್ಣ ಮತ್ತು ಉಕ್ಕಿನ ಕೈಗಾರಿಕೆ, ಅಲ್ಯೂಮಿನಿಯಂ, ಹತ್ತಿಬಟ್ಟೆ, ಸಕ್ಕರೆ, ಕಾಗದ ಮತ್ತು ಜ್ಞಾನಾಧಾರಿತ ಕೈಗಾರಿಕೆಗಳು.

© KTBS Not to be published

## ಕೈಗಾರಿಕೆಗಳ ಅರ್ಥ ಮತ್ತು ಪ್ರಾಮುಖ್ಯತೆ

ಅನೇಕ ನೈಸರ್ಗಿಕ ಸಂಪನ್ಮೂಲ ಮತ್ತು ಕಚ್ಚಾ ವಸ್ತುಗಳನ್ನು ನೇರವಾಗಿ ಉಪಯೋಗ ಮಾಡಿಕೊಳ್ಳಲಾಗುವುದಿಲ್ಲ. ಅವುಗಳನ್ನು ಪ್ರಕ್ರಿಯೆಗೆಳಿಗೆ ಅಥವಾ ಶುದ್ಧೀಕರಣಕ್ಕೊಳಪಡಿಸಬೇಕು. ಉದಾ: ಕಬ್ಬನ್ನು ಸಕ್ಕರೆಯನ್ನಾಗಿ, ಕಬ್ಬಿಣದ ಅದಿರನ್ನು ಉಕ್ಕನ್ನಾಗಿ, ಹತ್ತಿಯನ್ನು ಬಟ್ಟೆಯನ್ನಾಗಿ, ಮರದ ತಿರುಳನ್ನು ಕಾಗದವನ್ನಾಗಿ ಇತ್ಯಾದಿ ಪರಿವರ್ತನೆ. ಹೀಗಾಗಿ, ಕಚ್ಚಾ ವಸ್ತುಗಳನ್ನು ಹೆಚ್ಚು ಉಪಯುಕ್ತ ವಸ್ತುಗಳಾಗಿ ಪರಿವರ್ತಿಸುವ ಪ್ರಕ್ರಿಯೆಯನ್ನು ಕೈಗಾರಿಕೆ ಎನ್ನುವರು.

ಕೈಗಾರಿಕೆಗಳು ನಮ್ಮ ಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅವುಗಳ ಅಭಿವೃದ್ಧಿಯಿಂದ ಪ್ರಾಥಮಿಕ ಸರಕುಗಳ ಅವಲಂಬನೆ ಮತ್ತು ಆಮದು ಕಡಿಮೆಯಾಗುತ್ತದೆ. ರಾಷ್ಟ್ರಾದಾಯ ಮತ್ತು ತಲಾದಾಯ ಹೆಚ್ಚಾಗುತ್ತದೆ. ವಿದೇಶೀ ವಿನಿಮಯ ಗಳಿಕೆಯಲ್ಲಿ ವೃದ್ಧಿ, ಉದ್ಯೋಗಾವಕಾಶ, ಜಿಡಿಪಿ ಮತ್ತು ಜನರ ಜೀವನ ಮಟ್ಟದಲ್ಲಿ ಸುಧಾರಣೆಯಾಗುವುದು.

## ಕೈಗಾರಿಕೆಗಳ ಸ್ಥಾನೀಕರಣ

ಕೈಗಾರಿಕೆಗಳ ಸ್ಥಾನೀಕರಣ ಮತ್ತು ಅಭಿವೃದ್ಧಿಯನ್ನು ಹಲವು ಅಂಶಗಳು ನಿರ್ಧರಿಸುತ್ತವೆ. ಕೈಗಾರಿಕೆಗಳ ಸ್ಥಾನೀಕರಣವನ್ನು ನಿರ್ಧರಿಸುವ ಪ್ರಮುಖಾಂಶಗಳೆಂದರೆ, 1) ಕಚ್ಚಾ ವಸ್ತುಗಳ ಸರಬರಾಜು, 2) ಶಕ್ತಿ ಸಂಪನ್ಮೂಲಗಳ ಪೂರೈಕೆ, 3) ಸಾರಿಗೆ ಮತ್ತು ಸಂಪರ್ಕದ ವ್ಯವಸ್ಥೆ, 4) ಮಾರುಕಟ್ಟೆ ಸೌಲಭ್ಯ, 5) ಬಂಡವಾಳ, 6) ಕಾರ್ಮಿಕರು ಮತ್ತು ನೀರು ದೊರೆಯುವಿಕೆ, 7) ಸೂಕ್ತ ವಾಯುಗುಣ, 8) ಸರ್ಕಾರದ ನೀತಿ ನಿಯಮಗಳು.

## ಪ್ರಮುಖ ಕೈಗಾರಿಕಾ ಪ್ರದೇಶಗಳು

ಒಂದೇ ಬಗೆಯ ಅಥವಾ ವಿವಿಧ ಬಗೆಯ ಕೈಗಾರಿಕೆಗಳು ಅಧಿಕ ಸಂಖ್ಯೆಯಲ್ಲಿ ಕೇಂದ್ರೀಕೃತಗೊಂಡ ಪ್ರದೇಶವನ್ನು 'ಕೈಗಾರಿಕಾ ಪ್ರದೇಶ' ಎನ್ನುವರು. ಕೈಗಾರಿಕೆ ಮತ್ತು ಕೈಗಾರಿಕಾ ಚಟುವಟಿಕೆಗಳು ಹೆಚ್ಚು ಕಂಡುಬರುವ ಪ್ರದೇಶ. ಸಾಮಾನ್ಯವಾಗಿ ಅದು ನಗರ ಪ್ರದೇಶವೂ ಆಗಿರುತ್ತದೆ. ಇವು ಕೈಗಾರಿಕಾ ಸ್ಥಾನೀಕರಣದ ಅಂಶಗಳು ಪೂರಕವಾಗಿರುವ ಕಡೆ ಕಂಡುಬರುತ್ತದೆ.

ಭಾರತದಲ್ಲಿ 8 ಪ್ರಮುಖ ಕೈಗಾರಿಕಾ ಪ್ರದೇಶಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ : 1) ಹೂಗ್ಲಿ–ಕೊಲ್ಕತ ಪ್ರದೇಶ. 2) ಮುಂಬಯಿ–ಪುಣೆ ಪ್ರದೇಶ. 3) ಅಹ್ಮದಾಬಾದ್–ವಡೋದರ ಪ್ರದೇಶ. 4) ಮಧುರೈ–ಕೊಯಮತ್ತೂರು–ಬೆಂಗಳೂರು ಪ್ರದೇಶ. 5) ಛೋಟಾನಾಗಪುರ ಪ್ರಸ್ಥಭೂಮಿ ಪ್ರದೇಶ.

6) ದೆಹಲಿ–ಮೀರತ್ ಪ್ರದೇಶ. 7) ವಿಶಾಖಪಟ್ಟಣ–ಗುಂಟೂರು ಪ್ರದೇಶ. 8) ಕೊಲ್ಲಂ–ತಿರುವನಂತಪುರ ಪ್ರದೇಶ.

## ಭಾರತದ ಪ್ರಮುಖ ಕೈಗಾರಿಕೆಗಳು

### ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ

ಇದು ಇತರೆ ಕೈಗಾರಿಕೆಗಳಿಗೆಲ್ಲ ಮೂಲ ಕೈಗಾರಿಕೆಯಾಗಿದೆ. ಎಂಜನೀಯರಿಂಗ್, ರೈಲ್ವೆ ಎಂಜಿನ್, ಯಂತ್ರೋಪಕರಣ, ಸ್ವಚಾಲಿತ ವಾಹನ, ಕೃಷಿ ಉಪಕರಣ ಮೊದಲಾದ ಕೈಗಾರಿಕೆಗಳು ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯನ್ನಾಧರಿಸಿರುತ್ತವೆ. ಭಾರತದ ಅತಿ ಮುಖ್ಯ ಲೋಹ ಆಧಾರಿತ ಕೈಗಾರಿಕೆ. ಕಬ್ಬಿಣದ ಅದಿರು ಕರಗಿಸುವ ಮತ್ತು ಕಬ್ಬಿಣ ತಯಾರಿಸುವ ಕಲೆ ಭಾರತೀಯರಿಗೆ ಪ್ರಾಚೀನಕಾಲದಿಂದಲೂ ತಿಳಿದಿತ್ತು. ಇದಕ್ಕೆ ದೆಹಲಿಯಲ್ಲಿರುವ ಕಬ್ಬಿಣದ ಸ್ತಂಭವು ಉತ್ತಮ ಉದಾಹರಣೆಯಾಗಿದೆ. (ಮೆಹ್ರಾಲಿ)

ಭಾರತದಲ್ಲಿ ಮೊಟ್ಟಮೊದಲಿಗೆ ಆಧುನಿಕ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯು 1874ರಲ್ಲಿ ಪಶ್ಚಿಮ ಬಂಗಾಳದ ಕುಲ್ಟಿ ಎಂಬಲ್ಲಿ ಸ್ಥಾಪನೆಗೊಂಡಿತು. ಆದರೆ ವಾಸ್ತವ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ ಆರಂಭದ ಕೀರ್ತಿ ಜೆ.ಎನ್. ಟಾಟಾರವರಿಗೆ ಸಲ್ಲುತ್ತದೆ. ಇವರು 1907ರಲ್ಲಿ ಜಾರ್ಖಂಡ್ ರಾಜ್ಯದ ಸಾಕ್ಚಿ (ಜೆಂಷೆಡ್ಪುರ)ಯ ಬಳಿ ಟಾಟಾ ಕಬ್ಬಿಣ ಮತ್ತು ಉಕ್ಕು ಕಂಪನಿಯ ಕಾರ್ಖಾನೆಯನ್ನು ಸ್ಥಾಪಿಸಿದರು. ಆದಾಗ್ಯೂ ಈ ಉದ್ಯಮವು ಸ್ವಾತಂತ್ರ್ಯದ ತರುವಾಯ ಹೆಚ್ಚು ಪ್ರಗತಿಯನ್ನು ಸಾಧಿಸಿತು. ಈ ಕೈಗಾರಿಕೆಯ ಪ್ರಗತಿಗಾಗಿ ಪಂಚವಾರ್ಷಿಕ ಯೋಜನೆಗಳಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಯಿತು.

ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯ ಸ್ಥಾನೀಕರಣಗಳೆಂದರೆ : i) ಮೂಲ ಕಚ್ಚಾವಸ್ತುವಾದ ಕಬ್ಬಿಣದ ಅದಿರು ಪೂರೈಕೆ. ii) ಮುಖ್ಯ ಶಕ್ತಿ ಸಂಪನ್ಮೂಲವಾದ ಕೋಕಿಂಗ್ ಕಲ್ಲಿದ್ದಲು ಹಾಗೂ ಜಲವಿದ್ಯುತ್ ಪೂರೈಕೆ. iii) ರೈಲು ಸಾರಿಗೆ ಹಾಗೂ ಬಂದರು ಸೌಲಭ್ಯ. iv) ನೀರು ಪೂರೈಕೆ. v) ಕಡಿಮೆ ಕೂಲಿಗೆ ದುಡಿಯುವ ನುರಿತ ಕಾರ್ಮಿಕರು ಹಾಗೂ vi) ಬಂಡವಾಳ ಮತ್ತು ಸ್ಥಳೀಯ ಮಾರುಕಟ್ಟೆ ಸೌಲಭ್ಯ.

**ಉತ್ಪಾದನಾ ಕೇಂದ್ರಗಳು :** ಇಂದು ಭಾರತದಲ್ಲಿ 14 ಸಮಗ್ರ ಕಬ್ಬಿಣ ಮತ್ತು ಉಕ್ಕು ಸ್ಥಾವರಗಳಿವೆ. ಅವುಗಳಲ್ಲಿ 4 ಖಾಸಗಿ ವಲಯ ಮತ್ತು ಉಳಿದವು ಸರಕಾರಿ ವಲಯಕ್ಕೆ ಸೇರಿವೆ. ಅವು ಈ ಕೆಳಕಂಡಂತಿವೆ:

**ಖಾಸಗಿ ವಲಯ**

1. ಟಾಟಾ ಕಬ್ಬಿಣ ಮತ್ತು ಉಕ್ಕು ಕಂಪನಿ (TISCO), ಜೆಂಷೆಡ್ಪುರ (ಸಾಕ್ಚಿ), ಜಾರ್ಖಂಡ್.
2. ಜಿಂದಾಲ್ ವಿಜಯನಗರ ಉಕ್ಕು ಲಿ. (JVSL) ತೋರಣಗಲ್, ಬಳ್ಳಾರಿ ಜಿಲ್ಲೆ, ಕರ್ನಾಟಕ.
3. ಇಸ್ಪಾತ್ ಕಬ್ಬಿಣ ಮತ್ತು ಉಕ್ಕು ಲಿ. ದೋಲ್ವಿ, ರಾಯಘಡ ಜಲ್ಲೆ, ಮಹಾರಾಷ್ಟ್ರ.
4. ಟಾಟಾ ಉಕ್ಕು ಸ್ಥಾವರ, (NINL) ಗೋಪಾಲ್ಪುರ, ಒಡಿಶಾ.

**ಸರಕಾರಿ ವಲಯ**

1. ಭಾರತೀಯ ಕಬ್ಬಿಣ ಮತ್ತು ಉಕ್ಕು ಕಂಪನಿ. (IISCO), ಬರ್ನ್ಪುರ, ಪಶ್ಚಿಮ ಬಂಗಾಳ.
2. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಂಪನಿ. (VISL), ಭದ್ರಾವತಿ, ಕರ್ನಾಟಕ.
3. ಬಿಲಾಯಿ ಉಕ್ಕು ಸ್ಥಾವರ, ದುರ್ಗ್‌ಜಿಲ್ಲೆ, ಛತ್ತೀಸ್‌ಗರ್.

© KTBS Not to be published

4. ರೂರ್ಕೆಲ ಉಕ್ಕು ಸ್ಥಾವರ, ಸುಂದರ್‌ಗಡ ಜಿಲ್ಲೆ, ಒಡಿಶಾ.

5. ದುರ್ಗಾಪುರ್ ಉಕ್ಕು ಸ್ಥಾವರ, ದುರ್ಗಾಪುರ, ಪಶ್ಚಿಮ ಬಂಗಾಳ.

6. ಬೊಕಾರೊ ಉಕ್ಕು ಸ್ಥಾವರ, ಬೊಕಾರೊ, ಜಾರ್ಖಂಡ್.


7. ಸೇಲಂ ಉಕ್ಕು ಸ್ಥಾವರ, ಸೇಲಂ, ತಮಿಳುನಾಡು.

8. ವಿಶಾಖಪಟ್ಟಣಂ ಉಕ್ಕು ಸ್ಥಾವರ, ವಿಶಾಖಪಟ್ಟಣ, ಆಂಧ್ರಪ್ರದೇಶ.

9. ದಾಯಿತರಿ ಉಕ್ಕು ಸ್ಥಾವರ, ಪಾರಾದೀಪದ ಸಮೀಪ, ಒಡಿಶಾ.

10. ಟಾಟಾ ಉಕ್ಕು ಸ್ಥಾವರ, ಕಳಿಂಗ ನಗರ, ಒಡಿಶಾ.

ಇವುಗಳಲ್ಲದೆ ದೇಶದ ವಿವಿಧ ಭಾಗಗಳಲ್ಲಿ 199ಕ್ಕೂ ಹೆಚ್ಚು ಮಿನಿ ಉಕ್ಕು ಕಾರ್ಖಾನೆಗಳು ಸ್ಥಾಪನೆಗೊಂಡಿವೆ. ಪ್ರಪಂಚದಲ್ಲಿ ಉಕ್ಕು ಉತ್ಪಾದಿಸುವ ದೇಶಗಳಲ್ಲಿ ಭಾರತವು 8ನೆಯ ಸ್ಥಾನದಲ್ಲಿದೆ.



©KTBS
Not to be published

**2. ಅಲ್ಯೂಮಿನಿಯಂ ಕೈಗಾರಿಕೆ :** ಅಲ್ಯೂಮಿನಿಯಂ ಒಂದು ಪ್ರಮುಖ ಕಬ್ಬಿಣೇತರ ಲೋಹ. ಇದು ಬಹುಪಯೋಗಿ. ಇದನ್ನು ವಿಮಾನ, ಸ್ವಯಂಚಾಲಿತವಾಹನ, ರೈಲುಸಾರಿಗೆ, ಹಡಗು, ಬಣ್ಣ ತಯಾರಿಕೆ, ಗೃಹಬಳಕೆ ವಸ್ತುಗಳ ತಯಾರಿಕೆ, ವಿವಿಧ ಕೈಗಾರಿಕೆಗಳಲ್ಲಿ, ವಿದ್ಯುತ್ ಕೇಬಲ್ ತಯಾರಿಕೆ ಹಾಗೂ ಇದರ ರೇಕುಗಳನ್ನು ಪ್ಯಾಕಿಂಗ್ ಮಾಡಲು, ಮೊದಲಾದ ಉದ್ದೇಶಗಳಿಗೆ ಉಪಯೋಗಿಸಲಾಗುತ್ತದೆ. ಇದನ್ನು ಉಕ್ಕು ಮತ್ತು ತಾಮ್ರಗಳ ಬದಲಿ ವಸ್ತುವಾಗಿಯೂ ಬಳಕೆ ಮಾಡಲಾಗುತ್ತಿದೆ.

ಅಲ್ಯೂಮಿನಿಯಂ ಕೈಗಾರಿಕೆಯ ಪ್ರಮುಖ ಸ್ಥಾನೀಕರಣಗಳೆಂದರೆ: i) ಮೂಲ ಕಚ್ಚಾ ವಸ್ತುವಾದ ಬಾಕ್ಸೈಟ್‌ನ ಲಭ್ಯತೆ. ii) ಜಲ ವಿದ್ಯುಚ್ಛಕ್ತಿ ಪೂರೈಕೆ ಮತ್ತು iii) ಬಂಡವಾಳ ಹಾಗೂ ವಿಶಾಲವಾದ ಮಾರುಕಟ್ಟೆ.

**ಹಂಚಿಕೆ :** ಭಾರತದಲ್ಲಿ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯ ತರುವಾಯ ಅಲ್ಯೂಮಿನಿಯಂ ಕೈಗಾರಿಕೆಯು ಎರಡನೇ ಮುಖ್ಯ ಲೋಹಾಧಾರಿತ ಉದ್ದಿಮೆ. ಇದು ಮೊದಲಿಗೆ ಪಶ್ಚಿಮ ಬಂಗಾಳದ ಜಯಕಾಯ್ ನಗರದಲ್ಲಿ 1942ರಲ್ಲಿ ಆರಂಭಗೊಂಡಿತು. ಇಂದು ದೇಶದಲ್ಲಿ ಒಟ್ಟು 9 ಅಲ್ಯೂಮಿನಿಯಂ ತಯಾರಿಕಾ ಕೇಂದ್ರಗಳಿವೆ. ಅವುಗಳೆಂದರೆ: ಪಶ್ಚಿಮ ಬಂಗಾಳದ ಜಯಕಾಯ್‌ನಗರ, ಕೇರಳದ ಅಲುಪುರಂ, ತಮಿಳುನಾಡಿನ ಮೆಟ್ಟೂರು, ಕರ್ನಾಟಕದ ಬೆಳಗಾವಿ, ಒಡಿಶಾದ ಹಿರಾಕುಡ್ ಮತ್ತು ದಾಮನ್‌ಜೋಡಿ, ಉತ್ತರ ಪ್ರದೇಶದ ರೇನೂಕೂಟ, ಛತ್ತೀಸ್‌ಗರ್‌ನ ಕೊರಬ ಮತ್ತು ಮಹಾರಾಷ್ಟ್ರದ ರತ್ನಗಿರಿ.

ಪ್ರಪಂಚದಲ್ಲಿ ಅಲ್ಯೂಮಿನಿಯಂ ಉತ್ಪಾದಿಸುವ ದೇಶಗಳಲ್ಲಿ ಭಾರತವು 11ನೇಯದಾಗಿದೆ. ತನ್ನ ಅಪಾರ ಬೇಡಿಕೆಯನ್ನು ನೀಗಿಸಲು ಭಾರತವು ಅಲ್ಯೂಮಿನಿಯಂನ್ನು ಆಮದು ಮಾಡಿಕೊಳ್ಳುತ್ತದೆ.

**3. ಹತ್ತಿ ಬಟ್ಟೆ ಕೈಗಾರಿಕೆ :** ಭಾರತದ ಜವಳಿ ಉದ್ದಿಮೆಗಳಲ್ಲಿ ಹತ್ತಿ ಬಟ್ಟೆ ಕೈಗಾರಿಕೆಯು ಅತ್ಯಂತ ದೊಡ್ಡದು ಮತ್ತು ಪ್ರಮುಖ ಶಾಖೆ. ಅಲ್ಲದೇ ಅತಿ ಪ್ರಮುಖ ಕೃಷಿ ಆಧಾರಿತ ಕೈಗಾರಿಕೆ. ಪ್ರಾಚೀನ ಕಾಲದಿಂದಲೂ ಭಾರತೀಯರಿಗೆ ಹತ್ತಿ ಬಟ್ಟೆ ನೇಯುವ ಕಲೆ ತಿಳಿದಿತ್ತು. ಆದರೆ ಅದು ಕೈಮಗ್ಗಗಳಿಂದ ನೇಯ್ದ ಹತ್ತಿಬಟ್ಟೆಗೆ ಸೀಮಿತಗೊಂಡಿತ್ತು. ಭಾರತದಲ್ಲಿ ಮೊಟ್ಟಮೊದಲ ಆಧುನಿಕ ಹತ್ತಿ ಬಟ್ಟೆ ಕೈಗಾರಿಕೆಯು ಮುಂಬಯಿಯಲ್ಲಿ ಸ್ಥಾಪಿಸಲ್ಪಟ್ಟ ಹತ್ತಿ ಗಿರಣಿಯೊಂದಿಗೆ 1854ರಲ್ಲಿ ಪ್ರಾರಂಭಗೊಂಡಿತು. ತರುವಾಯ ಅನೇಕ ಹತ್ತಿಗಿರಣಿಗಳು ಸ್ಥಾಪನೆಗೊಂಡು ಈ ಕೈಗಾರಿಕೆಯು ಹೆಚ್ಚು ಅಭಿವೃದ್ಧಿಗೊಂಡಿತು. ಇಂದು ಹತ್ತಿ ಬಟ್ಟೆಯ ಉತ್ಪಾದನೆಯಲ್ಲಿ ಚೀನಾದ ತರುವಾಯ ಭಾರತವು ಎರಡನೇ ಸ್ಥಾನದಲ್ಲಿದೆ. ಹತ್ತಿ ಜವಳಿ ವಸ್ತುಗಳನ್ನು ರಫ್ತು ಮಾಡುವುದರಲ್ಲಿ ದ್ವಿತೀಯ ಸ್ಥಾನದಲ್ಲಿದೆ.

ಹತ್ತಿಬಟ್ಟೆ ಕೈಗಾರಿಕೆಯನ್ನು ನಿರ್ಧರಿಸುವ ಪ್ರಮುಖ ಸ್ಥಾನೀಕರಣಗಳೆಂದರೆ–ಮೂಲ ಕಚ್ಚಾವಸ್ತುವಾದ ಕಚ್ಚಾಹತ್ತಿಯ ಸರಬರಾಜು, ವಿಶಾಲ ಮಾರುಕಟ್ಟೆ, ವಿದ್ಯುತ್ ಪೂರೈಕೆ, ಬಂಡವಾಳ, ನುರಿತ ಕಾರ್ಮಿಕರ ಪೂರೈಕೆ ಮತ್ತು ತೇವಾಂಶಭರಿತ ವಾಯುಗುಣ.

**ಹಂಚಿಕೆ :** ಭಾರತದ ವಿವಿಧ ಭಾಗಗಳಲ್ಲಿರುವ 76ಕ್ಕೂ ಹೆಚ್ಚು ನಗರ ಮತ್ತು ಪಟ್ಟಣಗಳಲ್ಲಿ ಹತ್ತಿ ಬಟ್ಟೆ ಕೈಗಾರಿಕೆಯು ಹಂಚಿಕೆಯಾಗಿದೆ. ಆದರೂ ಇದು ಹೆಚ್ಚಾಗಿ ಹತ್ತಿ ಬೆಳೆಯುವ ರಾಜ್ಯಗಳಲ್ಲಿ ಕೇಂದ್ರೀಕರಣಗೊಂಡಿದೆ. ಅವುಗಳೆಂದರೆ: ಮಹಾರಾಷ್ಟ್ರ, ಗುಜರಾತ್, ತಮಿಳುನಾಡು, ಕರ್ನಾಟಕ, ಮಧ್ಯಪ್ರದೇಶ, ರಾಜಸ್ತಾನ, ಉತ್ತರ ಪ್ರದೇಶ, ಪಂಜಾಬ್ ಮತ್ತು ಹರಿಯಾಣ. ಇವುಗಳಲ್ಲಿ ಮೊದಲೆರಡು ರಾಜ್ಯಗಳು ದೇಶದ ಹತ್ತಿ ಜವಳಿ ವಸ್ತುಗಳ ಉತ್ಪಾದನೆಯಲ್ಲಿ ಮುಂದಿವೆ. ಮುಂಬಯಿ ನಗರವು ಪ್ರಸಿದ್ಧ ಹತ್ತಿ ಜವಳಿ ಉತ್ಪಾದನಾ ಕೇಂದ್ರ. ಇದನ್ನು "ಭಾರತದ ಕಾಟನೋಪೊಲೀಸ್' ಮತ್ತು 'ಭಾರತದ ಮಾಂಚೆಸ್ಟರ್' ಎಂದು ಕರೆಯಲಾಗಿದೆ.

**4. ಸಕ್ಕರೆ ಕೈಗಾರಿಕೆ :** ಇದು ಭಾರತದಲ್ಲಿ ಹತ್ತಿಬಟ್ಟೆ ಕೈಗಾರಿಕೆಯ ನಂತರ ಎರಡನೇ ಪ್ರಮುಖ ಕೃಷಿ ಆಧಾರಿತ ಕೈಗಾರಿಕೆ. ಪ್ರಾಚೀನ ಕಾಲದಿಂದಲೂ ಸಕ್ಕರೆ ತಯಾರಿಸುವ ಕಲೆ ಭಾರತೀಯರಿಗೆ ತಿಳಿದಿತ್ತು. ಆದರೆ ಅಂದು ಬೆಲ್ಲ ಮತ್ತು ಖಂಡಸಾರಿ ಸಕ್ಕರೆ ತಯಾರಿಸಲಾಗುತಿತ್ತು. ಆಧುನಿಕ ಸಕ್ಕರೆ ತಯಾರಿಕೆಯು

© KTBS Not to be published

20ನೇ ಶತಮಾನದ ಆರಂಭದಲ್ಲಿ ಭಾರತದಲ್ಲಿ ಪ್ರಾರಂಭಗೊಂಡಿತು. ಆದರೆ ಸ್ವಾತಂತ್ರ್ಯದ ತರುವಾಯ ಹೆಚ್ಚು ಅಭಿವೃದ್ಧಿಗೊಂಡಿತು. ಈ ಕೈಗಾರಿಕೆಯ ಸ್ಥಾನೀಕರಣ ನಿರ್ಧರಿಸುವ ಪ್ರಮುಖಾಂಶಗಳೆಂದರೆ : ಮೂಲ ಕಚ್ಚಾ ವಸ್ತುವಾದ ಕಬ್ಬು ಸರಬರಾಜು, ಸುಲಭ ದರದ ಮತ್ತು ಸಮರ್ಪಕ ಸಾರಿಗೆ ಸೌಲಭ್ಯ, ಸರಕಾರದ ಪ್ರೋತ್ಸಾಹ, ವಿದ್ಯುತ್ ಪೂರೈಕೆ, ಬಂಡವಾಳ ಮತ್ತು ಮಾರುಕಟ್ಟೆ ಸೌಲಭ್ಯಗಳು.

**ಹಂಚಿಕೆ:** ಸಕ್ಕರೆ ಕೈಗಾರಿಕೆಯು ಮುಖ್ಯವಾಗಿ ಕಬ್ಬು ಬೆಳೆಯುವ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿದೆ. ಅಂತಹ ಪ್ರದೇಶಗಳಲ್ಲಿ ಮಹಾರಾಷ್ಟ್ರ, ಉತ್ತರ ಪ್ರದೇಶ, ಕರ್ನಾಟಕ, ತಮಿಳನಾಡು, ಆಂಧ್ರಪ್ರದೇಶ, ಗುಜರಾತ್, ಪಂಜಾಬ್, ಹರಿಯಾಣ, ಬಿಹಾರ ಮತ್ತು ಒಡಿಶಾ ರಾಜ್ಯಗಳು ಮುಖ್ಯವಾದವು. ಪ್ರಪಂಚದಲ್ಲಿ ಸಕ್ಕರೆ ಉತ್ಪಾದಿಸುವ ದೇಶಗಳಲ್ಲಿ ಬ್ರೆಜಿಲ್ ನಂತರ ಭಾರತವು ಎರಡನೇ ಸ್ಥಾನದಲ್ಲಿದೆ.

**ಇದು ನಿಮಗೆ ತಿಳಿದಿದೆಯೆ?**

***ಸಕ್ಕರೆ ಕೈಗಾರಿಕೆಯ ಉಪವಸ್ತುಗಳು***

* ***ಕಾಕಂಬಿ :*** *ಕಬ್ಬಿನ ಹಾಲನ್ನು ಸಕ್ಕರೆಯಾಗಿ ಪರಿವರ್ತಿಸುವ ಪ್ರಕ್ರಿಯೆಯಿಂದ ದೊರೆಯುವ ಪಾಕ. ಇದನ್ನು ಮದ್ಯ ತಯಾರಿಕೆ ಮತ್ತು ಗೊಬ್ಬರಗಳಿಗಾಗಿ ಬಳಸಲಾಗುವುದು.*
* ***ಕಬ್ಬಿನ ಸಿಪ್ಪೆ :*** *ಕಬ್ಬನ್ನು ಅರೆದು ಅದರಿಂದ ರಸವನ್ನು ತೆಗೆದ ಮೇಲೆ ಉಳಿದುದು. ಇದನ್ನು ಕಾಗದದ ತಯಾರಿಕೆಗೆ ಮತ್ತು ಇಂಧನವಾಗಿ ಬಳಸಲಾಗುವುದು.*

**5. ಕಾಗದ ಕೈಗಾರಿಕೆ :** ಕಾಗದವು ಒಂದು ಅಗತ್ಯವಾದ ಉಪಯುಕ್ತ ವಸ್ತು. ಇದನ್ನು ಅನೇಕ ಉದ್ದೇಶಗಳಿಗಾಗಿ ಉಪಯೋಗಿಸಲಾಗುವುದು. ಉದಾ: ಬರವಣಿಗೆ, ಮುದ್ರಣ, ಪ್ಯಾಕಿಂಗ್ ಮೊದಲಾದವು. ಒಂದು ದೇಶದ ಶಿಕ್ಷಣ ಮತ್ತು ಸಾಕ್ಷರತೆಯ ಮಟ್ಟವನ್ನು ಆ ದೇಶದಲ್ಲಿ ಬಳಸುವ ಕಾಗದದ ಪ್ರಮಾಣದಿಂದ ತಿಳಿಯಬಹುದು.

© KTBS Not to be published

ಭಾರತದಲ್ಲಿ ಕಾಗದ ತಯಾರಿಕೆಯ ಕಲೆಯು 10ನೇ ಶತಮಾನದಲ್ಲೇ ತಿಳಿದಿತ್ತು. ಆಗ ಅದೊಂದು ಗುಡಿ ಕೈಗಾರಿಕೆಯಾಗಿತ್ತು. ದೇಶದಲ್ಲಿ ಪ್ರಥಮ ಆಧುನಿಕ ಕಾಗದ ಕೈಗಾರಿಕೆಯು ಪಶ್ಚಿಮಬಂಗಾಲದ ಸೆರಾಂಪುರವೆಂಬಲ್ಲಿ 1932ರಲ್ಲಿ ಸ್ಥಾಪನೆಗೊಂಡಿತು. ಆದರೆ ಅದು ಬೇಗ ಮುಚ್ಚಿಹೋಯಿತು. ಹೀಗಾಗಿ ವಾಸ್ತವ ಯಶಸ್ವಿ ಕಾಗದ ಕಾರ್ಖಾನೆಯೊಂದು (1870) ಕೊಲ್ಕತಾಕ್ಕೆ ಸಮೀಪದ ಬಾಲಿಯಲ್ಲಿ ಸ್ಥಾಪನೆಗೊಂಡಿತು. ಆದರೆ ಈ ಕೈಗಾರಿಕೆಯು ವಿಶ್ವಮಹಾ ಸಮರಗಳ ಅವಧಿ ಹಾಗೂ ಸ್ವಾತಂತ್ರ್ಯನಂತರ ಹೆಚ್ಚು ಪ್ರಚಲಿತಗೊಂಡಿತು.

ಕಾಗದ ಕೈಗಾರಿಕೆಯು ಅರಣ್ಯ ಆಧಾರಿತ ಕೈಗಾರಿಕೆ. ಏಕೆಂದರೆ ಈ ಉದ್ಯಮಕ್ಕೆ ಬೇಕಾಗುವ ಕಚ್ಚಾ ಪದಾರ್ಥಗಳೆಂದರೆ; ಬಿದಿರು ಮತ್ತು ಮರದ ತಿರುಳುಗಳಂತಹ ಮೃದುಮರಗಳ ವಸ್ತುಗಳು, ಸಬಾಯಿ ಮತ್ತು ಬಾಭರ್‌ನಂತಹ ಹುಲ್ಲು. ಇತ್ತೀಚೆಗೆ ಅರಣ್ಯದಿಂದ ದೊರೆಯುವ ಕಚ್ಚಾವಸ್ತುಗಳ ಕೊರತೆಯಿಂದಾಗಿ ಭತ್ತ, ಗೋಧಿ, ಬಾರ್ಲಿ ಹುಲ್ಲು, ಕಬ್ಬಿನ ಸಿಪ್ಪೆ, ಚಿಂದಿಕಾಗದ, ಚಿಂದಿಬಟ್ಟೆ ಮೊದಲಾದವುಗಳನ್ನು ಉಪಯೋಗಿಸಲಾಗುತ್ತಿದೆ.

ಇವುಗಳಲ್ಲದೆ ಅಪಾರ ನೀರು, ವಿಶಾಲ ಮಾರುಕಟ್ಟೆ, ಕಾರ್ಮಿಕರ ಲಭ್ಯತೆ, ಸಾರಿಗೆ ಸೌಲಭ್ಯ, ವಿದ್ಯುತ್ ಮತ್ತು ಕೆಲವು ರಾಸಾಯನಿಕಗಳ ಪೂರೈಕೆಗಳು ಇತರೆ ಕಾಗದ ಕೈಗಾರಿಕೆಗೆ ಬೇಕಾದ ಸ್ಥಾನೀಕರಣ ಅಂಶಗಳು.

**ಹಂಚಿಕೆ :** ಮೊದಮೊದಲು ಭಾರತದ ಕಾಗದ ಕೈಗಾರಿಕೆಯು ಪಶ್ಚಿಮ ಬಂಗಾಳದ ಹೂಗ್ಲಿ ನದಿ ಬಯಲಿನಲ್ಲಿ ಅಭಿವೃದ್ಧಿಗೊಂಡಿತ್ತು. ಇಂದು ಅದು ಹೆಚ್ಚಾಗಿ ಮಹಾರಾಷ್ಟ್ರ, ಗುಜರಾತ್, ಉತ್ತರ ಪ್ರದೇಶ, ತಮಿಳುನಾಡು, ಆಂಧ್ರಪ್ರದೇಶ, ಮಧ್ಯಪ್ರದೇಶ ಮತ್ತು ಒಡಿಶಾ ರಾಜ್ಯಗಳಲ್ಲಿ ಹಂಚಿಕೆಯಾಗಿದೆ.

ಭಾರತದಲ್ಲಿ ಕಾಗದ ಉತ್ಪಾದನೆಯು ತನ್ನ ಸ್ಥಳೀಯ ಬೇಡಿಕೆಯನ್ನು ಪೂರೈಸಲು ಸಾಕಾಗುವುದಿಲ್ಲ. ಹೀಗಾಗಿ ಕಾಗದವನ್ನು ಆಮದು ಮಾಡಿಕೊಳ್ಳಬೇಕಾಗಿದೆ.

**ಜ್ಞಾನಾಧಾರಿತ ಕೈಗಾರಿಕೆಗಳು :** ಇವು ಜ್ಞಾನ ಆಧರಿತ, ಉತ್ಪಾದನೆ ಹಾಗೂ ಸೇವೆಗಳನ್ನೊಳಗೊಂಡ ಉದ್ಯಮಗಳು. ಅಂದರೆ ತಾಂತ್ರಿಕ ಮತ್ತು ವೈಜ್ಞಾನಿಕ ಬೆಳವಣಿಗೆಯನ್ನು ತ್ವರಿತಗೊಳಿಸುವುದಕ್ಕೆ ನೆರವಾಗುವ ಅಧಿಕೋತ್ಪಾದಕ ಕ್ರಿಯೆಗಳನ್ನುಳ್ಳ ವಿಶಿಷ್ಟ್ಯ ಉದ್ಯಮಗಳಾಗಿವೆ. ಇವುಗಳಿಗೆ ಯಾವುದೇ ದೈಹಿಕ ಬಲ ಮತ್ತು ಕಚ್ಚಾ ವಸ್ತುಗಳಿಗಿಂತಲೂ ಬುದ್ಧಿವಂತಿಕೆ ಸಾಮರ್ಥ್ಯ ಬೇಕು.

ಜ್ಞಾನಾಧಾರಿತ ಕೈಗಾರಿಕೆಗಳ ಬೆಳವಣಿಗೆಯು ಸಾಮಾಜಿಕ-ಆರ್ಥಿಕ ಬದಲಾವಣೆಯ ಪ್ರಭಾವವುಳ್ಳ ಸಾಧನವಾಗಿರುತ್ತದೆ. ಭಾರತವು ಸಾಕಷ್ಟು ಯುವ ಜನಸಂಖ್ಯೆ ಮತ್ತು ಬೆಳೆಯುತ್ತಿರುವ ಮಾಹಿತಿ ತಂತ್ರಜ್ಞಾನ ಹೊಂದಿದೆ ಹಾಗೂ ತಾನು ಪ್ರಮುಖ ಜ್ಞಾನಾಧಾರಿತ ಕೈಗಾರಿಕಾ ಪ್ರದೇಶವಾಗಿ ಹೊರಹೊಮ್ಮಲು ಉತ್ತಮ ಸಾಮರ್ಥ್ಯ ಹೊಂದಿದೆ. ಹೀಗಾಗಿ ಇಂದು ದೇಶದಲ್ಲಿ ಜ್ಞಾನಾಧಾರಿತ ಕೈಗಾರಿಕೆಯು ತೀವ್ರಗತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಉದ್ಯಮವಾಗಿದೆ.

ಮಾಹಿತಿ ತಂತ್ರಜ್ಞಾನವು ಜ್ಞಾನಾಧಾರಿತ ಕೈಗಾರಿಕೆಗೆ ಮಹತ್ವವುಳ್ಳದ್ದು. ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್‌ಗಳು ಇದರ ಪ್ರಮುಖ ಅಂಗಭಾಗಗಳು. ಸಾಫ್ಟ್‌ವೇರ್ ಉದ್ಯಮದ ಬೆಳವಣಿಗೆಗೆ ರಾಜ್ಯ ಮತ್ತು ಕೇಂದ್ರ ಸರಕಾರ ಎರಡರಿಂದಲೂ ಪ್ರೋತ್ಸಾಹವಿದೆ. ಈ ಉದ್ಯಮದ ಉತ್ತೇಜನಕ್ಕಾಗಿ ದೇಶದ ವಿವಿಧೆಡೆ ಹಲವು ಸಾಫ್ಟ್‌ವೇರ್ ತಂತ್ರಜ್ಞಾನ ಪಾರ್ಕ್ (STP)ಗಳನ್ನು ಸ್ಥಾಪಿಸಲಾಗಿದೆ (1995). ಆದರೂ ಅದು ಹೆಚ್ಚು ದಕ್ಷಿಣ ಭಾರತದ ರಾಜ್ಯಗಳಲ್ಲಿ ಅಭಿವೃದ್ಧಿಗೊಂಡಿದೆ. ಉದಾ: ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು ಮತ್ತು ತೆಲಂಗಾಣ. ಕರ್ನಾಟಕ ರಾಜ್ಯವು ಸಾಫ್ಟ್‌ವೇರ್ ಕೈಗಾರಿಕೆಯಲ್ಲಿ ಅತ್ಯುತ್ತಮ ಹೆಸರು ಗಳಿಸಿದೆ. ದೇಶದಲ್ಲಿ ಹಲವು ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ಸ್ಥಾಪನೆಗೊಂಡಿವೆ. ಅವು ಬೆಂಗಳೂರು, ಮುಂಬಯಿ, ಪುಣೆ, ಚೆನ್ನೈ, ಹೈದರಾಬಾದ್, ಕೊಲ್ಕತ, ದೆಹಲಿ ಮತ್ತು ನೋಯಿಡಾಗಳಲ್ಲಿ ಕೇಂದ್ರೀಕೃತಗೊಂಡಿವೆ.

ಭಾರತದಲ್ಲಿ ಬೆಂಗಳೂರು ಸಾಫ್ಟ್‌ವೇರ್ ಕೈಗಾರಿಕೆಯಲ್ಲಿ ಅತ್ಯಂತ ಮಹತ್ವವುಳ್ಳದ್ದು. ಅದನ್ನು ಭಾರತದ 'ಸಿಲಿಕಾನ್ ವ್ಯಾಲಿ' ಎಂದು ಕರೆಯಲಾಗಿದೆ. ಮೈಸೂರು, ಮಂಗಳೂರು, ಹುಬ್ಬಳ್ಳಿ, ಉಡುಪಿಗಳು ಕರ್ನಾಟಕದ ಇತರೆ ಸಾಫ್ಟ್‌ವೇರ್ ಉದ್ಯಮ ಕೇಂದ್ರಗಳು. ಜೊತೆ ಜೊತೆಗೆ ದೇಶದಲ್ಲಿ ಹಾರ್ಡ್‌ವೇರ್ ಕೈಗಾರಿಕೆಯೂ ಅಭಿವೃದ್ಧಿಗೊಂಡಿದೆ.

ಭಾರತದಿಂದ ರಫ್ತಾಗುವ ಸರಕುಗಳಲ್ಲಿ ಸಾಫ್ಟ್‌ವೇರ್ ವಸ್ತುಗಳು ಪ್ರಮುಖವಾದುದು. ಇದರಿಂದ ದೇಶಕ್ಕೆ ಸಾಕಷ್ಟು ವಿದೇಶೀ ವಿನಿಮಯವು ಗಳಿಕೆಯಾಗುತ್ತದೆ.

© KTBS Not to be published

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಜಿಂದಾಲ್ ವಿಜಯನಗರ ಉಕ್ಕು ಕಾರ್ಖಾನೆಯು ________ ರಾಜ್ಯದಲ್ಲಿದೆ.
2. ಬಾಕ್ಸೈಟ್ ಅದಿರು ________ ಕೈಗಾರಿಕೆಯ ಪ್ರಮುಖ ಕಚ್ಚಾ ವಸ್ತು.
3. ಭಾರತದ ಅರಣ್ಯ ಆಧಾರಿತ ಕೈಗಾರಿಕೆ ________ ಆಗಿದೆ.
4. ಭಾರತದ ಪ್ರಥಮ ಆಧುನಿಕ ಕಾಗದ ಕೈಗಾರಿಕೆಯು 1932ರಲ್ಲಿ ________ ಎಂಬಲ್ಲಿ ಸ್ಥಾಪನೆಗೊಂಡಿತು.

**II. ಗುಂಪುಗಳಲ್ಲಿ ಚರ್ಚಿಸಿ ಮತ್ತು ಈ ಕೆಳಕಂಡವುಗಳಿಗೆ ಉತ್ತರಿಸಿ.**

1. ಕೈಗಾರಿಕೆಗಳೆಂದರೇನು? ಅವುಗಳ ಸ್ಥಾನೀಕರಣ ಅಂಶಗಳನ್ನು ತಿಳಿಸಿ.
2. ಭಾರತದ ಪ್ರಮುಖ ಕೈಗಾರಿಕಾ ಪ್ರದೇಶಗಳ ಪಟ್ಟಿ ಮಾಡಿ.
3. ಭಾರತದಲ್ಲಿ ಅಲ್ಯೂಮಿನಿಯಂ ಕೈಗಾರಿಕೆ ಕುರಿತು ವಿವರಿಸಿ.
4. ಭಾರತದಲ್ಲಿ ಹತ್ತಿ ಬಟ್ಟೆ ಕೈಗಾರಿಕೆಯ ಹಂಚಿಕೆ ಕುರಿತು ವಿವರಿಸಿ.
5. ಭಾರತದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳ ಪ್ರಾಮುಖ್ಯತೆ ಕುರಿತು ಬರೆಯಿರಿ.

**III. ಈ ಕೆಳಕಂಡವುಗಳನ್ನು ಸರಿ ಹೊಂದಿಸಿ.**

| ಎ | ಬಿ |
|---|---|
| 1) ಬೆಂಗಳೂರು | ಎ) ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಲಿಮಿಟೆಡ್. |
| 2) ಮುಂಬಯಿ | ಬಿ) ಭಾರತದ ಕಾಟೊನೊ ಪೊಲಿಸ್. |
| 3) ಭದ್ರಾವತಿ | ಸಿ) ಅಲ್ಯೂಮಿನಿಯಂ ಕೈಗಾರಿಕೆ. |
| 4) ರೇನೂಕೂಟ | ಡಿ) ಭಾರತದ ಸಿಲಿಕಾನ್ ವ್ಯಾಲಿ. |

**IV. ಚಟುವಟಿಕೆ :**

1. ಭಾರತದ ರೇಖಾ ನಕ್ಷೆಯನ್ನು ಬರೆದು ಅದರಲ್ಲಿ ಕಬ್ಬಿಣ ಮತ್ತು ಉಕ್ಕು ಉತ್ಪಾದನಾ ಕೇಂದ್ರಗಳನ್ನು ಗುರುತಿಸಿ ಮತ್ತು ಹೆಸರಿಸಿ.

**V. ಯೋಜನಾ ಕಾರ್ಯಗಳು :**

1. ಸಮೀಪದ ಯಾವುದಾದರೊಂದು ಕಾರ್ಖಾನೆಗೆ ಭೇಟಿ ನೀಡಿ ಮತ್ತು ವರದಿ ಸಿದ್ಧಪಡಿಸಿ.
2. ಕರ್ನಾಟಕದಲ್ಲಿ ಕಂಡುಬರುವ ವಿವಿಧ ಕೈಗಾರಿಕೆಗಳ ಪಟ್ಟಿಯನ್ನು ಸಿದ್ಧಪಡಿಸಿ ಮತ್ತು ಅವು ತಯಾರಿಸುವ ಉತ್ಪನ್ನಗಳನ್ನು ಚಾರ್ಟ್‌ನಲ್ಲಿ ಗುರುತಿಸಿ.

* * * *

© KTBS Not to be published

## ಅಧ್ಯಾಯ–11

# ಭಾರತದ ನೈಸರ್ಗಿಕ ವಿಪತ್ತುಗಳು

Y2S8A9

**ಈ ಅಧ್ಯಾಯದಲ್ಲಿ ಕೆಳಕಂಡ ಅಂಶಗಳನ್ನು ತಿಳಿಯುತ್ತೇವೆ.**

- *ನೈಸರ್ಗಿಕ ವಿಪತ್ತುಗಳ ಅರ್ಥ.*
- *ಭಾರತದಲ್ಲಿ ಆವರ್ತಮಾರುತ, ಪ್ರವಾಹ, ಭೂಕುಸಿತ, ಕಡಲಕೊರೆತ, ಮತ್ತು ಭೂಕಂಪಗಳು – ಇವುಗಳಿಗೆ ಕಾರಣ, ಪರಿಣಾಮಗಳು ಮತ್ತು ಹಂಚಿಕೆ.*

**ಅರ್ಥ :** ನೈಸರ್ಗಿಕ ಅನಾಹುತಗಳಿಂದಾಗುವ ವ್ಯಾಪಕ ವಿನಾಶದ ಫಲವೇ ನೈಸರ್ಗಿಕ ವಿಪತ್ತುಗಳು. ವಿಪತ್ತುಗಳಲ್ಲಿ ನೈಸರ್ಗಿಕ ಅಥವಾ ಮಾನವ ನಿರ್ಮಿತವೆಂದು ಎರಡು ವಿಧ. ಭೂಕಂಪ, ಜ್ವಾಲಾಮುಖಿ, ಸುನಾಮಿ, ಭೂಕುಸಿತ ಮತ್ತು ಹಿಮಪಾತಗಳು ಭೂಆಂತರಿಕ ಕ್ರಿಯೆಗಳಿಂದ ಸಂಭವಿಸುವ ನೈಸರ್ಗಿಕ ವಿಪತ್ತುಗಳು. ಹಾಗೆಯೇ ಆವರ್ತಮಾರುತ (ಸೈಕ್ಲೋನ್), ಬರಗಾಲ, ಪ್ರವಾಹ ಮತ್ತು ಸಾಂಕ್ರಾಮಿಕ ಪಿಡುಗುಗಳು ವಾಯುಗೋಳಕ್ಕೆ ಸಂಬಂಧಿಸಿದ ನೈಸರ್ಗಿಕ ವಿಪತ್ತುಗಳಾಗಿವೆ. ನೈಸರ್ಗಿಕ ವಿಪತ್ತುಗಳೆಲ್ಲಿ ಬಹಳಷ್ಟು ಅಪರೂಪಕ್ಕೆ ಹಾಗೂ ಅನಿರೀಕ್ಷಿತವಾಗಿ ಸಂಭವಿಸುವವು. ಈ ಬಗ್ಗೆ ಉತ್ತಮ ತಿಳುವಳಿಕೆ ಹೊಂದಿದ್ದರೆ ಸಂಭವಿಸಬಹುದಾದ ಹಾನಿಯನ್ನು ಮಿತಗೊಳಿಸಬಹುದು.

© KTBS Not to be published

ಭಾರತ ವಿಶಾಲವಾದ ದೇಶವಾಗಿದ್ದು ಹಲವು ನೈಸರ್ಗಿಕ ವಿಪತ್ತುಗಳನ್ನು ಎದುರಿಸುತ್ತದೆ. ಉದಾ: ಆವರ್ತಮಾರುತ, ಪ್ರವಾಹ, ಭೂಕುಸಿತ, ಕಡಲಕೊರೆತ, ಭೂಕಂಪನಗಳು ಇತ್ಯಾದಿ.

### ಆವರ್ತ ಮಾರುತಗಳು

ಕಡಿಮೆ ಒತ್ತಡವುಳ್ಳ ಕೇಂದ್ರದ ಕಡೆಗೆ ಮಾರುತಗಳು ಚಕ್ರಾಕಾರದಲ್ಲಿ ಚಲಿಸುವುದೇ ಆವರ್ತಮಾರುತ.ಈ ನೈಸರ್ಗಿಕ ವಿಪತ್ತು ವಾಯುಗೋಳಕ್ಕೆ ಸಂಭಂಧಿಸಿದೆ. ಆವರ್ತಮಾರುತಗಳಲ್ಲಿ ಉಷ್ಣವಲಯದ ಮತ್ತು ಸಮಶೀತೋಷ್ಣವಲಯದ ಆವರ್ತಮಾರುತಗಳೆಂದು ಎರಡು ವಿಧ. ಭಾರತದಲ್ಲಿ ಹೆಚ್ಚಾಗಿ ಉಷ್ಣವಲಯದ ಆವರ್ತಮಾರುತಗಳು ಸಂಭವಿಸುವವು.

**ಕಾರಣಗಳು :** ಉಷ್ಣವಲಯದ ಆವರ್ತಮಾರುತಗಳ ಉಗಮ ಮತ್ತು ಬೆಳವಣಿಗೆಗೆ ಕಾರಣವಾದ ಪರಿಸ್ಥಿತಿಗಳೆಂದರೆ; 1) ಅಧಿಕ ಉಷ್ಣಾಂಶ, 2) ಪ್ರಶಾಂತ ವಾಯು ಮತ್ತು 3) ಹೆಚ್ಚು ತೇವಾಂಶ ಭರಿತ ವಾಯು. ಈ ಪರಿಸ್ಥಿತಿಗಳು ಕಡಿಮೆ ಒತ್ತಡದ ಕೋಶವನ್ನು ನಿರ್ಮಿಸುತ್ತವೆ. ಕಡಿಮೆ ಒತ್ತಡಕೋಶದ ಸುತಲೂ ಸಾಪೇಕ್ಷವಾದ ಅಧಿಕ ಒತ್ತಡವಿರುತದೆ. ಹೀಗಾಗಿ ಸುತ್ತಲಿನ ಅಧಿಕ ಒತ್ತಡ ಪ್ರದೇಶದಿಂದ ಕಡಿಮೆ ಒತ್ತಡದ ಕೇಂದ್ರದ ಕಡೆಗೆ ಚಕ್ರಾಕಾರದಲ್ಲಿ ಮಾರುತಗಳು ಬೀಸುವುದರಿಂದ ಆವರ್ತಮಾರುತ ಅಥವಾ ಸೈಕ್ಲೋನ್‌ಗಳು ಸಂಭವಿಸುತ್ತವೆ. ಇಂತಹ ಪರಿಸ್ಥಿತಿಗಳು ಸಾಮಾನ್ಯವಾಗಿ ಉಷ್ಣವಲಯದ ಸಮುದ್ರ ಭಾಗಗಳಲ್ಲಿ ಕಂಡುಬರುತ್ತವೆ.

**ಪರಿಣಾಮಗಳು :** ಉಷ್ಣವಲಯದ ಆವರ್ತಮಾರುತಗಳು ಬಹಳ ವಿನಾಶಕಾರಿಯಾದವು. ಅವು ಸಾವು ಮತ್ತು ಆಸಿಗಳಿಗೆ ಹಾನಿಯನ್ನುಂಟುಮಾಡುತವೆ, ಕಟ್ಟಡಗಳಿಗೆ ಧಕ್ಕೆ, ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳನ್ನು ಅಸವ್ಯಸಗೊಳಿಸುತವೆ. ವಿದ್ಯುತ್ ಸರಬರಾಜಿಗೆ ಅಡಚಣೆ, ಬೆಳೆಗಳು, ಸ್ವಾಭಾವಿಕ ಸಸ್ಯವರ್ಗ, ಪ್ರಾಣಿ ಸಂಕುಲ ಮೊದಲಾದವುಗಳಿಗೂ ಹಾನಿಯನ್ನುಂಟುಮಾಡುವವು.

**ಹಂಚಿಕೆ :** ಭಾರತದಲ್ಲಿ ಉಷ್ಣವಲಯದ ಆವರ್ತಮಾರುತಗಳು ಬಹುವಾಗಿ ಬಂಗಾಳಕೊಲ್ಲಿಯಲ್ಲಿ ಸಂಭವಿಸುತ್ತವೆ. ಹೀಗಾಗಿ ದೇಶದ ಪೂರ್ವಕರಾವಳಿಯು ಆವರ್ತಮಾರುತ ಪೀಡಿತ ಪ್ರದೇಶವಾಗಿ

ಪರಿಣಮಿಸುತ್ತದೆ. ಇದರಲ್ಲಿ ತಮಿಳುನಾಡು, ಆಂಧ್ರಪ್ರದೇಶ, ಒಡಿಶಾ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ತೀರಗಳು ಸೇರಿವೆ. ಅಪರೂಪವಾಗಿ ಕೆಲವೇ ಆವರ್ತಮಾರುತಗಳು ಅರಬ್ಬಿಸಮುದ್ರದಲ್ಲಿ ಸಂಭವಿಸುವವು.

ಭಾರತದಲ್ಲಿ ಉಷ್ಣವಲಯದ ಆವರ್ತಮಾರುತಗಳು ಹೆಚ್ಚಾಗಿ ಈಶಾನ್ಯ ಮಾನ್ಸೂನ್ ಮಾರುತಗಳ ಕಾಲದಲ್ಲಿ ಸಂಭವಿಸುವವು. ಅದರಲ್ಲೂ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಅವುಗಳ ತೀವ್ರತೆ ಹೆಚ್ಚು. ಅಪರೂಪಕ್ಕೊಮ್ಮೆ ಮೇ ಮತ್ತು ಜೂನ್ ತಿಂಗಳಲ್ಲಿ ಸಂಭವಿಸುವವು.

**ಮುನ್ನೆಚ್ಚರಿಕಾ ಕ್ರಮಗಳು :** ಆವರ್ತಮಾರುತಗಳು ನೈಸರ್ಗಿಕ ವಿಪತ್ತುಗಳಾಗಿದ್ದು, ಅವುಗಳನ್ನು ನಾವು ತಡೆಗಟ್ಟಲಾಗುವುದಿಲ್ಲ. ಆದರೆ ಜನರು ಮುನ್ನೆಚ್ಚರಿಕೆಯ ಕಡೆಗೆ ಲಕ್ಷ್ಯಕೊಡಬಹುದು. ಅವರು ಆಕಾಶವಾಣಿ, ದೂರದರ್ಶನ ಮತ್ತು ಇತರೆ ಸಂಪರ್ಕಮಾಧ್ಯಮಗಳು ಬಿತ್ತರಿಸುವ ಎಚ್ಚರಿಕೆಗಳನ್ನು ಗಮನಿಸಬೇಕು. ಆವರ್ತಮಾರುತಗಳು ಸಂಭವಿಸಿದ ಸಂದರ್ಭಗಳಲ್ಲಿ ಜನರಿಗೆ ತಾತ್ಕಾಲಿಕ ಆಶ್ರಯ ಕಲ್ಪಿಸಬೇಕು. ಆವರ್ತಮಾರುತಗಳ ಹೊಡೆತ ಮತ್ತು ಕಡಲಕೊರತೆಗಳನ್ನು ನಿಯಂತ್ರಿಸುವಂತಹ ಮಾಂಗ್ರೋವ್ ಕಾಡು ಮತ್ತು ಆಳಕ್ಕೆ ಬೇರು ಬಿಡುವ ಇತರೆ ಮರಗಳನ್ನು ಸಮುದ್ರ ತೀರದಲ್ಲಿ ಬೆಳೆಸಬೇಕು.

## ಪ್ರವಾಹಗಳು

ಕೆಲವೊಮ್ಮೆ ನದಿಗಳು ತಮ್ಮ ದಂಡೆಗಳಾಚೆಗೂ ಉಕ್ಕಿ ಹರಿದಾಗ ಪಕ್ಕದ ಭಾಗಗಳು ಜಲಾವೃತಗೊಳ್ಳುತ್ತವೆ. ಇದನ್ನು 'ನದಿ ಪ್ರವಾಹ' ಎನ್ನುವರು. ಇದು ಭಾರತದಲ್ಲಿ ಆಗಿಂದಾಗ್ಗೆ ಸಂಭವಿಸುವ ನೈಸರ್ಗಿಕ ವಿಪತ್ತು. ಪ್ರತಿ ವರ್ಷವೂ ದೇಶದ ಒಂದಲ್ಲಾ ಒಂದು ಭಾಗದಲ್ಲಿ ಇಂತಹ ಪ್ರವಾಹಗಳು ಸಂಭವಿಸುವವು.

© KTBS Not to be published

**ಕಾರಣಗಳು :** ಪ್ರವಾಹಗಳು ನೈಸರ್ಗಿಕ ಪರಿಸ್ಥಿತಿಗಳಿಂದ ಮಾತ್ರವಲ್ಲ ಮಾನವ ಕೃತ್ಯಗಳಿಂದಲೂ ಸಂಭವಿಸುತ್ತವೆ. ನೈಸರ್ಗಿಕ ಪರಿಸ್ಥಿತಿಗಳಲ್ಲಿ ಅತ್ಯಧಿಕ ಮಳೆ, ಹಿಮಕರಗುವಿಕೆ, ಆವರ್ತಮಾರುತ, ಮೇಘಸ್ಫೋಟ, ನದಿಸರಾಗವಾಗಿ ಹರಿಯಲಾರದಷ್ಟು ಅಡಚಣೆ, ನದಿ ಪಾತ್ರದಲ್ಲಿ ಹೂಳುತುಂಬುವಿಕೆ ಇತ್ಯಾದಿಗಳು ಸೇರುತ್ತವೆ. ಮಾನವ ಕೃತ್ಯಗಳಲ್ಲಿ ಅರಣ್ಯನಾಶ, ಅವೈಜ್ಞಾನಿಕ ನೀರಾವರಿ ವ್ಯವಸ್ಥೆ ಮತ್ತು ಕೃಷಿ ಪದ್ಧತಿ, ಒಡ್ಡು ಮತ್ತು ಅಣೆಕಟ್ಟುಗಳು ಒಡೆದು ಹೋಗುವುದರಿಂದ ಮತ್ತು ಶೀಘ್ರಗತಿಯ ನಗರೀಕರಣ ಮುಖ್ಯವಾದವು.

**ಪರಿಣಾಮಗಳು :** ಪ್ರವಾಹಗಳಿಂದಾಗುವ ಪ್ರಮುಖ ಪರಿಣಾಮಗಳೆಂದರೆ; ಜೀವಹಾನಿ, ಆಸ್ತಿಗೆ ಧಕ್ಕೆ, ಬೆಳೆ ಮತ್ತು ಸಸ್ಯವರ್ಗಗಳಿಗೆ ಹಾನಿ, ಸಾರಿಗೆ ಸಂಪರ್ಕಗಳ ಅವ್ಯವಸ್ಥೆ, ಮಣ್ಣಿನ ಸವೆತ, ಮೂಲ ಸೌಲಭ್ಯಗಳ ವ್ಯತ್ಯಯ ಇತ್ಯಾದಿ.

### ಪ್ರವಾಹ ಪೀಡಿತ ಪ್ರದೇಶಗಳು

1) ಗಂಗ ಮತ್ತು ಬ್ರಹ್ಮಪುತ್ರ ನದಿ ಬಯಲುಗಳು. ಅವು ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳ ಭಾಗಗಳನ್ನೊಳಗೊಂಡಿವೆ. 2) ಸಟ್ಲೇಜ್, ಬಿಯಾಸ್, ರಾವಿ ಮತ್ತು ಚೇನಾಬ್ ಬಯಲುಗಳು. ಅವು ಜಮ್ಮು- ಕಾಶ್ಮೀರ ಮತ್ತು ಹಿಮಾಚಲ ಪ್ರದೇಶಗಳ ಕೆಲವು ಭಾಗಗಳನ್ನೊಳಗೊಂಡಿವೆ. 3) ಪರ್ಯಾಯ ಪ್ರಸ್ಥಭೂಮಿ, ನದಿಮುಖಜ ಭೂಮಿಗಳು. ಉದಾ: ಮಹಾನದಿ, ಗೋದಾವರಿ, ಕೃಷ್ಣ ಮತ್ತು ಕಾವೇರಿ ನದಿ ಮುಖಜ ಭಾಗಗಳು. ಅವು ಒಡಿಶಾ, ಮಧ್ಯಪ್ರದೇಶ, ಛತ್ತೀಸ್‌ಗರ್, ತಮಿಳುನಾಡು ಮತ್ತು ಆಂಧ್ರಪ್ರದೇಶ ಭಾಗಗಳಲ್ಲಿವೆ. ಈ ಭಾಗಗಳಲ್ಲಿ ಪ್ರವಾಹಗಳು ಅಪರೂಪ. ಇಲ್ಲಿ ಒಮ್ಮೆಲೆ ಅತ್ಯಧಿಕ ಮಳೆ ಬಿದ್ದಾಗ ಪ್ರವಾಹಗಳು ಸಂಭವಿಸುತ್ತವೆ. 4) ನರ್ಮದಾ ಮತ್ತು ತಪತಿ ನದಿಗಳ ತಗ್ಗು ಭಾಗಗಳು. ಉದಾ: ಗುಜರಾತ್.

**ಪ್ರವಾಹ ನಿಯಂತ್ರಣ ಕ್ರಮಗಳು**

i) ಜಲಾನಯನ ಪ್ರದೇಶದಲ್ಲಿ ಅರಣ್ಯ ಬೆಳೆಸುವುದು ಮತ್ತು ವೇಗವಾದ ನೀರಿನ ಹರಿವು ನಿಯಂತ್ರಣ.

ii) ಅಣೆಕಟ್ಟುಗಳನ್ನು ನಿರ್ಮಿಸಿ ಜಲಾಶಯಗಳಲ್ಲಿ ನೀರು ಸಂಗ್ರಹಿಸಿ ನದಿ ನೀರಿನ ಪ್ರಮಾಣವನ್ನು ಕಡಿಮೆಮಾಡುವುದು. ಸಂಗ್ರಹಿಸಿದ ನೀರನ್ನು ನೀರಾವರಿ ಮೊದಲಾದ ಉದ್ದೇಶಗಳಿಗಾಗಿ ಬಳಕೆ.

iii) ಜನವಸತಿಗಳ ಪ್ರದೇಶ ಮತ್ತು ಕೃಷಿ ಭೂಮಿಗಳನ್ನು ಪ್ರವಾಹದಿಂದ ರಕ್ಷಿಸಲು ಒಡ್ಡುಗಳ ನಿರ್ಮಾಣ.

iv) ಪ್ರವಾಹಗಳ ಬಗ್ಗೆ ಮುನ್ಸೂಚನೆ ಮತ್ತು ಸಕಾಲಿಕ ಮುನ್ನೆಚ್ಚರಿಕೆ ನೀಡುವುದು. ಇದು ಜನ, ಜಾನುವಾರುಗಳ ಸಾವು- ನೋವು ಮತ್ತು ಆಸ್ತಿಗಳಿಗಾಗುವ ನಷ್ಟವನ್ನು ತಡೆಯಲು ಅಗತ್ಯವಾದ ಸಕಾಲಿಕ ಕ್ರಮ.

**ಭೂಕುಸಿತಗಳು**

ಬೆಟ್ಟ ಅಥವಾ ಪರ್ವತಗಳ ಕಡಿದಾದ ಇಳಿಜಾರಿನಲ್ಲಿ ಕೆಳಗೆ ಚಲಿಸುವ ಭೂರಾಶಿಗಳಿಗೆ "ಭೂಕುಸಿತ" ಎನ್ನುವರು. ಇದು ಭೂ ಗುರುತ್ವಶಕ್ತಿಯಿಂದ ಮಣ್ಣು, ಕಲ್ಲು ಮತ್ತು ಭಗ್ನಾವಶೇಷಗಳು ಕೆಳಗೆ ಬೀಳುವ ಅಥವಾ ಜರುಗುವ ಕ್ರಿಯೆಯನ್ನೊಳಗೊಂಡಿದೆ.

**ಕಾರಣಗಳು :** ನೈಸರ್ಗಿಕ ಮತ್ತು ಮಾನವಶಕ್ತಿಗಳೆರಡೂ ಭೂಕುಸಿತಕ್ಕೆ ಕಾರಣವಾಗುತ್ತವೆ.

**ನೈಸರ್ಗಿಕ ಕಾರಣಗಳು :** ಕಡಲ ಕಡಿದಾದ ಬಂಡೆಯ ತಳವನ್ನು ಸಮುದ್ರ ಅಲೆಗಳು ಸವೆಸುವಂತಹ ಇಳಿಜಾರಿನ ಅಡಿಭಾಗದ ಸವೆತ, ಅತ್ಯಧಿಕ ಮಳೆ ಮತ್ತು ಭೂಕಂಪಗಳು.

**ಮಾನವ ಕೃತ್ಯಗಳು :** ಅರಣ್ಯನಾಶ, ರೈಲು, ರಸ್ತೆಗಳು, ಅಣೆಕಟ್ಟು, ಜಲಾಶಯ ಮತ್ತು ಜಲವಿದ್ಯುತ್ ಯೋಜನೆಗಳ ನಿರ್ಮಾಣ, ತೀವ್ರಗತಿಯ ಗಣಿಗಾರಿಕೆ, ಕಲ್ಲುಗಣಿಗಾರಿಕೆ ಇತ್ಯಾದಿ.

**ಪರಿಣಾಮಗಳು :** ಭೂಕುಸಿತಗಳೂ ಸಹ ನೈಸರ್ಗಿಕ ವಿನಾಶಕಾರಿ ವಿಪತ್ತುಗಳಾಗಿವೆ. ಇವುಗಳಿಂದಾಗುವ ಮುಖ್ಯ ಪರಿಣಾಮಗಳೆಂದರೆ; ರೈಲುಮಾರ್ಗ, ರಸ್ತೆಗಳಿಗೆ ಅಡಚಣೆ, ಜನವಸತಿ ಮತ್ತು ಸಸ್ಯವರ್ಗಗಳು ಭೂಗತವಾಗುವುದು. ಸಾವು-ನೋವು ಮತ್ತು ಆಸ್ತಿಗಳಿಗೆ ಹಾನಿ. ಇವುಗಳಲ್ಲಿ ಆಗಾಗ್ಗೆ ರಸ್ತೆಗಳಿಗೆ ಅಡಚಣೆ ಸರ್ವೆಸಾಮಾನ್ಯ.

**ಹಂಚಿಕೆ :** ಭಾರತದಲ್ಲಿ ಭೂಕುಸಿತಗಳು ಬೆಟ್ಟ-ಪರ್ವತಗಳು ಹೆಚ್ಚಾಗಿರುವ ರಾಜ್ಯಗಳಲ್ಲಿ ಸಂಭವಿಸುವವು. ಉದಾ: ಜಮ್ಮು-ಕಾಶ್ಮೀರ, ಹಿಮಾಚಲ ಪ್ರದೇಶ ಹಾಗೂ ಈಶಾನ್ಯ ರಾಜ್ಯಗಳು.

**ನಿಯಂತ್ರಣ ಕ್ರಮಗಳು :** ಇಳಿಜಾರನ್ನು ತಗ್ಗಿಸುವುದು. ಹೆದ್ದಾರಿಗಳ ಬದಿ ಮತ್ತಿತರ ಇಳಿಜಾರುಗಳಲ್ಲಿ ಬಂಡೆಗಳು ಬೀಳದಂತೆ ತಡೆಯುವುದು. ಕಡಿದಾದ ಇಳಿಜಾರುಳ್ಳ ಭಾಗ ಮತ್ತು ಜನವಸತಿಗಳ ಭಾಗಗಳಲ್ಲಿ ಗಣಿಗಾರಿಕೆ ಮತ್ತು ಕಲ್ಲುಗಣಿ ಚಟುವಟಿಕೆಗಳ ನಿಯಂತ್ರಣ, ಅರಣ್ಯೀಕರಣ ಮೊದಲಾದ ಕ್ರಮಗಳು ಭೂಕುಸಿತಗಳ ನಿಯಂತ್ರಣಕ್ಕೆ ಅವಶ್ಯ.

**ಸಮುದ್ರ ತೀರದ ಸವೆತ**

ಸಮುದ್ರ ಅಲೆಗಳು ತೀರಕ್ಕೆ ರಭಸವಾಗಿ ಅಪ್ಪಳಿಸುತ್ತವೆ. ನಿರಂತರವಾದ ಈ ಕಾರ್ಯದಿಂದ ಸಮುದ್ರ ತೀರಗಳು ಕ್ರಮೇಣ ಸವೆತಕ್ಕೊಳಗಾಗುತ್ತವೆ. ಹೀಗಾಗಿ ಸಮುದ್ರ ಅಲೆಗಳ ಅವಿರತ ಸಂಘರ್ಷಣಾ ಪ್ರಕ್ರಿಯೆಯಿಂದ ತೀರವು ಸವೆಯುವ ಮತ್ತು ವಸ್ತುಗಳ ಒಯ್ಯುವಿಕೆಗೆ 'ಸಮುದ್ರದ ಕೊರೆತ' ಎನ್ನುವರು.

© KTBS Not to be published

**ಕಾರಣ ಮತ್ತು ಹಂಚಿಕೆ :** ಸಮುದ್ರ ತೀರದ ಸವೆತಕ್ಕೆ ಸಮುದ್ರ ಅಲೆ ಮತ್ತು ಸಮುದ್ರ ಪ್ರವಾಹಗಳು ಮುಖ್ಯಕಾರಣಗಳು. ಭಾರತದಲ್ಲಿ ತೀರದ ಸವೆತಕ್ಕೆ ಈ ಕೆಳಕಂಡ ಮೂರು ಕಾರಣಗಳು ಪ್ರಮುಖವಾದವು.

**i) ನೈಋತ್ಯ ಮಾನ್ಸೂನ್ ಮಾರುತಗಳು :** ಇವು ಭಾರತದ ಪಶ್ಚಿಮ ಕರಾವಳಿಯು ತೀವ್ರಗತಿಯಲ್ಲಿ ಸವೆಸುವುದಕ್ಕೆ ಕಾರಣವಾಗುತ್ತವೆ. ಈ ಸಂದರ್ಭದಲ್ಲಿ ಗುಜರಾತ್, ಮಹಾರಾಷ್ಟ್ರ, ಗೋವ, ಕರ್ನಾಟಕ, ಕೇರಳ ಮತ್ತು ತಮಿಳುನಾಡಿನ ತೀರಗಳು ಹೆಚ್ಚು ಸವೆತಕ್ಕೊಳಗಾಗುತ್ತವೆ.

**ii) ಉಷ್ಣವಲಯದ ಆವರ್ತಮಾರುತಗಳು :** ಈಶಾನ್ಯ ಮಾನ್ಸೂನ್ ಮಾರುತಗಳ ಕಾಲದಲ್ಲಿ ಬಂಗಾಳಕೊಲ್ಲಿಯಲ್ಲಿ ಸಂಭವಿಸುವವು. ಇವು ಹೆಚ್ಚು ವಿನಾಶಕಾರಿ. ಭಾರತದ ಪೂರ್ವ ಕರಾವಳಿಯ ತೀವ್ರ ಸವೆತಕ್ಕೆ ಕಾರಣವಾಗುತ್ತವೆ. ತಮಿಳುನಾಡು, ಆಂಧ್ರಪ್ರದೇಶ ಮತ್ತು ಒಡಿಶಾ ತೀರಗಳು ಸವೆತಕ್ಕೊಳಗಾಗುವವು.

**iii) ಸುನಾಮಿ :** ಸಮುದ್ರ ತಳದಲ್ಲಿ ಸಂಭವಿಸುವ ಭೂಕಂಪನದಿಂದಾಗುವ ದೈತ್ಯಾಕಾರದ ಅಲೆಗಳಿಗೆ ಸುನಾಮಿ ಎನ್ನುವರು. ಇವು ಭಾರತದ ತೀರಗಳ ಸವೆತಕ್ಕೆ ಕಾರಣವಾಗುವವು. ಅದರಲ್ಲೂ ವಿಶೇಷವಾಗಿ ಪೂರ್ವಕರಾವಳಿ ಮತ್ತು ಅಂಡಮಾನ-ನಿಕೋಬಾರ್‌ದ್ವೀಪಗಳ ಕರಾವಳಿಗಳ ಕೊರೆತದಲ್ಲಿ ಹೆಚ್ಚು ಪರಿಣಾಮ ಬೀರುವವು.

ಮಾನವನ ಕೆಲವು ಕೃತ್ಯಗಳೂ ಸಹ ಸಮುದ್ರ ತೀರಗಳ ಕೊರೆತಕ್ಕೆ ಕಾರಣವಾಗುತ್ತವೆ. ಉದಾ: ಮಿತಿಮೀರಿದ ಮರಳು ಮತ್ತು ಕಲ್ಲು ಗಣಿಗಾರಿಕೆ, ಅಲೆತಡೆಗಳ ನಿರ್ಮಾಣ ಮೊದಲಾದವು.

**ಪರಿಣಾಮಗಳು :** ಸಮುದ್ರ ಕೊರೆತವು ಒಂದು ನೈಸರ್ಗಿಕ ವಿಪತ್ತು. ಇದರ ಮುಖ್ಯ ಪರಿಣಾಮಗಳೆಂದರೆ; i) ಕರಾವಳಿ ಪ್ರದೇಶದ ಕಟ್ಟಡ ಮತ್ತು ಮರಗಳು ಕೊಚ್ಚಿಹೋಗುವುದು. ii) ಕರಾವಳಿಯ ರಸ್ತೆ ಮತ್ತು ರೈಲು ಮಾರ್ಗಗಳಿಗೆ ಧಕ್ಕೆ. iii) ಹೆಚ್ಚು ಕಾಲ ಕರಾವಳಿಯಲ್ಲಿ ನೀರು ತುಂಬಿಕೊಳ್ಳುವುದರಿಂದ ಅಲ್ಲಿನ ಜನರಿಗೆ ಪುನರ್ವಸತಿ ಕಲ್ಪಿಸುವ ಸಮಸ್ಯೆ.

**ನಿಮಗೆ ತಿಳಿದಿರಲಿ**

***ಸಮುದ್ರ ತಡೆಗಟ್ಟು :*** *ದೊಡ್ಡಗಾತ್ರದ ಕಲ್ಲಿನ ದಿಂಡು ಅಥವಾ ಕಾಂಕ್ರೀಟ್ ದಿಮ್ಮಿಗಳನ್ನು ಸಮುದ್ರ ತೀರಕ್ಕೆ ಸಮಕೋನದಲ್ಲಿ ರಾಶಿ ಹಾಕಿದ್ದು ತೀರದ ಸವೆತವನ್ನು ನಿಯಂತ್ರಿಸಲಾಗುವುದು.*

***ಸಮುದ್ರ ತಡೆಗೋಡೆ :*** *ಸಮುದ್ರ ಅಲೆಗಳ ಸವೆತದಿಂದ ತೀರವನ್ನು ರಕ್ಷಣೆ ಮಾಡಲು ಸಮುದ್ರದಂಚಿಗೆ ನಿರ್ಮಿಸುವ ಗೋಡೆ.*

**ನಿಯಂತ್ರಣ ಕ್ರಮಗಳು :** i) ಸಮುದ್ರ ಅಲೆಗಳ ಹೊಡೆತವನ್ನು ನಿಯತ್ರಿಸಲು ಸಮುದ್ರ ಗೋಡೆ, ತಡೆಗಟ್ಟು ಮತ್ತು ಅಲೆತಡೆಗಳ ನಿರ್ಮಾಣ. ii) ತೀರಗಳಲ್ಲಿ ಮರಳು ಮತ್ತು ಗಣಿಗಾರಿಕೆಗಳ ನಿಷೇದ. iii) ಸಮುದ್ರ ದಡ ಮತ್ತು ಮರಳು ರಾಶಿಗಳನ್ನು ಉಳಿಸಲು ಮತ್ತು ಸುಸ್ಥಿರತೆಗಾಗಿ ಮರಗಳನ್ನು ಬೆಳೆಸುವುದು.

**ಭೂಕಂಪಗಳು**

ಭೂಚಿಪ್ಪಿನಲ್ಲಾಗುವ ರಭಸವಾದ ಕಂಪನವನ್ನು ಭೂಕಂಪವೆನ್ನುವರು. ನೈಸರ್ಗಿಕ ವಿಪತ್ತುಗಳಲ್ಲಿ ಒಂದಾಗಿದೆ.


**ಕಾರಣಗಳು :** ಭೂಕಂಪಗಳು ಭೂಫಲಕಗಳ ಚಲನೆ, ಜ್ವಾಲಾಮುಖಿ, ಶಿಲಾಸ್ತರಗಳ ಭಂಗ ಮತ್ತು ಮಡಿಕೆ, ಭೂಕುಸಿತ, ಅಂತರ್ಗುಹೆ ಮೇಲ್ಛಾವಣಿಯ ಕುಸಿತ, ಮಾನವ ನಿರ್ಮಿತ ಜಲಾಶಯಗಳ ನೀರಿನ ಭಾರ ಮೊದಲಾದ ಕಾರಣಗಳಿಂದ ಸಂಭವಿಸುತ್ತವೆ. ಭಾರತದಲ್ಲಿ ಈವರೆಗೆ ಸಂಭವಿಸಿರುವ ಭೂಕಂಪನಗಳಲ್ಲಿ ಬಹಳಷ್ಟು ಭೂಫಲಕಗಳ ಚಲನೆಯಿಂದ ಸಂಭವಿಸಿದವು.

**ಪರಿಣಾಮಗಳು :** ಭೂಕಂಪಗಳ ಅನಾಹುತಗಳಿಂದಾಗುವ ಪ್ರಮುಖ ಪರಿಣಾಮಗಳೆಂದರೆ; ನೆಲದ ಮೇಲಿನ ಬಿರುಕು, ಕಟ್ಟಡ, ರೈಲು ಮಾರ್ಗ, ರಸ್ತೆ, ವಿದ್ಯುತ್ ಸಂಚಾರ, ಸಂಪರ್ಕ ಮಾದ್ಯಮ, ಸೇತುವೆ, ಅಣೆಕಟ್ಟುಗಳ ಒಡೆತ, ಕಾರ್ಖಾನೆಗಳಿಗೆ ಹಾನಿ, ಮಾನವ ಮತ್ತು ಜಾನುವಾರುಗಳ ಸಾವು ಮತ್ತು ಆಸ್ತಿಗಳಿಗೆ ಹಾನಿ. ಜೊತೆಗೆ ಬೆಂಕಿ ಅನಾಹುತ, ಭೂಕುಸಿತ, ಅಂತರ್ಜಲ ಮಟ್ಟದಲ್ಲಿ ವ್ಯತ್ಯಾಸ, ನದಿ ವ್ಯವಸ್ಥೆಯ ವಿಚಲನೆ ಅಥವಾ ಅಡಚಣೆ ಇತ್ಯಾದಿ.

© KTBS Not to be republished

**ಹಂಚಿಕೆ :** ಭಾರತದಲ್ಲಿ ಕೆಳಕಂಡ ಮೂರು ಪ್ರಮುಖ ಭೂಕಂಪನದ ವಲಯಗಳಿವೆ;

**i) ಹಿಮಾಲಯ ವಲಯ :** ಇದು ಭಾರತದಲ್ಲಿ ಹೆಚ್ಚು ತೀವ್ರತೆಯುಳ್ಳ ಭೂಕಂಪನದ ವಲಯ. ಇದು ಜಮ್ಮು-ಕಾಶ್ಮೀರ, ಹಿಮಾಚಲಪ್ರದೇಶ, ಉತ್ತರಾಂಚಲ ಮತ್ತು ಬಿಹಾರ ಭಾಗಗಳನ್ನೊಳಗೊಂಡಿದೆ. ಇಲ್ಲಿ ಭೂಫಲಕಗಳ ಚಲನೆಯ ಪರಿಣಾಮದಿಂದ ಭೂಕಂಪಗಳು ಸಂಭವಿಸುತ್ತವೆ. ಉದಾ: ಚಾಮೋಲಿ ಮತ್ತು ಉತ್ತರಕಾಶಿ.




**ii) ಸಿಂಧೂ-ಗಂಗ ವಲಯ :** ಇದು ಹಿಮಾಲಯ ವಲಯದ ದಕ್ಷಿಣ ಭಾಗದಲ್ಲಿದೆ. ಇದರಲ್ಲಿ ರಾಜಸ್ತಾನ, ಪಂಜಾಬ್, ಹರಿಯಾಣ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳಗಳ ಮೈದಾನಗಳು ಸೇರಿವೆ. ಇದೊಂದು ಮದ್ಯಮ ತೀವ್ರತೆಯುಳ್ಳ ಭೂಕಂಪನ ವಲಯವಾಗಿದೆ.

**iii) ಪರ್ಯಾಯ ದ್ವೀಪವಲಯ :** ಇದು ಲಕ್ಷದ್ವೀಪ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಹಾಗೂ ಕಛ್ ಪ್ರದೇಶಗಳನ್ನೊಳಗೊಂಡಿದೆ. ಭಾರತದ ಪರ್ಯಾಯ ದ್ವೀಪವು ಅಚಲವಾದ ಭೂಭಾಗವೆಂದು ಪರಿಗಣಿಸಲಾಗಿದ್ದು, ಈ ವಲಯದಲ್ಲಿ ಭೂಕಂಪಗಳು ಸಂಭವಿಸುವುದು ಕಡಿಮೆ. ಹೀಗಾಗಿ ಇತ್ತೀಚಿಗೆ ಈ ವಲಯವನ್ನು 'ಕನಿಷ್ಠ ಭೂಕಂಪ ತೀವ್ರತೆಯ ವಲಯ' ಎಂದು ಪರಿಗಣಿಸಲಾಗಿದೆ.

© KTBS
Not to be published

**ಮುನ್ನೆಚ್ಚರಿಕಾ ಕ್ರಮಗಳು :**

- ಭೂಕಂಪನಾವಲಯಗಳಲ್ಲಿ ಜನವಸತಿಗಳ ನಿರ್ಮಾಣ ನಿಷೇಧ.
- ಭೂಕಂಪನ ನಿರೋಧಕ ಕಟ್ಟಡಗಳ ನಿರ್ಮಾಣವನ್ನು ಅನುಸರಿಸುವುದು.
- ಉತ್ತಮ ದರ್ಜೆಯ ಕಟ್ಟಡ ನಿರ್ಮಾಣದ ವಸ್ತುಗಳ ಬಳಕೆ ಮತ್ತು ಬಹುಮಹಡಿ ಕಟ್ಟಡ ನಿರ್ಮಾಣವನ್ನು ಕೈಬಿಡುವುದು.
- ಅಂತರ್ಜಲಕ್ಕಾಗಿ ಬಾವಿಗಳ ಆಳಕೊರೆತವನ್ನು ನಿಷೇಧಿಸುವುದು.
- ಭೂಕಂಪನ ತೀವ್ರತೆಯುಳ್ಳ ಬೆಟ್ಟ-ಗುಡ್ಡ ಪ್ರದೇಶಗಳಲ್ಲಿ ನಗರ ಬೆಳೆವಣಿಗೆಗೆ ನಿರ್ಬಂಧ.
- ಬಹುದೊಡ್ಡ ಅಣೆಕಟ್ಟು ಮತ್ತು ಜಲಾಶಯಗಳ ನಿರ್ಮಾಣಕ್ಕೆ ನಿಷೇಧ.
- ಅರಣ್ಯನಾಶ ಮತ್ತು ತೀವ್ರ ಸ್ವರೂಪದ ಗಣಿಗಾರಿಕಾ ಚಟುವಟಿಕೆಗಳನ್ನು ತಡೆಗಟ್ಟುವುದು.
- ಭೂಕಂಪಗಳು ಸಂಭವಿಸಿದ ನಂತರ ಕೈಗೊಳ್ಳಬೇಕಾದ ಪರಿಹಾರ ಕ್ರಮಗಳೂ ಅಷ್ಟೇ ಮುಖ್ಯ.

ಉದಾ : ಆಹಾರ ಪೂರೈಕೆ, ಪುನರ್ವಸತಿ ವ್ಯವಸ್ಥೆ, ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆ ಕ್ರಮ, ವೈದ್ಯಕೀಯ ವ್ಯವಸ್ಥೆ ಇತ್ಯಾದಿ.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ.**

1. ಅತ್ಯಂತ ವಿನಾಶಕಾರಿ ವಾಯುಗೋಳೀಯ ವಿಪತ್ತು ________ .
2. ಭಾರತದ ಪೂರ್ವಕರಾವಳಿಯು ಹೆಚ್ಚು ________ ಪೀಡಿತ ಪ್ರದೇಶವಾಗಿದೆ.
3. ಭಾರತದ ಪರ್ಯಾಯ ಪ್ರಸ್ಥಭೂಮಿಯಲ್ಲಿ ________ ಗಳು ಸಂಭವಿಸುವುದು ಅಪರೂಪ.
4. ಭಾರತದಲ್ಲಿ ಆಗಾಗ್ಗೆ ________ ಗಳು ಬೆಟ್ಟ-ಗುಡ್ಡಗಳುಳ್ಳ ರಾಜ್ಯಗಳಲ್ಲಿ ಸಂಭವಿಸುವವು.
5. ಕಡಲ ಕೊರೆತಗಳು ಬಹುವಾಗಿ ________ ಗಳ ಕ್ರಿಯೆಗಳಿಂದ ಸಂಭವಿಸುವವು.

**II. ಗುಂಪುಗಳಲ್ಲಿ ಚರ್ಚಿಸಿ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ನೈಸರ್ಗಿಕ ವಿಪತ್ತುಗಳೆಂದರೇನು?
2. ಪ್ರವಾಹಗಳೆಂದರೇನು? ಪ್ರವಾಹಗಳುಂಟಾಗುವುದಕ್ಕೆ ನೈಸರ್ಗಿಕ ಕಾರಣ ತಿಳಿಸಿ.
3. ಆವರ್ತ ಮಾರುತವೆಂದರೇನು? ಅವುಗಳ ಪ್ರಮುಖ ಪರಿಣಾಮಗಳನ್ನು ತಿಳಿಸಿ.
4. ಭೂಕುಸಿತಗಳು ಉಂಟಾಗುವ ಬಗೆ ಮತ್ತು ಪರಿಣಾಮಗಳನ್ನು ವಿವರಿಸಿ.
5. ಭಾರತದಲ್ಲಿ ಕಡಲ ಕೊರತೆಗಳುಂಟಾಗುವುದಕ್ಕೆ ಕಾರಣ ಮತ್ತು ಹಂಚಿಕೆಗಳನ್ನು ಕುರಿತು ಬರೆಯಿರಿ.
6. ಭೂಕಂಪಗಳಿಂದಾಗುವ ಪರಿಣಾಮಗಳನ್ನು ಮಿತಗೊಳಿಸಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿ.

**III. ಚಟುವಟಿಕೆಗಳು :**

1. ಭಾರತದ ರೇಖಾ ನಕ್ಷೆಯನ್ನು ರಚಿಸಿ. ಅದರಲ್ಲಿ ಪ್ರವಾಹ ಮತ್ತು ಆವರ್ತಮಾರುತ ಪೀಡಿತ ಪ್ರದೇಶಗಳನ್ನು ಗುರುತಿಸಿ.
2. ಕಳೆದ 100 ವರ್ಷಗಳಲ್ಲಿ ಭಾರತದಲ್ಲಿ ಸಂಭವಿಸಲ್ಪಟ್ಟ ಅತ್ಯಂತ ವಿನಾಶಕಾರಿ ಭೂಕಂಪಗಳ ಪಟ್ಟಿಯನ್ನು ಸಿದ್ಧಪಡಿಸಿ.

**IV. ಯೋಜನಾ ಕಾರ್ಯ :**

1. ನೈಸರ್ಗಿಕ ವಿಪತ್ತುಗಳ ಛಾಯಾಚಿತ್ರಗಳನ್ನು ಸಂಗ್ರಹಿಸಿ ಮತ್ತು ಒಂದು ಆಲ್ಬಮ್ ತಯಾರಿಸಿ.

* * * *

© KTBS Not to be published

## ಅಧ್ಯಾಯ–12

# ಭಾರತದ ಜನಸಂಖ್ಯೆ

U6R4P4

**ಈ ಅಧ್ಯಾಯದಲ್ಲಿ ಕೆಳಕಂಡ ಅಂಶಗಳನ್ನು ತಿಳಿಯುತ್ತೇವೆ.**


- *ಭಾರತದ ಜನಸಂಖ್ಯೆಯ ಗಾತ್ರ.*
- *ಭಾರತದ ಜನಸಂಖ್ಯಾ ಬೆಳವಣಿಗೆ.*
- *ಜನಸಂಖ್ಯಾ ಬೆಳವಣಿಗೆಗೆ ಕಾರಣಗಳು.*
- *ಜನಸಂಖ್ಯೆಯ ಹಂಚಿಕೆ ಮತ್ತು ಸಾಂದ್ರತೆ.*
- *ಜನಸಂಖ್ಯೆಯ ಹಂಚಿಕೆಯನ್ನು ನಿರ್ಧರಿಸುವ ಅಂಶಗಳು.*

**ಜನಸಂಖ್ಯೆಯ ಗಾತ್ರ :** ನಿಗದಿತದ ಪ್ರದೇಶವೊಂದರಲ್ಲಿ ವಾಸಿಸುವ ಜನರ ಒಟ್ಟು ಸಂಖ್ಯೆಗೆ 'ಜನಸಂಖ್ಯೆ' ಎನ್ನುವರು. ಪ್ರಪಂಚದಲ್ಲಿ ಚೀನಾದ ತರುವಾಯ ಭಾರತವು ಎರಡನೆಯ ಜನಭರಿತ ದೇಶ. 2011ರ ಜನಗಣತಿಯಂತೆ ಭಾರತದ ಒಟ್ಟು ಜನಸಂಖ್ಯೆ 121.01 ಕೋಟಿ. ಪ್ರಪಂಚದ ಭೂ ಪ್ರದೇಶದಲ್ಲಿ ಶೇ. 2.4 ಭಾಗವುಳ್ಳ ಭಾರತದ ಜನಸಂಖ್ಯೆ ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ ಶೇ. 17.5 ಭಾಗವಾಗಿರುತ್ತದೆ.

© KTBS
Not to be republished

**ಜನಸಂಖ್ಯಾ ಬೆಳವಣಿಗೆ :** ಕಳೆದ ಶತಮಾನದ ಆರಂಭದಲ್ಲಿ ಅಂದರೆ 1901 ರಿಂದ 1921ರವರೆಗೆ ಭಾರತದ ಜನಸಂಖ್ಯಾ ಬೆಳವಣಿಗೆಯು ನಿಧಾನದ ಗತಿಯಲ್ಲಿತ್ತು. ಇದಕ್ಕೆ ಅಧಿಕ ಮರಣದರ ಮುಖ್ಯಕಾರಣ. ಮಾರಣಾಂತಿಕ ಕಾಯಿಲೆ ಮತ್ತು ವೈದ್ಯಕೀಯ ಸೌಲಭ್ಯಗಳ ಕೊರತೆಯಿಂದಾಗಿ ಮರಣದರ ಹೆಚ್ಚಾಗಿತ್ತು. 1921–1951ರ ಅವಧಿಯನ್ನು ಸಾಧಾರಣ ಜನಸಂಖ್ಯಾ ಬೆಳವಣಿಗೆ ಕಾಲವೆಂದು ಪರಿಗಣಿಸಲಾಗಿದೆ. ಇದಕ್ಕೆ ಭಯಂಕರ ಪಿಡುಗುಗಳ ನಿಯಂತ್ರಣ, ವೈದ್ಯಕೀಯ ಸೌಲಭ್ಯದಲ್ಲಿ ಸುಧಾರಣೆ ಹಾಗೂ ನೈರ್ಮಲ್ಯೀಕರಣ ನಿರ್ವಹಣೆಗಳಿಂದಾಗಿ ಮರಣ ದರಲ್ಲಿ ಇಳಿಕೆಯಾದುದು ಮುಖ್ಯ ಕಾರಣ.

1951–1991ರ ಅವಧಿಯಲ್ಲಿ ಜನಸಂಖ್ಯಾ ಬೆಳವಣಿಗೆ ದರವು ತ್ವರಿತವಾಗಿತ್ತು. ಸುಮಾರು ಮೂರು ಪಟ್ಟು ಜನಸಂಖ್ಯೆ ಹೆಚ್ಚಾಗಿತ್ತು. ಇದಕ್ಕೆ ಕಾರಣಗಳೆಂದರೆ ಮರಣ ದರದಲ್ಲಿ ಇನ್ನಷ್ಟು ಇಳಿತ, ಪ್ರತಿಯಾಗಿ ಜನನ ದರದ ಹೆಚ್ಚಳ ಮುಂದುವರಿದದ್ದು. 1981ರ ನಂತರ ಜನಸಂಖ್ಯೆಯ ಬೆಳವಣಿಗೆಯಲ್ಲಿ ಇಳಿತ ಆರಂಭಗೊಂಡಿತು. ಅದು 1981ರಲ್ಲಿದ್ದ ಶೇ 24.7 ರಿಂದ 2011ರ ವೇಳೆಗೆ ಶೇ 17.64ಕ್ಕೆ ಇಳಿಕೆಯಾಗಿತ್ತು.




**ಜನಸಂಖ್ಯೆಯ ಬೆಳೆವಣಿಗೆಗೆ ಕಾರಣಗಳು:** ಭಾರತದ ಜನಸಂಖ್ಯೆಯ ಬೆಳವಣಿಗೆಗೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಪ್ರಮುಖವಾದವು ಈ ಕೆಳಕಂಡಂತಿವೆ.

**1) ಅಧಿಕ ಜನನ ದರ :** ಇದು ಭಾರತದಲ್ಲಿ ಜನಸಂಖ್ಯೆಯು ಶೀಘ್ರಗತಿಯಲ್ಲಿ ಬೆಳೆಯಲು ಪ್ರಮುಖ ಅಂಶವಾಗಿದೆ. ಬಾಲ್ಯವಿವಾಹ, ಧಾರ್ಮಿಕ ಮತ್ತು ಸಾಮಾಜಿಕ ಮೂಢನಂಬಿಕೆಗಳು, ಬಹುಪತ್ನಿತ್ವ, ಬಡತನ, ಅನಕ್ಷರತೆ, ಉಷ್ಣವಲಯದ ವಾಯುಗುಣ ಮೊದಲಾದವು ಜನನ ದರ ಹೆಚ್ಚಾಗಲು ಕಾರಣವಾಗಿವೆ.

**2) ಕಡಿಮೆ ಮರಣ ದರ :** ಇದು ಭಾರತದ ಜನಸಂಖ್ಯೆಯ ಬೆಳವಣಿಗೆಗೆ ಮತ್ತೊಂದು ಕಾರಣ. ವೈದ್ಯಕೀಯ ಸೌಲಭ್ಯದಲ್ಲಿ ಸುಧಾರಣೆ, ಪ್ರಾಣಾಂತಿಕ ಸಾಂಕ್ರಾಮಿಕ ಪಿಡುಗುಗಳ ನಿಯಂತ್ರಣ, ಶಿಶು ಮರಣದಲ್ಲಿ ಕುಸಿತ, ಶಿಕ್ಷಣದ ಪ್ರಗತಿ ಇತ್ಯಾದಿಗಳಿಂದ ಮರಣದರದಲ್ಲಿ ಇಳಿತವಾಗುತ್ತಾ ಬಂದಿತು.

**ಜನಸಂಖ್ಯೆ ಬೆಳವಣಿಗೆಯ ಪರಿಣಾಮಗಳು :**

> **ಇದು ನಿಮಗೆ ತಿಳಿದಿರಲಿ!**
> - *ಜನಗಣತಿ: ಜನ ಸಂಖ್ಯೆಯ ಅಧಿಕೃತ ಎಣಿಕೆ.*
> - *ಜನನದರ: ಒಂದು ವರ್ಷದಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ ಜನಿಸಿ ಬದುಕುಳಿದ ಶಿಶುಗಳ ಸಂಖ್ಯೆ.*
> - *ಮರಣದರ: ಒಂದು ವರ್ಷದಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ ಮರಣ ಹೊಂದಿದವರ ಸಂಖ್ಯೆ.*

ಜನಸಂಖ್ಯೆಯ ಶೀಘ್ರಗತಿ ಬೆಳವಣಿಗೆಯಿಂದ ಹಲವು ಸಮಸ್ಯೆಗಳು ಉದ್ಭವಿಸುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ–ನಿರುದ್ಯೋಗ, ಆಹಾರದ ಕೊರತೆ ಮತ್ತು ಅಪೌಷ್ಠಿಕತೆ, ಹೆಚ್ಚು ಸಾಮಾಜಿಕ ಹೊಣೆ ಮತ್ತು ಮೂಲ ಸೌಲಭ್ಯಗಳ ಕೊರತೆ, ಕಡಿಮೆ ತಲಾದಾಯ, ನಿಧಾನ ಗತಿಯ ಆರ್ಥಿಕಾಭಿವೃದ್ಧಿ, ಬಡತನ, ಜೀವನ ಮಟ್ಟದಲ್ಲಿ ಕುಸಿತ, ಪರಿಸರ ಮಾಲಿನ್ಯ, ರಾಜಕೀಯ ಅರಾಜಕತೆ ಇತ್ಯಾದಿ.

**ಜನಸಂಖ್ಯಾ ಬೆಳೆವಣಿಗೆಯ ನಿಯಂತ್ರಣ ಕ್ರಮಗಳು :** ಭಾರತ ಸರಕಾರವು ದೇಶದ ಜನ ಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸಲು ಅನೇಕ ಕ್ರಮಗಳನ್ನು ಕೈಗೊಂಡಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ–ಕುಟುಂಬ ಯೋಜನೆ, ಮಹಿಳಾ ಕಲ್ಯಾಣ ಯೋಜನೆಗಳು, ಪ್ರಚಾರ ಮತ್ತು ಜಾಹಿರಾತು, ಗ್ರಾಮೀಣ ಪ್ರದೇಶದ ಜನರಲ್ಲಿ ಜನಸಂಖ್ಯಾ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು ಇತ್ಯಾದಿ.

## ಜನಸಂಖ್ಯೆಯ ಹಂಚಿಕೆ

ಭಾರತದಲ್ಲಿ ಜನಸಂಖ್ಯೆಯ ಹಂಚಿಕೆ ಎಲ್ಲೆಡೆಯೂ ಸಮನಾಗಿಲ್ಲ. ಅದಕ್ಕೆ ವಿವಿಧ ಭೌಗೋಳಿಕ ಮತ್ತು ಸಾಂಸ್ಕೃತಿಕ ಅಂಶಗಳು ಕಾರಣ. ರಾಜ್ಯಗಳಲ್ಲಿ ಉತ್ತರ ಪ್ರದೇಶವು ಅಧಿಕ ಜನಸಂಖ್ಯೆವುಳ್ಳದ್ದು (1995 ಕೋಟಿ). ಇದಕ್ಕೆ ಪ್ರತಿಯಾಗಿ ಸಿಕ್ಕಿಂ ಅತಿ ಕಡಿಮೆ ಜನಸಂಖ್ಯೆಯುಳ್ಳ ರಾಜ್ಯ. (6.1 ಲಕ್ಷ). ಕೇಂದ್ರಾಡಳಿತ ಪ್ರದೇಶಗಳಲ್ಲಿ ದೆಹಲಿಯು ಅತ್ಯಧಿಕ ಜನಸಂಖ್ಯೆ (1.67 ಕೋಟಿ) ಯನ್ನು ಹೊಂದಿದೆ. ಆದರೆ ಲಕ್ಷ ದ್ವೀಪವು ಅತಿ ಕಡಿಮೆ (64,429) ಜನಸಂಖ್ಯೆವುಳ್ಳದ್ದು.

ಭಾರತದ ವಿರಳ ಜನಸಂಖ್ಯೆಯುಳ್ಳ ಪ್ರದೇಶಗಳೆಂದರೆ: ಹಿಮಾಲಯ ಪರ್ವತ ಪ್ರದೇಶ. ಕೇಂದ್ರದ ಎತ್ತರ ಪ್ರದೇಶ, ಥಾರ್ ಮರುಭೂಮಿ ಮತ್ತು ದ್ವೀಪಗಳು. ಇದಕ್ಕೆ ಪ್ರತಿಯಾಗಿ ಜನಭರಿತ ಪ್ರದೇಶಗಳು ಗಂಗಾ ನದಿಬಯಲು, ಕರಾವಳಿ ಪ್ರದೇಶಗಳು ಮತ್ತು ಕೈಗಾರಿಕಾ ನಗರ ಪ್ರದೇಶಗಳಲ್ಲಿವೆ.

## ಜನ ಸಾಂದ್ರತೆ


ಪ್ರತಿ ಚದರಕಿಲೋಮೀಟರ್‌ನಲ್ಲಿ ವಾಸಿಸುವ ಜನರ ಸಂಖ್ಯೆಗೆ 'ಜನಸಾಂದ್ರತೆ' ಎಂದು ಕರೆಯಲಾಗಿದೆ. 2011 ರ ಜನಗಣತಿ ಯಂತೆ ಭಾರತದ ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ 382 ಜನರು. ಬಿಹಾರ ರಾಜ್ಯವು ಅತಿ ಹೆಚ್ಚು ಜನಸಾಂದ್ರತೆ ಹೊಂದಿದೆ. ಈ ರಾಜ್ಯದ ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ 1102 ಜನರು. ಇದಕ್ಕೆ ಪ್ರತಿಯಾಗಿ ಪ್ರತಿ ಚ.ಕಿ.ಮೀ.ಗೆ 17 ಜನರುಳ್ಳ ಅರುಣಾಚಲ ಪ್ರದೇಶದಲ್ಲಿ ಅತಿ ಕಡಿಮೆ ಜನಸಾಂದ್ರತೆಯಿದೆ. ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರತಿ ಚ.ಕಿ.ಮೀ. ಗೆ 11,297 ಜನರುಳ್ಳ ದೆಹಲಿಯು ಅಧಿಕ ಜನಸಾಂದ್ರತೆಯುಳ್ಳದ್ದು. ಇದಕ್ಕೆ ಪ್ರತಿಯಾಗಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಕಡಿಮೆ ಜನ ಸಾಂದ್ರತೆ (463) ಇದೆ.

ಜನಸಾಂದ್ರತೆಯನ್ನಾಧರಿಸಿ ಭಾರತವನ್ನು 3 ವಲಯಗಳನ್ನಾಗಿ ವಿಂಗಡಿಸಬಹುದು– i) ಅಧಿಕ ಜನಸಾಂದ್ರತೆ ಪ್ರದೇಶಗಳು. ii) ಸಾಧಾರಣ ಜನ ಸಾಂದ್ರತೆ ಪ್ರದೇಶಗಳು. iii) ಕಡಿಮೆ ಜನಸಾಂದ್ರತೆ ಪ್ರದೇಶಗಳು.

© KTBS Not to be published

**i) ಅಧಿಕ ಜನಸಾಂದ್ರತೆ ಪ್ರದೇಶಗಳು:** ಇವು ಪ್ರತಿ ಚ.ಕಿ.ಮೀಗೆ 501ಕ್ಕೂ ಹೆಚ್ಚು ಜನರು ವಾಸಿಸುವ ಪ್ರದೇಶಗಳನ್ನೊಳಗೊಂಡಿವೆ. ಉತ್ತರದ ಮೈದಾನಗಳು, ಪಶ್ಚಿಮ ಮತ್ತು ಪೂರ್ವ ಕರಾವಳಿ ಪ್ರದೇಶಗಳು ಅಧಿಕ ಜನಸಾಂದ್ರತೆವುಳ್ಳವು. ಈ ಪ್ರದೇಶಗಳಲ್ಲಿ ಬಿಹಾರ (1102), ಪಶ್ಚಿಮ ಬಂಗಾಳ (1030), ಕೇರಳ (859), ಉತ್ತರ ಪ್ರದೇಶ (828), ಹರಿಯಾಣ (573), ಪಂಜಾಬ್ (550) ಮತ್ತು ತಮಿಳುನಾಡು (555) ರಾಜ್ಯಗಳು ಸೇರುತ್ತವೆ. ಇಲ್ಲಿನ ಅಧಿಕ ಜನಸಾಂದ್ರತೆಗೆ ಫಲವತ್ತಾದ ಮಣ್ಣು, ನೀರಾವರಿ, ಸಾರಿಗೆ-ಸಂಪರ್ಕಗಳ ಅಭಿವೃದ್ಧಿ. ಪ್ರಮುಖ ಕಾರಣಗಳು.

**i)** ಕೇಂದ್ರಾಡಳಿತ ಪ್ರದೇಶಗಳಲ್ಲಿ ದೆಹಲಿ(17,297), ಚಂಡಿಗಡ (9252), ಪುದುಚೆರಿ (2598), ದಾಮನ್- ದಿಯು (2169), ಲಕ್ಷದ್ವೀಪಗಳು (2113), ದಾದರ- ನಾಗರ ಹವೇಲಿಗಳು ಅಧಿಕ ಸಾಂದ್ರತೆವುಳ್ಳವು. ಈ ವಲಯವಲ್ಲದೆ ಕೆಲವು ಕೈಗಾರಿಕಾ ಮತ್ತು ವಾಣಿಜ್ಯ ನಗರಗಳಲ್ಲಿಯೂ ಜನಸಾಂದ್ರತೆ ಹೆಚ್ಚಾಗಿದೆ. ಉದಾ: ಮುಂಬಯಿ, ಬೆಂಗಳೂರು, ಚೆನ್ನೈ, ಕೊಲ್ಕತ, ಪುಣೆ ಇತ್ಯಾದಿ.



**ii) ಸಾಧಾರಣ ಜನಸಾಂದ್ರತೆ ಪ್ರದೇಶಗಳು:** ಇವು ಪ್ರತಿ ಚ.ಕಿ.ಮೀ.ಗೆ 251–500 ಜನರು ವಾಸಿಸುವ ಭಾಗಗಳನ್ನೊಳಗೊಂಡಿವೆ. ಅವುಗಳೆಂದರೆ ಜಾರ್ಖಂಡ್ (414), ಅಸ್ಸಾಂ (397), ಗೋವಾ (394), ಮಹಾರಾಷ್ಟ್ರ (365), ತ್ರಿಪುರ (350), ಕರ್ನಾಟಕ (319), ಆಂಧ್ರ ಪ್ರದೇಶ (308), ಗುಜರಾತ್ (308) ಮತ್ತು ಒಡಿಶಾ (269) ರಾಜ್ಯಗಳು. ಇಲ್ಲಿನ ಸಾಧಾರಣ ಜನಸಾಂದ್ರತೆಗೆ ಖನಿಜ ಸಂಪತ್ತು ಮತ್ತು ಲೋಹಾಧರಿತ ಉದ್ಯಮಗಳ ಅಭಿವೃದ್ಧಿ ಮುಖ್ಯ ಕಾರಣಗಳಾಗಿವೆ.

**iii) ಕಡಿಮೆ ಜನ ಸಾಂದ್ರತೆ ಪ್ರದೇಶಗಳು:** ಪ್ರತಿ ಚ.ಕಿ.ಮೀ.ಗೆ 250 ಕ್ಕೂ ಕಡಿಮೆ ಜನರು ವಾಸಿಸುವ ಭಾಗಗಳು ಈ ವಲಯಕ್ಕೆ ಸೇರುತ್ತವೆ. ಉದಾ: ಮಧ್ಯಪ್ರದೇಶ. (136), ರಾಜಸ್ಥಾನ(201), ಉತ್ತರಾಖಂಡ (189), ಛತ್ತೀಸ್‌ಗರ್ (189), ಮೇಘಾಲಯ (132), ಹಿಮಾಚಲ ಪ್ರದೇಶ (123), ಮಣಿಪುರ (122), ನಾಗಲ್ಯಾಂಡ್ (119), ಜಮ್ಮು–ಕಾಶ್ಮೀರ, (124), ಸಿಕ್ಕಿಂ (86) ಅಂಡಮಾನ–ನಿಕೋಬಾರ್ ದ್ವೀಪಗಳು (46) ಮತ್ತು ಅರುಣಾಚಲ ಪ್ರದೇಶ (17). ಪರ್ವತ, ಬೆಟ್ಟ ಗುಡ್ಡಗಳ ಭಾಗಗಳು, ಅರಣ್ಯ ಪ್ರದೇಶ, ಕನಿಷ್ಠ ಉಷ್ಣಾಂಶವುಳ್ಳ ಅಥವಾ ಅರೆಮರುಭೂಮಿ ವಾಯುಗುಣಗಳು ಕಡಿಮೆ ಜನಸಾಂದ್ರತೆಗೆ ಕಾರಣಗಳಾಗಿವೆ.

**ಜನಸಂಖ್ಯೆ ಹಂಚಿಕೆಯನ್ನು ನಿಯಂತ್ರಿಸುವ ಅಂಶಗಳು :** ಭೌಗೋಳಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಮೊದಲಾದ ಅಂಶಗಳು ಭಾರತದ ಜನಸಂಖ್ಯಾ ಹಂಚಿಕೆಯ ಮೇಲೆ ಪ್ರಭಾವ ಬೀರುತ್ತವೆ. ಅವುಗಳಲ್ಲಿ ಈ ಕೆಳಕಂಡವು ಪ್ರಮುಖವಾದವು.

**1. ಮೇಲ್ಮೈ ಲಕ್ಷಣಗಳು :** ಪರ್ವತ ಬೆಟ್ಟ ಗುಡ್ಡಗಳ ಪ್ರದೇಶದಲ್ಲಿ ಜನಸಂಖ್ಯೆ ವಿರಳ. ಉದಾ: ಉತ್ತರದ ಪರ್ವತ ಮತ್ತು ಈಶಾನ್ಯ ಗುಡ್ಡಗಾಡು ಪ್ರದೇಶಗಳು. ಆದರೆ ಉತ್ತರದ ಮಹಾಮೈದಾನಗಳು ಮತ್ತು ನದಿ ಮುಖಜ ಭೂಮಿಗಳಲ್ಲಿ ಜನಸಾಂದ್ರತೆ ಹೆಚ್ಚಾಗಿರುತ್ತದೆ.

**2. ವಾಯುಗುಣ :** ಉತ್ತಮ ವಾಯುಗುಣವುಳ್ಳ ಪ್ರದೇಶಗಳಲ್ಲಿ ಜನಸಂಖ್ಯೆ ಹೆಚ್ಚು. ಇದಕ್ಕೆ ಪ್ರತಿಯಾಗಿ ಅತಿಶೀತ ಮತ್ತು ಒಣ ಹವೆಯುಳ್ಳ ಭಾಗಗಳಲ್ಲಿ ಜನಸಂಖ್ಯೆ ವಿರಳ. ಉದಾ: ಹಿಮಾಲಯ ಮತ್ತು ಥಾರ್ ಮರುಭೂಮಿ.

**3. ಮಣ್ಣು :** ಫಲವತ್ತಾದ ಮಣ್ಣುಳ್ಳ ಭಾಗಗಳು ಅಧಿಕ ಜನಸಂಖ್ಯೆಯಿಂದ ಕೂಡಿರುತ್ತವೆ. ಉದಾ: ಉತ್ತರ ಭಾರತದ ಮೈದಾನಗಳು, ಪಶ್ಚಿಮ ಮತ್ತು ಪೂರ್ವ ಕರಾವಳಿ ಭಾಗಗಳು. ಇದಕ್ಕೆ ಪ್ರತಿಯಾಗಿ ಫಲವತ್ತಲ್ಲದ ಮರಳು ಭೂಮಿಗಳಲ್ಲಿ ಜನಸಂಖ್ಯೆ ಕಡಿಮೆ.

**4 ಸಂಪನ್ಮೂಲಗಳು :** ಸಮೃದ್ಧವಾದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳನ್ನುಳ್ಳ ಪ್ರದೇಶಗಳು ಜನ ಭರಿತವಾಗಿರುತ್ತವೆ. ಉದಾ: ಪಶ್ಚಿಮ ಬಂಗಾಳ, ಒಡಿಶಾ ಇತ್ಯಾದಿ.

**5 ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳು:** ಹೆಚ್ಚು ಕೈಗಾರಿಕಾಭಿವೃದ್ಧಿ, ವಾಣಿಜ್ಯ ಪ್ರಗತಿಯುಳ್ಳ ಸ್ಥಳ ಮತ್ತು ನಗರ ಕೇಂದ್ರಗಳಲ್ಲಿ ಜನಸಂಖ್ಯೆ ಹೆಚ್ಚು. ಉದಾ: ನವದೆಹಲಿ, ಬೆಂಗಳೂರು, ಮುಂಬಯಿ, ಚೆನ್ನೈ, ಕೊಲ್ಕತ, ಹೈದರಾಬಾದ್ ಇತ್ಯಾದಿ.

ನೀರಿನ ಪೂರೈಕೆ, ಪ್ರವಾಸೋದ್ಯಮ ಪ್ರಗತಿ, ಜನರು ಮತ್ತು ಅವರ ಆಸ್ತಿಗಳಿಗೆ ದೊರೆಯುವ ರಕ್ಷಣೆ ಮತ್ತು ಭದ್ರತೆಗಳೂ ಸಹ ಜನಸಂಖ್ಯೆಯ ಹಂಚಿಕೆಯ ಮೇಲೆ ಪ್ರಭಾವ ಬೀರುತ್ತವೆ.

© KTBS Not to be published

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. 2011ರ ಜನಗಣತಿಯಂತೆ ಭಾರತದ ಒಟ್ಟು ಜನಸಂಖ್ಯೆ ________ ಕೋಟಿಗಳಾಗಿತ್ತು.
2. ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ ಶೇ. ________ ಭಾಗ, ಭಾರತದಲ್ಲಿದೆ.
3. ಭಾರತದ ಜನಭರಿತವಾದ ರಾಜ್ಯ ________ .
4. ಕೇಂದ್ರಾಡಳಿತ ಪ್ರದೇಶಗಳಲ್ಲಿ ________ ಅತಿ ಕಡಿಮೆ ಜನಸಂಖ್ಯೆ ಹೊಂದಿದೆ.
5. ಭಾರತದ ಅತಿ ಕಡಿಮೆ ಜನಸಾಂದ್ರತೆಯುಳ್ಳ ರಾಜ್ಯ ________ ಆಗಿದೆ.

**II. ಗುಂಪುಗಳಲ್ಲಿ ಚರ್ಚಿಸಿ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಜನಸಂಖ್ಯೆ ಎಂದರೇನು?
2. ಜನಸಾಂದ್ರತೆ ಎಂಬುದಕ್ಕೆ ವ್ಯಾಖ್ಯೆ ನೀಡಿ.
3. ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆಗೆ ಪ್ರಮುಖ ಕಾರಣಗಳನ್ನು ತಿಳಿಸಿ.
4. ಭಾರತದ ಜನಸಂಖ್ಯೆಯ ಬೆಳವಣಿಗೆಯಿಂದಾಗುವ ಪರಿಣಾಮಗಳಾವುವು.
5. ಭಾರತದ ಜನಸಂಖ್ಯೆಯ ಹಂಚಿಕೆಯನ್ನು ನಿಯಂತ್ರಿಸುವ ಪ್ರಮುಖ ಅಂಶಗಳನ್ನು ತಿಳಿಸಿ.
6. ಭಾರತದ ಕೆಲವು ಭಾಗಗಳ ಕಡಿಮೆ ಜನ ಸಾಂದ್ರತೆಗೆ ಕಾರಣಗಳನ್ನು ಕುರಿತು ವಿವರಿಸಿ.

**III. ಚಟುವಟಿಕೆ :**

1. ಭಾರತದಲ್ಲಿ ಜನಸಂಖ್ಯೆಯ ಅಸಮಾನ ಹಂಚಿಕೆಯನ್ನು ನಿರೂಪಿಸಲು ನಕ್ಷೆಯೊಂದನ್ನು ಸಿದ್ಧಪಡಿಸಿ.

**IV. ಯೋಜನಾಕಾರ್ಯ :**

1. ನಿಮ್ಮ ಜಿಲ್ಲೆಯ ಜನಸಂಖ್ಯೆಗೆ ಸಂಬಂಧ ಪಟ್ಟ ಮಾಹಿತಿಗಳನ್ನೆಲ್ಲಾ ಸಂಗ್ರಹಿಸಿ ಮತ್ತು ಆ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

* * * *

© KTBS Not to be published

# ಅರ್ಥಶಾಸ್ತ್ರ

## ಅಧ್ಯಾಯ – 3

## ಹಣ ಮತ್ತು ಸಾಲ

S3Y1U1

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಹಣದ ಅರ್ಥ, ಉಗಮ ಮತ್ತು ಕಾರ್ಯಗಳು
- ಬ್ಯಾಂಕುಗಳ ಮಹತ್ವ
- ಭಾರತೀಯ ರಿಜರ್ವ್ ಬ್ಯಾಂಕಿನ ಕಾರ್ಯಗಳು
- ಹಣದ ಪೂರೈಕೆ ಮತ್ತು ಅದರ ಮಾಪನ
- ಭಾರತೀಯ ರಿಜರ್ವ್ ಬ್ಯಾಂಕು ಅಳವಡಿಸಿಕೊಂಡಿರುವ ಸಾಲ ನಿಯಂತ್ರಣ ಕ್ರಮಗಳು.

© KTBS Not to be published

### ಹಣದ ಅರ್ಥ ಮತ್ತು ಮಹತ್ವ

ಹಣವು ಒಂದು ಮಹತ್ವದ ಆವಿಷ್ಕಾರವಾಗಿದ್ದು, ಅದು ನಮ್ಮ ದೈನಂದಿನ ವ್ಯವಹಾರ ನಡೆಸುವುದನ್ನು ಸುಗಮಗೊಳಿಸಿ, ಸರಕು–ಸೇವೆಗಳ ಮೌಲ್ಯ ನಿರ್ಣಯ, ಮೌಲ್ಯ/ಸಂಪತ್ತಿನ ಸಂಗ್ರಹಗಳಿಗೆ ಅನುಕೂಲತೆ ಒದಗಿಸಿದೆ.

***ನಿಮಗಿದು ತಿಳಿದಿರಲಿ:***

*ಪ್ರತಿ ವಿಷಯ ಶಿಸ್ತಿಗೂ ಅದರದ್ದೇ ಆದ ಮೂಲಭೂತ ಆವಿಷ್ಕಾರವಿದೆ. ಯಂತ್ರಶಾಸ್ತ್ರದಲ್ಲಿ ಚಕ್ರ, ವಿಜ್ಞಾನದಲ್ಲಿ ಬೆಂಕಿ, ರಾಜಕೀಯಶಾಸ್ತ್ರದಲ್ಲಿ ಮತ ಮತ್ತು ಅರ್ಥಶಾಸ್ತ್ರದಲ್ಲಿ ಹಣ ಇವುಗಳು ಮೂಲಭೂತ ಆವಿಷ್ಕಾರಗಳು. ಮಾನವನ ಒಟ್ಟಾರೆ ವಾಣಿಜ್ಯಿಕ ಜೀವನದಲ್ಲಿ ಹಣವು ಒಂದು ಅವಶ್ಯಕ ಶೋಧವಾಗಿದ್ದು, ಅದರ ಮೇಲೆ ಉಳಿದೆಲ್ಲವೂ ಅವಲಂಬಿತವಾಗಿದೆ.* **– ಜಾಫರಿ ಕ್ರೌಥರ್**

ಹಣದಿಂದ ಸರಕು–ಸೇವೆಗಳನ್ನು ಖರೀದಿಸಬಹುದು. ಅದು ಪಾವತಿಯ ಮಾಧ್ಯಮವಾಗಿ, ಮೌಲ್ಯದ ಮಾಪನವಾಗಿ ಮತ್ತು ಸಂಗ್ರಹ ಮಾಧ್ಯಮವಾಗಿ ಸರ್ವಮಾನ್ಯವಾಗಿದೆ. ರಾಬರ್ಟಸನ್ ಅವರ ಪ್ರಕಾರ "ಸರಕುಗಳಿಗಾಗಿ ಸಂದಾಯ ಮಾಡುವಲ್ಲಿ ಅಥವಾ ಇತರೆ ವಾಣಿಜ್ಯಿಕ ಸಾಲಗಳನ್ನು ತೀರಿಸುವಲ್ಲಿ ವ್ಯಾಪಕವಾಗಿ ಸ್ವೀಕರಿಸಲ್ಪಟ್ಟ ಯಾವುದೇ ವಸ್ತು ಹಣವಾಗಿದೆ".

**ಹಣದ ವಿಕಾಸ:** ನಾವೆಲ್ಲ ಈಗ ಕಾಗದದಿಂದ ತಯಾರಿಸಿದ ನೋಟುಗಳನ್ನಲ್ಲದೇ ನಾಣ್ಯಗಳನ್ನು ಹಣವಾಗಿ ಬಳಸುತ್ತಿದ್ದೇವೆ. ಆದರೆ ಈಗ ನಾವು ಉಪಯೋಗಿಸುತ್ತಿರುವ ಹಣವು ಹಲವು ವರ್ಷಗಳ ಅವಧಿಯಲ್ಲಿ ವಿಕಾಸಗೊಂಡಿದೆ. ಈ ವಿಕಾಸದ ಹಂತಗಳನ್ನು ನಾವು ಈಗ ಅಭ್ಯಸಿಸೋಣ.

**ಸಾಟಿ (ವಸ್ತು) ವಿನಿಮಯ ಪದ್ಧತಿ:** ಪುರಾತನ ಕಾಲದಲ್ಲಿ ಜನರು ಹಣವನ್ನು ಬಳಸದೆ ಸರಕುಗಳನ್ನು ಸರಕುಗಳಿಗೆ ವಿನಿಮಯ ಮಾಡಿಕೊಳ್ಳುತ್ತಿದ್ದರು. ಸಾಟಿ ವಿನಿಮಯವು ಅತಿ ಕಷ್ಟಕರ ವ್ಯಾಪಾರ ವಿಧಾನವಾಗಿತ್ತು. ಉದಾಹರಣೆಗೆ ನಿನ್ನ ಹತ್ತಿರ ಹಸು ಇದ್ದು ಅದರ ಬದಲಾಗಿ ಕುರಿಯನ್ನು ಬಯಸಿದರೆ, ಆಗ ನೀನು ಕುರಿ ಹೊಂದಿದವರನ್ನು ಹುಡುಕಬೇಕಾಗುತ್ತಿತ್ತು, ಅಷ್ಟೇ ಅಲ್ಲದೇ ಕುರಿ ಬದಲಿಗೆ ಹಸು ಬೇಕಾದ ಅವಶ್ಯವಿರುವ ವ್ಯಕ್ತಿಯನ್ನೇ ಹುಡುಕಬೇಕಾಗುತ್ತಿತ್ತು. ಕೊನೆಗೆ ಅಂತಹ ವ್ಯಕ್ತಿಯನ್ನು ನೀನು ಹುಡುಕಿದರೂ ಆಗ ಮೌಲ್ಯ ನಿರ್ಣಯದ ಸವಾಲು ಎದುರಾಗುತ್ತಿತ್ತು. ಅಂದರೆ ಒಂದು ಹಸುವಿಗೆ ಎಷ್ಟು ಕುರಿಗಳು ಸಮ? ಹಸುವನ್ನು

ಅಥವಾ ಕುರಿಗಳನ್ನು ವಿಭಜಿಸುವ ಬಗೆ ಹೇಗೆ? ಆದುದರಿಂದ ಸಾಟಿ ವಿನಿಮಯ ಪದ್ಧತಿಯು ಹಲವಾರು ಅನಾನುಕೂಲತೆಗಳನ್ನು ಹೊಂದಿತ್ತು.

**ವಸ್ತು ರೂಪದ ಹಣ:** ಮಾನವ ನಾಗರಿಕತೆಯ ವಿಕಾಸದ ನಂತರದ ಹಂತದಲ್ಲಿ ನಿರ್ದಿಷ್ಟ ಪಡಿಸಿದ ಗಾತ್ರ ಮತ್ತು ತೂಕದ ವಸ್ತುವೊಂದನ್ನು ಹಣವೆಂದು ಅಂಗೀಕರಿಸಿ, ಜನರು ಆ ಪ್ರಮಾಣಿತ ವಸ್ತುವಿನ ಮೂಲಕ ಇತರ ಪ್ರತಿಯೊಂದರ ಮೌಲ್ಯವನ್ನು ಅಳೆಯುತ್ತಿದ್ದರು. ವಿವಿಧ ದೇಶಗಳಲ್ಲಿ ಬೇರೆ ಬೇರೆ ವಸ್ತುಗಳನ್ನು ಹಣ ಎಂದು ಪರಿಗಣಿಸಿ ಬಳಸಲಾಗುತ್ತಿತ್ತು. ಉದಾಹರಣೆಗೆ, ಗ್ರೀಸ್‌ನಲ್ಲಿ ಜಾನುವಾರುಗಳು; ರೋಮ್‌ನಲ್ಲಿ ಕುರಿಗಳು, ಚೀನಾದಲ್ಲಿ ಹಲ್ಲುಗಳು, ಇತ್ಯಾದಿ. ಆದರೆ ವಸ್ತು ರೂಪದ ಹಣವು ಸಾಟಿ ವಿನಿಮಯ ಪದ್ಧತಿಯ ಎಲ್ಲ ಸಮಸ್ಯೆಗಳನ್ನು ಪರಿಹರಿಸಲಿಲ್ಲ.

**ಲೋಹದ ಹಣ:** ತದನಂತರದಲ್ಲಿ ಕ್ರಮೇಣವಾಗಿ ಬೆಲೆಬಾಳುವ ಲೋಹಗಳಾದ ಚಿನ್ನ, ಬೆಳ್ಳಿ, ತಾಮ್ರ, ಕಂಚನ್ನು ಹಣ ಎಂದು ಬಳಸುವ ಪರಿಪಾಠ ಆರಂಭವಾಯಿತು. ಪ್ರಮಾಣಿತ ತೂಕವಿರುವ ಮತ್ತು ವಿಶೇಷವಾಗಿ ಚಿನ್ನ ಅಥವಾ ಬೆಳ್ಳಿಯಿಂದ ತಯಾರಿಸಿದ ಬಿಲ್ಲೆಗಳನ್ನು ಟಂಕಿಸಿ ಹಣವಾಗಿ ಸಾಮಾನ್ಯವಾಗಿ ಬಳಸಲಾಗುತ್ತಿತ್ತು. ಅವು ವಿವಿಧ ಮುಖಬೆಲೆವುಳ್ಳವು ಆಗಿದ್ದರಿಂದ ವಿಭಜನೆ ಸರಳವಾಗಿದ್ದಿತು. ಅವುಗಳ ಸಾಗಾಟ ಮತ್ತು ಸಂದಾಯ ಕೂಡ ಅನುಕೂಲಕರವಾಗಿತ್ತು.

> ***ಚಟುವಟಿಕೆ :***
> *ಇತಿಹಾಸದಲ್ಲಿ ವಿವಿಧ ರಾಜರು ಬಳಸಿದ ನಾಣ್ಯಗಳ ಬಗೆಗೆ ತಿಳಿದುಕೊಳ್ಳಿರಿ.*

© KTBS Not to be republished

**ಕಾಗದದ ಹಣ:** ಲೋಹದ ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವುದು ಸುರಕ್ಷಿತವಾಗಿರಲಿಲ್ಲ. ಆದುದರಿಂದ ವ್ಯಾಪಾರಸ್ಥರು ಚಿರಪರಿಚಿತ ಲೇವಾದೇವಿದಾರರು ನೀಡುತ್ತಿದ್ದ ಲಿಖಿತ ದಾಖಲೆಗಳನ್ನು ಅವರ ಆಜ್ಞಾಪಿತ ಹಣದ ಪ್ರಮಾಣಕ್ಕೆ ಸಾಕ್ಷಿಯಾಗಿ ತಮ್ಮ ಜೊತೆ ಕೊಂಡೊಯ್ಯಲು ಪ್ರಾರಂಭಿಸಿದರು. ಈ ಲಿಖಿತ ದಾಖಲೆಗಳು ನೈಜ ಹಣವಾಗಿರಲಿಲ್ಲ, ಆದರೆ ಅವುಗಳು ಹಣಕ್ಕೆ ವಿನಿಮಯವಾಗುತ್ತಿದ್ದರಿಂದ ಅವು ಸಾಂಕೇತಿಕ ಹಣವಾಗಿ ಬಳಕೆಯಾಗುತ್ತಿದ್ದವು. ಕ್ರಮೇಣ ಜನರು ಬ್ಯಾಂಕುಗಳು ನೀಡಿದ ಕಾಗದದ ಪ್ರಾಮಿಸರಿ ನೋಟುಗಳು ಹಣವೆಂದು ಬಳಕೆಯಲ್ಲಿ ಬಂದವು ಬಳಸತೊಡಗಿದರು. ತದನಂತರದಲ್ಲಿ ಸರ್ಕಾರಗಳು ಕೇಂದ್ರ ಬ್ಯಾಂಕು ಒಂದನ್ನು ಸ್ಥಾಪಿಸಿ ಅದಕ್ಕೆ ನೋಟು ಮುದ್ರಣ ಮಾಡುವ ಅಧಿಕಾರ ನೀಡಿದವು. ಆ ಹಣವು ಶಾಸನಬದ್ಧ ಹಣವಾಯಿತು. ಆಯಾ ದೇಶಗಳಲ್ಲಿ ನಡೆಯುವ ವ್ಯವಹಾರಗಳಲ್ಲಿ ಆ ಹಣವನ್ನು ಯಾರೊಬ್ಬರೂ ತಿರಸ್ಕರಿಸುವಂತಿಲ್ಲ. ಅಂತೆಯೇ ನಮ್ಮ ದೇಶದಲ್ಲಿ ರೂಪಾಯಿ, ಅಮೇರಿಕದಲ್ಲಿ ಡಾಲರ್, ಇಂಗ್ಲೆಂಡಿನಲ್ಲಿ ಪೌಂಡ್, ಜಪಾನ್‌ನಲ್ಲಿ ಯೆನ್, ಚೀನಾದಲ್ಲಿ ಯುವಾನ್ ಇತ್ಯಾದಿ ಹೆಸರಿನ ಹಣ ಬಳಕೆಯಲ್ಲಿದೆ.

**ಬ್ಯಾಂಕ್ ಹಣ:** ವ್ಯಾಪಾರ ಮತ್ತು ವಾಣಿಜ್ಯ ಅಭಿವೃದ್ಧಿ ಹೊಂದಿದಂತೆ ಬ್ಯಾಂಕ್ ಹಣ ಅಸ್ತಿತ್ವಕ್ಕೆ ಬಂದಿತು. ಚೆಕ್ಕುಗಳು, ಡ್ರಾಫ್ಟ್‌ಗಳು, ಠೇವಣಿ ರಸೀದಿ ಮುಂತಾದವುಗಳು ಬಳಕೆಗೆ ಬಂದವು. ಇವುಗಳನ್ನು ಬಳಸಿ ಹಣದ ಪಾವತಿ ಮತ್ತು ವರ್ಗಾವಣೆಗಳನ್ನು ಮಾಡಬಹುದಾಗಿದೆ.

**ಪ್ಲಾಸ್ಟಿಕ್ ಹಣ:** ಇದು ಇತ್ತೀಚಿನ ಆವಿಷ್ಕಾರವಾಗಿದ್ದು ಬ್ಯಾಂಕುಗಳು ತಮ್ಮ ಗ್ರಾಹಕರಿಗೆ ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡುಗಳನ್ನು ನೀಡಿ ಅದರ ಮುಖಾಂತರ ವ್ಯವಹಾರ ಮಾಡುವ ಅನುಕೂಲತೆ ಕಲ್ಪಿಸಿವೆ. ಈಗ ನೀವು ಹಣವನ್ನು ಭೌತಿಕವಾಗಿ ತೆಗೆದುಕೊಂಡು ಹೋಗಬೇಕಾಗಿಲ್ಲ. ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡನ್ನು ಎಲೆಕ್ಟ್ರಾನಿಕ್ ಯಂತ್ರದ ಮೇಲೆ ಒತ್ತಿ ಎಳೆದು ನಿಮಗೆ ನೀಡಿದ ಪಿನ್‌ನ್ನು ಬಳಸಿ ಹಣದ ವರ್ಗಾವಣೆ ಮಾಡಬಹುದಾಗಿದೆ. ಡೆಬಿಟ್ ಕಾರ್ಡ್ ಸಹ ಇದೇ ರೀತಿಯಲ್ಲಿ ಕೆಲಸಮಾಡುತ್ತದೆ. ಇವುಗಳನ್ನು ಪ್ಲಾಸ್ಟಿಕ್‌ನಿಂದ ಮಾಡಿದ್ದರಿಂದ ಇವುಗಳನ್ನು ಪ್ಲಾಸ್ಟಿಕ್ ಹಣವೆಂತಲೂ, ವಿದ್ಯುನ್ಮಾನ ಸಾಧನಗಳ ಮೂಲಕ ವ್ಯವಹಾರ ನಡೆಸುವುದರಿಂದ ಅದನ್ನು ಇ–ಹಣ ಎಂತಲೂ ಎನ್ನುತ್ತೇವೆ.

**2. ಹಣದ ಕಾರ್ಯಗಳು:**

**2.1. ಪ್ರಾಥಮಿಕ ಅಥವಾ ಮುಖ್ಯ ಕಾರ್ಯಗಳು:** ಹಣದ ಪ್ರಾಥಮಿಕ ಕಾರ್ಯಗಳು ಈ ಕೆಳಗಿನಂತಿವೆ:

**ಅ) ವಿನಿಮಯ ಮಾಧ್ಯಮ ಅಥವಾ ಸಂದಾಯ ಸಾಧನ:** ಸರಕುಗಳ ಖರೀದಿಗೆ ಮತ್ತು ಮಾರಾಟದಲ್ಲಿ ಹಣವನ್ನು ಪಾವತಿ ಮಾಧ್ಯಮವಾಗಿ ಉಪಯೋಗಿಸುತ್ತೇವೆ.

**ಬ) ಮೌಲ್ಯ ನಿರ್ಣಯ:** ಎಲ್ಲ ಸರಕುಗಳು ಮತ್ತು ಸೇವೆಗಳ ಮೌಲ್ಯವನ್ನು ಬೆಲೆಯನ್ನು ಹಣದ ರೂಪದಲ್ಲಿ ಹೇಳಲಾಗುತ್ತದೆ. ಸರಕುಗಳ ಮೌಲ್ಯ ನಿರ್ಣಯಕ್ಕೆ ಒಂದು ಸಾಮಾನ್ಯ ಮಾನದಂಡ ಹಣದ ಮೂಲಕ ದೊರಕಿದೆ.

**2.2. ಪೂರಕ ಕಾರ್ಯಗಳು: ಹಣದ ಪೂರಕ ಕಾರ್ಯಗಳೆಂದರೆ:**

**ಅ) ವಿಳಂಬಿತ ಸಂದಾಯದ ಪ್ರಮಾಣ:** ಹಣವು ಭವಿಷ್ಯದಲ್ಲಿನ ವ್ಯವಹಾರ ಮತ್ತು ಸಂದಾಯಗಳಿಗೂ ಸಹಾಯಕವಾಗಿದೆ. ಸಾಲ ಪಡೆದವರು ನಿರ್ದಿಷ್ಟ ಪ್ರಮಾಣದ ಹಣವನ್ನು ಭವಿಷ್ಯದಲ್ಲಿ ನಿಗದಿತ ದಿನಾಂಕದಂದು ಮರುಪಾವತಿ ಮಾಡುವ ಕರಾರಿನ ಮೇಲೆ ಸಾಲವಾಗಿ ಪಡೆಯಬಹುದು. ಅದೇ ರೀತಿಯಲ್ಲಿ ವ್ಯಕ್ತಿಯೊಬ್ಬನು ಸದ್ಯದಲ್ಲಿ ಸರಕುಗಳನ್ನು ಕೊಂಡು, ಅವುಗಳ ಹಣವನ್ನು ಮುಂದಿನ ನಿರ್ದಿಷ್ಟ ದಿನಾಂಕದಂದು ಸಂದಾಯ ಮಾಡಬಹುದು. ಹಣದ ಬಳಕೆಯಿಂದ ಈ ರೀತಿಯಾದ ವಿಳಂಬದ ಪಾವತಿ ಅನುಕೂಲಕರವಾಗಿದೆ.

**ಬ) ಮೌಲ್ಯ ಅಥವಾ ಖರೀದಿ ಶಕ್ತಿಯ ಸಂಗ್ರಹ:** ಹಣದ ಬಳಕೆಯಿಂದಾಗಿ ಉಳಿತಾಯ ಮಾಡುವುದು ಮತ್ತು ಸಂಪತ್ತಿನ ಸಂಗ್ರಹ ಮಾಡುವುದು ಸರಳ ಸಾಧ್ಯವಾಗಿದೆ.

**ಕ) ಮೌಲ್ಯ ವರ್ಗಾವಣೆ ಅಥವಾ ಖರೀದಿ ಶಕ್ತಿಯ ವರ್ಗಾವಣೆ:** ಹಣದ ಮೂಲಕ ಸರಕು-ಸೇವೆಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಿ ವಿನಿಮಯ ಮಾಡುವುದು ಸರಳೀಕರಣಗೊಂಡಿದೆ. ಇದರ ದೆಸೆಯಿಂದಾಗಿ ವ್ಯಾಪಾರ ವೃದ್ಧಿಗೊಂಡಿದೆ. ವ್ಯಕ್ತಿ-ವ್ಯಕ್ತಿಗಳ ನಡುವಿನ ವರ್ಗಾವಣೆ ಕೂಡ ಸುಗಮಗೊಂಡಿದೆ.

**3. ಬ್ಯಾಂಕುಗಳು**

ಬ್ಯಾಂಕುಗಳು ದೇಶದ ವ್ಯವಹಾರ, ವಾಣಿಜ್ಯ ಮತ್ತು ಇತರ ಆರ್ಥಿಕ ಚಟುವಟಿಕೆಗಳ ವಿಸ್ತರಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. 1949ರ ಭಾರತೀಯ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಯು ಬ್ಯಾಂಕಿಂಗ್ ಕಂಪನಿಯನ್ನು "ಭಾರತದಲ್ಲಿ ಬ್ಯಾಂಕಿಂಗ್ ವ್ಯವಹಾರ ನಡೆಸುವ ಯಾವುದೇ ಕಂಪನಿಯು ಬ್ಯಾಂಕಿಂಗ್ ಕಂಪನಿ ಎನಿಸುತ್ತದೆ". 'ಬ್ಯಾಂಕಿಂಗ್' ಎಂದರೆ "ಸಾಲ ನೀಡುವ ಅಥವಾ ಬಂಡವಾಳ ಹೂಡುವ ಉದ್ದೇಶಕ್ಕಾಗಿ ಸಾರ್ವಜನಿಕರಿಂದ ಹಣವನ್ನು ಠೇವಣಿಯಾಗಿ ಸ್ವೀಕರಿಸಿ, ಬೇಡಿಕೆ ಅಥವಾ ಇತರೆ ಆಧಾರದ ಮೇಲೆ ಹಣ ಮರುಪಾವತಿಸುವುದಲ್ಲದೇ, ಚೆಕ್ಕುಗಳು, ಡ್ರಾಫ್ಟುಗಳು, ಆದೇಶಗಳು ಮುಂತಾದವುಗಳ ಮೂಲಕ ಹಣ ಹಿಂಪಡೆಯುವ ಪ್ರಕ್ರಿಯೆಯೇ ಬ್ಯಾಂಕಿಂಗ್ ಆಗಿರುತ್ತದೆ".

ಭಾರತದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ಅಲ್ಲದೆ 20 ಸಾರ್ವಜನಿಕ ವಲಯದ ಬ್ಯಾಂಕುಗಳು (1969ರಲ್ಲಿ ರಾಷ್ಟ್ರೀಕರಣಗೊಂಡ 14, 1980ರಲ್ಲಿ 6 ವಾಣಿಜ್ಯ ಬ್ಯಾಂಕುಗಳು); ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು (1976ರಲ್ಲಿ ಸ್ಥಾಪಿತ); ಖಾಸಗಿ ವಲಯದ ಬ್ಯಾಂಕುಗಳು; ಸಹಕಾರಿ ಬ್ಯಾಂಕುಗಳು/ಸಂಘಗಳು ಹಾಗೂ ಭಾರತೀಯ ರಿಜರ್ವ್ ಬ್ಯಾಂಕಿನಲ್ಲಿ ನೋಂದಾಯಿತ ಮತ್ತು ಅದರ ನಿಯಂತ್ರಣಗೊಳಪಟ್ಟ ಇತರ ಬ್ಯಾಂಕುಗಳು ಇವೆ.

**ಬ್ಯಾಂಕುಗಳ ಮಹತ್ವ:** ಆರ್ಥಿಕ ಅಭಿವೃದ್ಧಿಯಲ್ಲಿ ಬ್ಯಾಂಕುಗಳು ಮಹತ್ವದ ಪಾತ್ರ ವಹಿಸುತ್ತವೆ. ಅವು ಸಾರ್ವಜನಿಕರ ಉಳಿತಾಯವನ್ನು ಸಂಗ್ರಹಣೆ ಮಾಡಿ ಅವುಗಳನ್ನು ಹೂಡಿಕೆದಾರರಿಗೆ ಒದಗಿಸುತ್ತವೆ. ಈ

© KTBS Not to be published

ಮೂಲಕ ಬಂಡವಾಳ ಸಂಗ್ರಹಣೆ ಮತ್ತು ಸಂಚಯನದಲ್ಲಿ ಅವು ಪ್ರಮುಖ ಪಾತ್ರ ವಹಿಸುತ್ತವೆ. ವಿವಿಧ ಸಾಧನಗಳ ಮೂಲಕ ಗ್ರಾಹಕರಿಗೆ ಹಣಸಂದಾಯದ ಅನುಕೂಲಕರ ಮಾರ್ಗಗಳನ್ನು ಒದಗಿಸಿವೆ. ನಿರ್ದಿಷ್ಟ ಅವಧಿ ಠೇವಣಿಗಳಿಗೆ ಅಧಿಕ ಬಡ್ಡಿ ದರ ನೀಡುವುದಲ್ಲದೇ ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳ ಅಭಿವೃದ್ಧಿಗಾಗಿ ಸಾಲಗಳನ್ನೂ ಬ್ಯಾಂಕುಗಳು ನೀಡುತ್ತವೆ. ಅಲ್ಲದೆ ಅವು ಹುಂಡಿ (Bills of Exchange) ಗಳನ್ನು ವರ್ಗಾಯಿಸುತ್ತವಲ್ಲದೇ ಡ್ರಾಫ್ಟುಗಳು, ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡುಗಳನ್ನೂ ನೀಡಿ ಸುಗಮ ವ್ಯವಹಾರಕ್ಕೆ ಇಂಬು ಕೊಡುತ್ತವೆ.

### 4. ಭಾರತೀಯ ರಿಜರ್ವ ಬ್ಯಾಂಕು

ಭಾರತದ ಕೇಂದ್ರೀಯ ಬ್ಯಾಂಕ್ ಆಗಿ ಭಾರತೀಯ ರಿಜರ್ವ ಬ್ಯಾಂಕನ್ನು (ಆರ್‌ಬಿಐ) 1935ರ ಎಪ್ರಿಲ್ 1ರಂದು ಸ್ಥಾಪಿಸಲಾಯಿತು ಹಾಗೂ ಅದನ್ನು ಜನವರಿ 1, 1949ರಂದು ರಾಷ್ಟ್ರೀಕರಣ ಮಾಡಲಾಯಿತು.

**ಆರ್‌ಬಿಐನ ಕಾರ್ಯಗಳು**

**1) ನೋಟು ಚಲಾವಣೆಯ ಏಕಸ್ವಾಮ್ಯ:** ಆರ್‌ಬಿಐಗೆ ರೂ. 2, 5, 10, 20, 50, 100, 200, 500 ಮತ್ತು 2000 ಮುಖಬೆಲೆಯ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರುವ ಏಕಸ್ವಾಮ್ಯವಿದೆ. ಒಂದು ರೂಪಾಯಿಯ ನೋಟನ್ನು ಸರ್ಕಾರದ ಪರವಾಗಿ ಆರ್‌ಬಿಐ ಮುದ್ರಿಸಿ ಚಲಾಯಿಸುತ್ತದೆ.

> **ನಿಮಗಿದು ತಿಳಿದಿರಲಿ.**
>
> *ಭಾರತೀಯ ರಿಜರ್ವ ಬ್ಯಾಂಕಿನ ಪ್ರಸ್ತಾವನೆಯಲ್ಲಿ ಅದರ ಕಾರ್ಯಗಳನ್ನು ಹೀಗೆ ವರ್ಣಿಸಲಾಗಿದೆ: "ಬ್ಯಾಂಕ್ ನೋಟುಗಳ ನೀಡಿಕೆಯನ್ನು ನಿಯಂತ್ರಿಸುವುದು ಮತ್ತು ಭಾರತದ ಹಣಕಾಸು ಸ್ಥಿರತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಭದ್ರತೆಗಳನ್ನು ಇಡುವುದಲ್ಲದೇ ದೇಶದ ಹಿತ ಕಾಪಾಡುವಂತೆ ಹಣ ಮತ್ತು ಸಾಲದ ವ್ಯವಸ್ಥೆಯನ್ನು ನಿರ್ವಹಿಸುವುದು".*

**2) ಸರ್ಕಾರದ ಬ್ಯಾಂಕು ಆಗಿ ಕಾರ್ಯ ನಿರ್ವಹಣೆ:** ಆರ್‌ಬಿಐ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಠೇವಣಿಗಳನ್ನು ಸ್ವೀಕರಿಸುತ್ತದೆ. ಇದು ಸರ್ಕಾರದ ಪರವಾಗಿ ತೆರಿಗೆ ಮತ್ತು ಇತರ ಪಾವತಿಗಳನ್ನು ಸ್ವೀಕರಿಸಿ, ಸರ್ಕಾರದ ಆದೇಶದ ಮೇರೆಗೆ ಹಣ ಪಾವತಿ ಸಹ ಮಾಡುತ್ತದೆ. ಸರ್ಕಾರಿ ಸಾಲ ಪತ್ರಗಳು, ಖಜಾನೆ ಹುಂಡಿಗಳ ನೀಡಿಕೆಯಲ್ಲದೇ ಸರ್ಕಾರದ ಹಣಕಾಸು ಸಲಹೆಗಾರನಾಗಿ ಕಾರ್ಯ ಮಾಡುತ್ತದೆ. ಸರ್ಕಾರಗಳಿಗೆ ಅವಶ್ಯವಿರುವ ಸಾಲದ ವ್ಯವಸ್ಥೆಯನ್ನೂ ಸಹ ಅದು ಒದಗಿಸುತ್ತದೆ.

**3) ಬ್ಯಾಂಕುಗಳ ಬ್ಯಾಂಕು ಆಗಿ ಕಾರ್ಯ ನಿರ್ವಹಣೆ:** ಆರ್‌ಬಿಐ ಬ್ಯಾಂಕುಗಳ ಬ್ಯಾಂಕಾಗಿ ಕಾರ್ಯನಿರ್ವಹಿಸುತ್ತದೆ. ದೇಶದಲ್ಲಿರುವ ಎಲ್ಲಾ ಬ್ಯಾಂಕುಗಳನ್ನು ನಿಯಂತ್ರಿಸುತ್ತದೆ. ಎಲ್ಲಾ ಬ್ಯಾಂಕುಗಳು ತಮ್ಮ ಠೇವಣಿ ಹಣದ ನಿರ್ದಿಷ್ಟ ಪಡಿಸಿದ ಭಾಗವನ್ನು ಆರ್‌ಬಿಐನಲ್ಲಿ ಮೀಸಲು ಇಡಬೇಕು. ಬ್ಯಾಂಕುಗಳಿಗೆ ಹೆಚ್ಚುವರಿ ಹಣದ ಅವಶ್ಯಕತೆ ಇದ್ದಾಗ ಅವುಗಳಿಗೆ ಆರ್‌ಬಿಐ ಸಾಲ ಒದಗಿಸುತ್ತದೆ. ಅದು ಬ್ಯಾಂಕುಗಳ ಹಣಕಾಸು ನಿರ್ವಹಣೆಯ ಕುರಿತಾಗಿಯೂ ಮಾರ್ಗದರ್ಶನ ನೀಡುತ್ತದೆ.

**4) ರಾಷ್ಟ್ರೀಯ ಸಂದಾಯ ಕೇಂದ್ರವಾಗಿ ಕಾರ್ಯನಿರ್ವಹಣೆ:** ಬ್ಯಾಂಕುಗಳ ನಡುವಿನ ವ್ಯವಹಾರಗಳನ್ನು ಸೂಕ್ತವಾಗಿ ಬಗೆಹರಿಸುವ ಸಲುವಾಗಿ ಆರ್‌ಬಿಐ ಸಂದಾಯ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತದೆ.

**5) ಸಾಲ ಪ್ರಮಾಣದ ನಿಯಂತ್ರಕ:** ದೇಶದಲ್ಲಿ ನಿರೀಕ್ಷಿತ ಹಣಕಾಸು ಪರಿಸ್ಥಿತಿಗೆ ಅನುಗುಣವಾಗಿ ವಾಣಿಜ್ಯ ಬ್ಯಾಂಕುಗಳು ನೀಡುವ ಸಾಲದ ಪ್ರಮಾಣವನ್ನು ಆರ್‌ಬಿಐ ನಿಯಂತ್ರಿಸುತ್ತದೆ.

**6) ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕ:** ಆರ್‌ಬಿಐ ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕನಾಗಿ ಕಾರ್ಯ ನಿರ್ವಹಿಸುತ್ತದೆ. ಈ ಕಾರ್ಯವು ನಮ್ಮ ಹಣ ಬೇರೆ ದೇಶಗಳ ಹಣಕ್ಕೆ

© KTBS Not to be published

ವರ್ಗಾವಣೆಯಾಗುವ ವಿನಿಮಯ ದರಗಳನ್ನು ನಿಯಂತ್ರಿಸಲು ಸಹಾಯಕವಾಗಿದೆ. ವಿದೇಶಿ ವಿನಿಮಯ ದರಗಳಲ್ಲಿನ ಅನಪೇಕ್ಷಿತ ಏರಿಳಿತಗಳನ್ನು ಕಡಿಮೆಗೊಳಿಸುವ ಸಲುವಾಗಿ, ಪರಿಸ್ಥಿತಿಗಳನ್ನು ಅವಲಂಬಿಸಿ, ಆರ್‌ಬಿಐ ವಿದೇಶಿ ಹಣಗಳನ್ನು ಕೊಳ್ಳುವ ಮತ್ತು ಮಾರುವ ಕ್ರಮಗಳನ್ನು ಜರುಗಿಸುತ್ತದೆ.

**7) ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ:** ಬ್ಯಾಂಕ್ ಶಾಖೆಗಳ ವಿಸ್ತರಣೆಯ ಮೂಲಕ ಜನರಲ್ಲಿ ಉಳಿತಾಯ ಮನೋಭಾವವನ್ನು ಪ್ರೇರೇಪಿಸುವುದಲ್ಲದೇ, ಹಣಕಾಸು ಸಾಕ್ಷರತೆಗೆ ಒತ್ತು ನೀಡಿದೆ.

ಭಾರತದ ಆರ್ಥಿಕ ಅಭಿವೃದ್ಧಿಯನ್ನು ತೀವ್ರಗೊಳಿಸಲು ಆರ್‌ಬಿಐ ಮಹತ್ವದ ಪಾತ್ರ ವಹಿಸಿದೆ. ಅಂಕಿ-ಅಂಶಗಳ ಸಂಗ್ರಹಣೆ ಮತ್ತು ಪ್ರಕಟಣೆ, ಸಂಶೋಧನೆ ಹಾಗೂ ಬ್ಯಾಂಕಿಂಗ್ ಸಂಬಂಧಿತ ಜ್ಞಾನ ಹಂಚಿಕೆಯ ಕಾರ್ಯಗಳ ಮೂಲಕ ದೇಶದ ಅಭಿವೃದ್ಧಿಗೆ ಪೂರಕಾದ ಕೆಲಸ ಮಾಡುತ್ತಿದೆ. ದೇಶವು ಹಲವಾರು ಹಣಕಾಸು ಬಿಕ್ಕಟ್ಟುಗಳನ್ನು ಸೂಕ್ತವಾಗಿ ಎದುರಿಸಲು ಆರ್‌ಬಿಐನ ಕ್ರಮಗಳು ಸಹಾಯಕಾರಿಯಾಗಿವೆ.

**ನಿಮಗಿದು ತಿಳಿದಿರಲಿ.**

*ಅತಿ ಪುರಾತನ ಕೇಂದ್ರ ಬ್ಯಾಂಕು 1668 ರಲ್ಲಿ ಸ್ಥಾಪಿತವಾದ ಸ್ವೀಡನ್ನಿನ 'ರಿಕ್ಸ್ ಬ್ಯಾಂಕ್'; ಬ್ರಿಟನ್ನಿನ ಕೇಂದ್ರ ಬ್ಯಾಂಕು 'ಬ್ಯಾಂಕ್ ಆಫ್ ಇಂಗ್ಲೆಂಡ್' ಅನ್ನು 1694 ರಲ್ಲಿ ಸ್ಥಾಪಿಸಲಾಯಿತು; ಅಮೇರಿಕೆಯ ಕೇಂದ್ರ ಬ್ಯಾಂಕು 'ಫೆಡರಲ್ ರಿಜರ್ವ ಸಿಸ್ಟಮ್'ನ್ನು 1913 ರಲ್ಲಿ ಸ್ಥಾಪಿಸಲಾಯಿತು.*

## 5. ಹಣದ ಪೂರೈಕೆಯ ನಿಯಂತ್ರಣ

ದೇಶದ ಹಣಕಾಸು ಪ್ರಾಧಿಕಾರ ನೀಡಿದ ಕರೆನ್ಸಿ ನೋಟುಗಳು ಮತ್ತು ನಾಣ್ಯಗಳು ಆ ದೇಶದ ಹಣದ ಪೂರೈಕೆಯಾಗಿದೆ. ಇವಲ್ಲದೇ ರಾಷ್ಟ್ರದ ಬ್ಯಾಂಕುಗಳಲ್ಲಿರುವ ಉಳಿತಾಯ ಮತ್ತು ಚಾಲ್ತಿ ಖಾತೆಯಲ್ಲಿ ಹೊಂದಿರುವ ಶಿಲ್ಕನ್ನು ಸಹ ಹಣವೆಂದು ಪರಿಗಣಿಸಲಾಗುತ್ತದೆ. ಈ ಖಾತೆಗಳಲ್ಲಿರುವ ಹಣವನ್ನು ಬ್ಯಾಂಕುಗಳಿಂದ ಅಲ್ಪಾವಧಿ ಸೂಚನೆ ನೀಡಿ ಅಥವಾ ಬೇಡಿಕೆಯಾಧಾರದ ಮೇಲೆ ಹೊರ ತೆಗೆಯಬಹುದಾದ್ದರಿಂದ ಇವುಗಳನ್ನು ಬೇಡಿಕೆ ಅಥವಾ ಡಿಮಾಂಡ್ ಠೇವಣಿಗಳು ಎಂದೂ ಕರೆಯುತ್ತಾರೆ. ಉಳಿದ ಠೇವಣಿಗಳಿಗೆ ನಿರ್ದಿಷ್ಟ ಸಮಯಾವಧಿ ಇರುವುದರಿಂದ ಅವುಗಳು ಮುದ್ದತ್ತು ಠೇವಣಿಗಳಾಗಿರುತ್ತವೆ. ಹಾಗಾಗಿ ಯಾವುದೇ ಸಮಯದಲ್ಲಿ ಜನರ ಬಳಿ ಇರುವ ಕರೆನ್ಸಿ ಮತ್ತು ಉಳಿತಾಯ ಠೇವಣಿಗಳ ಒಟ್ಟು ಮೊತ್ತವನ್ನು ಆಗಿನ ಪೂರೈಕೆಯಲ್ಲಿರುವ ಒಟ್ಟು ಹಣದ ಪ್ರಮಾಣ ಎಂದು ಲೆಕ್ಕ ಹಾಕಲಾಗುತ್ತದೆ.

ಭಾರತದಲ್ಲಿ ಹಣ ಪೂರೈಕೆಯ ನಾಲ್ಕು ಪರಿಕಲ್ಪನೆಗಳನ್ನು ಬಳಸಲಾಗುತ್ತದೆ: M1, M2, M3 ಮತ್ತು M4. ಅವುಗಳನ್ನು ಹೀಗೆ ವ್ಯಾಖ್ಯಾನಿಸಬಹುದು:

M1 = ಕರೆನ್ಸಿ ನೋಟುಗಳು ಮತ್ತು ನಾಣ್ಯಗಳು + ವಾಣಿಜ್ಯ ಬ್ಯಾಂಕುಗಳಲ್ಲಿರುವ ಬೇಡಿಕೆ ಠೇವಣಿಗಳು;

M2 = M1 + ಅಂಚೆ ಕಛೇರಿಗಳಲ್ಲಿರುವ ಉಳಿತಾಯ ಠೇವಣಿಗಳು;

M3 = M1 + ವಾಣಿಜ್ಯ ಬ್ಯಾಂಕುಗಳಲ್ಲಿರುವ ಮುದ್ದತ್ತು ಠೇವಣಿಗಳು; ಮತ್ತು

M4 = M3 + ಅಂಚೆ ಕಛೇರಿಗಳಲ್ಲಿರುವ ಒಟ್ಟು ಠೇವಣಿಗಳು.

ಹಣಕಾಸು ನಿರ್ವಹಣೆಯ ದೃಷ್ಟಿಯಿಂದ M1 ಮತ್ತು M2 ಕಿರಿದಾದ ಹಣವೆಂದು ಪರಿಗಣಿತವಾದರೆ, M3 ಮತ್ತು M4 ಗಳನ್ನು ವಿಶಾಲ ಹಣವೆಂದು ಪರಿಗಣಿತವಾಗುತ್ತವೆ. ಈ ಹಣದ ಪೂರೈಕೆಯ ಹೊರತಾಗಿ ವಾಣಿಜ್ಯ ಬ್ಯಾಂಕುಗಳು ತಾವು ಸ್ವೀಕರಿಸಿದ ಠೇವಣಿಗಳ ಆಧಾರದ ಮೇಲೆ ಎಷ್ಟೋ ಪಟ್ಟು ಅಧಿಕ ಪ್ರಮಾಣದ

© KTBS Not to be published

ಸಾಲ ಸೃಷ್ಟಿಸಿ ವಾಣಿಜ್ಯ ಹಾಗೂ ಇತರ ಉದ್ದೇಶಗಳಿಗೆ ನೀಡುತ್ತವೆ. ಇದು ಕೂಡ ಆರ್ಥಿಕ ವ್ಯವಸ್ಥೆಯಲ್ಲಿ ಚಲಾವಣೆಯಲ್ಲಿರುವ ಹಣದ ಪ್ರಮಾಣವನ್ನು ಪ್ರಭಾವಿಸುತ್ತದೆ. ಈ ಹಣದ ಪೂರೈಕೆ ಒಂದೆಡೆಯಾದರೆ, ಇನ್ನೊಂದೆಡೆ ಸರಕು ಸೇವೆಗಳ ಪ್ರಮಾಣವು ದೇಶದಲ್ಲಿನ ಹಣದುಬ್ಬರದ (ಬೆಲೆಗಳ ಏರಿಳಿತಗಳು) ಸ್ಥಿತಿಯನ್ನು ಪ್ರಭಾವಿಸುತ್ತವೆ. ಹಣದ ಪೂರೈಕೆ ಅಧಿಕವಾಗಿ ಅದಕ್ಕೆ ತಕ್ಕುದಾದ ಸರಕು ಸೇವೆಗಳ ಪೂರೈಕೆ ಇಲ್ಲವಾದಾಗ ಬೆಲೆಗಳು ತೀವ್ರವಾಗಿ ಏರಲು ಪ್ರಾರಂಭಿಸಿ ಬಹಳಷ್ಟು ತೊಂದರೆಗಳು ಶುರುವಾಗುತ್ತವೆ.

ಬೆಲೆಗಳಲ್ಲಿನ ಅಲ್ಪ ಏರಿಕೆಯ ಪ್ರಮಾಣವು ಆರ್ಥಿಕತೆಗೆ ಶಕ್ತಿದಾಯಕ ಪೇಯದಂತಿದ್ದರೆ, ತೀವ್ರ ಬೆಲೆ ಏರಿಕೆಯು ಜನರ ಖರೀದಿ ಶಕ್ತಿ ಮತ್ತು ಆದಾಯ ಹಂಚಿಕೆಯನ್ನು ತೀವ್ರವಾಗಿ ಬಾಧಿಸುತ್ತದೆಯಲ್ಲದೇ ಹೂಡಿಕೆದಾರರ ನಿರೀಕ್ಷೆಗಳನ್ನೂ ಹುಸಿಯಾಗಿಸಿ ಆರ್ಥಿಕ ಅಭಿವೃದ್ಧಿಗೆ ತೊಡರಾಗುತ್ತದೆ.

ಇಂಥ ಸಂದರ್ಭಗಳಲ್ಲಿ, ಪರಿಸ್ಥಿತಿಯನುಸಾರ ಆರ್‌ಬಿಐ ಹಣದ ಪೂರೈಕೆಯಲ್ಲಿ ಬದಲಾವಣೆ ಮಾಡುತ್ತದೆ. ಆದರೆ ಬ್ಯಾಂಕುಗಳ ಸಾಲ ನೀಡಿಕೆಯ ಸಾಮರ್ಥ್ಯವನ್ನು ನಿಯಂತ್ರಿಸಲು ಅದು ಹಲವು ನಿರ್ದಿಷ್ಟ ಕ್ರಮಗಳನ್ನು ಅನುಸರಿಸುತ್ತದೆ. ಹಣದ ಪೂರೈಕೆ ಮತ್ತು ಸಾಲದ ಪ್ರಮಾಣ ಮತ್ತು ಬಡ್ಡಿ ದರದ ನಿಯಂತ್ರಣಕ್ಕಾಗಿ ಇರುವ ಕ್ರಮಗಳನ್ನು ಒಟ್ಟಾಗಿ 'ಹಣಕಾಸು ನೀತಿ' ಎಂದು ಕರೆಯುತ್ತೇವೆ. ಈಗ ನಾವು ಆರ್‌ಬಿಐ ಕೈಗೊಳ್ಳುವ ಸಾಲ ನಿಯಂತ್ರಣ ಕ್ರಮಗಳನ್ನು ಸಂಕ್ಷಿಪ್ತವಾಗಿ ಚರ್ಚಿಸೋಣ.

## 6. ಸಾಲ/ಪತ್ತು ನಿಯಂತ್ರಣ ಕ್ರಮಗಳು

ಇವುಗಳನ್ನು ನಾವು ಎರಡು ವಿಧಗಳಾಗಿ ವಿಂಗಡಿಸಬಹುದು: ಪರಿಮಾಣಾತ್ಮಕ ಮತ್ತು ಗುಣಾತ್ಮಕ ಕ್ರಮಗಳು.

### ಅ. ಪರಿಮಾಣಾತ್ಮಕ ಸಾಲ ನಿಯಂತ್ರಣ ಕ್ರಮಗಳು

ಈ ಸಾಧನಗಳು ವ್ಯವಹಾರಕ್ಕೆ ಮತ್ತು ಜನರಿಗೆ ಲಭ್ಯವಾಗುವ ಹಣದ ಪ್ರಮಾಣವನ್ನು ಪರಿಣಮಿಸುತ್ತವೆ. ಈಗ ಅವುಗಳನ್ನು ಅರ್ಥಮಾಡಿಕೊಳ್ಳೋಣ.

i. **ಬ್ಯಾಂಕ್ ದರ:** ಕೇಂದ್ರ ಬ್ಯಾಂಕು ಉಳಿದ ಬ್ಯಾಂಕುಗಳು ತೆಗೆದುಕೊಳ್ಳುವ ಸಾಲಕ್ಕೆ ವಿಧಿಸುವ ಮೂಲ ಬಡ್ಡಿ ದರವಾಗಿರುತ್ತದೆ. ಇದು ಬ್ಯಾಂಕುಗಳು ತಮ್ಮ ಗ್ರಾಹಕರಿಗೆ ವಿಧಿಸುವ ಬಡ್ಡಿ ದರವನ್ನು ನಿರ್ಧರಿಸುವ ತಳಮಟ್ಟದ ದರವಾಗಿದ್ದು ಬ್ಯಾಂಕುಗಳು ನೀಡುವ ಸಾಲದ ಪ್ರಮಾಣವನ್ನು ಪ್ರಭಾವಿಸುತ್ತದೆ. ಬ್ಯಾಂಕ್ ದರ ಹೆಚ್ಚಾದಾಗ ಒಟ್ಟಾರೆ ಸಾಲದ ವೆಚ್ಚ ಹೆಚ್ಚಾಗಿ ಸಾಲ ನೀಡಿಕೆ ಕುಗ್ಗುತ್ತದೆ ಮತ್ತು ಬ್ಯಾಂಕ್ ದರ ಇಳಿಕೆಯಾದಾಗ ಸಾಲದ ವೆಚ್ಚ ಕಡಿಮೆಯಾಗಿ ಸಾಲ ನೀಡಿಕೆ ಹಿಗ್ಗುತ್ತದೆ. ಭಾರತೀಯ ರಿಜರ್ವ್ ಬ್ಯಾಂಕು ಇದೇ ಉದ್ದೇಶವನ್ನು ರೆಪೋ ಮತ್ತು ರಿವರ್ಸ್ ರೆಪೋ ದರಗಳ ಏರಿಳಿತ ಮಾಡುವುದರಿಂದಲೂ ಸಾಧಿಸುತ್ತದೆ.

ii. **ಮುಕ್ತ ಮಾರುಕಟ್ಟೆ ಕಾರ್ಯಾಚರಣೆ:** ಹಣಕಾಸು ಮಾರುಕಟ್ಟೆಯಲ್ಲಿ ಮುಕ್ತವಾಗಿ ಸರ್ಕಾರಿ ಭದ್ರತೆಗಳನ್ನು ಕೇಂದ್ರ ಬ್ಯಾಂಕು ಕೊಳ್ಳುವ ಮತ್ತು ಮಾರಾಟ ಮಾಡುವ ಕ್ರಮವೇ ಮುಕ್ತ ಮಾರುಕಟ್ಟೆ ಕಾರ್ಯಾಚರಣೆ ಆಗಿದೆ. ಸರ್ಕಾರಿ ಭದ್ರತೆಗಳ ಮಾರಾಟವು ಸಾರ್ವಜನಿಕರ ಮತ್ತು ಬ್ಯಾಂಕುಗಳ ಬಳಿಯ ಹಣವನ್ನು ಕೇಂದ್ರ ಬ್ಯಾಂಕಿಗೆ ವರ್ಗಾಯಿಸಿದರೆ, ಭದ್ರತೆಗಳ ಖರೀದಿಯು ಹಣವನ್ನು ಕೇಂದ್ರ ಬ್ಯಾಂಕಿನಿಂದ ಸಾರ್ವಜನಿಕರಿಗೆ ಮತ್ತು ಬ್ಯಾಂಕುಗಳಿಗೆ ವರ್ಗಾಯಿಸುತ್ತದೆ.

iii. **ಮೀಸಲು ಅನುಪಾತದ ಅವಶ್ಯಕತೆಯನ್ನು ಏರಿಳಿತಗೊಳಿಸುವುದು:** ವಾಣಿಜ್ಯ ಮತ್ತು ಇತರ ಬ್ಯಾಂಕುಗಳು ಆರ್‌ಬಿಐನ ಸೂಚನೆಗಳ ಪ್ರಕಾರ ಎರಡು ರೀತಿಯ ಮೀಸಲುಗಳನ್ನು ಹೊಂದಬೇಕಾಗುತ್ತದೆ.

© KTBS Not to be published

ಮೊದಲನೆಯದು ನಗದು ಮೀಸಲು ಅನುಪಾತ, ಎರಡನೆಯದು ಶಾಸನಬದ್ಧ ದ್ರವ್ಯತೆ ಅನುಪಾತ. ನಗದು ಮೀಸಲು ಅನುಪಾತವು ಬ್ಯಾಂಕುಗಳು ತಮ್ಮ ಒಟ್ಟು ಠೇವಣಿಗಳ ನಿರ್ದಿಷ್ಟ ಪಡಿಸಿದ ಪ್ರಮಾಣವನ್ನು ಆರ್‌ಬಿಐನಲ್ಲಿ ಜಮೆಯಾಗಿಡಬೇಕಾದ ಪ್ರಮಾಣವಾಗಿದೆ. ಶಾಸನಬದ್ಧ ದ್ರವ್ಯತೆಯ ಅನುಪಾತವು ಬ್ಯಾಂಕುಗಳು ತಮ್ಮ ಒಟ್ಟು ಠೇವಣಿಗಳ ನಿರ್ದಿಷ್ಟಪಡಿಸಿದ ಪ್ರಮಾಣವನ್ನು ನಗದಾಗಿ ಇರಿಸಿಕೊಳ್ಳುವ ಪ್ರಮಾಣವಾಗಿದೆ. ಈ ಎರಡೂ ಅನುಪಾತಗಳನ್ನು ಏರಿಸಿದಾಗ ಬ್ಯಾಂಕುಗಳ ಬಳಿ ದೈನಂದಿನ ವ್ಯವಹಾರಕ್ಕೆ ಕಡಿಮೆ ಹಣ ಲಭ್ಯವಾಗುತ್ತದೆ ಮತ್ತು ಅವುಗಳನ್ನು ಇಳಿಸಿದಾಗ ಹೆಚ್ಚಿನ ಹಣದ ಪ್ರಮಾಣ ಲಭ್ಯವಾಗುತ್ತದೆ.

### ಬ. ಗುಣಾತ್ಮಕ ಸಾಲ ನಿಯಂತ್ರಣ ಕ್ರಮಗಳು

ಗುಣಾತ್ಮಕ ಅಥವಾ ಆಯ್ದ ಸಾಲ ನಿಯಂತ್ರಣ ಕ್ರಮಗಳು ಸಾಲ ಪಡೆಯುವ ಉದ್ದೇಶವನ್ನು ಮತ್ತು ಅದರ ಬಳಕೆಯನ್ನು ಪ್ರಭಾವಿಸುತ್ತವೆ. ಪ್ರಮುಖ ಗುಣಾತ್ಮಕ ಸಾಲ ನಿಯಂತ್ರಣ ಕ್ರಮಗಳು ಹೀಗಿವೆ:

i. **ಮಾರ್ಜಿನ್ ಪ್ರಮಾಣದ ಬದಲಾವಣೆ:** ಸಾಲ ಪಡೆಯುವಾಗ ಬ್ಯಾಂಕು ಭದ್ರತೆಯನ್ನು ಕೇಳುತ್ತದೆ ಅಥವಾ ಸಾಲದ ನಿಗದಿತ ಪ್ರಮಾಣವನ್ನು ಸಾಲಗಾರ ವ್ಯಕ್ತಿಯೇ ಮಾರ್ಜಿನ್ ಹಣವಾಗಿ ಭರಿಸಬೇಕಾಗುತ್ತದೆ. ಯಾವುದೇ ಉದ್ದೇಶಕ್ಕಾಗಿ ಸಾಲ ನೀಡಿಕೆಯನ್ನು ಉತ್ತೇಜಿಸಲು ಮಾರ್ಜಿನ್ ಹಣದ ಪ್ರಮಾಣವನ್ನು ಇಳಿಸಬಹುದು. ಅದೇ ರೀತಿ ಸಾಲ ನೀಡಿಕೆಯನ್ನು ನಿರುತ್ತೇಜಿಸಲು ಮಾರ್ಜಿನ್ ಹಣದ ಪ್ರಮಾಣವನ್ನು ಏರಿಸಬಹುದು.

ii. **ಸಾಲದ ಗರಿಷ್ಠ ಮಿತಿ ನಿಗದಿ ಅಥವಾ ಸಾಲದ ಪಡಿತರ:** ನಿರ್ದಿಷ್ಟ ಉದ್ದೇಶಗಳಿಗೆ ನೀಡುವ ಸಾಲದ ಪ್ರಮಾಣದ ಗರಿಷ್ಠ ಮಿತಿಯನ್ನು ಆರ್‌ಬಿಐ ನಿಗದಿಗೊಳಿಸಿ ಯಾವುದೇ ಉದ್ದೇಶಕ್ಕೆ ಅತಿಯಾದ ಸಾಲ ನೀಡಿಕೆಯನ್ನು ತಡೆಯುತ್ತದೆ.

iii. **ನೈತಿಕ ಒತ್ತಡ:** ಹಲವು ಉದ್ದೇಶಗಳಿಗೆ ಒಟ್ಟಾರೆ ಸಾಲ ನೀಡಿಕೆಯನ್ನು ಅಥವಾ ಹಲವು ಉದ್ದೇಶಗಳಿಗೆ ಸಾಲದ ಪ್ರಮಾಣವನ್ನು ತಗ್ಗಿಸುವ ಸಲುವಾಗಿ ಆರ್‌ಬಿಐ ವಾಣಿಜ್ಯ ಬ್ಯಾಂಕುಗಳ ಮೇಲೆ ನಿಯಮಿತ ಸುತ್ತೋಲೆಗಳ ಮೂಲಕ ನೈತಿಕ ಒತ್ತಡ ಹೇರುವ ಕ್ರಮ ಇದಾಗಿದೆ.

iv. **ನೇರ ಕ್ರಮ:** ಯಾವಾಗ ಉಳಿದೆಲ್ಲ ಕ್ರಮಗಳು ನಿಷ್ಫಲವಾಗುತ್ತವೆಯೋ ಆಗ ಆರ್‌ಬಿಐ ವಾಣಿಜ್ಯ ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳನ್ನು ನೇರವಾಗಿ ನಿಯಂತ್ರಿಸುವ ಕ್ರಮ ಕೈಗೊಳ್ಳುತ್ತದೆ. ಇದು ಒಂದು ಶಿಕ್ಷೆಯ ರೂಪವಾಗಿದ್ದರಿಂದ ಇದನ್ನು ಕಟ್ಟ ಕಡೆಗೆ ಬಳಸಲಾಗುತ್ತದೆ.

ಹೀಗೆ ಕೇಂದ್ರ ಬ್ಯಾಂಕುಗಳು (ಭಾರತದಲ್ಲಿ ಆರ್‌ಬಿಐ) ಹಲವಾರು ಕ್ರಮಗಳ ಮೂಲಕ ಹಣದ ಪ್ರಮಾಣ ನಿಯಂತ್ರಿಸಿ ತನ್ಮೂಲಕ ಬೆಲೆ ಪರಿಸ್ಥಿತಿ ಮತ್ತು ಒಟ್ಟಾರೆ ಅಭಿವೃದ್ಧಿಯ ಗತಿಯನ್ನು ಪ್ರಭಾವಿಸುತ್ತವೆ.

© KTBS Not to be published

# ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ:**

1. ಸಾಟಿ ವಿನಿಮಯ ಪದ್ಧತಿಯಲ್ಲಿ ವಸ್ತುಗಳ ಬದಲಿಗೆ ________ ವಿನಿಮಯ ಮಾಡಲಾಗುತ್ತಿತ್ತು.
2. ಚೆಕ್‌ಗಳು ............... ಹಣದ ಸಾಧನವಾಗಿವೆ.
3. ಭಾರತೀಯ ರಿಜರ್ವ ಬ್ಯಾಂಕು ಸ್ಥಾಪನೆಯಾದ ವರ್ಷವು ________.
4. ಜಪಾನ್ ದೇಶದ ಹಣವನ್ನು _______ ಎಂದು ಕರೆಯುತ್ತೇವೆ.
5. ಭಾರತ ಸರ್ಕಾರ 14 ವಾಣಿಜ್ಯ ಬ್ಯಾಂಕುಗಳನ್ನು ............... ರಲ್ಲಿ ರಾಷ್ಟ್ರೀಕರಿಸಿತು.
6. ಕಿರಿದಾದ ಹಣದ ಪೂರೈಕೆಯನ್ನು ______ ಮತ್ತು ______ ಮೂಲಕ ಅಳೆಯುತ್ತೇವೆ.
7. ಹಣದುಬ್ಬರವು ಹಣದ ಪೂರೈಕೆಯು ಸರಕು–ಸೇವೆಗಳ ಪೂರೈಕೆಗಿಂತ _____ ಇದ್ದಾಗ ಸಂಭವಿಸುತ್ತದೆ.

**II. ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ**

1. ಸಾಟಿ ವಿನಿಮಯ ಪದ್ಧತಿ ಎಂದರೇನು?
2. ಹಣದ ಅರ್ಥ ಮತ್ತು ಕಾರ್ಯಗಳನ್ನು ವಿವರಿಸಿ.
3. ಆರ್‌ಬಿಐನ ಕಾರ್ಯಗಳನ್ನು ವಿವರಿಸಿ.
4. ಭಾರತದಲ್ಲಿ ಬಳಸಲಾಗುತ್ತಿರುವ ಹಣದ ಪೂರೈಕೆಯ ವಿವಿಧ ಪರಿಕಲ್ಪನೆಗಳನ್ನು ವಿವರಿಸಿ.
5. ಆರ್‌ಬಿಐ ಬಳಸುವ ಸಾಲ ನಿಯಂತ್ರಣ ಕ್ರಮಗಳನ್ನು ವಿವರಿಸಿ.

© KTBS
Not to be published

**III. ಚಟುವಟಿಕೆಗಳು :**

1. ಸಮೀಪದ ಬ್ಯಾಂಕನ್ನು ಸಂದರ್ಶಿಸಿ ಮತ್ತು ಅದರ ಕಾರ್ಯಾಚರಣೆ ಕುರಿತು ವರದಿ ತಯಾರಿಸಿ.

**IV. ಯೋಜಿತ ಕಾರ್ಯ :**

1. ಸೂಕ್ತ ಚಿತ್ರಗಳನ್ನು ಉಪಯೋಗಿಸಿಕೊಂಡು ಹಣದ ವಿಕಾಸವನ್ನು ವಿವರಿಸಿ.
2. ವಾಣಿಜ್ಯ ಬ್ಯಾಂಕುಗಳ ಕಾರ್ಯಗಳನ್ನು ಗಮನಿಸಿ ಸೂಕ್ತ ವಿವರಣೆ ನೀಡಿ.

* * * *

# ಅಧ್ಯಾಯ – 4

# ಸಾರ್ವಜನಿಕ ಹಣಕಾಸು ಮತ್ತು ಆಯ–ವ್ಯಯ

L1Z8T1

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ :**

- ಸಾರ್ವಜನಿಕ ಹಣಕಾಸಿನ ಅರ್ಥ ಮತ್ತು ಮಹತ್ವ.
- ಆಯ–ವ್ಯಯ
- ಸಾರ್ವಜನಿಕ ವೆಚ್ಚ ಮತ್ತು ಸಾರ್ವಜನಿಕ ಆದಾಯ
- ಕೊರತೆಯ ಹಣಕಾಸು ಮತ್ತು ವಿತ್ತೀಯ ಕೊರತೆ.

## 1. ಪರಿಚಯ

ನಿಮಗೆ ನಿಮ್ಮ ಕುಟುಂಬವು ಯಾವ ಮೂಲಗಳಿಂದ ಎಷ್ಟು ವರಮಾನ ಪಡೆಯುತ್ತದೆ ಎಂಬ ಮಾಹಿತಿ ಇದೆಯೇ? ಪ್ರತಿ ಕುಟುಂಬದ ಸದಸ್ಯರು ಕೃಷಿ, ಉದ್ದಿಮೆ ಅಥವಾ ಸೇವೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ವರಮಾನ ಪಡೆಯುತ್ತಾರೆ. ವ್ಯಕ್ತಿಗಳು ವರಮಾನವನ್ನು ಗೇಣಿ ಅಥವಾ ಬಾಡಿಗೆ (ಭೂಮಿ, ಜಮೀನು ಮತ್ತು ಇತರ ಸ್ಥಿರ ಆಸ್ತಿಗಳ ಮೇಲೆ); ಕೂಲಿ (ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗಿ ತಮ್ಮ ಶ್ರಮ ನೀಡುವುದರ ಮೂಲಕ); ಬಡ್ಡಿ (ಹಣಕಾಸು ಸಂಸ್ಥೆಗಳಲ್ಲಿ ಹಣ ಹೂಡುವುದರ ಮೂಲಕ ಅಥವಾ ಇನ್ನೊಬ್ಬರಿಗೆ ಸಾಲವಾಗಿ ನೀಡುವುದರ ಮೂಲಕ); ಮತ್ತು ಲಾಭಗಳ (ಒಂದು ಉತ್ಪಾದಕ ಚಟುವಟಿಕೆಯಲ್ಲಿ ಹಣ ತೊಡಗಿಸುವುದರ ಮೂಲಕ) ರೂಪದಲ್ಲಿ ವರಮಾನ ಪಡೆಯುತ್ತಾರೆ.

ಹೀಗೆ ಪಡೆಯಲಾಗುವ ವರಮಾನವನ್ನು ಅನುಭೋಗ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ವೆಚ್ಚ ಮಾಡಲಾಗುತ್ತದೆ. ವ್ಯಕ್ತಿ ಅಥವಾ ಕುಟುಂಬ ತನ್ನ ವರಮಾನ ಮತ್ತು ವೆಚ್ಚವನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ಅಭಿವೃದ್ಧಿಯನ್ನು ಸಾಧಿಸುವುದು ಒಂದು ಕಲೆ. ವರಮಾನಕ್ಕಿಂತ ವೆಚ್ಚ ಅಧಿಕವಾದಾಗ ಸಾಲ ಮಾಡಬೇಕಾಗುತ್ತದೆ. ಹೀಗೆ ವ್ಯಕ್ತಿ ಅಥವಾ ಕುಟುಂಬದ ವರಮಾನ, ವೆಚ್ಚ ಮತ್ತು ಸಾಲದ ನಿರ್ವಹಣೆಯ ಬಗ್ಗೆ ತಿಳಿಸಿಕೊಡುವುದನ್ನು 'ವೈಯಕ್ತಿಕ ಹಣಕಾಸು' ಎನ್ನುತ್ತೇವೆ. ಅದೇ ರೀತಿಯಲ್ಲಿ ಸರ್ಕಾರವು ತನ್ನದೇ ಹಣಕಾಸನ್ನು ನಿರ್ವಹಿಸುತ್ತದೆ. ಅದೇ ಸಾರ್ವಜನಿಕ ಹಣಕಾಸು. ಈ ಅಧ್ಯಾಯದಲ್ಲಿ ಸರ್ಕಾರವು ತನ್ನ ಹಣಕಾಸನ್ನು ಹೇಗೆ ನಿರ್ವಹಿಸುತ್ತದೆ ಎಂಬುದನ್ನು ತಿಳಿಯೋಣ.

© KTBS Not to be published

## ಸಾರ್ವಜನಿಕ ಹಣಕಾಸಿನ ಅರ್ಥ ಮತ್ತು ಮಹತ್ವ

ಸರ್ಕಾರದ ವರಮಾನ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವುದೇ ಸಾರ್ವಜನಿಕ ಹಣಕಾಸು. ಸರ್ಕಾರದ ವರಮಾನ ಹಾಗೂ ವೆಚ್ಚಗಳ ನಿರ್ವಹಣೆ ಮತ್ತು ಅವುಗಳಲ್ಲಿನ ಹೊಂದಾಣಿಕೆ ಮಾಡುವ ಪ್ರಕ್ರಿಯೆ ಬಗ್ಗೆ ಅಭ್ಯಸಿಸುವುದೇ ಸಾರ್ವಜನಿಕ ಹಣಕಾಸು ಎಂದು ಡಾಲ್ಟನ್‌ರವರು ವ್ಯಾಖ್ಯಾನಿಸುತ್ತಾರೆ. ಸಾರ್ವಜನಿಕ ಹಣಕಾಸು ಸರ್ಕಾರದ ವರಮಾನ, ವೆಚ್ಚ ಮತ್ತು ಸಾಲ ನಿರ್ವಹಣೆಯ ಸಮಗ್ರ ಚಿತ್ರಣವನ್ನು ನೀಡುತ್ತದೆ.

**ಮಹತ್ವ:** ಆರ್ಥಿಕ ಅಭಿವೃದ್ಧಿ ಮತ್ತು ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಸರ್ಕಾರವು ತನ್ನ ವರಮಾನ, ವೆಚ್ಚ ಮತ್ತು ಸಾಲಕ್ಕೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಅನುಸರಿಸುವ ನೀತಿಗೆ ***ಕೋಶೀಯ*** ನೀತಿ ಅಥವಾ ***ವಿತ್ತೀಯ*** ನೀತಿ ಎನ್ನುತ್ತಾರೆ. ಆರ್ಥಿಕ ಬೆಳವಣಿಗೆ ಮತ್ತು ಸ್ಥಿರತೆ ಸಾಧಿಸಿ ವರಮಾನದ ಸಮಾನ ಹಂಚಿಕೆಯನ್ನು ಸಾಧಿಸುವುದು ವಿತ್ತೀಯ ನೀತಿಯ ಪ್ರಮುಖ ಉದ್ದೇಶಗಳಾಗಿವೆ.

ಸರ್ಕಾರವು ಸಾಮಾನ್ಯವಾಗಿ ತಾನು ಸಂಗ್ರಹಿಸಿದ ವರಮಾನವನ್ನು ಅಥವಾ ಪಡೆದ ಸಾಲದ ಮೊತ್ತವನ್ನು ಅಭಿವೃದ್ಧಿ ಕಾರ್ಯಗಳ ಮೇಲೆ ವ್ಯಯಿಸುತ್ತದೆ. ಇದು ಬೆಳವಣಿಗೆ ದರವನ್ನು ವೃದ್ಧಿಸಿ ಎಲ್ಲರಿಗೂ ಪ್ರಯೋಜನ ದೊರಕಿಸುತ್ತದೆ. ಅದೇ ರೀತಿ ಆರ್ಥಿಕ ಹಿಂಜರಿತದ ಸಂದರ್ಭಗಳಲ್ಲಿ ವೆಚ್ಚವನ್ನು ಹಿಗ್ಗಿಸಿ, ಆರ್ಥಿಕ ಹಿಗ್ಗುವಿಕೆಯ ಸಂದರ್ಭಗಳಲ್ಲಿ ವೆಚ್ಚವನ್ನು ಕುಗ್ಗಿಸಿ, ಸರ್ಕಾರವು ಆರ್ಥಿಕ ಸ್ಥಿರತೆಯನ್ನು ಸಾಧಿಸುತ್ತದೆ. ಸರ್ಕಾರದ ವರಮಾನ, ವೆಚ್ಚ ಮತ್ತು ಅವುಗಳ ನಡುವಿನ ಹೊಂದಾಣಿಕೆಗಳು ವಾರ್ಷಿಕ ಆಯ–ವ್ಯಯ ಅಥವಾ ಮುಂಗಡ ಪತ್ರಗಳ ಭಾಗವಾಗಿರುವುದರಿಂದ, ಸಾರ್ವಜನಿಕ ಹಣಕಾಸಿನ ಅಧ್ಯಯನವು ಆಯ–ವ್ಯಯಗಳ ವಿಶ್ಲೇಷಣೆಗೂ ಸಹಾಯಕಾರಿಯಗುತ್ತದೆ.

## 2. ಆಯ–ವ್ಯಯ ಅಥವಾ ಮುಂಗಡ ಪತ್ರ

ಸರ್ಕಾರವು ಪ್ರತಿ ವರ್ಷ ತನ್ನ ಆಯ–ವ್ಯಯವನ್ನು ತಯಾರಿಸುತ್ತದೆ. ಭಾರತದಲ್ಲಿ ಹಣಕಾಸು ವರ್ಷವು ಏಪ್ರಿಲ್ 1ರಂದು ಪ್ರಾರಂಭವಾಗಿ ಅದರ ಮುಂದಿನ ವರ್ಷದ ಮಾರ್ಚ್ 31ಕ್ಕೆ ಮುಕ್ತಾಯವಾಗುತ್ತದೆ. ಮುಂದಿನ ವರ್ಷದ ಆಯ–ವ್ಯಯವನ್ನು ಸರ್ಕಾರವು ಸದರಿ ವರ್ಷದಲ್ಲಿ ತಯಾರಿಸಿ ಸಂಸತ್ತಿನ ಅನುಮೋದನೆ ಪಡೆಯುತ್ತದೆ. ಆ ಆಯ–ವ್ಯಯದ ಮೂಲಕ ತನ್ನ ಕೋಶೀಯ ನೀತಿಯ ಉದ್ದೇಶಗಳನ್ನು ಸಾಧಿಸಲು ಪ್ರಯತ್ನಿಸುತ್ತದೆ. ಹಾಗಾದರೆ ಆಯ–ವ್ಯಯ ಎಂದರೇನು?

ಸರ್ಕಾರದ ಒಂದು ವರ್ಷದ ವರಮಾನ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿಯನ್ನು ಆಯ–ವ್ಯಯ ಪತ್ರ ಅಥವಾ ಮುಂಗಡ ಪತ್ರ ಎಂದು ಕರೆಯುತ್ತಾರೆ. ಇದು ಸರ್ಕಾರದ ವರಮಾನ ಮತ್ತು ವೆಚ್ಚವನ್ನು ತಿಳಿಸುವ ಒಂದು ದಾಖಲೆಯಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮದೇ ಪ್ರತ್ಯೇಕ ಆಯ–ವ್ಯಯವನ್ನು ತಯಾರಿಸುತ್ತವೆ. ಭಾರತದಲ್ಲಿ ಸಾಮಾನ್ಯವಾಗಿ ಹಣಕಾಸು ಸಚಿವರು ಪ್ರತಿವರ್ಷ ಫೆಬ್ರವರಿ ಅಥವಾ ಮಾರ್ಚ್ ತಿಂಗಳ ಅಧಿವೇಶನದಲ್ಲಿ ಲೋಕಸಭೆಯಲ್ಲಿ ಕೇಂದ್ರ ಆಯ–ವ್ಯಯವನ್ನು ಮಂಡಿಸುತ್ತಾರೆ. ಲೋಕಸಭೆ ಮತ್ತು ರಾಜ್ಯಸಭೆಗಳೆರಡರಲ್ಲೂ ಆಯ–ವ್ಯಯ ಪತ್ರದ ಮೇಲೆ ಸುದೀರ್ಘ ಚರ್ಚೆ ನಡೆದು, ಮಾರ್ಚ್ 31ರ ಒಳಗಾಗಿ ಎರಡೂ ಸದನಗಳ ಅನುಮೋದನೆಯನ್ನು ಪಡೆಯಲಾಗುತ್ತದೆ.

**ಆಯ–ವ್ಯಯ ಪತ್ರದಲ್ಲಿ ಮೂರು ವಿಧಗಳಿವೆ:** ಸರ್ಕಾರದ ವರಮಾನವು ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ, ಅದನ್ನು ಉಳಿತಾಯ ಆಯ–ವ್ಯಯ ಎಂತಲೂ; ವರಮಾನಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ ಅದನ್ನು ಕೊರತೆಯ ಆಯ–ವ್ಯಯ ಎಂತಲೂ; ವರಮಾನ ಮತ್ತು ವೆಚ್ಚಗಳೆರಡೂ ಸಮನಾಗಿದ್ದರೆ, ಅದನ್ನು ಸಮತೋಲನ ಆಯ–ವ್ಯಯ ಎಂತಲೂ ಕರೆಯುತ್ತೇವೆ. ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ರಾಷ್ಟ್ರಗಳಲ್ಲಿ ಸರ್ಕಾರಗಳು ಕೊರತೆಯ ಆಯ–ವ್ಯಯವನ್ನು ಮಂಡಿಸುವ ಮೂಲಕ ಅಧಿಕ ಪ್ರಮಾಣದ ವೆಚ್ಚ ಮಾಡಿ, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸುತ್ತಿವೆ.

**2.1. ಸಾರ್ವಜನಿಕ ವೆಚ್ಚಗಳು:** ಸರ್ಕಾರವು ರಾಷ್ಟ್ರದ ರಕ್ಷಣೆ, ಆಡಳಿತ ನಿರ್ವಹಣೆ, ಆರ್ಥಿಕ ಅಭಿವೃದ್ಧಿ ಹಾಗೂ ಜನರ ಯೋಗಕ್ಷೇಮದ ದೃಷ್ಟಿಯಿಂದ ವಿವಿಧ ಚಟುವಟಿಕೆಗಳಿಗಾಗಿ ಹಣವನ್ನು ವೆಚ್ಚ ಮಾಡುತ್ತದೆ. ಇದನ್ನು ಸಾರ್ವಜನಿಕ ವೆಚ್ಚ ಎನ್ನುತ್ತಾರೆ. ಅಂದರೆ ಸರ್ಕಾರವು ತನ್ನ ಪ್ರಜೆಗಳ ಹಿತದೃಷ್ಟಿಯಿಂದ ಮಾಡುವ ವೆಚ್ಚವೇ ಸಾರ್ವಜನಿಕ ವೆಚ್ಚ. 20ನೆಯ ಶತಮಾನದಲ್ಲಿ ಕಲ್ಯಾಣ ರಾಜ್ಯಗಳ ಉದಯದೊಂದಿಗೆ ಆಧುನಿಕ ಸರ್ಕಾರಗಳ ಕಾರ್ಯಕ್ಷೇತ್ರ ಮತ್ತು ಪಾತ್ರ ವಿಸ್ತರಣೆಯಾಗಿದೆ. ಹಾಗಾಗಿ ಸಾರ್ವಜನಿಕ ವೆಚ್ಚವೂ ಹೆಚ್ಚಾಗಿದೆ. ಭಾರತದಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳು ತಮ್ಮದೇ ಆದ ವೆಚ್ಚದ ಬಾಬ್ತುಗಳನ್ನು ಹೊಂದಿವೆ.

© KTBS Not to be republished

ಇಪ್ಪತ್ತನೆಯ ಶತಮಾನದಲ್ಲಿ ಸರ್ಕಾರದ ಪಾತ್ರಗಳ ವಿಸ್ತಾರವು ಅಧಿಕಗೊಂಡಿದ್ದರಿಂದ ಸಾರ್ವಜನಿಕ ವೆಚ್ಚವೂ ಏರಿಕೆಯಾಗಿದೆ. ಸಾರ್ವಜನಿಕ ವೆಚ್ಚವು ಆರ್ಥಿಕ ಅಭಿವೃದ್ಧಿಯನ್ನು ಪೋಷಿಸುವ ಸೌಕರ್ಯಗಳನ್ನು ಸೃಷ್ಟಿಸಿ ಪೊರೆಯಬೇಕಾಗುತ್ತದೆ. ಅದು ಬಂಡವಾಳ ಹೂಡಿಕೆಗೆ ಇರುವ ವಾತಾವರಣವನ್ನು ಸುಧಾರಿಸಬೇಕಾಗುತ್ತದೆ. ಉಳಿತಾಯ, ಹೂಡಿಕೆ ಮತ್ತು ಆವಿಷ್ಕಾರಗಳಿಗೆ ಉತ್ತೇಜಕಗಳನ್ನು ಒದಗಿಸಬೇಕಾಗುತ್ತದೆ. ಅಲ್ಲದೇ ಆರ್ಥಿಕ ಬೆಳವಣಿಗೆಯನ್ನು ತೀವ್ರಗೊಳಿಸಿ ಸ್ಥಿರತೆಯನ್ನೂ ಖಚಿತಪಡಿಸಬೇಕಾಗುತ್ತದೆ. ಅಂದರೆ ಸಾರ್ವಜನಿಕ ವೆಚ್ಚದ ಪ್ರಮುಖ ಉದ್ದೇಶಗಳೆಂದರೆ:

i. ಆರ್ಥಿಕ ಬೆಳವಣಿಗೆಯನ್ನು ತೀವ್ರಗೊಳಿಸುವುದು;

ii. ಉದ್ಯಮ, ವ್ಯವಹಾರ ಮತ್ತು ವಾಣಿಜ್ಯಗಳನ್ನು ಪ್ರೋತ್ಸಾಹಿಸುವುದು;

iii. ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು;

iv. ಸಂತುಲಿತ ಪ್ರಾದೇಶಿಕ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು;

v. ಸಾಮಾಜಿಕ–ಆರ್ಥಿಕ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವುದು;

vi. ಸಂಪೂರ್ಣ ಉದ್ಯೋಗ ಸಾಧಿಸುವುದು; ಮತ್ತು

vii. ಸಾಮಾಜಿಕ ಕಲ್ಯಾಣವನ್ನು ಅಧಿಕಗೊಳಿಸುವುದು.

## 2.2. ಸಾರ್ವಜನಿಕ ವರಮಾನ

ಸಾರ್ವಜನಿಕ ವರಮಾನವು ವಿವಿಧ ಆರ್ಥಿಕ ಚಟುವಟಿಕೆಗಳ ಹಾಗೂ ವ್ಯಕ್ತಿಗಳ ಮೇಲೆ ವಿಧಿಸಿದ ತೆರಿಗೆಗಳಿಂದ; ಸರ್ಕಾರದ ಉದ್ದಿಮೆಗಳಿಂದ ದೊರಕಿದ ವರಮಾನದಿಂದ; ಅನುದಾನ ಮುಂತಾದವುಗಳಿಂದ ದೊರೆಯುತ್ತದೆ. ಜನರ ವರಮಾನದಲ್ಲಿನ ಹೆಚ್ಚಳದಿಂದಾಗಿ ಮತ್ತು ಸರ್ಕಾರದ ಅವಶ್ಯಕತೆಗಳೂ ಹೆಚ್ಚಾಗುತ್ತಿರುವುದರಿಂದ, ಸರ್ಕಾರ ಸಂಗ್ರಹಿಸುತ್ತಿರುವ ವರಮಾನದ ಪ್ರಮಾಣವು ಹೆಚ್ಚಾಗುತ್ತಲಿದೆ. ಸಂವಿಧಾನವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಯಗಳನ್ನು ನಿರ್ದಿಷ್ಟಗೊಳಿಸುವುದರ ಜೊತೆಗೆ ಅವುಗಳ ವರಮಾನದ ಮೂಲಗಳನ್ನೂ ನಿರ್ದಿಷ್ಟಪಡಿಸಿದೆ. ಕೇಂದ್ರ ಸರ್ಕಾರದ ವರಮಾನದ ಮೂಲಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಯೋಣ.

© KTBS Not to be published

**A. ಕಂದಾಯ ವರಮಾನ (Revenue Receipts):** ಸರ್ಕಾರವು ವಿವಿಧ ತೆರಿಗೆಗಳು ಮತ್ತು ತೆರಿಗೆಯೇತರ ಮೂಲಗಳಿಂದ ಸಂಗ್ರಹಿಸುವ ವರಮಾನವನ್ನು ಕಂದಾಯ ವರಮಾನ ಎಂದು ಕರೆಯುತ್ತಾರೆ. ಇದು ಸರ್ಕಾರದ ವಾಸ್ತವ ವರಮಾನವಾಗಿರುತ್ತದೆ. ಕಂದಾಯ ವರಮಾನವನ್ನು ಮುಖ್ಯವಾಗಿ ಎರಡು ವಿಧಗಳನ್ನಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ, ತೆರಿಗೆ ವರಮಾನ ಮತ್ತು ತೆರಿಗೆಯೇತರ ವರಮಾನ.

**1) ತೆರಿಗೆ ವರಮಾನ (Tax Revenue):** ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಗೆಯನ್ನು ತೆರಿಗೆ ಎನ್ನುತ್ತೇವೆ. ಕೇಂದ್ರ ಸರ್ಕಾರವು ಪ್ರಜೆಗಳ ಮೇಲೆ ನಾನಾ ರೀತಿಯ ತೆರಿಗೆಗಳನ್ನು ವಿಧಿಸಿ ವರಮಾನವನ್ನು ಸಂಗ್ರಹಿಸುತ್ತಿದೆ. ತೆರಿಗೆಗಳು ಸರ್ಕಾರದ ಬಹುಮುಖ್ಯ ವರಮಾನದ ಮೂಲಗಳಾಗಿವೆ. ಸರ್ಕಾರವು ತೆರಿಗೆಗಳನ್ನು ವಿಧಿಸುವಾಗ ಹೆಚ್ಚು ವರಮಾನವುಳ್ಳವರ ಮೇಲೆ ಹೆಚ್ಚಿನ ತೆರಿಗೆಯನ್ನೂ, ಕಡಿಮೆ ವರಮಾನವುಳ್ಳವರ ಮೇಲೆ ಕಡಿಮೆ ತೆರಿಗೆಯನ್ನು ವಿಧಿಸುತ್ತಿದೆ. ಬಡವರಿಗೆ ವರಮಾನ ತೆರಿಗೆಯಲ್ಲಿ ವಿನಾಯಿತಿ ನೀಡಿದೆ. ಅದೇ ರೀತಿಯಲ್ಲಿ ಶ್ರೀಮಂತರು ಬಳಸುವ ಸರಕು–ಸೇವೆಗಳ ಮೇಲೆ ಹೆಚ್ಚಿನ ತೆರಿಗೆಯನ್ನೂ ಮತ್ತು ಸಾಮಾನ್ಯ ಜನರು ಬಳಸುವ ಸರಕು–ಸೇವೆಗಳ ಮೇಲೆ ಕಡಿಮೆ ತೆರಿಗೆಯನ್ನು ವಿಧಿಸುತ್ತಿದೆ. ಸರ್ಕಾರ ತೆರಿಗೆ ವಿಧಿಸುವಲ್ಲಿ ಅನುಸರಿಸುವ ಈ ನೀತಿಯನ್ನು **ಪ್ರಗತಿಪರ ತೆರಿಗೆ ನೀತಿ** ಎನ್ನುತ್ತಾರೆ.

ಕೇಂದ್ರ ಸರ್ಕಾರ ವಿಧಿಸುವ ತೆರಿಗೆಗಳಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ. ಅವುಗಳೆಂದರೆ, ಅ) ಪ್ರತ್ಯಕ್ಷ ತೆರಿಗೆಗಳು ಬ) ಪರೋಕ್ಷ ತೆರಿಗೆಗಳು.

**ಅ) ಪ್ರತ್ಯಕ್ಷ ತೆರಿಗೆಗಳು (Direct Taxe):** ಸರ್ಕಾರವು ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ತೆರಿಗೆಯನ್ನು ಪಾವತಿಸಿದರೆ, ಅಂತಹ ತೆರಿಗೆಯನ್ನು ಪ್ರತ್ಯಕ್ಷ ತೆರಿಗೆ ಎನ್ನುತ್ತಾರೆ. ಈ ತೆರಿಗೆಗಳನ್ನು ಇತರರಿಗೆ ವರ್ಗಾಯಿಸಲು ಬರುವುದಿಲ್ಲ. ಸಾಮಾನ್ಯವಾಗಿ ವ್ಯಕ್ತಿಗಳು ಮತ್ತು ಸಂಸ್ಥೆಗಳು ಗಳಿಸುವ ವರಮಾನ ಮತ್ತು ಸಂಪತ್ತಿನ ಮೇಲೆ ವಿಧಿಸುವ ತೆರಿಗೆಗಳು ಪ್ರತ್ಯಕ್ಷ ತೆರಿಗೆಗಳಾಗಿವೆ. ಪ್ರಮುಖ ಪ್ರತ್ಯಕ್ಷ ತೆರಿಗೆಗಳೆಂದರೆ, ವರಮಾನ ತೆರಿಗೆ, ಕಂಪನಿ ತೆರಿಗೆ, ಸಂಪತ್ತಿನ ತೆರಿಗೆ, ಸ್ಟಾಂಪ್ ಶುಲ್ಕ ಇತ್ಯಾದಿ.

**ಬ) ಪರೋಕ್ಷ ತೆರಿಗೆಗಳು (Indirect Taxe):** ಸರ್ಕಾರವು ವಿಧಿಸುವ ತೆರಿಗೆಯನ್ನು ಇತರರ ಮೇಲೆ ವರ್ಗಾಯಿಸಲು ಸಾಧ್ಯವಿದ್ದರೆ, ಅಂತಹ ತೆರಿಗೆಯನ್ನು ಪರೋಕ್ಷ ತೆರಿಗೆ ಎನ್ನುತ್ತಾರೆ. ಸಾಮಾನ್ಯವಾಗಿ ಪರೋಕ್ಷ ತೆರಿಗೆಯನ್ನು ಸರಕುಗಳು ಮತ್ತು ಸೇವೆಗಳ ಮೇಲೆ ವಿಧಿಸಲಾಗುತ್ತದೆ. ಉದಾ:– ಸರ್ಕಾರವು ಸರಕು–ಸೇವೆಗಳ ಉತ್ಪಾದನೆಯ ಸಂದರ್ಭದಲ್ಲಿ ಉತ್ಪಾದಕನ ಮೇಲೆ ತೆರಿಗೆಯನ್ನು ವಿಧಿಸುತ್ತದೆ. ಉತ್ಪಾದಕನು ಈ ತೆರಿಗೆಯನ್ನು ಮಾರಾಟಗಾರನಿಗೆ ವರ್ಗಾಯಿಸಿದರೆ, ಮಾರಾಟಗಾರನು ಅಂತಿಮವಾಗಿ ಆ ತೆರಿಗೆ ಹೊರೆಯನ್ನು ಬಳಕೆದಾರನಿಗೆ ವರ್ಗಾಯಿಸುತ್ತಾನೆ. ಅಂದರೆ ಸರ್ಕಾರ ಉತ್ಪಾದಕನ ಮೇಲೆ ತೆರಿಗೆ ವಿಧಿಸಿದರೆ, ಅದರ ಹೊರೆ ಹೊರುವವನು ಬಳಕೆದಾರನಾಗಿರುತ್ತಾನೆ. ಕೇಂದ್ರ ಸರ್ಕಾರ ವಿಧಿಸುವ ಪ್ರಮುಖ ಪರೋಕ್ಷ ತೆರಿಗೆಗಳೆಂದರೆ, ಕೇಂದ್ರ ಅಬಕಾರಿ ತೆರಿಗೆ, ಮೌಲ್ಯವರ್ಧಿತ ತೆರಿಗೆ, ಆಮದು ರಫ್ತು ಸುಂಕಗಳು, ಸೇವಾ ತೆರಿಗೆ, ಇತ್ಯಾದಿ. ಜುಲೈ 1, 2017ರಿಂದ ಸರ್ಕಾರವು ಎಲ್ಲ ಪರೋಕ್ಷ ತೆರಿಗೆಗಳ ಬದಲಾಗಿ ಒಂದೇ ಸರಕು ಮತ್ತು ಸೇವಾ ತೆರಿಗೆಯನ್ನು (GST) ಜಾರಿಗೆ ತಂದಿದೆ.

*ಸರಕು ಮತ್ತು ಸೇವಾ ತೆರಿಗೆ (**Goods and Services Tax, GST**)*

*ಜಿಎಸ್‌ಟಿಯು ಭಾರತಾದ್ಯಂತ ವಿಧಿಸಲಾಗುವ ಉತ್ಪಾದನೆ, ಮಾರಾಟ ಹಾಗೂ ಬಳಕೆಯ ಮೇಲಿನ ಒಂದು ಸಮಗ್ರ ಪರೋಕ್ಷ ತೆರಿಗೆಯಾಗಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸದ್ಯ ವಿಧಿಸುತ್ತಿರುವ ಎಲ್ಲ ಪರೋಕ್ಷ ತೆರಿಗೆಗಳ ಬದಲಾಗಿ 1–7–2017ರಿಂದ ಜಾರಿಗೆ ಬಂದಿದೆ. ಅದನ್ನು ಸರಕು–ಸೇವೆಗಳ ಮಾರಾಟ ಅಥವಾ ಖರೀದಿಯ ಎಲ್ಲ ಹಂತಗಳಲ್ಲಿ ವಿಧಿಸಿ ಆಕರಿಸಲಾಗುತ್ತದೆ.*

*ಜಿಎಸ್‌ಟಿಯ ಜಾರಿಯು ಪರೋಕ್ಷ ತೆರಿಗೆಗಳ ಸುಧಾರಣೆಯಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದ್ದು, ಬಹು ವಿಧ ತೆರಿಗೆ ಆಕರಣೆ ಹಾಗೂ ಅದರ ಪರಿಣಾಮಗಳನ್ನು ತಡೆಗಟ್ಟಿ, ದೇಶದಾದ್ಯಂತ ಒಂದೇ ಸಾಮಾನ್ಯ ಮಾರುಕಟ್ಟೆ ಸ್ಥಾಪಿಸಲು ಸಹಾಯಕವಾಗುತ್ತದೆ. ತೆರಿಗೆಯ ಸರಳೀಕರಣದಿಂದಾಗಿ ಅದರ ಆಡಳಿತ ಹಾಗೂ ಜಾರಿ ಸುಲಭವಾಗುತ್ತದೆ. ಬಳಕೆದಾರರ ದೃಷ್ಟಿಯಿಂದ ನೋಡುವುದಾದರೆ, ಅತ್ಯಂತ ಪ್ರಮುಖ ಪ್ರಯೋಜನವು ತೆರಿಗೆ ಹೊರೆಯ ಇಳಿಕೆಯಾಗುತ್ತದೆ, ಸರಕುಗಳು ಮುಕ್ತವಾಗಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸಾಗಾಟವಾಗುತ್ತವೆ ಮತ್ತು ದಾಖಲೀಕರಣದ ಹೊರೆ ಕಡಿಮೆಯಾಗುತ್ತದೆ.*

**2) ತೆರಿಗೆಯೇತರ ವರಮಾನ (Non-Tax Revenue) :** ಸರ್ಕಾರವು ತೆರಿಗೆಗಳನ್ನು ಹೊರತುಪಡಿಸಿ ಇತರೆ ಮೂಲಗಳಿಂದಲೂ ವರಮಾನವನ್ನು ಸಂಗ್ರಹಿಸುತ್ತದೆ. ಇದಕ್ಕೆ ತೆರಿಗೆಯೇತರ ವರಮಾನ ಎನ್ನುತ್ತಾರೆ. ಕೇಂದ್ರ ಸರ್ಕಾರ ಸಂಗ್ರಹಿಸುವ ಪ್ರಮುಖ ತೆರಿಗೆಯೇತರ ವರಮಾನಗಳೆಂದರೆ:

1. ಭಾರತೀಯ ರಿಜರ್ವ್ ಬ್ಯಾಂಕು ಗಳಿಸುವ ಲಾಭ;

2. ಭಾರತೀಯ ರೈಲ್ವೆ ಗಳಿಸುವ ಲಾಭ;

© KTBS Not to be published

3. ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ವರಮಾನ;

4. ಸಾರ್ವಜನಿಕ ಉದ್ಯಮಗಳು ಗಳಿಸುವ ವರಮಾನ;

5. ನಾಣ್ಯ ಮುದ್ರಣಾಲಯ ಮತ್ತು ಟಂಕಸಾಲೆಯಿಂದ ಬರುವ ವರಮಾನ;

6. ವಿವಿಧ ರೀತಿಯ ಶುಲ್ಕಗಳು, ದಂಡಗಳು; ಇತ್ಯಾದಿ.

**B. ಬಂಡವಾಳ ವರಮಾನ (Capital Receipt):** ಈ ಮೂಲದ ವರಮಾನವು ಸರ್ಕಾರಕ್ಕೆ ಹೊರೆಯಾಗುತ್ತದೆ ಅಥವಾ ಅದರ ಆಸ್ತಿಗಳನ್ನು ಕಡಿಮೆ ಮಾಡುತ್ತದೆ. ಉದಾಹರಣೆಗೆ ಸರ್ಕಾರ ಮಾಡುವ ಸಾಲಗಳು ಅದರ ಹೊರೆಯನ್ನು ಹೆಚ್ಚಿಸಿದರೆ, ಸಾರ್ವಜನಿಕ ಉದ್ದಿಮೆಗಳ ಷೇರುಗಳ ಮಾರಾಟದಿಂದ ಅದರ ಆಸ್ತಿಗಳ ಪ್ರಮಾಣ ಕರಗುತ್ತದೆ. ಇವುಗಳನ್ನು ಬಂಡವಾಳ ವರಮಾನ ಎನ್ನುತ್ತೇವೆ.


## 2.3. ಸಾರ್ವಜನಿಕ ಸಾಲ (ಋಣ)

ಸರ್ಕಾರವು ಬಂಡವಾಳ ವರಮಾನವನ್ನು ಬಹುಮುಖ್ಯವಾಗಿ ಆಂತರಿಕ ಹಾಗೂ ವಿದೇಶಿ ಮೂಲಗಳಿಂದ ಸಾಲ ಪಡೆಯುವ ಮೂಲಕವೂ ಸಂಗ್ರಹಿಸುತ್ತದೆ. ದೇಶದಲ್ಲಿರುವ ಪ್ರಜೆಗಳು, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ಉದ್ಯಮ ಸಂಸ್ಥೆಗಳು ಮುಂತಾದುವುಗಳಿಂದ ಸಂಗ್ರಹಿಸುವ ಸಾಲವು ಆಂತರಿಕ ಸಾಲವಾದರೆ; ವಿದೇಶಿ ಸರ್ಕಾರಗಳು, ವಿದೇಶಿ ಹಣಕಾಸು ಸಂಸ್ಥೆಗಳು ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲವು ವಿದೇಶಿ ಸಾಲವಾಗಿದೆ.


ಸರ್ಕಾರವು ಸಾಲವಲ್ಲದೆ ಇತರೆ ಮೂಲಗಳಿಂದಲೂ ಬಂಡವಾಳ ವರಮಾನವನ್ನು ಸಂಗ್ರಹಿಸುತ್ತದೆ. ಅದು ಸಾರ್ವಜನಿಕ ಉದ್ಯಮಗಳಲ್ಲಿ ಹೂಡಿರುವ ತನ್ನ ಬಂಡವಾಳವನ್ನು ಹಿಂದಕ್ಕೆ ಪಡೆಯುತ್ತದೆ. ಇದಕ್ಕೆ ಹೂಡಿಕೆ ಹಿಂತೆಗೆತ ಎನ್ನುತ್ತಾರೆ. ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದಿಂದ ಪಡೆದಿರುವ ಸಾಲ ಮತ್ತು ಹಣಕಾಸಿನ ನೆರವನ್ನು ಕಾಲಕಾಲಕ್ಕೆ ಮರುಪಾವತಿ ಮಾಡುತ್ತವೆ. ಹೀಗೆ ಹೂಡಿಕೆ ಹಿಂತೆಗೆತ ಮತ್ತು ಸಾಲ ಮರುಪಾವತಿಯಿಂದ ಸಂಗ್ರಹವಾಗುವ ಹಣವನ್ನು ಸಾಲೇತರ ಬಂಡವಾಳ ವರಮಾನ ಎನ್ನುತ್ತಾರೆ.

ಕೆಳಗಿನ ಚಿತ್ರವು ಭಾರತ ಸರ್ಕಾರದ 2014–15ನೇ ವರ್ಷದ ಆಯ–ವ್ಯಯದ ವಿವರಣೆಯನ್ನು ತೋರಿಸುತ್ತದೆ.

**ರೂಪಾಯಿ ಬಂದದ್ದು (ಪೈಸೆಗಳಲ್ಲಿ)**




**ರೂಪಾಯಿ ಹೋದದ್ದು (ಪೈಸೆಗಳಲ್ಲಿ)**




**ಚಟುವಟಿಕೆ:** ಮೇಲಿನ ಚಿತ್ರವನ್ನು ಅಧ್ಯಯನ ಮಾಡಿ ಅದರ ಅರ್ಥಗಳನ್ನು ಬರೆಯಿರಿ.

© KTBS Not to be published

### 3. ಕೊರತೆಯ ಹಣಕಾಸು (Deficit Financing):

ಈ ಮೊದಲು ತಿಳಿಸಿದಂತೆ ಸರ್ಕಾರವು ಮೊದಲು ತನ್ನ ವೆಚ್ಚವನ್ನು ಅಂದಾಜು ಮಾಡಿ, ಅದಕ್ಕೆ ತಕ್ಕಂತೆ ವರಮಾನವನ್ನು ಹೊಂದಿಸುತ್ತದೆ. ಹೀಗೆ ಮಾಡುವಾಗ ಸಾಮಾನ್ಯವಾಗಿ ತನ್ನ ವರಮಾನಕ್ಕಿಂತ ಹೆಚ್ಚಿನ ವೆಚ್ಚವನ್ನು ಮಾಡುತ್ತದೆ. ಇದು ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಉತ್ತಮವಾದುದು. ಸರ್ಕಾರವು ತನ್ನ ವರಮಾನ ಮತ್ತು ವೆಚ್ಚದ ನಡುವಿನ ಅಂತರವನ್ನು ಭಾರತೀಯ ರಿಜರ್ವ್ ಬ್ಯಾಂಕಿನಲ್ಲಿ ತಾನು ಹೊಂದಿರುವ ನಗದು ಸಂಗ್ರಹವನ್ನು ಹಿಂಪಡೆಯುವುದು, ಆಂತರಿಕ ಮತ್ತು ವಿದೇಶಿ ಮೂಲಗಳಿಂದ ಸಾಲ ಸಂಗ್ರಹಿಸುವುದು, ಭಾರತೀಯ ರಿಜರ್ವ್ ಬ್ಯಾಂಕಿನಿಂದ ಸಾಲ ಪಡೆಯುವುದು, ಮುಂತಾದ ಕ್ರಮಗಳ ಮೂಲಕ ತುಂಬಿಕೊಳ್ಳುತ್ತದೆ. ಅವಶ್ಯ ಬಿದ್ದರೆ ಹೆಚ್ಚುವರಿ ಪ್ರಮಾಣದ ನೋಟು ಮುದ್ರಿಸುವುದೂ ಇದರಲ್ಲಿ ಸೇರಿಕೊಂಡಿದೆ. ಹೀಗೆ ಭಾರತೀಯ ರಿಜರ್ವ್ ಬ್ಯಾಂಕಿನಿಂದ ಸಾಲ ಪಡೆಯುವುದು ಮತ್ತು ಹೊಸ ಹಣ ಸೃಷ್ಟಿಸುವುದನ್ನು ಕೊರತೆ ಹಣಕಾಸು ಎಂದು ಕರೆಯುತ್ತೇವೆ. ಈ ಎಲ್ಲ ಕ್ರಮಗಳಿಂದಾಗಿ ಹಣದ ಚಲಾವಣೆ ಅಧಿಕವಾಗಿ ಅಭಿವೃದ್ಧಿ ಫಲಿತಗಳು ಉತ್ತಮವಾಗುವ ಸಾಧ್ಯತೆಯಿದೆ.

ಭಾರತದಲ್ಲಿ ನಾಲ್ಕು ವಿಧದ ಕೊರತೆ ಪರಿಕಲ್ಪನೆಗಳನ್ನು ಬಳಸಲಾಗುತ್ತದೆ ಮತ್ತು ಅವುಗಳನ್ನು ಈ ಕೆಳಗಿನ ರೀತಿಯಲ್ಲಿ ಲೆಕ್ಕ ಹಾಕಲಾಗುತ್ತದೆ:

**i. ವಿತ್ತೀಯ ಕೊರತೆ (Fiscal Deficit):** ಆಯವ್ಯಯದಲ್ಲಿ ಸರ್ಕಾರದ ಕಂದಾಯ ವರಮಾನ ಮತ್ತು ಸಾಲೇತರ ಬಂಡವಾಳ ವರಮಾನಗಳಿಗಿಂತ ಸರ್ಕಾರದ ಒಟ್ಟು ವೆಚ್ಚ ಹೆಚ್ಚಾಗಿದ್ದರೆ, ಅದನ್ನು ವಿತ್ತೀಯ ಕೊರತೆ ಎನ್ನುತ್ತಾರೆ. ಅದನ್ನು ಹೀಗೆ ಕಂಡು ಹಿಡಿಯುತ್ತೇವೆ:

***ವಿತ್ತೀಯ ಕೊರತೆ = (ಕಂದಾಯ ವರಮಾನ + ಸಾಲೇತರ ಬಂಡವಾಳ ವರಮಾನ) – ಒಟ್ಟು ವೆಚ್ಚ***

**ii. ರೆವೆನ್ಯೂ ಕೊರತೆ:** ರೆವೆನ್ಯೂ ಖಾತೆಯ ವೆಚ್ಚವು ರೆವೆನ್ಯೂ ಖಾತೆಯ ವರಮಾನಕ್ಕಿಂತ ಹೆಚ್ಚಾಗಿದ್ದಾಗ ರೆವೆನ್ಯೂ ಕೊರತೆ ಉಂಟಾಗುತ್ತದೆ. ಅದರ ಸೂತ್ರವು:

***ರೆವೆನ್ಯೂ ಕೊರತೆ = ರೆವೆನ್ಯೂ ಖಾತೆಯ ವರಮಾನ– ರೆವೆನ್ಯೂ ಖಾತೆಯ ವೆಚ್ಚ***

**iii. ಪ್ರಾಥಮಿಕ ಕೊರತೆ:** ಚಾಲ್ತಿ ವರ್ಷದ ವಿತ್ತೀಯ ಕೊರತೆಯಿಂದ ಕಳೆದ ವರ್ಷದ ಬಡ್ಡಿ ಪಾವತಿಯನ್ನು ವಜಾಗೊಳಿಸಿದಾಗ ಪ್ರಾಥಮಿಕ ಕೊರತೆ ದೊರೆಯುತ್ತದೆ.

***ಪ್ರಾಥಮಿಕ ಕೊರತೆ = ವಿತ್ತೀಯ ಕೊರತೆ – ಬಡ್ಡಿಪಾವತಿ***

**iv. ಮುಂಗಡಪತ್ರ ಅಥವಾ ಆಯ–ವ್ಯಯ ಕೊರತೆ:** ಇದು ಒಟ್ಟಾರೆ ವರಮಾನ ಹಾಗೂ ವೆಚ್ಚಗಳ ನಡುವಿನ ಅಂತರವಾಗಿದೆ. ಅದರ ಲೆಕ್ಕ ಹೀಗೆ ಮಾಡುತ್ತೇವೆ:

***ಮುಂಗಡಪತ್ರ ಅಥವಾ ಆಯ–ವ್ಯಯ ಕೊರತೆ = ಒಟ್ಟು ವರಮಾನ – ಒಟ್ಟು ವೆಚ್ಚ***

ಆದರೆ ಅಧಿಕ ಪ್ರಮಾಣದ ಕೊರತೆಗಳು ಆರ್ಥಿಕ ವ್ಯವಸ್ಥೆಗೆ ಉತ್ತಮವಲ್ಲ ಏಕೆಂದರೆ ಅವು ರಾಷ್ಟ್ರಕ್ಕೆ ಹೊರೆ ಸೃಷ್ಟಿಸುತ್ತವೆಯಲ್ಲದೇ ಅನಿಯಂತ್ರಿತ ಕೊರತೆಗಳು ಹಣಕಾಸಿನ ಅಶಿಸ್ತು ತೋರಿಸುತ್ತದೆ. ಅದು ಹಣದುಬ್ಬರವನ್ನೂ ಹೆಚ್ಚಿಸುತ್ತದೆ. ಆದ್ದರಿಂದ ಅಂತಹ ಪ್ರವೃತ್ತಿಗಳನ್ನು ನಿಯಂತ್ರಿಸಲು 2003ರಲ್ಲಿ ಭಾರತ ಸರ್ಕಾರವು ಕೋಶೀಯ ಹೊಣೆಗಾರಿಕೆ ಮತ್ತು ಮುಂಗಡಪತ್ರ ನಿರ್ವಹಣೆ ಕಾಯ್ದೆಯನ್ನು (Fiscal Responsibility and Budget Management Act, FRBMA) ಜಾರಿಗೆ ತಂದಿದೆ. ಇದು ಪ್ರಮುಖವಾಗಿ ಹಣಕಾಸಿನ ಶಿಸ್ತು ಪಾಲಿಸುವುದು, ಕೊರತೆಯನ್ನು ಕಮ್ಮಿ ಮಾಡುವುದು, ಆರ್ಥಿಕ ನಿರ್ವಹಣೆಯನ್ನು ಉತ್ತಮಪಡಿಸುವುದು, ಮತ್ತು ಸಾರ್ವಜನಿಕ ನಿಧಿಗಳ ಸೂಕ್ತ ನಿರ್ವಹಣೆಯ ಮೂಲಕ ಮುಂಗಡಪತ್ರದಲ್ಲಿ ಸಮತೋಲನ ಸಾಧಿಸುವ ಗುರಿ ಹೊಂದಿದೆ.

© KTBS Not to be republished

ಕೆಳಗಿನ ಕೋಷ್ಟಕದಲ್ಲಿ 2017–18ನೇ ಸಾಲಿನ ಕೇಂದ್ರ ಸರ್ಕಾರದ ಮುಂಗಡಪತ್ರದ ಸ್ಥೂಲ ನೋಟ ನೀಡಲಾಗಿದೆ.

| ಅ. ನಂ. | ವಿಷಯ ವಿವರಣೆ | ಕೋಟಿ ರೂಪಾಯಿಗಳು |
|---|---|---|
| 1 | ಕಂದಾಯ ಖಾತೆ ವರಮಾನ | 15,15,771 |
| 2 | ತೆರಿಗೆ ವರಮಾನ (ಕೇಂದ್ರದ ಪಾಲು) | 12,27,014 |
| 3 | ತೆರಿಗೆಯೇತರ ವರಮಾನ | 2,88,757 |
| 4 | ಬಂಡವಾಳ ಖಾತೆ ವರಮಾನ (5+6+7) | 6,30,964 |
| 5 | ಸಾಲಗಳ ವಸೂಲಾತಿ | 11,932 |
| 6 | ಇತರ ವಸೂಲಾತಿಗಳು | 72,500 |
| 7 | ಸಾಲಗಳು ಮತ್ತು ಇತರ ಬಾಧ್ಯತೆಗಳು | 5,46,532 |
| 8 | ಒಟ್ಟು ವಸೂಲಾತಿಗಳು (1+4) | 21,46,735 |
| 9 | ಯೋಜನೆಗಳ ಮೇಲಿನ ವೆಚ್ಚಗಳು | 9,45,078 |
| 10 | ಕಂದಾಯ ಖಾತೆ | 6,74,057 |
| 11 | ಬಂಡವಾಳ ಖಾತೆ | 2,71,021 |
| 12 | ಯೋಜನೆಗಳ ಮೇಲೆ ಅಲ್ಲದ ಇತರ ವೆಚ್ಚ (13+15) | 12,01,657 |
| 13 | ಕಂದಾಯ ಖಾತೆ | 11,62,877 |
| 14 | ಬಡ್ಡಿ ಪಾವತಿ | 5,23,078 |
| 15 | ಬಂಡವಾಳ ಖಾತೆ | 38,780 |
| 16 | ಒಟ್ಟು ವೆಚ್ಚ (9+12) | 21,46,735 |
| 17 | ಕಂದಾಯ ಖಾತೆ ವೆಚ್ಚ | 18,36,934 |
| 18 | ಅದರಲ್ಲಿ ಅನುದಾನಗಳು ಮತ್ತು ಆಸ್ತಿಗಳ ಸೃಷ್ಟಿಗಾಗಿ | 1,95,350 |
| 19 | ಬಂಡವಾಳ ಖಾತೆ ವೆಚ್ಚ | 3,09,801 |
| 20 | ರೆವೆನ್ಯೂ ಕೊರತೆ (17–1) | 3,21,163 |
| 21 | ಪ್ರಾಥಮಿಕ ಕೊರತೆ (20–18) | 1,25,813 |
| 22 | ವಿತ್ತೀಯ ಕೊರತೆ [16–(1+5+6)] | 5,46,532 |
| 23 | ಪ್ರಾಥಮಿಕ ಕೊರತೆ (22–14) | 23,454 |

© KTBS Not to be published

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಕ್ಕೆ ಸೂಕ್ತ ಉತ್ತರಗಳನ್ನು ಭರ್ತಿ ಮಾಡಿರಿ.**

1. ಸರ್ಕಾರವು ಸಾರ್ವಜನಿಕ ಹಣಕಾಸನ್ನು __________ ನೀತಿಯ ಮೂಲಕ ನಿರ್ವಹಿಸುತ್ತದೆ.
2. ಆಯ–ವ್ಯಯದಲ್ಲಿ ಸರ್ಕಾರದ ವರಮಾನವು ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಅದನ್ನು ________ ಎಂದು ಕರೆಯುತ್ತಾರೆ.

3. ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕ ಸಭೆಯಲ್ಲಿ ________ ಮಂಡಿಸುತ್ತಾರೆ.

4. ಜಿಎಸ್‌ಟಿ ________ ದಿನಾಂಕದಿಂದ ಜಾರಿಗೆ ಬಂದಿದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಸಾರ್ವಜನಿಕ ಹಣಕಾಸಿನ ಅರ್ಥ ತಿಳಿಸಿ.
2. ಆಯವ್ಯಯ ಎಂದರೇನು?
3. ಕೊರತೆಯ ಆಯ-ವ್ಯಯದ ಅರ್ಥ ತಿಳಿಸಿರಿ.
4. ಪ್ರತ್ಯಕ್ಷ ತೆರಿಗೆ ಎಂದರೇನು?
5. ವಿತ್ತೀಯ ಕೊರತೆಯ ಸೂತ್ರ ಬರೆಯಿರಿ.

**III. ಮುಂದಿನ ಪ್ರಶ್ನೆಗಳಿಗೆ ಐದರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ.**

1. ಸಾರ್ವಜನಿಕ ವೆಚ್ಚದ ಏರಿಕೆಗೆ ಕಾರಣಗಳನ್ನು ವಿವರಿಸಿ
2. ಸರ್ಕಾರವು ಯಾವ ವಿಧದ ತೆರಿಗೆಗಳನ್ನು ವಿಧಿಸುತ್ತದೆ?
3. ಕೇಂದ್ರ ಸರ್ಕಾರದ ತೆರಿಗೆಯೇತರ ವರಮಾನದ ಮೂಲಗಳನ್ನು ತಿಳಿಸಿ.
4. ಕೊರತೆಯ ಹಣಕಾಸು ಎಂದರೇನು? ಅದರ ವಿಧಗಳನ್ನು ತಿಳಿಸಿ.

**IV. ಚಟುವಟಿಕೆಗಳು :**

1. ನಿಮ್ಮ ಹತ್ತಿರದ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಗೆ ಭೇಟಿ ನೀಡಿ ಅಲ್ಲಿನ ಆಯ-ವ್ಯಯದ ಬಗ್ಗೆ ಮಾಹಿತಿ ಸಂಗ್ರಹಿಸಿ.
2. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಯವ್ಯಯ ಮಂಡನೆಯನ್ನು ದೂರದರ್ಶನದ ಮೂಲಕ ವೀಕ್ಷಿಸಿ. ಆ ಬಗ್ಗೆ ತರಗತಿಯಲ್ಲಿ ಚರ್ಚಿಸಿ.
3. ಆಯ-ವ್ಯಯ ಮಂಡನೆಯಾದ ಮರುದಿನ ದಿನಪತ್ರಿಕೆಯಲ್ಲಿ ಬರುವ ವರದಿಗಳನ್ನು ಸಂಗ್ರಹಿಸಿ. ತರಗತಿಯಲ್ಲಿ ಪ್ರದರ್ಶಿಸಿ.
4. ನಿಮ್ಮ ಮನೆಯ ಆಯ-ವ್ಯಯ ತಯಾರಿಸಿ.

* * * *

© KTBS Not to be published

# ವ್ಯವಹಾರ ಅಧ್ಯಯನ

## ಅಧ್ಯಾಯ – 3

# ವ್ಯವಹಾರದ ಜಾಗತೀಕರಣ (Globalization)

I2U1M2

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಜಾಗತೀಕರಣದ ಅರ್ಥ.*
- *ಜಾಗತೀಕರಣದಲ್ಲಿ ಅಡಕವಾಗಿರುವ ಅಂಶಗಳು.*
- *ಜಾಗತೀಕರಣದ ಮುಖ್ಯ ಲಕ್ಷಣಗಳು.*
- *ಜಾಗತೀಕರಣದ ಅನುಕೂಲತೆಗಳು.*
- *ಜಾಗತೀಕರಣದ ಅನಾನುಕೂಲಗಳು.*
- *ವಿಶ್ವವ್ಯಾಪಾರ ಸಂಸ್ಥೆ (W.T.O.)*

ಜಾಗತೀಕರಣವು ವ್ಯವಹಾರ ಕ್ಷೇತ್ರಕ್ಕೆ ಹೊಸತೇನಲ್ಲ. 1870 ರಿಂದ 1913 ರ ತನಕ ಜಾಗತೀಕರಣವು ವ್ಯವಹಾರ ಕ್ಷೇತ್ರದಲ್ಲಿ ಒಂದು ಪಾತ್ರವಹಿಸಿತ್ತು. ಆದರೆ 1980 ಜಾಗತೀಕರಣವು ತೀವ್ರಗತಿಯಲ್ಲಿ ಪ್ರಗತಿ ಸಾಧಿಸಿದ್ದು ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಸುಧಾರಣೆಗಳಲ್ಲಿ ಬೆಳಕು ತಂದಿದೆ. ಇತ್ತೀಚಿಗೆ ವಿಶ್ವದಲ್ಲಿ ಉಂಟಾಗಿರುವ ತಾಂತ್ರಿಕ ಮತ್ತು ಸಂಪರ್ಕ ಸಾಧನೆಗಳು ಮತ್ತು ಅಂತರ್ಜಾಲ ಸಂವಹನಗಳಿಂದಾಗಿ ದೊಡ್ಡ ವ್ಯವಹಾರ ಘಟಕಗಳು ಜಾಗತಿಕ ಘಟಕಗಳಾಗಿವೆ. ಅಂದರೆ ಇವುಗಳ ಚಟುವಟಿಕೆಗಳು ಅವುಗಳ ಸ್ಥಾಪನಾ ಸ್ಥಳಕ್ಕೆ ಮಾತ್ರ ಸೀಮಿತವಾಗಿರದೆ ವಿಶ್ವದಾದ್ಯಂತ ವಿಸ್ತರಿಸಲ್ಪಟ್ಟಿವೆ. ಇದರಿಂದಾಗಿ ಪ್ರಪಂಚದ ದೇಶಗಳ ಮಧ್ಯೆ ನಿಕಟ ಸಂಬಂಧ ಮತ್ತು ಪರಸ್ಪರ ಅನ್ಯೋನ್ಯತೆ ಉಂಟಾಗಿ ವ್ಯವಹಾರ ಮತ್ತು ಮಾರುಕಟ್ಟೆಯು ವಿಶ್ವವ್ಯಾಪಿಯಾಗಿದೆ.

© KTBS Not to be republished

**ಜಾಗತೀಕರಣದ ಅರ್ಥ :**

ಅಂತರರಾಷ್ಟ್ರೀಯ ಹಣಕಾಸು ನಿಧಿಯು (IMF) ಜಾಗತೀಕರಣವನ್ನು ಈ ರೀತಿಯಾಗಿ ವ್ಯಾಖ್ಯಾನಿಸುತ್ತದೆ. **"**ಸರಕು ಮತ್ತು ಸೇವೆಗಳು ಹಾಗೂ ಅಂತರರಾಷ್ಟ್ರೀಯ ಬಂಡವಾಳದ ಹರಿವು, ತೀವ್ರ ಮತ್ತು ವ್ಯಾಪಕವಾದ ತಾಂತ್ರಿಕತೆಯ ಪ್ರಸರಣಗಳ ಮೂಲಕ ವಿಶ್ವದಾದ್ಯಂತ ಹೆಚ್ಚಿನ ಪ್ರಮಾಣದ ವೈವಿಧ್ಯತೆಯ ಗಡಿಯಾಚೆಗಿನ ವ್ಯವಹಾರಗಳಿಂದಾಗಿ ಹೆಚ್ಚುತ್ತಿರುವ ದೇಶಗಳ ಅಂತರ ಸ್ವಾವಲಂಬನೆ**"**

(**IMF-**has defined Globalisation as "The growing economic inter dependence of countries through increasing volume and variety of cross-border transactions in goods and services and international capital flows and also through the rapid and wide spread deffusion of Technology".)

**ಈ ವ್ಯಾಖ್ಯೆಯಿಂದ ಸ್ಪಷ್ಟವಾಗುವುದೇನೆಂದರೆ**

- ಜಾಗತೀಕರಣವು ಸರಕು ಮತ್ತು ಸೇವೆಗಳ ಹೆಚ್ಚುತ್ತಿರುವ ಗಡಿಯಾಚೆಗಿನ ಚಲನೆ.
- ಬಂಡವಾಳದ, ತಾಂತ್ರಿಕತೆಯ ಮತ್ತು ಮಾಹಿತಿಯ ಅಂತರರಾಷ್ಟ್ರೀಯ ಹರಿವು.
- ಇಡೀ ವಿಶ್ವವನ್ನೇ ಒಂದು ಮಾರುಕಟ್ಟೆಯಾಗಿಸಿಕೊಂಡು ಕಚ್ಚಾ ವಸ್ತುಗಳು ಮತ್ತು ಇತರ ಸಂಪನ್ಮೂಲಗಳನ್ನು ವಿಶ್ವದ ಅಗ್ಗವಾದ ಮಾರುಕಟ್ಟೆಯಿಂದ ಪಡೆಯುವುದು.
- ವಿಶ್ವದ ಯಾವುದೇ ಪ್ರದೇಶದಲ್ಲಿ ಕಡಿಮೆ ವೆಚ್ಚದಲ್ಲಿ ಸರಕುಗಳನ್ನು ಉತ್ಪಾದಿಸುವುದು.

**ಜಾಗತೀಕರಣದಲ್ಲಿ ಅಡಕವಾಗಿರುವ ಅಂಶಗಳು**

- ಜಾಗತೀಕರಣವು ವಿಶ್ವದಾದ್ಯಂತ ಆಧುನಿಕ ಸಂಪರ್ಕಜಾಲ, ಸಂಚಾರ ಸೌಲಭ್ಯಗಳು, ಕಾನೂನಿನ ಮೂಲಭೂತ ಸ್ಥಿರತೆ ಹಾಗೂ ಪ್ರಜ್ಞಾಪೂರ್ವಕ ಆರ್ಥಿಕ, ತಾಂತ್ರಿಕ, ರಾಜಕೀಯ ಹಾಗೂ ಸಂಸ್ಕೃತಿಗಳಲ್ಲಿ ವಿನಿಮಯವನ್ನು ತೋರಿಸುವುದು.
- ರಾಜಕೀಯ ಅರಿಕೆಗಳಿಂದ ಗಡಿಭಾಗಗಳ ಸಂಬಂಧಗಳ ಮೂಲಕ ಅಂತರರಾಷ್ಟ್ರೀಯ ಬಂಡವಾಳ ಮತ್ತು ವ್ಯಾಪಾರವನ್ನು ಪ್ರೋತ್ಸಾಹಿಸುವುದು.
- ಆಮದು ಮತ್ತು ರಫ್ತುಗಳ ಸುಂಕಗಳನ್ನು ನಿರ್ಮೂಲನ ಮಾಡಿ ಮುಕ್ತ ವಲಯಗಳನ್ನು ಸೃಷ್ಟಿಸುವುದು.
- ಸಾರಿಗೆ ವೆಚ್ಚವನ್ನು ಸಮುದ್ರಯಾನದಲ್ಲಿ ಕಂಟೈನರ್ ಸೇವೆಯ ಅಳವಡಿಕೆಯಿಂದ ಕಡಿಮೆ ಮಾಡುವುದು.
- ಬಂಡವಾಳ ಹತೋಟಿಯನ್ನು ಕಡಿಮೆಗೊಳಿಸುವುದು ಅಥವಾ ನಿರ್ಮೂಲ ಮಾಡುವುದು.
- ವಿಶ್ವವ್ಯಾಪಿ ಸಂಸ್ಥೆಗಳಿಗೆ ಪ್ರೋತ್ಸಾಹ ದನ (Subsidies) ಸೃಷ್ಟಿಸುವುದು.
- ಅನೇಕ ದೇಶಗಳ ನಡುವೆ ಬೌದ್ಧಿಕ ಆಸ್ತಿ ಸಂಬಂಧ ಕಾಯಿದೆಗಳು ನಿರ್ಬಂಧಗಳಿಲ್ಲದೆ ಸಾಮರಸ್ಯ ಉಂಟುಮಾಡುವುದು.

(ಉದಾ : ಚೀನಾದ ಕೆಲವು ಸಾಮ್ಯ ಪಡೆದಿರುವ (Patent) ವಸ್ತುಗಳು ಅಮೆರಿಕದ ಕೆಲವು ಪ್ರಮುಖ ಅಂಗಡಿಗಳಲ್ಲಿ ದೊರೆಯುತ್ತವೆ.)

© KTBS Not to be published

**ಜಾಗತೀಕರಣದ ಮುಖ್ಯ ಲಕ್ಷಣಗಳು**

- ಜಾಗತೀಕರಣವು ವಿಶ್ವದ ಆರ್ಥಿಕತೆಯ ಏಳಿಗೆಗಿಂತ ತೀವ್ರವಾಗಿ ಅಂತರರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚಿಸುತ್ತದೆ.
- ಅಂತರರಾಷ್ಟ್ರೀಯ ಬಂಡವಾಳವನ್ನು ವೃದ್ಧಿಸಿ ಬಂಡವಾಳದ ಹರಿವನ್ನು ಮತ್ತು ಬಂಡವಾಳದ ನೇರ ಹೂಡಿಕೆಯನ್ನು ಹೆಚ್ಚಿಸುತ್ತದೆ.
- ಅಂತರರಾಷ್ಟ್ರೀಯ ವ್ಯಾಪಾರ ಕರಾರುಗಳನ್ನು ಸೃಷ್ಟಿಸುತ್ತದೆ. ಇದರಿಂದಾಗಿಯೇ ವಿಶ್ವವ್ಯಾಪಾರ ಸಂಸ್ಥೆಗಳು(WTO ಮತ್ತು OPEC) ಪ್ರಾರಂಭವಾದುದು.
- ವಿಶ್ವ ಹಣಕಾಸಿನ ನೀತಿಯನ್ನು ಅಭಿವೃದ್ಧಿ ಪಡಿಸುತ್ತದೆ.
- ಅಂತರರಾಷ್ಟ್ರೀಯ ಸಂಸ್ಥೆಗಳಾದ ವಿಶ್ವವ್ಯಾಪಾರ ಸಂಘಟನೆ (WTO) ಮತ್ತು ಅಂತರರಾಷ್ಟ್ರೀಯ ಹಣಕಾಸುನಿಧಿ (IMF)ಗಳ ಪಾತ್ರ ಹೆಚ್ಚಿಸುತ್ತದೆ.
- ಕೆಲವು ಆರ್ಥಿಕ ವ್ಯವಹಾರ ಪದ್ಧತಿಗಳಾದ ಹೊರನೆರವು (Out source) ಮುಂತಾದುವುಗಳನ್ನು ಬಹುರಾಷ್ಟ್ರೀಯ ಸಂಸ್ಥೆಗಳ ಮೂಲಕ ಹೆಚ್ಚಿಸುತ್ತದೆ.
- ಅಂತರರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯಗಳನ್ನು ಹೆಚ್ಚು ಮಾಡುತ್ತದೆ.
- ವಿವಿಧ ಸಾಂಸ್ಕೃತಿಕ ಪದ್ಧತಿಗಳನ್ನು ಹರಡಲು ಸಹಾಯ ಮಾಡುತ್ತದೆ.
- ಅಂತರರಾಷ್ಟ್ರೀಯ ಸಂಚಾರ ಮತ್ತು ಪರ್ಯಟನೆಗಳಿಗೆ ಅವಕಾಶಗಳನ್ನು ಒದಗಿಸುತ್ತದೆ.

- ದೇಶಗಳ ನಡುವೆ ವಲಸೆ ಹೋಗುವುದನ್ನು ಹೆಚ್ಚಿಸುತ್ತದೆ. ಇದು ಕಾನೂನು ಬಾಹಿರ ವಲಸೆಗಳಿಗೂ ಅವಕಾಶ ಕಲ್ಪಿಸುತ್ತದೆ.
- ಸ್ಥಳೀಯ ಆಹಾರ ಪದಾರ್ಥಗಳು ಬೇರೆ ದೇಶಗಳಿಗೂ ಹಬ್ಬಲು ಸಾಧ್ಯವಾಗುತ್ತದೆ.
- ವಿಶ್ವವ್ಯಾಪಿ ಸಂವಹನ ಸಂದೇಶ, ಅಂತರ್ಜಾಲ ಮತ್ತು ಸಂಪರ್ಕ ಸಾಧನೆಗಳು ತಮ್ಮ ಮೂಲಭೂತ ಸಾಧನೆಗಳೊಂದಿಗೆ ಗಡಿಗಳನ್ನು (Border) ದಾಟಿಹೋಗಲು ಸಹಾಯ ಮಾಡುತ್ತದೆ.
- ಮಾಹಿತಿಗಳ ವಿನಿಮಯ (Exchange of Data) ತಾಂತ್ರಿಕತೆ, ಸೆಲ್‌ಪೋನುಗಳು ಅಂತರರಾಷ್ಟ್ರೀಯ ದೂರ ಸಂಪರ್ಕ ಕ್ಷಿಪಣಿಗಳು ರೂಢಿಗೆ ಬರುತ್ತವೆ.

**ಜಾಗತೀಕರಣದ ಅನುಕೂಲತೆಗಳು : (ಸಕಾರಾತ್ಮಕ ಪರಿಣಾಮಗಳು) (Positive Impacts of Globalisation.)**

- ಜಾಗತೀಕರಣವು ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಿ. ಹೆಚ್ಚಿನ ಸರಕು ಮತ್ತು ಸೇವೆಗಳು ವಿಶಾಲವಾಗಿ ಉತ್ಪಾದನೆಯಾಗಲು ಸಹಾಯ ಮಾಡುತ್ತದೆ.
- ಜಾಗತೀಕರಣವು ಜನರ ಜೀವನ ಮಟ್ಟ ಹೆಚ್ಚಿಸಲು ಸಹಾಯ ಮಾಡುತ್ತದೆ.
- ಜಾಗತೀಕರಣದಿಂದಾಗಿ ಪ್ರಪಂಚದಾದ್ಯಂತ ಒಂದೇ ರೀತಿಯ ವಸ್ತುಗಳು ದೊರಕಲು ಸಾಧ್ಯವಾಗುತ್ತದೆ.
- ಜಾಗತೀಕರಣವು ದೇಶದ ರಾಷ್ಟ್ರೀಯ ಉತ್ಪನ್ನವನ್ನು (Gross Domestic Product) ಹೆಚ್ಚಿಸುತ್ತದೆ.
- ಜಾಗತೀಕರಣವು ಒಂದು ದೇಶದ ಜನರ ವರಮಾನವನ್ನು ಹೆಚ್ಚಿಸುತ್ತದೆ.
- ಬೇರೆ ಬೇರೆ ದೇಶಗಳ ವಸ್ತುಗಳು ಮಾರುಕಟ್ಟೆಯಲ್ಲಿ ದೊರಕುವುದರಿಂದ ಜನರಿಗೆ ವಸ್ತುಗಳ ಆಯ್ಕೆಯಲ್ಲಿ ವಿಶಾಲತೆ ಕಂಡುಬರುತ್ತದೆ.
- ಸ್ಥಳೀಯ ವ್ಯಾಪಾರ ಸಂಸ್ಥೆಗಳ ಮಧ್ಯೆ ಪೈಪೋಟಿ ಉಂಟಾಗಿ ಸರಕುಗಳ ಬೆಲೆಗಳು ಕಡಿಮೆ ಇರುತ್ತದೆ.
- ಜಾಗತೀಕರಣವು ಸರಕುಗಳ ಉತ್ಪಾದನೆಯಲ್ಲಿ ಪ್ರಾವೀಣ್ಯತೆಯನ್ನು ಸೃಷ್ಟಿಸಿ ವಿವಿಧ ದೇಶಗಳು ವಿವಿಧ ರೀತಿಯ ವಸ್ತುಗಳ ತಯಾರಿಕೆಯನ್ನು ಮಾಡುತ್ತದೆ. ಈ ವಸ್ತುಗಳು ಉತ್ತಮ ಗುಣಮಟ್ಟದಿಂದ ಕೂಡಿರುತ್ತವೆ.
- ಪ್ರಪಂಚದ ದೇಶಗಳ ನಡುವೆ ಆರ್ಥಿಕ ಅವಲಂಬನೆ ಉಂಟಾಗಿ ದೇಶಗಳ ನಡುವೆ ಸಾಮಾಜಿಕ ಹಾಗೂ ರಾಜಕೀಯ ಸಾಮರಸ್ಯ ಉಂಟಾಗಲು ಸಾಧ್ಯವಾಗುತ್ತದೆ.

**ಜಾಗತೀಕರಣದ ನಕಾರಾತ್ಮಕ ಪರಿಣಾಮಗಳು (Negative Impacts of Globalisation)**

ಜಾಗತೀಕರಣವು ಪ್ರಪಂಚದಲ್ಲಿ ಕೆಲವು ಹೊಸ ಆಯಾಮಗಳನ್ನು ತಂದಿದ್ದರೂ ಹಾಗೂ ಜನರು ಹೆಚ್ಚಾಗಿ ವೃತ್ತಿಗಳಲ್ಲಿ ಒಬ್ಬರೊಡನೊಬ್ಬರು ಒಟ್ಟಿಗೆ ಕೂಡಿದ್ದರೂ ಕೆಲವು ಆಕ್ಷೇಪಣೆಗಳನ್ನು ಹಾಗೂ ನಕಾರಾತ್ಮಕ ಪರಿಣಾಮಗಳನ್ನು ಹೊಸತಿರುವಿನಲ್ಲಿ ಎದುರಿಸಬೇಕಾಗುತ್ತದೆ ಹಾಗೂ ಒಪ್ಪಿಕೊಳ್ಳಬೇಕಾಗುತ್ತದೆ. ಜಾಗತೀಕರಣದ ಕೆಲವು ನಕಾರಾತ್ಮಕ ಪರಿಣಾಮಗಳೆಂದರೆ;

- ವೆಚ್ಚಗಳನ್ನು ಕಡಿಮೆ ಮಾಡುವ ದಿಸೆಯಲ್ಲಿ ಅಭಿವೃದ್ಧಿ ಹೊಂದಿರುವ ದೇಶಗಳು ತಮ್ಮ ಉತ್ಪಾದನೆಗಳನ್ನು ಹೊರಮೂಲಗಳಿಂದ ರೂಢಿಗೆ ತಂದು ನೌಕರ ಶಾಹಿ ಕೆಲಸಗಳನ್ನು

© KTBS Not to be published

ಉತ್ತೇಜಿಸುತ್ತದೆ. ಇದರಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಗುಲಾಮಿತನ ಹಾಗೂ ಬಾಲಕಾರ್ಮಿಕ ಪದ್ಧತಿಗಳು ಉಂಟಾಗುವ ಸಾಧ್ಯತೆ ಇದೆ.

- ಜಾಗತೀಕರಣದಿಂದ ವಿಶ್ವ ಮಾರುಕಟ್ಟೆಯಲ್ಲಿ ತೀವ್ರವಾದ ಪೈಪೋಟಿ ಉಂಟಾಗಿ ಅನೇಕ ನೀತಿಬಾಹಿರ ಪದ್ಧತಿಗಳು ವ್ಯವಹಾರ ವಹಿವಾಟುಗಳಲ್ಲಿ ರೂಡಿಗೆ ಬರುವ ಸಾಧ್ಯತೆ ಇದೆ.
- ಜಾಗತೀಕರಣವು ಭಯೋತ್ಪಾದನೆ ಮತ್ತು ಪಾತಕಿಗಳಿಗೆ ಸಹಾಯವಾಗುತ್ತದೆ.
- ಜಾಗತೀಕರಣದಿಂದಾಗಿ ಪಟ್ಟಣಗಳು ಅಭಿವೃದ್ಧಿ ಹೊಂದಿ ಕಸದ ತೊಟ್ಟಿಗಳಾಗಿ ಮಾರ್ಪಾಡಾಗುವ ಸಾಧ್ಯತೆ ಉಂಟಾಗಿದೆ. ಕೈಗಾರಿಕಾ ತ್ಯಾಜ್ಯಗಳು ಶೇಖರಣೆ ಹೊಂದಿ ಮಾಲಿನ್ಯವು ಆಕಾಶದೆತ್ತರಕ್ಕೆ ಬೆಳೆಯುತ್ತದೆ.
- ಶ್ರೀಘ್ರ ಆಹಾರ ಸರಪಳಿಗಳು (Fast food chains) ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೆಚ್ಚಾಗಿ ಹರಡುತ್ತವೆ. ಉದಾ : K.F.C. McDonald etc. ಇದರಿಂದಾಗಿ ಪ್ರಯೋಜನಕಾರಿಯಲ್ಲದ ಆಹಾರ (Junk food) ಸೇವನೆ ಜಾಸ್ತಿಯಾಗುತ್ತದೆ ಹಾಗೂ ಜನರ ಆರೋಗ್ಯದ ಅವನತಿ ಉಂಟಾಗಿ ಅನೇಕ ರೋಗ ರುಜಿನಗಳಿಗೆ ಎಡೆಮಾಡಿಕೊಡುತ್ತದೆ. ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುತ್ತವೆ.
- ಮತ್ತೊಂದು ಅಪಾಯಕಾರಿ ಪರಿಣಾಮವೆಂದರೆ ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಾರೆ. ಬಡವರು ಒಂದು ಊಟಕ್ಕೂ ಶ್ರಮಪಡಬೇಕಾಗುತ್ತದೆ.
- ಅನೇಕ ಮಾರಣಾಂತಿಕ ವೈರಾಣುಗಳಿಂದ ಹಬ್ಬುವ (Aids, Cancer) ರೋಗಗಳು ವಿಶ್ವದಾದ್ಯಂತ ಹಬ್ಬುತ್ತವೆ.
- ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗಿದೆ.
- ಕೈಗಾರಿಕೆಗಳಿಗೆ ಬೇಕಾದ ಕಚ್ಚಾಪದಾರ್ಥಗಳನ್ನು ನೈಸರ್ಗಿಕ ಸಂಪನ್ಮೂಲಗಳಿಂದ ಪಡೆಯುವುದರಿಂದ ಭೂಖಂಡದಲ್ಲಿ ಮಾಲಿನ್ಯವು ಹೆಚ್ಚಾಗಿ ನಾವು ಉಸಿರಾಡುವ ವಾಯು ಕೂಡ ಮಾಲಿನ್ಯದಿಂದ ಕೂಡಿ ಬದುಕುಳಿಯಲು ಕಷ್ಟಸಾಧ್ಯವಾಗುತ್ತದೆ.
- ಅಗ್ಗ ವಸ್ತುಗಳ ಆಮದಿನಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಉತ್ಪಾದನೆಯು ಕಡಿಮೆಯಾಗಿ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತದೆ.
- ಹೆಚ್ಚುತ್ತಿರುವ ಪೈಪೋಟಿಯಿಂದಾಗಿ ಅಭಿವೃದ್ಧಿ ಹೊಂದಿರುತ್ತಿರುವ ರಾಷ್ಟ್ರಗಳಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಧ್ಯವಾಗುವುದಿಲ್ಲ ಹಾಗೂ ಹೆಚ್ಚು ಹೆಚ್ಚು ವಸ್ತುಗಳನ್ನು ಅಭಿವೃದ್ಧಿ ಹೊಂದಿರುವ ದೇಶಗಳು ತಂದು ತುಂಬಿ ವಸ್ತುಗಳ ಬೆಲೆ ಕಡಿಮೆಯಾಗಿ ಸ್ಥಳೀಯ ವಸ್ತುಗಳಿಗೆ ಮಾರುಕಟ್ಟೆಯೇ ಇಲ್ಲದೇ ಹೋಗುತ್ತದೆ.

### ವಿಶ್ವ ವ್ಯಾಪಾರ ಸಂಘಟನೆ (World Trade Organisation W.T.O)

ವಿಶ್ವ ವಾಪಾರ ಸಂಘಟನೆಯು ಜಗತ್ತಿನ ಒಂದು ಶಾಶ್ವತ ಸಂಘಟನೆಯಾಗಿದ್ದು ವಿಶ್ವದ ವ್ಯಾಪಾರ ವ್ಯವಹಾರಗಳಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತದೆ. ಇದು 1995ರ ಜನವರಿ 1 ರಂದು ಅಸ್ತಿತ್ವಕ್ಕೆ ಬಂದಿತು. ಇಂದು 164 ದೇಶಗಳು ಈ ಸಂಘಟನೆಯ ಸದಸ್ಯ ರಾಷ್ಟ್ರಗಳಾಗಿವೆ. ಇದರ ಕೇಂದ್ರ ಕಚೇರಿ ಸ್ವಿಟ್ಜರ್‌ಲ್ಯಾಂಡಿನ ಜಿನೇವಾದಲ್ಲಿದೆ. ಇದು ಪ್ರತಿ ಎರಡು ವರ್ಷಕ್ಕೊಮ್ಮೆ ಸಮ್ಮೇಳನ ನಡೆಸುತ್ತದೆ.

© KTBS Not to be published

**ವಿಶ್ವ ವ್ಯಾಪಾರ ಸಂಘಟನೆಯ ಉದ್ದೇಶಗಳು :**

- ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ವಿಶ್ವದಾದ್ಯಂತ ಜಾರಿಗೆ ತರುವುದು.
- ಬಹುಪಕ್ಷೀಯ ವ್ಯಾಪಾರ ವ್ಯವಹಾರಗಳ ನಡುವೆ ಮಧ್ಯವರ್ತಿಯಾಗಿ ಕೆಲಸಮಾಡುವುದು.
- ವಿಶ್ವದಾದ್ಯಂತ ಮುಕ್ತ ಹಾಗೂ ಸ್ವತಂತ್ರ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಒತ್ತು ನೀಡುವುದು.
- ವಿವಿಧ ದೇಶಗಳ ನಡುವೆ ಉದ್ಭವಿಸುವ ವ್ಯಾಪಾರ ಸಂಬಂಧಿ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವುದು.
- ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ತೆರಿಗೆಗಳನ್ನು ಕಡಿಮೆ ಮಾಡುವುದು.
- ವಿಶ್ವದ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಉತ್ಪಾದನೆ ಮತ್ತು ವ್ಯಾಪಾರ ವಿಸ್ತರಣೆ ಹಾಗೂ ಸೇವಾಕ್ಷೇತ್ರಗಳನ್ನು ದಕ್ಷಗೊಳಿಸುವುದು.
- ಅಂತರರಾಷ್ಟ್ರೀಯ ವ್ಯಾಪಾರವನ್ನು ಕಾನೂನಿನ ಚೌಕಟ್ಟಿಗೊಳಪಡಿಸುವುದು.
- ಅಂತರರಾಷ್ಟ್ರೀಯ ವ್ಯಾಪಾರದಿಂದ ಹಿಂದುಳಿದ ರಾಷ್ಟ್ರಗಳು ಹೆಚ್ಚು ಪ್ರಯೋಜನ ಪಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡುವುದು.

**ವಿಶ್ವ ವ್ಯಾಪಾರ ಸಂಘಟನೆಯ ಇತರ ಗುರಿಗಳು :**

- ಜೀವನ ವೆಚ್ಚವನ್ನು ಕಡಿಮೆಮಾಡಿ ಸದಸ್ಯರಾಷ್ಟ್ರಗಳ ಜನರ ಜೀವನಮಟ್ಟ ಹೆಚ್ಚಿಸುವುದು.
- ಸದಸ್ಯರಾಷ್ಟ್ರಗಳ ನಡುವೆ ಉದ್ಭವಿಸುವ ವ್ಯಾಪಾರ ವ್ಯಾಜ್ಯಗಳನ್ನು ಬಗೆಹರಿಸುವುದು.
- ಸದಸ್ಯರಾಷ್ಟ್ರಗಳ ಆರ್ಥಿಕ ಮಟ್ಟವನ್ನು ಹೆಚ್ಚಿಸಿ ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸುವುದು.
- ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ ವೆಚ್ಚಗಳನ್ನು ಕಡಿಮೆಮಾಡುವುದು.
- ಸದಸ್ಯ ರಾಷ್ಟ್ರಗಳಲ್ಲಿ ಉತ್ತಮ ಸರ್ಕಾರ ರಚಿಸಲು ಸಹಾಯಮಾಡುವುದು.
- ಸದಸ್ಯ ರಾಷ್ಟ್ರಗಳಲ್ಲಿ ಶಾಂತಿ, ಸ್ಥಿರತೆ ಅಥವಾ ದೃಢತೆ ಕಾಪಾಡಲು ಸಹಕರಿಸುವುದು.

© KTBS
Not to be published

## ಅಭ್ಯಾಸಗಳು

**I. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಜಾಗತೀಕರಣ ಎಂದರೇನು? ವಿವರಿಸಿ.
2. ಜಾಗತೀಕರಣವು ವಿಶ್ವದಲ್ಲಿ ಆರ್ಥಿಕ ಚಲನೆಗೆ ಹೇಗೆ ಸಹಕಾರಿಯಾಗಿದೆ ?
3. ಜಾಗತೀಕರಣದಿಂದಾಗುವ ಅನುಕೂಲಗಳಾವುವು?
4. ಜಾಗತೀಕರಣದಲ್ಲಿ ಗುರುತಿಸಬಹುದಾದ ಲಕ್ಷಣಗಳನ್ನು ಪಟ್ಟಿಮಾಡಿ.
5. ಜಾಗತೀಕರಣದಿಂದ ಉಂಟಾಗುವ ನಕರಾತ್ಮಕ ಪರಿಣಾಮಗಳನ್ನು ಉದಾಹರಣೆಯೊಂದಿಗೆ ವಿವರಿಸಿ.
6. ವಿಶ್ವವ್ಯಾಪಾರ ಸಂಘಟನೆಯ ಉದ್ದೇಶಗಳು ಯಾವುವು?

**II. ಚಟುವಟಿಕೆಗಳು :**

1. ಜಾಗತೀಕರಣದಿಂದ ಅಸ್ತಿತ್ವಕ್ಕೆ ಬಂದಿರುವ ಸಂಸ್ಥೆಗಳ ಹೆಸರುಗಳನ್ನು ಪಟ್ಟಿಮಾಡಿ.
2. ಜಾಗತೀಕರಣದಿಂದ ಸರಬರಾಜಾಗುತ್ತಿರುವ ವಿಶೇಷ ಸರಕುಗಳ ವಿವರ ಸಂಗ್ರಹಿಸಿ.
3. ಜಾಗತೀಕರಣದಿಂದ ಪ್ರಾರಂಭವಾಗಿರುವ ಒಂದು ವಾಣಿಜ್ಯ ಸಂಸ್ಥೆಗೆ ಮತ್ತು ಪಾರಂಪರಿಕವಾಗಿ ನಮ್ಮಲ್ಲಿರುವ ವಾಣಿಜ್ಯ ಸಂಸ್ಥೆಗೆ ಭೇಟಿ ನೀಡಿ ವ್ಯತ್ಯಾಸಗಳನ್ನು ಗುರುತಿಸಿ ಪಟ್ಟಿ ಮಾಡಿ.

**III. ಯೋಜನೆಗಳು :**

1. ಜಾಗತೀಕರಣದಿಂದಾಗುವ ಪ್ರಭಾವಗಳ ಬಗ್ಗೆ ಅಂತರ್ಜಾಲದ ನೆರವಿನಲ್ಲಿ ಚಿತ್ರ ಸಹಿತ ಮಾಹಿತಿ ಸಂಗ್ರಹಿಸಿ ವರದಿ ಸಿದ್ಧಪಡಿಸಿ.
2. "ಜಾಗತೀಕರಣದಿಂದ ಆಹಾರ ಪದ್ಧತಿಯು ಬದಲಾಗಿದೆ" – **ಚರ್ಚಿಸಿ.**

* * *

© KTBS
Not to be published

## ಅಧ್ಯಾಯ – 4

# ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

J1A8C4

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಗ್ರಾಹಕರು, ಗ್ರಾಹಕರ ಹಕ್ಕುಗಳು, ಶೋಷಣೆ ಮತ್ತು ಗ್ರಾಹಕ ಜಾಗೃತಿ.
- ಗ್ರಾಹಕ ಸಂರಕ್ಷಣೆಯ ಕಾಯಿದೆಯ ಮುಖ್ಯಾಂಶಗಳು ಮತ್ತು ಮಹತ್ವ.
- ವಸ್ತು ಮತ್ತು ಸೇವೆಗಳನ್ನು ಪಡೆಯುವಾಗ ಮುಂಜಾಗ್ರತೆ ವಹಿಸುವ ಅಭ್ಯಾಸ.
- ಗ್ರಾಹಕ ಶಿಕ್ಷಣದ ಮಹತ್ವ ತಿಳಿದು ಗ್ರಾಹಕ ನ್ಯಾಯಾಲಯಗಳಿಗೆ ದೂರು ಸಲ್ಲಿಸುವ ವಿಧಾನ ಹಾಗೂ ಅವುಗಳ ಕಾರ್ಯನಿರ್ವಹಣೆ.

©KTBS Not to be republished

### ಬಳಕೆದಾರ ಮತ್ತು ಪೂರೈಕೆದಾರ

ಸೇವೆ ಮತ್ತು ವಸ್ತುಗಳನ್ನು ಬಳಸುವವರನ್ನು ಸ್ವಯಂಸೇವಾ ಸಂಸ್ಥೆಗಳು 'ಬಳಕೆದಾರ' ಎಂದು ಕರೆದವು. ಬಳಕೆದಾರರಿಂದ ಹಣಪಡೆದು ವಸ್ತು ಅಥವಾ ಸೇವೆಗಳನ್ನು ನೀಡುವವನೇ 'ಪೂರೈಕೆದಾರ'. ಗ್ರಾಹಕ ಸಂರಕ್ಷಣಾ ಕಾಯಿದೆಯಲ್ಲಿ ಬಳಕೆದಾರರನ್ನು ಗ್ರಾಹಕರೆಂದು ಕರೆದಿದೆ. ಗ್ರಾಹಕನು ನೀಡುವ ಹಣಕ್ಕೆ ಪ್ರತಿಫಲವಾಗಿ ಯೋಗ್ಯಮಟ್ಟದ ವಸ್ತು ಮತ್ತು ಸೇವೆಗಳನ್ನು ಒದಗಿಸುವುದು ಪೂರೈಕೆದಾರರ ಹಾಗೂ ವ್ಯಾಪಾರಿಗಳ ಕರ್ತವ್ಯವಾಗಿದೆ. ಇದನ್ನು ಪಡೆಯುವ ಹಕ್ಕು ಪ್ರತಿಯೊಬ್ಬ ಗ್ರಾಹಕನಿಗಿದೆ. ವ್ಯಾಪಾರಿಗಳು ಅಥವಾ ಪೂರೈಕೆದಾರರು ಗ್ರಾಹಕರಿಗೆ ಅನೇಕ ರೀತಿಯಲ್ಲಿ ಶೋಷಣೆ ಮಾಡುತ್ತಾರೆ. ಇದನ್ನು ತಪ್ಪಿಸಲು ಕೆಲವು ಸ್ವಯಂ ಸೇವಾ ಸಂಸ್ಥೆಗಳು, ಕೆಲವು ಆಂದೋಲನಗಳನ್ನು ಪ್ರಾರಂಭಿಸಿದರು. ಗ್ರಾಹಕ ಸಂರಕ್ಷಣೆಯ ಆಂದೋಲನ ಮೊದಲಿಗೆ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಾರಂಭವಾಯಿತು. ಭಾರತದಲ್ಲಿ ಯೋಜನಾ ಆಯೋಗವು ಭಾರತದ ಗ್ರಾಹಕ ಸಂಘದ ಸ್ಥಾಪನೆಗೆ 1956ರಲ್ಲಿ ಒತ್ತು ಕೊಟ್ಟಿತು. ಅನೇಕ ಕಾರಣಗಳಿಂದಾಗಿ ಇದು ಫಲಕಾರಿಯಾಗಲಿಲ್ಲ. ಮೊಟ್ಟ ಮೊದಲಿಗೆ ಭಾರತದಲ್ಲಿ 1965ರಲ್ಲಿ ಮುಂಬೈ ಪಟ್ಟಣದ ಕೆಲವು ಮಹಿಳೆಯರು "ಅವೇರ್" (AWARE) (The Association of Women Against Rising Expenses) ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಈ ಚಳವಳಿಯು ದೇಶದ ವಿವಿಧ ಭಾಗಗಳಲ್ಲಿ ರಾಷ್ಟ್ರೀಯ ಮಟ್ಟದ ಸೇವಾ ಸಂಸ್ಥೆಗಳು ಪ್ರಾರಂಭವಾಗಲು ಕಾರಣವಾಯಿತು. ಇವುಗಳಲ್ಲಿ ಮುಖ್ಯವಾದುವು "ರಾಷ್ಟ್ರೀಯ ಗ್ರಾಹಕ ಸಂಘಟನೆ" ಮತ್ತು "ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ಕೌನ್ಸಿಲ್" ಮುಂತಾದವು.

### ಬಳಕೆದಾರರ ಶೋಷಣೆಗೆ ಕಾರಣಗಳು

ಒಂದು ಹಂತದಲ್ಲಿ ಉತ್ಪಾದಕರು ಸೇವೆ ಮತ್ತು ಸರಕುಗಳನ್ನು ಗ್ರಾಹಕರಿಗೆ ನೇರವಾಗಿ ತಲುಪಿಸುತ್ತಿದ್ದರು. ಉದಾಹರಣೆಗೆ: ಹಾಲು, ಹಣ್ಣು, ತರಕಾರಿ ಮುಂತಾದವು. ಇಲ್ಲಿ ಮಧ್ಯವರ್ತಿಗಳ ಹಾವಳಿ ಇರಲಿಲ್ಲ. ಬೇಸಾಯದ ಉದ್ಯಮ ಹಲವು ರೀತಿಗಳಲ್ಲಿ ಬೆಳೆದಂತೆ ಮಾರಾಟ ವಿಧಾನವು ಬದಲಾಯಿತು. ಗ್ರಾಹಕ ಮತ್ತು ಪೂರೈಕೆದಾರರ ನಡುವಿನ ಅಂತರ ಹೆಚ್ಚಾಗಿ ಇವರಿಬ್ಬರ ನಡುವೆ ನೇರ ವ್ಯವಹಾರ ಇಲ್ಲವಾಯಿತು. ಉತ್ಪಾದಕರು ಹಾಗೂ ಗ್ರಾಹಕರು ಕೂಡಿ ನಿರ್ಧರಿಸಬೇಕಾದ ಬೆಲೆಯನ್ನು ಮಧ್ಯವರ್ತಿಗಳೇ ನಿರ್ಧರಿಸತೊಡಗಿದರು. ಇದರಿಂದ ಗ್ರಾಹಕರಿಗೆ ಕಷ್ಟ, ನಷ್ಟ ಮತ್ತು ಸಮಸ್ಯೆಗಳಾದವು. ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯಿಂದ ಇಂದು ಮನೆಯಲ್ಲೇ ಕುಳಿತು ವಸ್ತುಗಳನ್ನು ಕೊಳ್ಳಬಹುದಾಗಿದೆ. ಇದನ್ನು 'ಟೆಲಿಷಾಪಿಂಗ್' ಎನ್ನುತ್ತಾರೆ.

**ಟೆಲಿಶಾಪಿಂಗ್**

ಗ್ರಾಹಕರು ವಸ್ತುಗಳನ್ನು ಕೊಳ್ಳಲು ವ್ಯಾಪಾರ ಮಳಿಗೆಗಳಿಗೆ ಹೋಗುವ ಬದಲು ದೂರದರ್ಶನ ಅಥವ ಇತರೇ ಮಾಧ್ಯಮಗಳಲ್ಲಿ ಭಿತ್ತರಗೊಳ್ಳುವ ಜಾಹಿರಾತುಗಳನ್ನು ಗಮನಿಸಿ. ಅಂತರ್ಜಾಲ, ಎಸ್.ಎಂ.ಎಸ್ ಅಥವ ದೂರವಾಣಿಯ ಮೂಲಕ ಜಾಹಿರಾತುದಾರರನ್ನು ಸಂಪರ್ಕಿಸಿ ಬೇಕಾದ ವಸ್ತುಗಳನ್ನು ಆಯ್ಕೆ ಮಾಡಿಕೊಂಡು ಪೂರೈಸಲು ಬೇಡಿಕೆಗಳನ್ನು ಸಲ್ಲಿಸಬಹುದು. ವಸ್ತುಗಳು ಕೈಸೇರಿದ ನಂತರ ಹಣವನ್ನು ಪಾವತಿ ಮಾಡಬಹುದು. ಈ ರೀತಿಯ ವ್ಯವಹಾರವನ್ನು 'ಟೆಲಿಷಾಪಿಂಗ್' ಎನ್ನುತ್ತಾರೆ.

**ಗ್ರಾಹಕ:**

ಗ್ರಾಹಕರೆಂದರೆ ವಸ್ತುಗಳನ್ನು ಕೊಳ್ಳುವವರು ಅಥವಾ ಸೇವೆಗಳನ್ನು ಬೆಲೆಯ ರೂಪದಲ್ಲಿ ಹಣ ಅಥವಾ ವೇತನ ಪ್ರತಿಫಲ ಕೊಟ್ಟು ಕೆಲಸ ಮಾಡಿಸಿಕೊಳ್ಳುವವರಾಗಿದ್ದಾರೆ ಅಥವಾ ಪದಾರ್ಥಗಳನ್ನು ಬಳಸಿಕೊಳ್ಳುವವರಾಗಿದ್ದಾರೆ. ಯಾವುದೇ ವ್ಯವಹಾರವನ್ನು ಲಾಭದ ಉದ್ದೇಶಕ್ಕಾಗಿ ಮಾಡಿದರೆ ಅದನ್ನು ವ್ಯಾಪಾರ ಎನ್ನುತ್ತೇವೆ. ಗ್ರಾಹಕರು ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳಲು ವಸ್ತುಗಳನ್ನು ಕೊಳ್ಳುತ್ತಾರೆ. ಉತ್ಪಾದಕರ ಕರ್ತವ್ಯವು ಗ್ರಾಹಕರ ಅವಶ್ಯಕತೆಗಳನ್ನು ಪೂರೈಸುವುದೇ ಆಗಿದೆ. ನಮ್ಮಲ್ಲಿ ಮುಕ್ತ ಆರ್ಥಿಕ ನೀತಿ ರೂಢಿಯಲ್ಲಿದೆ. ಗ್ರಾಹಕರನ್ನು 'ಮಾರುಕಟ್ಟೆಯ ರಾಜ' ಎಂಬುದು ಆಕರ್ಷಕವಾದ ಘೋಷಣೆಯಾಗಿದೆ. ಆದುದರಿಂದ ಗ್ರಾಹಕನು ಅತ್ಯಂತ ಪ್ರಮುಖ ಸ್ಥಾನವನ್ನು ಅಲಂಕರಿಸಿದ್ದಾನೆ. ಆದರೆ ಅನೇಕ ಸಂದರ್ಭಗಳಲ್ಲಿ ಮಾರಾಟಗಾರರು ಗ್ರಾಹಕರನ್ನು ನಿರ್ಲಕ್ಷ್ಯ ಮಾಡುತ್ತಾರೆ, ಅವರನ್ನು ಶೋಷಿಸುತ್ತಾರೆ ಹಾಗೂ ಮೋಸಗೊಳಿಸುತ್ತಾರೆ.

**ಗ್ರಾಹಕ ರಕ್ಷಣೆ:**

ಗ್ರಾಹಕರನ್ನು ಉತ್ಪಾದಕರ ಮತ್ತು ವ್ಯಾಪಾರಿಗಳ ಶೋಷಣೆಯಿಂದ ರಕ್ಷಿಸಲು ಕೈಗೊಂಡಿರುವ ಕಾರ್ಯಗಳನ್ನು ಗ್ರಾಹಕ ರಕ್ಷಣೆ ಎನ್ನುತ್ತಾರೆ. ಶೋಷಣೆಯಿಂದ ಮುಕ್ತಗೊಳಿಸಲು ಗ್ರಾಹಕ ರಕ್ಷಣೆ ಅಗತ್ಯವಾಗಿದೆ. ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸಲು ಅನೇಕ ಹಕ್ಕುಗಳನ್ನು ಮತ್ತು ಭರವಸೆಗಳನ್ನು ಕೊಡಲಾಗಿದೆ. ಈ ಭರವಸೆಗಳನ್ನು ಗ್ರಾಹಕರ ಹಕ್ಕುಗಳು ಎನ್ನುತ್ತೇವೆ.

© KTBS Not to be published

**ಗ್ರಾಹಕ ಸಂರಕ್ಷಣಾ ಕಾಯ್ದೆ:**

ನಿರಂತರ ಶೋಷಣೆಯಿಂದ ಬೇಸತ್ತ ಕೆಲವರು ಬಳಕೆದಾರರ ಅಸಹಾಯಕತೆಯನ್ನು ಅರಿತು ಗ್ರಾಹಕರ ಪರವಾದ ಹೋರಾಟ, ಚಳವಳಿಗಳನ್ನು ಆರಂಭಿಸಿದರು. (ಕೆಲವನ್ನು ಈ ಅಧ್ಯಾಯದ ಮೊದಲ ಪ್ಯಾರಾಗ್ರಾಫಿನಲ್ಲಿ ಕೊಡಲಾಗಿದೆ) ಈ ರೀತಿಯ ಒತ್ತಡಗಳಿಂದ ಸರ್ಕಾರ ಎಚ್ಚೆತ್ತುಕೊಂಡು ಗ್ರಾಹಕರ ಪರವಾದ ಹೊಸ ಕಾಯಿದೆಗಳನ್ನು ರೂಪಿಸಿತು. ಕಳೆದ ಐದು ದಶಕಗಳಲ್ಲಿ ಸುಮಾರು ಮೂವತ್ತಕ್ಕಿಂತ ಹೆಚ್ಚು ಕಾಯ್ದೆಗಳು ಅನುಷ್ಠಾನಗೊಂಡಿವೆ. ಉದಾಹರಣೆ – ಅಗತ್ಯ ವಸ್ತುಗಳ ಕಾಯ್ದೆ, ತೂಕ ಮತ್ತು ಅಳತೆ ಕಾಯ್ದೆ, ಆಹಾರ ಕಲಬೆರಕೆ ಪ್ರತಿಬಂಧಕ ಕಾಯ್ದೆ ಇತ್ಯಾದಿ. ಭಾರತ ಸರ್ಕಾರವು 1986ರಲ್ಲಿ ಜಾರಿಗೆ ತಂದ ಗ್ರಾಹಕ ಸಂರಕ್ಷಣಾ ಕಾಯ್ದೆ ಈ ದಿಸೆಯಲ್ಲಿ ಅತ್ಯಂತ ಮಹತ್ವದ್ದಾಗಿದೆ.

**'ವಿಶ್ವಗ್ರಾಹಕ ದಿನಾಚರಣೆ':**

ವಿಶ್ವಗ್ರಾಹಕ ಆಂದೋಲನದ ಚರಿತ್ರೆಯಲ್ಲಿ ಮಾರ್ಚ್ 15, 1962 ಒಂದು ಮಹತ್ವದ ದಿನವಾಗಿದೆ. ಅಂದು ಅಂದಿನ ಅಮೆರಿಕದ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿ ಅವರು ಅಲ್ಲಿನ ನಾಗರಿಕರಿಗೆ ಸಂರಕ್ಷತೆ, ಮಾಹಿತಿ, ನಿವೇದನೆ ಮತ್ತು ಪರಿಹಾರ ಎಂಬ ನಾಲ್ಕು ಹಕ್ಕುಗಳನ್ನು ನೀಡುವ ವಿಧೇಯಕವನ್ನು ಅಂಗೀಕರಿಸಿದರು. ಈ ಕಾರಣದಿಂದ ಪ್ರತಿ ವರ್ಷವು ಮಾರ್ಚ್ 15ನೇ ತಾರೀಖಿನಂದು ವಿಶ್ವಗ್ರಾಹಕರ ಹಕ್ಕುಗಳ ದಿನ ಆಚರಿಸಲಾಗುತ್ತದೆ.

## ಕಾಯ್ದೆಯ ಮುಖ್ಯ ಉದ್ದೇಶಗಳು

- ಗ್ರಾಹಕ ಸಂರಕ್ಷಣಾ ಕಾಯ್ದೆಯು ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಮೊದಲ ಪ್ರಾಶಸ್ತ್ಯ ನೀಡುವುದು.
- ಅಪಾಯಕಾರಿ ವಸ್ತುಗಳ ತಯಾರಿಕೆ ಮತ್ತು ಮಾರಾಟವನ್ನು ತಪ್ಪಿಸುವುದು.
- ಮಾರುಕಟ್ಟೆಯಲ್ಲಿ ನಡೆಯಬಹುದಾದ ಅನುಚಿತ ವ್ಯವಹಾರ ಪದ್ಧತಿಗಳನ್ನು ತಡೆಗಟ್ಟುವುದು.
- ಗುಣಮಟ್ಟ, ಅಳತೆ, ತೂಕ, ಬೆಲೆ ಇತ್ಯಾದಿಗಳ ಮೇಲೆ ನಿಗಾವಹಿಸುವುದು.
- ಬಳಕೆದಾರರು ತಾವು ಖರೀದಿಸುವ ವಸ್ತು ಅಥವಾ ಸೇವೆಗಳಿಂದ ತೊಂದರೆಗೆ ಒಳಗಾದಲ್ಲಿ ಅವರಿಗೆ ಸೂಕ್ತ ಪರಿಹಾರ ಕೊಡಿಸುವುದು.
- ಗ್ರಾಹಕ ಶಿಕ್ಷಣ ನೀಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು.

ಒಟ್ಟಿನಲ್ಲಿ ಆರೋಗ್ಯಕರ ಸ್ಪರ್ಧೆಯೊಂದಿಗೆ ಯೋಗ್ಯ ಬೆಲೆಗೆ ಉತ್ತಮ ಗುಣಮಟ್ಟದ ವಸ್ತು ಅಥವಾ ಸೇವೆ ದೊರೆಯುವಂತೆ ಮಾಡುವುದು ಈ ಕಾಯ್ದೆಯ ಮುಖ್ಯ ಉದ್ದೇಶವಾಗಿದೆ.

ಗ್ರಾಹಕ ಸಂರಕ್ಷಣಾ ಕಾಯಿದೆಯು ಭಾರತದ ಎಲ್ಲ ಪ್ರದೇಶಗಳಿಗೂ ಅನ್ವಯವಾಗುತ್ತದೆ. ಈ ಕಾಯಿದೆಯು ಈ ಮುಂದೆ ಕೊಟ್ಟಿರುವಂತೆ ಗ್ರಾಹಕ ಹಿತಾಸಕ್ತಿಗಳನ್ನು ಕಾಪಾಡುತ್ತದೆ.

- ಗ್ರಾಹಕರ ಜೀವನ ಮತ್ತು ಆಸಕ್ತಿಗೆ ಅಪಾಯಕಾರಿಯೆನಿಸುವ ಸರಕುಗಳ ವಿಕ್ರಯದ ವಿರುದ್ಧ ರಕ್ಷಿಸಲ್ಪಡುವ ಹಕ್ಕು.
- ಮಾಹಿತಿ ಪಡೆಯುವ ಹಕ್ಕು : ಸರಕುಗಳ ಮತ್ತು ಸೇವೆಗಳ ಗುಣಮಟ್ಟ, ಪ್ರಮಾಣ, ಶಕ್ತಿ ಸಾಮರ್ಥ್ಯ, ಪರಿಶುದ್ಧತೆ ಮತ್ತು ಬೆಲೆಗಳ ವಿರುದ್ಧ ಮಾಹಿತಿ ಪಡೆಯುವ ಹಕ್ಕು.
- ವಸ್ತುಗಳ ಆಯ್ಕೆಯ ಹಕ್ಕು : ಸ್ಪರ್ಧಾತ್ಮಕ ಬೆಲೆಗಳಲ್ಲಿ ವೈವಿಧ್ಯಮಯವಾದ ಸರಕುಗಳನ್ನು ಆರಿಸಿಕೊಳ್ಳುವ, ಅಥವಾ ಆಯ್ಕೆ ಮಾಡುವ ಹಕ್ಕು.
- ವಸ್ತುಗಳ ಬಗ್ಗೆ ಆಲಿಸುವ ಹಕ್ಕು : ಗ್ರಾಹಕರ ಇಷ್ಟಗಳನ್ನು ಕೇಳಿ ತಿಳಿದುಕೊಂಡು ಅವನ್ನು ಸೂಕ್ತ ರೀತಿಯಲ್ಲಿ ಪರಿಗಣಿಸುವ ಹಕ್ಕು.
- ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು : ಗ್ರಾಹಕರಿಗೆ ವಂಚನೆ ಅಥವಾ ಮೋಸಮಾಡುವ ಆಚರಣೆಗಳ ವಿರುದ್ಧ ಹಕ್ಕು ಪಡೆಯುವುದು.
- ಗ್ರಾಹಕ ಶಿಕ್ಷಣದ ಹಕ್ಕು : ಗ್ರಾಹಕರಿಗೆ ಅವರ ಹಕ್ಕುಗಳ ಬಗ್ಗೆ ಸರಿಯಾದ ತಿಳುವಳಿಕೆ ಪಡೆಯುವ ಹಕ್ಕು.
- ವಂಚನೆ ಅಥವಾ ಮೋಸದ ವಿರುದ್ಧದ ಹಕ್ಕು.
- ಗ್ರಾಹಕರಿಗೆ ಉತ್ತಮ ಆರೋಗ್ಯಕರ ಮತ್ತು ಭೌತಿಕ ಪರಿಸರಗಳನ್ನು ಉಂಟುಮಾಡಿ ಅವರ ಜೀವನ ರೀತಿಗಳನ್ನು ಉತ್ತಮ ಪಡಿಸಿಕೊಳ್ಳುವ ಹಕ್ಕು.

ಗ್ರಾಹಕ ಸಂರಕ್ಷಣಾ ಕಾಯಿದೆಯು ಕೇಂದ್ರ ಸಂರಕ್ಷಣ ಮಂಡಲಿಯ ಸ್ಥಾಪನೆಗೆ ಎಡೆಮಾಡಿಕೊಟ್ಟಿತು. ಈ ಕಾಯಿದೆಯ ಪ್ರಕಾರ ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ವೇದಿಕೆ, ರಾಜ್ಯಮಟ್ಟದಲ್ಲಿ ರಾಜ್ಯ ಗ್ರಾಹಕ ಸಂರಕ್ಷಣಾ ವೇದಿಕೆ, ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಗ್ರಾಹಕರ ಸಂರಕ್ಷಣಾ ಮಂಡಲಿಗಳನ್ನು ಸ್ಥಾಪಿಸಿದೆ. ಕೇಂದ್ರ ಸರ್ಕಾರದ ಗ್ರಾಹಕರ ಕಲ್ಯಾಣ ಇಲಾಖೆಯ ಮಂತ್ರಿಗಳು ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ

© KTBS Not to be republished

ವೇದಿಕೆಯ ಅಧ್ಯಕ್ಷರಾಗಿರುತ್ತಾರೆ. ಇದೇ ರೀತಿ ರಾಜ್ಯ ಸರ್ಕಾರದ ಗ್ರಾಹಕ ಸಂಬಂಧಿ ಇಲಾಖೆಯ ಮಂತ್ರಿಗಳು ರಾಜ್ಯ ಗ್ರಾಹಕ ಸಂರಕ್ಷಣಾ ವೇದಿಕೆಯ ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಗ್ರಾಹಕ ಸಂರಕ್ಷಣಾ ಮಂಡಲಿಗೆ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ.

ಗ್ರಾಹಕ ಸಂರಕ್ಷಣೆಯ ಕಾಯ್ದೆಯ ಪ್ರಕಾರ ಗ್ರಾಹಕರ ಸಂರಕ್ಷಣೆಗೆ ಈ ಕೆಳಗಿನ ವೇದಿಕೆಗಳನ್ನು ನಿರ್ಮಿಸಲಾಗಿದೆ.

i) ಜಿಲ್ಲಾ ವೇದಿಕೆ (District Forum)

ii) ರಾಜ್ಯ ಆಯೋಗ (State commission)

iii) ರಾಷ್ಟ್ರೀಯ ಆಯೋಗ (National Commission)

**ಈ ವೇದಿಕೆ ಅಥವಾ ಆಯೋಗಗಳ ಕಾರ್ಯಭಾರಗಳು:**

**i) ಜಿಲ್ಲಾ ವೇದಿಕೆ (District Forum):** ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ವೇದಿಕೆ ಇರುತ್ತದೆ ಜಿಲ್ಲಾವೇದಿಕೆಯ ನ್ಯಾಯ ಪೀಠಕ್ಕೆ ರಾಜ್ಯ ಸರ್ಕಾರದಿಂದ ನಾಮಾಂಕಿತಗೊಂಡ ಜಿಲ್ಲಾ ನ್ಯಾಯಾಧೀಶರ ಅರ್ಹತೆಯುಳ್ಳ ವ್ಯಕ್ತಿಯು ಅಧ್ಯಕ್ಷರಾಗಿರುತ್ತಾರೆ. ಈ ವೇದಿಕೆಯು ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿರದ ಗ್ರಾಹಕರ ದೂರುಗಳನ್ನು ತೆಗೆದುಕೊಳ್ಳುತ್ತದೆ. ಇದರಲ್ಲಿ ಇಬ್ಬರು ಸದಸ್ಯರಿದ್ದು ಅವರಲ್ಲಿ ಒಬ್ಬರು ಮಹಿಳೆಯಾಗಿರುತ್ತಾರೆ.

**ii) ರಾಜ್ಯ ಆಯೋಗ (State commission) :** ಈ ಆಯೋಗಕ್ಕೆ ರಾಜ್ಯದ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾಗಲೀ ಅಥವಾ ಹಾಲಿ ನ್ಯಾಯಾಧೀಶರಾಗಲಿ ಅಧ್ಯಕ್ಷರಾಗಿರುತ್ತಾರೆ. ಇದರಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಸಾಮರ್ಥ್ಯವನ್ನು ಹೊಂದಿರುವ ಇಬ್ಬರು ಸದಸ್ಯರಿರುತ್ತಾರೆ. ಅವರಲ್ಲಿ ಒಬ್ಬರು ಮಹಿಳಾ ಸದಸ್ಯರಾಗಿರುತ್ತಾರೆ. ಈ ಆಯೋಗವು ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದ್ದು ಒಂದು ಕೋಟಿ ರೂಪಾಯಿಯವರೆಗಿನ ಮೌಲ್ಯದ ಗ್ರಾಹಕ ದೂರುಗಳನ್ನು ತೆಗೆದುಕೊಳ್ಳುತ್ತದೆ.

**iii) ರಾಷ್ಟ್ರೀಯ ಆಯೋಗ (National Commission) :** ಈ ಆಯೋಗವು ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟ ಸರ್ವೋಚ್ಚ ನ್ಯಾಯಾಲಯದ ಒಬ್ಬ ನ್ಯಾಯಾಧೀಶರ ಅಧ್ಯಕ್ಷತೆಯಿಂದ ಕೂಡಿರುತ್ತದೆ. ಇಲ್ಲಿ ಇತರೆ ನಾಲ್ಕು ಸದಸ್ಯರಿರುತ್ತಾರೆ. ಇವರು ಸಾರ್ವಜನಿಕ ವ್ಯವಹಾರ ಅಥವ ಆಡಳಿತದಲ್ಲಿ ನುರಿತವರಾಗಿರಬೇಕು. ಇವರಲ್ಲಿ ಒಬ್ಬರು ಮಹಿಳಾ ಸದಸ್ಯರಿರುತ್ತಾರೆ. ಈ ಆಯೋಗವು ಒಂದು ಕೋಟಿ ರೂಪಾಯಿಗಿಂತ ಹೆಚ್ಚು ಮೌಲ್ಯದಿಂದ ಕೂಡಿದ್ದರೆ ಅಂತಹ ದೂರುಗಳನ್ನು ಇತ್ಯರ್ಥ ಮಾಡುತ್ತದೆ.

**ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳು**

- ದೂರುಗಳು ಕೈಬರಹದ ಅಥವ ಬೆರಳಚ್ಚಿನ ಮಾದರಿಯಲ್ಲಿರಬೇಕು.
- ಈ ಮಾಹಿತಿಯಲ್ಲಿ ದೂರುಕೊಡುವವನ ಹೆಸರು, ವಿಳಾಸ ಮತ್ತು ದೂರವಾಣಿಯ ಸಂಖ್ಯೆ ಸರಿಯಾಗಿ ನಮೂದಿಸಿರಬೇಕು.
- ಯಾವ ವ್ಯಾಪಾರಿ ಅಥವಾ ಪೂರೈಕೆದಾರನ ವಿರುದ್ಧ ದೂರುಕೊಡಬೇಕೆಂಬುದನ್ನು ಪೂರ್ಣವಾಗಿ ನಮೂದಿಸಿರಬೇಕು.

© KTBS Not to be republished

- ಯಾವ ವಸ್ತುವಿನಿಂದ ನಷ್ಟವಾಗಿದೆ ಅಥವಾ ಮೋಸವಾಗಿದೆ ಎಂಬುದು ಮತ್ತು ನಷ್ಟ ಹೊಂದಿರುವ ಮೊಬಲಗೆಷ್ಟೆಂಬುದನ್ನು ಸರಿಯಾಗಿ ನಮೂದಿಸಿರಬೇಕು.
- ನಷ್ಟದ ಸೂಕ್ತ ಪರಿಹಾರದ ಮೊಬಲಗು ಹಾಗೂ ಇದಕ್ಕೆ ಸಂಬಂಧಪಟ್ಟ ರಸೀತಿ ಅಥವ ಬಿಲ್ಲನ್ನು ಲಗತ್ತಿಸಬೇಕು.
- ದೂರಿಗೆ ಯಾವುದೇ ಶುಲ್ಕ ಅಥವಾ ನೋಂದಾವಣಿ ಶುಲ್ಕ ಇರುವುದಿಲ್ಲ.
- ಗ್ರಾಹಕನೇ ನೇರವಾಗಿ ತನ್ನ ದೂರನ್ನು ಅಧ್ಯಕ್ಷರ ಮುಂದೆ ವಾದಿಸಬಹುದು ವಕೀಲರು ಬೇಕಾಗಿಲ್ಲ.

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಗ್ರಾಹಕನಿಗಿರುವ ಮತ್ತೊಂದು ಹೆಸರು ______________ .
2. ಹಣಪಡೆದು ವಸ್ತು ಅಥವಾ ಸೇವೆಯನ್ನು ನೀಡುವಾತ ______________ .
3. ಪ್ರತಿವರ್ಷ ವಿಶ್ವ ಗ್ರಾಹಕರ ದಿನವನ್ನು ______________ ರಂದು ಆಚರಿಸುತ್ತೇವೆ.
4. ಪರಿಹಾರ ಮೊತ್ತವು 20 ಲಕ್ಷ ರೂಪಾಯಿಗಳನ್ನು ಮೀರಿದ್ದರೆ ದೂರನ್ನು ______________ ಆಯೋಗಕ್ಕೆ ಸಲ್ಲಿಸಬೇಕು.

© KTBS Not to be published


**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಗ್ರಾಹಕ ಎಂದರೆ ಯಾರು?
2. ಗ್ರಾಹಕ ಆಂದೋಲನದ ಮೂಲ ಆಶಯ ಯಾವುದು?
3. ಪ್ರತಿಯೊಬ್ಬ ಗ್ರಾಹಕನಿಗಿರುವ ಹಕ್ಕು ಯಾವುದು?
4. ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ ಯಾವಾಗ ಜಾರಿಗೆ ಬಂತು?
5. ಜಿಲ್ಲಾ ಗ್ರಾಹಕ ನ್ಯಾಯಪೀಠದ ಅಧ್ಯಕ್ಷರನ್ನು ಯಾರು ನೇಮಿಸುತ್ತಾರೆ?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಗ್ರಾಹಕರು ಅನುಭವಿಸುತ್ತಿರುವ ಸಂಕಷ್ಟಗಳೇನು?
2. ಬಳಕೆದಾರರ ಶೋಷಣೆಗೆ ಕಾರಣಗಳಾವುವು?
3. ಗ್ರಾಹಕ ಸಂರಕ್ಷಣಾ ಕಾಯ್ದೆಯ ನಾಲ್ಕು ಮುಖ್ಯ ಉದ್ದೇಶಗಳನ್ನು ತಿಳಿಸಿರಿ.
4. ಗ್ರಾಹಕ ಸಂರಕ್ಷಣಾ ಪರಿಷತ್ತಿನ ಮುಖ್ಯ ಕಾರ್ಯವೇನು?
5. ಮೂರು ಹಂತದ ಗ್ರಾಹಕ ನ್ಯಾಯಾಲಯಗಳನ್ನು ತಿಳಿಸಿರಿ.
6. ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳಾವುವು?

**IV**. ಇಲ್ಲಿ ಕೊಟ್ಟಿರುವ ಚಿತ್ರವನ್ನು ಗಮನಿಸಿ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.




1. ಪ್ಯಾಕೆಟ್ ಮೇಲೆ ನಮೂದಿಸಿದ ಉತ್ಪಾದನಾ ಸಂಸ್ಥೆಯ ಹೆಸರೇನು?
2. ನಮೂದಿಸಿರುವ ಗರಿಷ್ಠ ಮಾರಾಟದ ಬೆಲೆ ಎಷ್ಟು?
3. ಈ ವಸ್ತುವನ್ನು ತಯಾರಿಸಿದ ದಿನಾಂಕ ಯಾವುದು?
4. ಯಾವ ದಿನಾಂಕದೊಳಗೆ ಇದನ್ನು ಬಳಸಬೇಕು?

© KTBS
Not to be published

**V. ಚಟುವಟಿಕೆಗಳು :**

1. ನಿಮ್ಮ ಜಿಲ್ಲಾ ಕೇಂದ್ರದಲ್ಲಿರುವ ಜಿಲ್ಲಾ ಗ್ರಾಹಕ ವೇದಿಕೆಗೆ ಶಿಕ್ಷಕರೊಂದಿಗೆ ಭೇಟಿ ನೀಡಿ, ಅಲ್ಲಿನ ಕಾರ್ಯವಿಧಾನಗಳನ್ನು ಗಮನಿಸಿ ಮಾಹಿತಿ ಸಂಗ್ರಹಿಸಿರಿ.
2. ಗ್ರಾಹಕ ಜಾಗೃತಿ ಮೂಡಿಸಬಲ್ಲ ನಾಲ್ಕು ಘೋಷಣೆಗಳನ್ನು ಸಿದ್ಧಪಡಿಸಿರಿ.
3. ವಿಶ್ವಗ್ರಾಹಕ ದಿನಾಚರಣೆಯಂದು ಜಾಥ ಕೈಗೊಂಡು ಗ್ರಾಹಕ ಜಾಗೃತಿಯಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿರಿ.
4. ವಿವಿಧ ರೀತಿಯ ರಶೀದಿ(ಬಿಲ್ಲು)ಗಳನ್ನು ಸಂಗ್ರಹಿಸಿರಿ.

**VI. ಕಾರ್ಯಯೋಜನೆ :**

ವಸ್ತುವೊಂದರ ಖರೀದಿಯಲ್ಲಿ ನೀವು ಮೋಸಹೋದ ಒಂದು ಸಂದರ್ಭವನ್ನು ಕಲ್ಪಿಸಿಕೊಂಡು ಜಿಲ್ಲಾ ಗ್ರಾಹಕ ವೇದಿಕೆಗೆ ಸಲ್ಲಿಸುವ ದೂರನ್ನು ಸಿದ್ಧಪಡಿಸಿರಿ. ಸೂಕ್ತ ದಾಖಲೆಗಳನ್ನು ನೀವೇ ಸೃಷ್ಟಿಸಿಕೊಳ್ಳಿರಿ.

* * *